ವಿಶ್ವ ಕನ್ನಡ ಸಮ್ಮೇಳನ ೨೦೧೧
ಬೆಳಗಾವಿ

# ಕಥನ ಕವನ

ಸು.ರಂ. ಎಕ್ಕುಂಡಿ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಕಥನ ಕವನಗಳು

ಸು.ರಂ. ಎಕ್ಕುಂಡಿ

ಕರ್ನಾಟಕ ಸರ್ಕಾರ

ಕನ್ನಡ ಮತ್ತು ಸಂಸ್ಕೃತಿ ಇಲಾಖೆ
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**KATHANA KAVANAGALU** : A Collection of poems by **S.R. Yekkundi**
Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : XIV + ೨೦೩
ಬೆಲೆ : ರೂ. ೫೦/-

ರಕ್ಷಾಪುಟ ವಿನ್ಯಾಸ : ಕೆ. ಚಂದ್ರನಾಥ ಆಚಾರ್ಯ

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು - ೫೬೦ ೦೨೦ ದೂ : ೨೩೩೪೨೭೨೪

**ಬಿ.ಎಸ್. ಯಡಿಯೂರಪ್ಪ**
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ "ವಿಶ್ವ ಕನ್ನಡ ಸಮ್ಮೇಳನ" ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ಬಿ.ಎಸ್. ಯಡಿಯೂರಪ್ಪ

ದಿನಾಂಕ ೨೪.೦೧.೨೦೧೧

(ಬಿ.ಎಸ್. ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು - ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ- ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

(ಗೋವಿಂದ ಎಂ. ಕಾರಜೋಳ)

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

(ರಮೇಶ್ ಬಿ.ಝುಳಕಿ)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**
ಅಧ್ಯಕ್ಷ
ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ: ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯ ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ದಿನಾಂಕ ೧೧.೦೧.೨೦೧೧

ನಿರ್ದೇಶಕರು
ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**

ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**

ಡಾ॥ ಚಂದ್ರಶೇಖರ ಕಂಬಾರ

ಡಾ॥ ಎಂ.ಎಂ. ಕಲಬುರ್ಗಿ

ಡಾ॥ ದೊಡ್ಡರಂಗೇಗೌಡ

ಡಾ॥ ಅರವಿಂದ ಮಾಲಗತ್ತಿ

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಡಾ॥ ಪ್ರಧಾನ್ ಗುರುದತ್ತ

ಡಾ॥ ಹಂಪ ನಾಗರಾಜಯ್ಯ

ಡಾ॥ ಎಚ್.ಜೆ. ಲಕ್ಕಪ್ಪಗೌಡ

ಶ್ರೀಮತಿ ಸಾರಾ ಅಬೂಬಕರ್

ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**

ಶ್ರೀ ಮನು ಬಳಿಗಾರ್, ಕ.ಆ.ಸೇ.

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

## ಪರಿವಿಡಿ


ಶುಭ ಸಂದೇಶ iii

ಚೆನ್ನುಡಿ iv

ಎರಡು ನುಡಿ v

ಅಧ್ಯಕ್ಷರ ಮಾತು vi

ಪ್ರಕಾಶಕರ ಮಾತು vii

ಆಯ್ಕೆ ಸಮಿತಿ ix

೧. ಅವಧೂತ ೧

೨. ಮತ್ಸ್ಯಗಂಧಿ ಸತ್ಯವತಿ ೪

೩. ಗುರುಹಸಾದವಿದು ಸಮೀರ ೧೯

೪. ಸಂಪಾತಿ ೨೧

೫. ಊರ್ವಶೀ ೨೮

೬. ಮಿಸುನಿಜಿಂಕೆ ೩೧

೭. ಮಿಥಿಲೆ ೩೮

೮. ಮಹಾಶ್ವೇತೆ ೪೦

೯. ಭಗವಂತನು ನೀರೆರೆದನು ೫೮

೧೦. ಕುಬ್ಜಾಂಗನಾ ೬೦

೧೧. ಕಂಡಿರೇನು ಕಂದನ ೬೪

೧೨. ಬುದ್ಧದೇವ ೬೬

೧೩. ದೂರು ೭೪

೧೪. ಪಯಣ ೭೭

೧೫. ಶ್ವೇತಕೇತು ದೇವರ್ಷಿ ೭೯

೧೬. ಸಂತಾನ ೮೧

೧೭. ಕಾಲಿಯಾ ಮರ್ದನ ೮೨

೧೮. ಉಭಯ ಸರಸ್ವತಿ ೮೪

೧೯. ಶಬರಿ ೯೪

೨೦. ವಸ್ತ್ರಾಪಹರಣ ೯೮

೨೧. ಬುಟ್ಟಿ ಮತ್ತು ಬೀಗದ ಕೈ ೧೦೦

೨೨. ಕುಚೇಲೋಪಾಖ್ಯಾನ ೧೦೩

೨೩. ಪರಿಗ್ರಹಿಸಿರೀಪಾರಿಜಾತ ೧೦೮

೨೪. ಗಜೇಂದ್ರ ಮೋಕ್ಷ ೧೧೦

೨೫. ಅತಿಥಿ ೧೧೨

೨೬. ಹಾವಾಡಿಗರ ಹುಡುಗ ೧೧೪

೨೭. ಪಾರಿವಾಳಗಳು ೧೧೬

೨೮. ಬಲಿದಾನ ೧೧೭

೨೯. ಬಂಡೆ, ಹುಡುಗ ಮತ್ತು ಬೆಸ್ತ ೧೨೦

೩೦. ನನ್ನ ಹಾಗೆಯೆ... ೧೨೩

೩೧. ದಡ ಸೇರಬೇಕಲ್ಲ ೧೨೫

೩೨. ಹಿಟ್ಟು ಮತ್ತು ಮಲ್ಲಿಗೆ ೧೨೮

೩೩. ಕೊಡ ಮತ್ತು ಹಾವು ೧೩೧

೩೪. ಏಣಿ ಮತ್ತು ದೀಪ ೧೩೩

೩೫. ಹುಂಜ ಮತ್ತು ಕಮಂಡಲು ೧೩೫

೩೬. ಕಲ್ಲು ಮತ್ತು ನಕ್ಷತ್ರಗಳು ೧೩೭

೩೭. ಕಿಡಕಿ ಮತ್ತು ಗಾಲಿಗಳು ೧೩೯

೩೮. ಗಿರವಿ ಅಂಗಡಿಯಲ್ಲಿ ೧೪೨

೩೯. ರೊಟ್ಟಿ ಮತ್ತು ಕೋವಿ ೧೪೫

೪೦. ಚಿನ್ನಮ್ಮನ ಕಂದ ೧೪೭

೪೧. ಕಣಗಿಲು ಗಿಡದಲ್ಲಿ ಹುಡುಗ ೧೪೯

೪೨. ನಾಗಿಯ ಕಥೆ ೧೫೧

೪೩. ಹುಡುಗಿಯ ಕಥೆ ೧೫೫

೪೪. ಮಂಜುಗೌಡನ ಕಥೆ ೧೫೭

೪೫. ಯೋಧ ಮತ್ತು ಹೆಂಗಸು ೧೬೦

೪೬. ಪವಾಡ ೧೬೨

೪೭. ಕಳ್ಳರು ಮತ್ತು ಸಂತ ೧೬೪

೪೮. ದಾಸಿಮಯ್ಯ ಮತ್ತು ಬೆಕ್ಕು ೧೬೭

೪೯. ಕದವ ತಟ್ಟಿದರು ೧೭೦

೫೦. ಅಂಡರ್ಸನ್ ಬೀದಿ ಲಂಡನ್ನಿನಲ್ಲಿ ೧೭೨

೫೧. ಹುಳ ಮತ್ತು ಕಿರೀಟ ೧೭೫

೫೨. ಕವಷ ಐಲೂಷ ೧೭೭

೫೩. ಅರಣ್ಯಾನಿ ೨೦೨

# ಕಥನ ಕವನಗಳು

# ೧. ಅವಧೂತ

ದೇವಕನ್ನಿಕೆಯರೇಳು ಮಂದಿ ಬಂದಾರ ಮೀಯಲೆಂದು
ವೇಷಭೂಷ ಕಳೆದಿಟ್ಟುಬಿಟ್ಟರೋ ಮರದ ಮರೆಗೆ ನಿಂದು
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ದಂಡೆಗೋಡಿ ಬಂದು ೧

ಹಾಲುಕಲ್ಲ ಸೋಪಾನವಿಳಿದು ಬಂದಾರ ನೀರಿಗೋಡಿ
ಕೊಳದ ತಂಪು ತಿಳಿನೀರ ಸೇರಿದರೋ ನೂರು ತೆರೆಯ ಮಾಡಿ
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ಜಲಕ್ರೀಡೆಯಾಡಿ ೨

ಕೊಳದ ಸುತ್ತಲೂ ಕಮಲ ನಿಂತವೋ ಬಳ್ಳಿಗೋಡೆ ಕಟ್ಟಿ
''ದೇಹಿ ನಿಮ್ಮ ಮಕರಂದ'' ಎಂದವೋ ತುಂಬಿ ಸಾಲುಗಟ್ಟಿ
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ಕೈಗೆ ಕೈಯ ತಟ್ಟಿ ೩

ನವಿಲು ಕಂಡ ಕನಸನ್ನು ಕಾಣಿಸುವೆನೆಂದು ಪಣವನಿಟ್ಟು
ನೀರು ಚಿಮ್ಮಿ ಚೆಲ್ಲೆಂದು ಕುಣಿಯಿತೋ ಇಂದ್ರಚಾಪ ತೊಟ್ಟು
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ತುಂಬ ಹರುಷಪಟ್ಟು ೪

''ಯಾವ ತಪ್ಪಿಗೋ ಬಿಳಿಯ ಮೋಡ ಪಡೆದಂತೆ ಚಂದ್ರಶಾಪ
ಇಲ್ಲಿ ಕಾಣಿರೇ ಶ್ವೇತಮುಗ್ಧವೀ ರಾಜಹಂಸರೂಪ''
ಹಕ್ಕಿಯಂತೆ ಕಿಲಕಿಲಿಸಿ ನಕ್ಕು ನುಡಿದಾರ ''ಅಯ್ಯೊ ಪಾಪ'' ೫

ಸರಸ್ತೀರದಲಿ ಸಾಲು ನಿಂತವೋ ಪಾರಿಜಾತ ಹೂತು
ಐದು ಬಣ್ಣದರಗಿಳಿಯು ಗಳುಹಿತೋ ತೊಂಗಲಲ್ಲಿ ಕೂತು
ಹಕ್ಕಿಯಂತೆ ಕಿಲಕಿಲಿಸಿ ನಕ್ಕು ಕೇಳಿದರು ಆದರ ಮಾತು ೬

ಬನಕೆ ಬಂದನವಧೂತ ಬಾಲಮುನಿ ಶುಕಾಚಾರ್ಯ ಸಾರಿ
ಮಿಸುನಿಬಣ್ಣ ಮೈ ಹಸಿರು ರೆಕ್ಕೆಗಳ ಬಾಲಬ್ರಹ್ಮಚಾರಿ
ಬ್ರಹ್ಮಸಚ್ಚಿದಾನಂದ ಮಗ್ನ ಮನ, ನಗ್ನ ದೇಹಧಾರಿ
ಬಾಲ್ಯದಮಿತ ಸ್ವಚ್ಛಂದಯೋಗದಲಿ ಬಂದ ಬನವಿಹಾರಿ
ಎಲ್ಲೊ ಏನೊ ನಡೆದಿದ್ದನವನು ನಡೆದದ್ದೆ ಕಾಲುದಾರಿ ೭

"ಅಲ್ಲಿ ಹೋದನವಧೂತ ಕಾಣಿರೇ, ನಗ್ನದೇಹ ತಾಳಿ"
ದೇವಕನ್ನಿಕೆಯರವನ ನೋಡಿದರು ನಮೋ ಎಂದು ಹೇಳಿ
ಹಕ್ಕಿಯಂತೆ ಕಿಲಕಿಲಿಸಿ ನಕ್ಕು ನಲಿದಾರ ನೀರಕೇಳಿ ೮

ಬನಕೆ ಬಂದು ಹಂಬಲಿಸಿ ಮಗನ ಬೆಂಬಲಿಸಿ ವ್ಯಾಸಯೋಗಿ
ಜಟಾಜೂಟ ಕರಪದ್ಮ ಕೃಷ್ಣ ಮೃಗಚರ್ಮಧಾರಿಯಾಗಿ
ಕರುಳ ವಿರಹ ಕಾತರಿಸಿ ಕರೆದನೋ 'ಮಗನೆ' ಎಂದು ಕೂಗಿ
ಬಾಲಮುನಿಯ ತನ್ಮಯತೆ ತುಂಬಿರಲು ಬನದ ಹೃದಯವಾಗಿ
ಕರೆಯ ಕೇಳಿ 'ಓ ತಂದೆ' ಎಂದವೋ ಪಾರಿಜಾತ ಬಾಗಿ ೯

ವ್ಯಾಸಯೋಗಿ ನಡೆದಿರಲು ಕೂಗಿ ಕೇಳಿದರು ಲಕ್ಷ್ಯವಿಟ್ಟು
ದೇವಕನ್ನಿಕೆಯರೇಳು ಮಂದಿ ಮನದಲ್ಲಿ ಲಜ್ಜೆಪಟ್ಟು
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ಜಲಕ್ರೀಡೆ ಬಿಟ್ಟು ೧೦

ಹಾಲು ರೆಕ್ಕೆಗಳ ಚಾಚಿ ನೀರನಿಕ್ಕೆಲದಿ ಬಾಚಿ ಹಾರಿ
ರಾಜಹಂಸ ಬಂದಿಳಿಯುವಂತೆ ಕನ್ನಿಕೆಯರೆಲ್ಲ ಸೇರಿ
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ಕೊಳದ ಮೆಟ್ಟಲೇರಿ ೧೧

ದೇವಕನ್ನಿಕೆಯರೇಳು ಮಂದಿ ಬಂದಾರ ಕೊಳವ ಬಿಟ್ಟು
ಪಾರಿಜಾತಗಳ ಮರೆಗೆ ನಿಂತರೋ ಮನದಿ ಲಜ್ಜೆಪಟ್ಟು
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ವೇಷಭೂಷ ತೊಟ್ಟು ೧೨

ತಾವು ಬಂದುದನು ನೋಡಿ ನಾಚಿದರೆ ಜಲಕ್ರೀಡೆ ನೀಗಿ
ವೇಷಭೂಷಣಗಳ ತೊಟ್ಟು ನಿಂತಿರಲು ದಂಡೆಗೋಡಿಹೋಗಿ
ದೇವಕನ್ನಿಕೆಯರೇಳು ಮಂದಿ ಬಳಿಸಾರಿ ವ್ಯಾಸಯೋಗಿ
ಜಟಾಜೂಟ ಕರಪದ್ಮ ಕೃಷ್ಣ ಮೃಗಚರ್ಮಧಾರಿಯಾಗಿ
ಪಾರಿಜಾತವನದಲ್ಲಿ ನುಡಿದರಾಶ್ಚರ್ಯಚಕಿತರಾಗಿ ೧೩

"ಇದು ವಿಚಿತ್ರವಲ, ಮುದ್ದು ಮಕ್ಕಳೇ, ನಾನು ಬಂದೆನೆಂದು
ಲಜ್ಜೆ ಪಟ್ಟು ನೀರಾಟ ಬಿಟ್ಟಿರೇ ದಂಡೆಗೋಡಿಬಂದು
ನಾಚಲಿಲ್ಲ ಮರೆಮಾಚಲಿಲ್ಲ ಶುಕ ನಗ್ನದೇಹಿಯೆಂದು

ವಯಸು ಆದವರು ವಸ್ತ್ರವುಟ್ಟರೂ ನಾನು ಬಂದುದೆಂದು
ನಾಚಿ ನೀರ ಬಿಚ್ಚೋಡಿ ಬಂದಿರೇ ದಂಡೆಯಲ್ಲಿ ನಿಂದು?'' ೧೪

ದೇವಕನ್ನಿಕೆಯರಾಗ ನುಡಿದರೊಕ್ಕೊರಲಿನಲ್ಲಿ ಬಾಗಿ
''ಪವನದಂತೆಯೇ ನಿರ್ಲಿಪ್ತ ಶುಕನು ಬಯಲದೇಹಿಯಾಗಿ
ನಿಮ್ಮ ಚಿತ್ತ ತನುರಾಗಲಿಪ್ತ ದೃಷ್ಟಾರ ವ್ಯಾಸಯೋಗಿ''
ಹಕ್ಕಿಯಂತೆ ಕಿಲಕಿಲನೆ ನಕ್ಕು ಮರಳಿದರು ಮಾಯವಾಗಿ
ಅವರು ನಕ್ಕ ನಗೆ ಮುಗಿಲು ತುಂಬಿತೋ ಮೇಘಮಾಲೆಯಾಗಿ ೧೫

# ೨. ಮತ್ಸ್ಯಗಂಧಿ ಸತ್ಯವತಿ

೧

ಬ್ರಾಹ್ಮೀಮುಹೂರ್ತ ರಸಮಂತ್ರಗಾನದಲ್ಲಿ
ನಿರ್ವಿಕಾರ ನಿರ್ಲಿಪ್ತ ತಾನದಲ್ಲಿ
ಕಾಲಪುರುಷ ಕುಳಿತಂತೆ ಧ್ಯಾನದಲ್ಲಿ
ಸ್ಥಿತಪ್ರಜ್ಞ ಮನದಂತೆ ಬಾನಿನಲ್ಲಿ
ನೀಲಶುಕ್ರ ನಕ್ಷತ್ರ ಹೊಳೆಯುತಿತ್ತು
ದೇವಜೀವನದ ತೇಜವಿಳಿಯುತಿತ್ತು
ಸೃಷ್ಟಿ ಕರ್ತನೆಡೆ ಸೃಷ್ಟಿ ಸುಳಿಯುತಿತ್ತು
ಬಂಗಾರರಥವ ಬಿಳಿಗುದುರೆ ಎಳೆಯುವಂತೆ
ದೇವಪಯಣಪಥ ಜೀವ ತುಳಿಯುವಂತೆ
ಬೆಳಕು ಬಂತು ಬ್ರಾಹ್ಮೀಮುಹೂರ್ತದಲ್ಲಿ
ಮುಗಿಲ ಕಮಲವರಳಿತ್ತು ದಲವ ತೆರೆದು
ಪರಬ್ರಹ್ಮ ಪರಮಾತ್ಮಜ್ಯೋತಿಯೆರೆದು
ದೇವಚೇತನದ ಸ್ವರ್ಣಕುಂಭ ಸುರಿದು
ಸವಿತೃಮಂಡಲದ ತೇರನೇರಿಬರಲು
ಕಾಲುಪುರುಷ ಕಣ್ಣೆವೆಯ ತೆರೆಯುತಿರಲು
ಸೃಷ್ಟಿಗಮೃತದ ಕುಂಭ ಸುರಿಯುತಿರಲು
ಪರಂಜ್ಯೋತಿ ಆನಂದವೆರೆಯುತಿರಲು
ನಿರಂಜನತೆ ನೆಲಮುಗಿಲು ಬೆರೆಯುತಿರಲು
ಬ್ರಹ್ಮಶಿಲ್ಪ ಹೊಸರೂಪ ಕೊರೆಯುತಿರಲು
ಪ್ರಣವರೂಪ ರಸವೇದ ಒರೆಯುತಿರಲು
ಬೆಳಕ ಮುಗಿಲನಿಳಿದಿತ್ತು ಧಾರೆಯಾಗಿ
ಸೃಷ್ಟಿ ಸಚ್ಚಿದಾನಂದಲೀನವಾಗಿ
ಗಾಳಿ ನುಡಿದು ಬರುತಿತ್ತು ಪ್ರಣವಮಾತ್ರೆ

ನೆಲದ ಲಂಪು ಬಂದಂತೆ ಚೈತ್ರಯಾತ್ರೆ
ನೆಲದ ಕಂಪು ಹಿಡಿದಂತೆ ಹೂವುಪಾತ್ರೆ
ಗಾಳಿಗುಸುರುತಿದೆ ಮರದ ಮೂಕ ಮನಸು
ಹೂವಿನಕ್ಷಿಯಲಿ ನೆಲವು ಕಂಡ ಕನಸು
ಹೂವೆಲ್ಲ ಹಾಕಿಕೊಂಡಿರಲು ಮಂಜುಮಾಲೆ
ಸಂಪಿಗೆಯು ಸುಪ್ತಸೌಗಂಧ ಗಂಧಲೋಲೆ
ಮಲ್ಲಿಗೆಯು ಸುಪ್ತಸೌಗಂಧ ಗಂಧಲೋಲೆ
ಕೇದಗೆಯು ಸುಪ್ತಸೌಗಂಧ ಗಂಧಲೋಲೆ
ನವಪಾರಿಜಾತ ಸೌಗಂಧ ಗಂಧಲೋಲೆ
ರಸಸೃಷ್ಟಿ ರಸರಂಗ ರಾಸಲೀಲೆ
ಮರಿದುಂಬಿಯಾಡಿಬಂದಿರಲು ನಾದಲೀಲೆ
ಯಕ್ಷಲೋಕವರಳಿತ್ತು ಟೊಂಗೆಯಲ್ಲಿ
ಆನಂದ ಹೂತು ಬಂದಿತ್ತು ತೊಂಗಲಲ್ಲಿ
ಅಂತರಿಕ್ಷದಲಿ ಪಕ್ಷಿ ಹಾರುತಿರಲು
ಸೌಂದರ್ಯಸೂಕ್ತ ಹಾಡಿತ್ತು ಸಣ್ಣ ಕೊರಲು
ರಾಜಹಂಸ ಮಾನಸವ ಸೇರುತಿತ್ತು
ಮರಿದುಂಬಿ ಕಮಲದಲಿ ಪೀಠವೇರುತಿತ್ತು
ಮೋಡ ನೀಲಪರ್ವತವನೇರುತಿತ್ತು
ಉಧೊ ! ಮಾಯಿ ಚೈತನ್ಯದಾಯಿ ಬೆಳಕೆ !
ಉಧೊ ! ಭಾವರತ್ನಪ್ರದೀಪ ಬೆಳಕೆ !
ಉಧೊ ! ದೇವಚೈತನ್ಯದೀಪ ಬೆಳಕೆ !
ಉಧೊ ! ಬ್ರಹ್ಮಚೈತ್ಯಾಕ್ಷರೂಪ ಬೆಳಕೆ !
ಉಧೊ ! ಚಿದ್ಘನಾನಂದರೂಪ ಬೆಳಕೆ !
ಮುತ್ತುರತ್ನಗಳ ದಾನಕೊಟ್ಟ ಬೆಳಕೆ !
ನೆಲಕೆ ರತ್ನಗಂಬಳಿಯನಿಟ್ಟ ಬೆಳಕೆ !
ಉಧೊ ! ಕಲ್ಪಗಳ ಕುಣಿಸಿ ಬಂದ ಬೆಳಕೆ !
ಇಂದ್ರಚಾಪಗಳ ಮಣಿಸಿ ತುಂಬಿ ತುಳುಕೆ !

೨

ಉಷೆ ಬರೆಯಲು ಬನಕರಿಷಿಣಕುಂಕುಮ
ಪರ್ವತಲೋಕದ ಪರಮಹಂಸಹಿಮ
ಪರ್ವತ ನಸುಕಿನ ನಾರುಡೆಯುಟ್ಟು
ಸುವರ್ಣವರ್ಣದ ಮೇಲುದ ತೊಟ್ಟು
ಮಧುಗಂಧದ ರಸಲೇಪನವಿಟ್ಟು
ಕುಳಿತಿರೆ ಧ್ಯಾನಸಮಾಗೆ ವನಸುಮ
ತಂಬೆಲರಿಗೆ ತಲೆದೂಗಿತು ಮೆಚ್ಚಿ
ಪರಿಮಳ ರಾಗಪರಾಗವ ಮೆಚ್ಚಿ
ಎಲೆಗಳ ಗೊಂಚಲು ಮರೆಮರೆಯಲ್ಲಿ
ಗಿಡಗಂಟಿಯ ಹಸಿರನ ತೆರೆಯಲ್ಲಿ
ನೆಳಲಿನ ಬೆಳಕಿನ ಸರಗೆರೆಯಲ್ಲಿ
ಆಟವನಾಡಿತು ಗಾಳಿಯ ಕೂಡ
ದಿಟ್ಟಿಸಿನೋಡಿತು ನೇರಿಲಮೋಡ
ರೆಕ್ಕೆಯ ಚಾರಣಗೀತೆಯ ಮಂಗಲ
ನೆಲಮುಗಿಲೊಳು ಮೊಳಗಿತು ಸ್ವರಮಂಜುಲ
ಪಚ್ಚೆಯ ಪಯರಿನ ರಸರಂಗದ ನೆಲ
ಕನವರಿಸುತ ಮುನ್ನಡೆಯಿತು ವನಜಲ
ಬನದಲಿ ಬೀಸಲು ಸಮೀರ ಶೀತಲ
ಚೆಲುವಿನ ನವಚೈತನ್ಯದ ಉಸಿರು
ಬೆಟ್ಟದ ತಪ್ಪಲು ಬಯಲಿನ ಹಸಿರು
ಮರಡಿಯನಿಳಿಯಿತು ನೃತ್ಯಮಯೂರ
ಮೆಚ್ಚಿತು ಮುಗಿಲಿನ ರಸಸಿಂಧೂರ
ಮಧುವನ ವನದಲಿ ಹೂವಿನ ಹಾರ
ಹೆಣೆಯುವ ವನದೇವತೆಯ ವಿಹಾರ
ಬಣ್ಣದ ಮೋಡಗಳಲೆದವು ಮೇಲೆ
ನೀಲವ್ಯೋಮದ ಲಂಪಿನ ಲೀಲೆ
ಋಷ್ಯಶೃಂಗನ ಸೋದರರೋಡಿ

ಜಿಂಕೆಗಳೆದ್ದವು ದಿಬ್ಬಣಗೂಡಿ
ಹಾರೀತವು ಗುಟಕರಿಸಿತು ಹಾಡಿ
ಹುಲ್ಲಿನ ಗರಿಕೆಯ ತುಟಿಯೊಳಗಿರಿಸಿ
ಬಿದಿರಿನ ಮೆಳೆಗಳ ದಾರಿಯನರಸಿ
ಕೃಷ್ಣ ಮೃಗ ನದಿಯಂಚಿಗೆ ಬಂದು
ಪಡಿನೆಳಲನ್ನೆ ದಿಟ್ಟಿಸಿನಿಂದು
ನೀರವ ಬನದಲಿ ನೋಡಿತು ಸುತ್ತು
ಸಾರಂಗವು ಮೆಲುಕಾಡಿಸುತಿತ್ತು
ಇಲ್ಲಿಯ ಬೆಟ್ಟದ ತಪ್ಪಲು ಕೆಳಗೆ
ಮರಗಳ ತೋಪಿನ ತಣ್ಣೆಳಲೊಳಗೆ
ಬಾಳೆಯ ಗಾಳಿಯ ಲಲ್ಲೆಯ ಸುಳಿಗೆ
ವ್ಯಾಸಪೀಠದಲಿ ಗ್ರಂಥವನಿಟ್ಟು
ಪಾಟಲ ವಲ್ಕಲ ವಸನವನುಟ್ಟು
ಕೆಂಜೆಡೆಗಳ ಶಿರಬಂಧವ ತೊಟ್ಟು
ದಂಡಕಮಂಡಲು ಕೈಯೊಳಗಿಟ್ಟು
ಸವಿತೃಮಂಡಲ ದೀಠಿ ಮಿಂದು
ಜಾತವೇದಮುನಿರೂಪವಿದೆಂದು
ಪರ್ಣಕುಟಿಯ ಹೆಬ್ಬಾಗಿಲ ಬಿಟ್ಟು
ಶಕ್ತಿಕುಮಾರ ಪರಾಶರ ಬಂದು
ವೇದಪುರಾಣವ ನೀಡುವೆನೆಂದು
ಪುಲಸ್ತ್ಯಬ್ರಹ್ಮನ ಹರಕೆಯಿದೆಂದು
ಸಮಿತ್‌ಪಾಣಿ ಮೈತ್ರೇಯನ ಕರೆದು
ಹೊರಟರು "ಹೋಗಿ ಬರುವೆ"ನೆಂದೊರೆದು

೩

ಇಲ್ಲಿ ಧವಲಜಾಹ್ನವಿಯ ದಂಡೆಯಲ್ಲಿ
ದೇವಗಂಗೆ ಬೆಳ್ನೊರೆಯ ಚೆಲುವಿನಲ್ಲಿ
ಧ್ರುವಶಿರಸ್ಸಿನಲಿ ಧುಮಕಿಬಂದ ಗಂಗೆ

ಸಪ್ತರ್ಷಿಮಂಡಲದ ಮಂತ್ರಪೂತ ಗಂಗೆ
ಮೇರುಪರ್ವತದೊಳಿಳಿದು ಅಲಕನಂದೆ
ಚಂದ್ರಚೂಡನೆಡೆಯಲ್ಲಿ ಹರಿದು ಬಂದೆ
ಶಿವನ ಜಡೆಯಲುಳಿಮಸಗಿ ಹರಿಯುತಿತ್ತು
ಹರಿಚರಣರಜದ ಪಾವನತೆ ಹರಿಯುತಿತ್ತು
ತಪದ ಪುಣ್ಯ ಹರಿದಂತೆ ದೇವಗಂಗೆ
ಸಗರಕುಲದ ಸಂಜೀವಿನೀತರಂಗೆ
ಕೋಟಿಕುಲವನುದ್ಧರಿಸಿಬಂದ ನೀರೆ
ಮುಗಿಲನಿಳಿದು ನೆಲದಲ್ಲಿ ಸುಳಿದ ನೀರೆ
ಚಿರಂತನವೆ ತೆರೆಯೊಡೆದು ಹರಿಯುವಂತೆ
ಪದ್ಮಪೀಠ ಚೈತ್ಯಾಕ್ಷಿ ತೆರೆಯುವಂತೆ
ದೇವಕರುಣೆ ಜಲಧಾರೆಯೆರೆಯುವಂತೆ
ಗಂಗೆ ಹರಿದು ನಡೆದಿರಲು ಬಯಲಿನಲ್ಲಿ
ನಿಂತು ನೋಡಿದರು ದಂಡೆಮಳಲಿನಲ್ಲಿ
ಪರಾಶರರು ಹಾರೈಸಿ ದೋಣಿಗಾಗಿ
ಸುತ್ತಮುತ್ತ ನೋಡಿರಲು ಮೌನವಾಗಿ
ಒಮ್ಮೆಲೆ ಬೀಸಿಬಂದಿತ್ತು ಗಾಳಿ ತಂಪು
ಮತ್ಸ್ಯಗಂಧ ಹರಡಿತ್ತು ತನ್ನ ಕಂಪು
ವಿಸ್ಮಯದ ಲಹರಿ ಮಸಗಿತ್ತು ಚಿತ್ತದಲ್ಲಿ
ಪರಾಶರರ ಹೃದಯಾಬ್ಜಪೀಠದಲ್ಲಿ
ಬ್ರಹ್ಮತೇಜಲುಳಿಮಸಗಿ ಮಿರುಗುತಿತ್ತು
ಜೀವಪತನಕನುಕಂಪ ಕರಗುತಿತ್ತು
ಗುರುಕರುಣೆ ಹಿಡಿದು ಬಂದಿತ್ತು ವೇದಛತ್ರ
ಜಗದ ಮಂಗಲದ ಜಯಕೆ ಜ್ಞಾನಸತ್ರ
ಪುರುಷಸೂಕ್ತಕರಳಿತ್ತು ಪದ್ಮಪತ್ರ
"ಹೃದಯಕಮಲ ಮಕರಂದರೂಪ ಹರಿಯೆ !
ಬ್ರಹ್ಮಸಚ್ಚಿದಾನಂದರೂಪ ಹರಿಯೆ !
ಪರಂಜ್ಯೋತಿ ಪ್ರಣವಸ್ವರೂಪ ಹರಿಯೇ !

ಅಣರೇಣುಕಾಷ್ಠತೃಣಪರ್ಣಪೂರ್ಣಕಲ್ಪ
ಅಖಿಲಾಂಡಕೋಟಿಬ್ರಹ್ಮಾಂಡಬ್ರಹ್ಮಕಲ್ಪ
ಸರ್ವಾಂತರಾತ್ಮ ಜೀವಾತ್ಮ ನಿಮ್ಮ ತಲ್ಪ
ನಯನಕಮಲಸಂಜಾತ ಸೂರ್ಯದೇವ
ಪ್ರಾಣಕಮಲಸಂಜಾತ ವಾಯುದೇವ
ಚಿತ್ರಕಮಲಸಂಜಾತ ಚಂದ್ರದೇವ
ವದನಕಮಲಸಂಜಾತರಗ್ನಿದೇವ
ನಾಭಿಕಮಲಸಂಜಾತ ವ್ಯೋಮದೇವ
ಶಿರಸ್ಥಾನಸಂಜಾತ ಸ್ವರ್ಗಲೋಕ
ಚರಣಕಮಲಸಂಜಾತ ಮರ್ತ್ಯಲೋಕ
ನಿಮ್ಮ ಕರ್ಣಸಂಜಾತ ದಿಗ್ದಿಗಂತ
ಪ್ರಲಯಜಲ ನೆಲವನ್ನೆ ನುಂಗುತಿರಲು
ಮನುಮಹರ್ಷಿ ಸಪ್ತರ್ಷಿ ಧ್ಯಾನಿಸಿರಲು
ಮೀನಾವತಾರಿ ದೀನಾವತಾರಿ ಬರಲು
ಓಂ ನಮೋ ! ಚೇತನಾಚೇತನಸ್ವರೂಪ
ಓಂ ನಮೋ ! ಸರ್ವಯಜ್ಞೇಶ ಯಜ್ಞರೂಪ
ವೇದೈಕವೇದ್ಯ ವೇದೇಶ ಶೇಷಶಾಯಿ
ಪಾದ್ಮಕಲ್ಪಬ್ರಹ್ಮಾಂಡತಲ್ಪಶಾಯಿ
ಓಂ ನಮೋ ! ವೇದ ರಕ್ಷಿಸಿದ ಮತ್ಸ್ಯರೂಪ''

೪

ಅಲ್ಪಾಯುಷಲೋಕಕೆ ಮನನೊಂದು
ನಿಗಮಾಗಮಗಳ ನೀಡುವೆನೆಂದು
ಪುಲಸ್ತ್ಯಬ್ರಹ್ಮನ ಹರಕೆಯಿದೆಂದು
ಗಂಗಾತಟಕೆ ಪರಾಶರ ಬಂದು
ಪುರುಷಸೂಕ್ತ ರಸಮಂತವನಂದು
ಬಂಗಾರದ ಹುಡಿಮಳಲಲಿ ನಿಂದು
ಹಾಯ್ಸೆಸಿರೆ ನದಿ ದಾಟುವೆನೆಂದು

ಮಂದಾಕಿನಿಜಲ ಜಲಜದೊಳೀಸಿ
ಬಂದಿತು ಮಂದಾನಿಲ ನೆಲ ಬೀಸಿ
ಮತ್ಸ್ಯಗಂಧ ಸುಳಿದಾಡಿತು ಸೂಸಿ
ಹರಿಯವತಾರದ ಸೌರಭದಲೆಯಿದು
ವೇದತರಂಗತರಂಗಿಣಿ ನೆಲೆಯಿದು
ಅಕ್ಷರಬ್ರಹ್ಮನನಾದಿಯ ಸೆಲೆಯಿದು
ವಿಸ್ಮಿತರಾಗಿ ಪರಾಶರ ನಿಂದಿರೆ
"ನಾವೆಗೆ ಬನ್ನಿರಿ ಭಗವನ್" ಎಂದಿರೆ
ಮಧುರಸ್ವರದೌತಣವಿದು ಬಂದಿರೆ
ಮತ್ಸ್ಯಗಂಧೆ ಅಂಬಿಗಕನ್ನೆಯ ಕರೆ
ಕೇಳಿ ಪರಾಶರರೀಚೆಗೆ ನೋಡೆ
ಗಂಗಾತಟದೊಳಗೊರಗಿತು ಓಡೆ
ನದಿಯಲೆಯೊಳಗುಯ್ಯಾಲೆಯ ನಾಡೆ
ಓಡೆಯ ತುದಿಯಲಿ ಕಂಡಿತು ಕಣ್ಣು
ನಾವೆಯ ನಡೆಸುವ ಅಂಬಿಗವೆಣ್ಣು
ಅಂಬಿಗರಾಜನ ಮತ್ಸ್ಯಕುಮಾರಿ
ಮಂದಾಕಿನಿಯ ತರಂಗವಿಹಾರಿ
ಜಡೆಗಟ್ಟಿದ ಮುಡಿ ಕುಂತಲವೇಣಿ
ಮಧುವನಮಾಮರ ಕೋಕಿಲವಾಣಿ
ಚೆಲುವಿನ ಹೊಂದಾವರೆ ಮುಖಮಂಡಲ
ಮುತ್ತಿನ ಮಾಲೆಯ ರತ್ನದ ಕುಂಡಲ
ನಾವೆಯ ಜಲದೇವತೆ ಮೀನಾಕ್ಷಿ
ಚೆಲುವಿನ ವನದೇವತೆ ದೀನಾಕ್ಷಿ
ಹಸಿರಿನ ಬಣ್ಣದ ವಸನವನುಟ್ಟು
ನೇರಿಲ ಬಣ್ಣದ ಮೇಲುದ ತೊಟ್ಟು
ಸಿಂಪಿನ ಸರಗಳ ಕೊರಳೊಳಗಿಟ್ಟು
ಹದಿನಾರರ ಹರೆಯದ ವಿನ್ಯಾಸ
ಕೋಮಲಚೆಲುವಿನ ರೂಪವಿಲಾಸ

ತುಟಿ ಪಲ್ಲವಿಸಲು ಮಂದಸುಹಾಸ
ಮತ್ಸ್ಯಗಂ ಹರಿಗೋಲನು ಹಿಡಿದು
ಋಷಿ ರೂಪಕೆ ತಲೆವಾಗಲು ನುಡಿದು
''ನಾವೆಗೆ ಬನ್ನಿರಿ ಭಗವನ್'' ಎಂದಿರೆ
ನಿಗಮಾಗಮ ಜಗದಂಬೆಯು ನಿಂದಿರೆ
''ಜಲಕಲ್ಯಾಣಿ ತಥಾಸ್ತು'' ಎಂದುಲಿದು
ಓಡೆಗೆ ಬರಲು ಪರಾಶರರೊಲಿದು
ಸತ್ಯವತಿಯು ಮನದೊಳಗತಿನಲಿದು
ನುಡಿದಳು ''ಭಗವನ್ ಹುಟ್ಟನು ಬಲ್ಲೆವು
ಗಂಗಾಮಾತೆಯ ಗುಟ್ಟನು ಬಲ್ಲೆವು
ಸುರಗಂಗೆಯ ಜಲದಂತರಗಂಗೆಯ
ಮಂದಾಕಿನಿಜಲ ಜಲಜತರಂಗೆಯ
ಜಲಪರ್ಯಂಕಕೆ ಪರಿಚಿತರಾವು''
ಮಂಗಲ ಕೋರಿ ಸಮೀರಣ ಬಂತು
''ಶುಭಾಸ್ತೇ ಪಂಥಾನಃ ಸಂತು''

೫

ಪರಬ್ರಹ್ಮ ಪರಮಾತ್ಮ ಚಿತ್ತರಾಗಿ
ಹರಿಚರಣಕಮಲಧ್ಯಾನಸ್ಥಚಿತ್ತರಾಗಿ
ಪರಾಶರರು ಪದ್ಮಾಸನಸ್ಥರಾಗಿ
ನಾವೆಯಲ್ಲಿ ಕುಳಿತಿರಲು, ಮತ್ಸ್ಯಗಂಧಿ
ಹರಿಗೋಲು ಹಿಡಿದಳಾ ದಾಶರಾಜನಂದೆ
ಕೋಲನಿಳಿಸಿ ನದಿಯಲ್ಲಿ ಹುಟ್ಟುಹಾಕಿ
ಓಡಿಯಾಡಿಸಿದಳಂದು ನೌಕೆ ನೂಕಿ
ಹಂಸನೌಕೆಯೊಳಗಿರಿಸಿ ಹಂಸಹೆಜ್ಜೆ
ಹಂಸಗಮನೆ ಘಿಲುಕಿಸುತ ಮಂದಗೆಜ್ಜೆ
ಆಚೆಯೀಚೆ ನಡೆದಾಡೆ ನಾವೆ ತೇಲಿ
ಬಿಟ್ಟು ಮುಂದುವರಿದಿತ್ತು ಗಂಗೆಬೇಲಿ

ಹಾಯಿಗಂಬದಲಿ ಹರಡಿ ಹಾಯಿಕಟ್ಟು
ಚುಕ್ಕಾಣಿಯಿಬೆ ಕುಳಿತಿರಲು ಹಾಕಿ ಹುಟ್ಟು
ಗಾಳಿಯೋಡಿಬಂದಿತ್ತು ನಾವೆಯಲ್ಲಿ
ಹಂಸನೌಕೆ ತೇಲಿತ್ತು ಗಂಗೆಯಲ್ಲಿ
ಸತ್ಯವತಿಯು ಕುಳಿತಿದ್ದಳೋಡೆಯಾಡಿ
ಧವಲನೊರೆಯ ತೆರೆ ಮರೆಯ ಲಂಪುಗೂಡಿ
ಜಲತರಂಗದುಯ್ಯಾಲೆಯಾಟವಾಡಿ
ಸ್ವರತರಂಗದಾನಂದಲಹರಿ ಮೂಡಿ
ಅಂತರಂಗದುನ್ಮಾದ ಬರಲು ಹಾಡಿ

## ದೋಣಿಯ ಹಾಡು

ಓ ಬೇಲಿಲೇಸೊ ಓ ಬೇಲಿಲೇಸೊ !
ಓ ಮಾಲೀಸೊ ಓ ಮಾಲಿಲೇಸೊ !
ನೀರಾಟವಾಡಿವೆ ಬಣ್ಣದ ಮೀನ
ಉಪಚರವಸುವಿನ ಜಲಸಂತಾನ

ಮುಗಿಲಾಟವಾಡಿವೆ ಬಣ್ಣದ ಹಕ್ಕಿ
ಗಾಳಿಯು ಬೀಸಿದೆ ಬೆಳ್ಳಿಯ ರೆಕ್ಕೆ ॥೧॥

ಮುಟ್ಟಾಟವಾಡಿವೆ ಬಣ್ಣದ ಮೋಡ
ಮೀನು ಮಾತಾಡಿವೆ ಮೀನಿನ ಕೂಡ
ಹಾಡಿ ಹಾರಾಡಿವೆ ಜೋಡುಬೆಳ್ಳಕ್ಕಿ
ಹರಸಲಿ ಮುಗಿಲಿನ ಅರುಂಧತಿ ಚಿಕ್ಕಿ ॥೨॥

ಚಿನ್ನಾಟವಾಡಿವೆ ಹಂಸವೆಲ್ಲಲ್ಲೊ
ತೆರೆನೊರೆ ಮೂಡಿಸಿ ಕಾಮನಬಿಲ್ಲು
ಕಣ್ಣು ಮುಚ್ಚಾಟವಾಡುವ ಕಮಲವ ಕಂಡು
ಮಕರಂದ ಕುಡಿದಿವೆ ಮರಿದುಂಬಿವಿಂಡು ॥೩॥

ಸ್ವಾತಿಯ ಹನಿ ಮುತ್ತು ಹವಳವ ಕಂಡು
ಕಮಲದೊಳರಿಷಿಣಕುಂಕುಮ ಕೊಂಡು

ಮೀನುಗಳೆತ್ತಿವೆ ದೋಣಿಪಲ್ಲಕ್ಕಿ
ಗಾಳಿಯು ಬೀಸಿದೆ ಬೆಳ್ಳಿಯ ರೆಕ್ಕಿ ॥೪॥

ನದಿಯಲ್ಲಿ ನಿಂತಿರುವೀ ಚಕ್ರವಾಕ
ಹನಿಯಲ್ಲಿ ಕಂಡಿದೆ ಜಲಯಕ್ಷಲೋಕ
ಮೇಘದ ಚವರಿಯ ಬೆಟ್ಟಕೆ ಬೀಸಿ
ಗಾಳಿಯು ಬರುತಿದೆ ಗಂಗೆಯೊಳೀಸಿ ॥೫॥

ಜಲಜಗಳಾರತಿಯೆತ್ತಲು ಕೂಡಿ
ಜಲಗಂಧರ್ವರು ಜಲಗೀತ ಹಾಡಿ
ಮೀನುಗಳೆತ್ತಿವೆ ದೋಣಿಪಲ್ಲಕ್ಕಿ
ಗಾಳಿಯು ಬೀಸಿದೆ ಬೆಳ್ಳಿಯ ರೆಕ್ಕಿ ॥೬॥

ಸಂತಾನಸಂಭ್ರಮದಾನಂದವುಕ್ಕಿ
ಹಾಡಿ ಹಾರಾಡಿವೆ ಜೋಡುಬೆಳ್ಳಕ್ಕಿ
ಹುಟ್ಟನು ಬಲ್ಲೆವು ಕಾಪಾಡು ತಾಯಿ
ತೊಟ್ಟಿಲ ತೂಗಾಡಿ ಬಾ ಗಂಗಾಮಾಯಿ ॥೭॥

೬

ಗಂಗಾ ನದಿಯೊಳು ನಾವೆಯನಾಡಿ
ಸತ್ಯವತಿಯು ಜಲಗೀತವ ಹಾಡಿ
ಜಡೆಗಟ್ಟಿದ ಮುಡಿ ಕುಂತಲವೇಣಿ
ಮಧುವನ ಮಾಮರ ಕೋಕಿಲವಾಣಿ
ಚೆಲುವಿನ ಹೊಂದಾವರೆ ಮುಖಮಂಡಲ
ಮುತ್ತಿನ ಮಾಲೆಯ ರತ್ನದ ಕುಂಡಲ
ನಾವೆಯ ಜಲದೇವತೆ ಮೀನಾಕ್ಷಿ
ಚೆಲುವಿನ ವನದೇವತೆ ದೀನಾಕ್ಷಿ
ಹಸಿರಿನ ಬಣ್ಣದ ವಸನವನುಟ್ಟು
ನೇರಿಲು ಬಣ್ಣದ ಮೇಲುದ ತೊಟ್ಟು
ಸಿಂಪಿನ ಸರಗಳ ಕೊರಳೊಳಗಿಟ್ಟು

ಹದಿನಾರರ ಹರೆಯದ ವಿನ್ಯಾಸ
ಕೋಮಲಚೆಲುವಿನ ರೂಪವಿಲಾಸ
ತುಟಿ ಪಲ್ಲವಿಸಲು ಮಂದಸುಹಾಸ
ಅಂಬಿಗರಾಜನ ಮತ್ಸ್ಯಕುಮಾರಿ
ಮಂದಾಕಿನಿಯ ತರಂಗವಿಹಾರಿ
ಸತ್ಯವತಿಯು ಹಿಡಿದಳು ಚುಕ್ಕಾಣಿ
ಲಹರಿಯ ಲಲ್ಲೆಯೊಳಾಡಿತು ದೋಣಿ
ಸತ್ಯವತಿಯ ಮಧುರಸ್ವರಕೊಲಿದು
ನಿಗಮಾಗಮಜಲ ಜಲಯೊಳಲೆದು
ಪಾಟಲ ವಲ್ಕಲ ವಸನವನುಟ್ಟು
ಕೆಂಜೆಡೆಗಳ ಶಿರಬಂಧವ ತೊಟ್ಟು
ದಂಡಕಮಂಡಲು ನಾವೆಯೊಳಿಟ್ಟು
ಜಾತವೇದ ಋಷಿ ರೂಪವಿದೆಂದು
ಸವಿತೃಮಂಡಲ ದೀಪ್ತಿ ಮಿಂದು
ಯೋಗದ ಭೋಗದ ಮಂಡಲ ತೆರೆದು
ತೇಜಃಪುಂಜದ ದೃಷ್ಟಿಯ ನೆರೆದು
ಕುಳಿತು ಪರಾಶರ ನಾವೆಯೊಳಂದು
ನುಡಿದರು ಸತ್ಯವತಿಗೆ ಇಂತೆಂದು
"ಗ್ರಹಮಂಡಲದಲಿ ಬಂದಿಹುದೀಗ
ಹರಿಜನ್ಮೋತ್ಸವದಮೃತಯೋಗ
ಹೇ ದೀನಾಕ್ಷಿ ಇದಮೃತಯೋಗ
ಕೊಡಬಲ್ಲೆಯಾ ನಿನ್ನಯ ಭೋಗ?"
ಋಷಿತಾರುಣ್ಯದ ಚೆಲುವಿನ ರೂಪಕೆ
ಭೋಗದ ನುಡಿಗಳ ಚಂದನ ಧೂಪಕೆ
ಹದಿನಾರರ ಹರೆಯದ ವಿನ್ಯಾಸದಿ
ಕೋಮಲ ಚೆಲುವಿನ ರೂಪವಿಲಾಸದಿ
ಲಜ್ಜೆಯು ಕೆನ್ನೆಯೊಳೋಕುಳಿಯಾಡಿತು
ಕಾಮನಬಿಲ್ಲು ಕೋಲ್ಮಿಂಚನು ಹೂಡಿತು

ಗಂಗಾಲಹರಿಗೆ ಮನ ಹೊಯ್ದಾಡಿತು
ಮತ್ಸ್ಯಗಂ ಮೈ ಪುಳಕಿತಳಾಗಿ
ಸತ್ಯವತಿಯು ನುಡಿದಳು ತಲೆವಾಗಿ
''ಭಗವದನುಗ್ರಹ ಭಗವನ್ ಲಾಲಿಸಿ
ಹೆಣ್ಣನು ಭಯಸಂಕಟದೊಳು ಪಾಲಿಸಿ
ಕನ್ನಿಕೆ ಕೌಮಾರಿಕೆ ಕಳಕೊಂಡರೆ
ವಧುವಾಗದೆ ತಾಯ್ತನ ಸುಖವುಂಡರೆ
ಗತಿ ದುರ್ಗತಿ'' ಎನ್ನಲು ದೀನಾಕ್ಷಿ
''ಅಭಯವಿಕೋ ದೇವತೆಗಳು ಸಾಕ್ಷಿ
ನಿಮಿತ್ತಮಾತ್ರಂ ಭವ ದೀನಾಕ್ಷಿ''

೭

ಪರಾಶರರು ಕೈಯೆತ್ತಿ ನುಡಿದರಂದು
''ಹೇ ಸತ್ಯವತಿಯೆ ನಿನಗಭಯ ಕೊಡುವೆವೆಂದು
ದೇವಜನ್ಮದುತ್ಸವಕೆ ಪಾತ್ರಳಾಗು
ಹೇ ಮತ್ಸ್ಯಗಂಯೆ ನಿಮಿತ್ತಮಾತ್ರಳಾಗು
ಹೆತ್ತು ಮತ್ತೆ ಕೌಮಾರಪ್ರಾಪ್ತಳಾಗು
ದೇವಿ ಭೋಗಸಂಯೋಗ ದೇವಯೋಗ
ದೇವಿ ದೇವಜನ್ಮಕ್ಕೆ ದೇವಭೋಗ
ಜಗವನುದ್ಧರಿಸು ದೇವಮಾತೆಯಾಗಿ
ಪುಣ್ಯಗಂಗೆಯುದ್ಧಾರಧಾರೆಯಾಗಿ''
ಪರಾಶರರು ನುಡಿದಿರಲು ನುಡಿಯ ಕೇಳಿ
ಮತ್ಸ್ಯಗಂ ಸತ್ಯವತಿ ಲಜ್ಜೆತಾಳಿ
''ಭಗವತ್ಪ್ರಸಾದ''ವೆಂದುಸುರಿ ಮತ್ಸ್ಯಗಂಧೆ
ಲಜ್ಜೆಲಹರಿ ಮುಸುಗಿರಲು ದಾಶನಂದೆ
ಆಚೆಯೀಚೆ ದಡದಲ್ಲಿ ಜನರ ಕಂಡು
ನಾಲ್ಕು ನಿಟ್ಟುಗಳ ನೋಡೆ ಕುಳಿತುಕೊಂಡು
ಪರಾಶರರು ಕೈಬೊಗಸೆಯರ್ಘ್ಯವಿಡಿದು

ನವದ್ವೀಪ ನೀಹಾರ ಮಂತ್ರ ನುಡಿದು
''ನಾಭಿಕಮಲ ಕಮಲಾಕ್ಷ ಸಾಕ್ಷಿ''ಯೆಂದು
ಸುತ್ತುಮುತ್ತು ಸಿಂಪಡಿಸಲರ್ಘ್ಯದಲ್ಲಿ
ನಾವೆ ನಿಂತುಬಿಟ್ಟಿತ್ತು ಮಧ್ಯದಲ್ಲಿ
ವರುಣಕುಂಜ ಬಿಳಿಮಂಜು ಹಿಂಜುತಿತ್ತು
ಇಳಿಮಂಜು ಮೋಡ ಬಿಳಿಮಂಜು ಕಟ್ಟಿ ಸುತ್ತು
ಹನಿಮಂಜು ಹೆಪ್ಪುಗಟ್ಟಿತ್ತು ಮುಗಿಲನಿಳಿದು
ಇಬ್ಬನಿ ಸುತ್ತುವರಿದಿತ್ತು ಮಂಜು ಬಳಿದು
ಕಣ್ಣ ಪರೆಗೆ ಬಿಳಿಮಂಜು ತೆರೆಯನೆಳೆದು
ನಾವೆ ನೀರು ನದಿ ನೌಕೆ ಕಾಣದಂತೆ
ನದಿಯ ನಡುವೆ ನೆರೆದಿತ್ತು ಮಂಜುಸಂತೆ
ನವದ್ವೀಪವೆದ್ದಿತ್ತು ನೀರ ಮೇಲೆ
ಹಂಸನೌಕೆಯೆಡೆ ಹೊಸ ಸೃಷ್ಟಿ ತೇಲೆ
ಬಕುಲ ಬದರಿ ಕೇದಾರ ವನದ ಕಂಪು
ತೀಡಿಬರಲು ತಂಬೆಲರು ಬನದ ಲಂಪು
ಹಸಿರು ರತ್ನಗಂಬಳಿಯ ದ್ವೀಪಕಲ್ಪ
ಪಾರಿಜಾತದಡಿಯಲ್ಲಿ ಹಂಸತಲ್ಪ
ಮತ್ಸ್ಯಗಂ ಮೀನಾಕ್ಷಿ ಲಜ್ಜೆತಳೆದು
ದಾಶಕನ್ನೆ ದೀನಾಕ್ಷಿ ದೋಣಿಯಿಳಿದು
ಹಂಸತಲ್ಪದೆಡೆ ಹಂಸಗಮನೆ ಬರಲು
ಹಂಸಚಿತ್ತ ಹರಿದೆದ್ದು ಮೋಹಿಸಿರಲು
ಹಸಿರುಗಂಬಳಿಯ ದ್ವೀಪಕಲ್ಪದಲ್ಲಿ
ಪಾರಿಜಾತದಡಿಯಲ್ಲಿ ಹಂಸತಲ್ಪದಲ್ಲಿ
ಪರಾಶರರು ಪಾಮರಿಯ ಭೋಗಿಸಿರಲು
ಮುಗಿಲು ಮಂಗಲದ ಭೇರಿ ಮೊಳಗುತಿರಲು
ಕೃತ್ತಿಕೆಯ ಕುಂಜ ಕಾರ್ತೀಕ ಬೆಳಗುತಿರಲು
ಚೈತನ್ಯಪುಂಜ ನೆಲಮುಗಿಲ ತೊಳಗುತಿರಲು
ಬ್ರಹ್ಮಕಲ್ಪ ರಸತಲ್ಪ ಕೊಡುತಿರಲು

ರಸಋಷಿವೃಂದಕಾನಂದ ಮೂಡುತಿರಲು
ಚಾರಣರು ದೇವಗಾಂಧಾರ ಹಾಡುತಿರಲು
ಜಟಾಜೂಟಮೃಗಚರ್ಮಧಾರಿಯಾಗಿ
ವಾಸಿಷ್ಠ ಕೃಷ್ಣ ಕಾನೀನ ವ್ಯಾಸಯೋಗಿ
ಪರಮಹಂಸ ವಧುಗರ್ಭವಿಳಿದು ಬಂದು
ಭಗವಂತ ನಮಿಸಿದನು ತಾಯಿತಂದೆಗೆಂದು

ರ

ಹರಿತೋಪಲ ದೀತಿಯವತರಿಸಿ
ಜಟಾಜೂಟಕೃಷ್ಣಮೃಗ ಧರಿಸಿ
ನಿಗಮಾಗಮಗಳ ಬಗಲೊಳಗಿರಿಸಿ
ನಿಂದಿರೆ ಕಾನೀನ ನಮಸ್ಕರಿಸಿ
ಪರಬ್ರಹ್ಮಪರಮಾತ್ಮನ ಕಂಡು
ಹರಿಯವತಾರದ ಹರುಷವನುಂಡು
ಸತ್ಯವತಿಯು ಭಗವಂತನ ಸ್ಮರಿಸಿ
''ಚಿರಂಜೀವಿಯಾಗೆಂ''ದಳು ಹರಸಿ
''ಸ್ಮರಿಸಿದ ಮಾತ್ರಕ್ಕೆ ಬರುವೆನು ಬಳಿಗೆ
ನೆನೆಸಿದ ಮಾತ್ರಕೆ ನೀವರಗಳಿಗೆ
ಜನನಿಯ ಬಳಿ ಸಾರುವೆ ಕ್ಷಣದೊಳಗೆ
ಬದರಿಕಾಶ್ರಮದಿ ನೆಲೆಸುವೆ''ನೆಂದು
ಸತ್ಯವತಿಗೆ ವಂದಿಸುತ್ತೆತಂದು
ಪರಾಶರಋಷಿವರಚರಣಕೆ ನಮಿಸಿ
ನಿಗಮಾಗಮಗಳ ಹರಕೆಯ ಸ್ಮರಿಸಿ
ಪಿತೃವಾತ್ಸಲ್ಯದ ವರ ಸ್ವೀಕರಿಸಿ
ಕೃಷ್ಣದ್ವೈಪಾಯನ ಕಾನೀನ
ಕ್ಷಣದೊಳಗಾಗಲು ಅಂತರ್ಧಾನ
ಒಮ್ಮಿಂದೊಮ್ಮೆಲೆ ಮಂಜಿನ ವ್ಯೂಹ
ಮರೆಯಾಯಿತು ಮಂಜಿನ ಸಮ್ಮೋಹ

ಪರಮಾತ್ಮನ ಸಂಕಲ್ಪದ ಹೂಟ
ಋಷಿಮಂತ್ರೋತ್ಸವ ಗಾರುಡಿಯಾಟ
ಬಯಲಾಯಿತು ಬಿಳಿಮಂಜಿನ ಮಾಟ
ಪರಾಶರ ನುಡಿದರು ''ಹೇ ಮೀನಾಕ್ಷಿ
ಅಭಯವಿಕೊ ದೇವತೆಗಳ ಸಾಕ್ಷಿ
ದೇವಿ ಮತ್ತೆ ಕೌಮಾರಪ್ರಾಪ್ತಳಾಗು''
ಪರಾಶರರು ನುಡಿದಿರಲು ನುಡಿಯ ಕೇಳಿ
ದೇವಮಾತೆ ಸತ್ಯವತಿ ಲಜ್ಜೆತಾಳಿ
ಹಸಿರುಗಂಬಳಿಯ ದ್ವೀಪಕಲ್ಪದಲ್ಲಿ
ಪಾರಿಜಾತದಡಿ ಹಂಸತಲ್ಪದಲ್ಲಿ
ಪಾಮರಿಯು ಪರಮಹಂಸರಿಗೆ ಭೋಗವಿತ್ತು
ವೇದಸ್ವರೂಪ ಶ್ರೀಕೃಷ್ಣನನ್ನು ಹೆತ್ತು
ಬಕುಲ ಬದರಿ ಕೇದಾರ ವನದ ಕಂಪು
ಬಾದರಾಯಣರ ಹೆತ್ತ ಮನದ ಲಂಪು
ಆಶೀರ್ವದಿಸೆ ಪರಾಶರ ಬಂದು
ಪುನಃ ಕೌಮಾರವ ಪಡೆಯೆಂದು
ಸತ್ಯವತಿಯು ದೋಣಿಯೊಳ್ಳೆತಂದು
ಜಾಹ್ನವಿಯೀಚೆಯ ದಂಡೆಗೆ ಬಂದು
ದಂಡೆಯೊಳಿಳಿಸಿ ಪರಾಶರ ಮುನಿಗೆ
ನಾವೆಯನಾಡಿಸಿ ನಡೆದಳು ಮನೆಗೆ
ಗಂಗಾಲಹರಿಯ ಲಲ್ಲೆಯೊಳುರುಳಿ
ನಾವೆಯು ನಡೆಯಿತು ನಡೆದಳು ಮರಳಿ
ಮಂದಾಕಿನಿಯ ತರಂಗವಿಹಾರಿ
ಮರಳಿದಳಂಬಿಗ ರಾಜಕುಮಾರಿ
ಪರಮಹಂಸವಧು ದೇವಮಾತೆಯಾಗಿ
ದಂಡೆಗಿಳಿದಿರಲು ದಾಶಕನ್ಯೆಯಾಗಿ
ಮಗಳ ಕಂಡು ನುಡಿದಿದ್ದ ತಂದೆ ಕೂಗಿ
''ಇದೇನಾಟವಿದು ಮತ್ಸ್ಯಗಂ ಹೋಗಿ
ಮರಳಿ ಬಂದೆ ಯೋಜನುಸುಗಂಯಾಗಿ!''

## ೩. ಗುರುಹಸಾದವಿದು ಸಮೀರ

೧

ತುಳುಕುತಿರುವ ಕಣ್ವತೀರ್ಥದಾಚೆಗೊಂದು ಗುಡಿ
ಅಲ್ಲಿ ಹಸಿರು ಬಯಲ ನಡುವೆ ಬೆಳೆದುನಿಂತ ದ್ರುಮ
ಕೆಳಗೆ ಕುಳಿತರೊಬ್ಬ ಗುರು ಸನತ್ಕುಮಾರಸಮ
ಸುತ್ತ ಕುಳಿತ ಶಿಷ್ಯವೃಂದ ಕೇಳಿತವರ ನುಡಿ
ಕಡಲ ತೆರೆಗಳೋಡಿ ಬಂದವೀಚೆ ಮಳಲತಡಿ

೨

''ಶ್ರವಣ ಮನನ ನಿಧ್ಯಾಸ ಮೂರೆ ಜ್ಞಾನಪಥ
ಇದುವೆ ತಿಳಿದ ದಾರ್ಶನಿಕರ ಬ್ರಹ್ಮವಿದರ ಮತ
ಋಷಿಯ ಮಾತು ಜೇನುಹುಟ್ಟು ವಿದ್ಯೆ ಮಧುವ್ರತ
ದೇವಕರುಣೆ ನಡೆಸುತಿರಲಿ ನಿಮ್ಮ ಬಾಳ ರಥ

೩

ಮೊದಲು ಬಾಳಬಟ್ಟೆ ನಡೆದ ಹೆಜ್ಜೆ ಪಯಣ ಬಲ
ನನ್ನಿ ನಿಮ್ಮ ಜೀವ ವೇದ ಉಸಿರೆ ಮಂತ್ರವಲ!
ಒಲವು ತುಂಬಿ ತುಳುಕುತಿರಲಿ ಎದೆಯ ಕಡಲ ಜಲ
ದೇವಕರುಣೆ ಬೆಳೆಸುತಿರಲಿ ನಿತ್ಯಸತ್ಯ ಛಲ

೪

ತಾಳದಂತರಾಳವರಿತು ನಾಟ್ಯವಾಡುವಿಳೆ
ಸ್ವರತರಂಗದಂತರಂಗವರಿತು ಹರಿವ ಹೊಳೆ
ಆತ್ಮವಿದ್ಯೆಯದರ ಹೆಜ್ಜೆ ಜ್ಞಾನ ಬಿತ್ತಿ ಬೆಳೆ
ದೇವಕರುಣೆ ಕರೆಯುತಿರಲಿ ಮುಗಿಲ ಜೇನುಮಳೆ

೫

ಸರಸ ರಾಸಲೀಲೆಯಾಡಿ ತಿರುಗುತಿರುವ ತಿರೆ
ನೆಲದ ಕನಸ ನೂಲುತಿರುವ ಮುಗಿಲನಾಡ ದೊರೆ
ಇರುಳು ಕೂಡ ಬಿಚ್ಚುತ್ತಿತ್ತು ತನ್ನ ತಿಮಿರ ಪರೆ
ದೇವಕರುಣೆ ಹರಸುತಿರಲಿ ಕೇಳಿ ನಿಮ್ಮ ಮೊರೆ

೬

ಜಗದ ಮಿಸುನಿ ಗರ್ಭಗುಡಿಯಲಿರುವ ಹೈಮವತಿ
ಪ್ರಣವವೀಣೆ ನುಡಿಸುತಿರುವಳಿಲ್ಲಿ ಬ್ರಹ್ಮಸತಿ
ಧ್ಯಾನಪೀಠದಲ್ಲಿ ಜೀವದುಸಿರು ಹಿಡಿದ ಶ್ರುತಿ
ದೇವಕರುಣೆ ಹರಸುತಿರಲಿ ಸ್ಥಿತಪ್ರಜ್ಞಮತಿ"

೭

ಹೀಗೆ ಸಮಿತ್-ಪಾಣಿಗಳಿಗೆ ಕಲಿಸುತಿರಲು ಗುರು
ಹಸಿರೆಲೆ ಹುಯಿಲೆಬ್ಬಿಸಿರಲು ಗಾಳಿ ತಬ್ಬಿ ಮರ
ಗುರು ನುಡಿದರು ಕೈಯನೆತ್ತಿ 'ಸಾವಧಾನ' ಸ್ವರ
ಗಾಳಿಗೆ ಕಿವಿಮಾತನುಸುರಿ ಸುಮ್ಮನಿತ್ತು ತರು
"ಗುರುಹಸಾದವಿದು ಸಮೀರ! ಸನಿಹ ಸುಳಿಯದಿರು!"

## ೪. ಸಂಪಾತಿ

ಕಣ್ಣು ತೆರೆಯಿತು ಮುಗಿಲು ಬಂಗಾರ ಬಳಿದು
ಮಾಹೇಂದ್ರಪರ್ವತದ ಗಿಡಮರದೊಳಿಳಿದು
ಕುಂಕುಮದ ಹುಡಿಯೆರಚಿ ಹೊಳೆವಗ್ನಿಪಿಂಡ
ಮೂಡಿರಲು ಬೆಳಗಿತು ಸಮಸ್ತಬ್ರಹ್ಮಾಂಡ
ಹೂ ಹೂವಿನಂಗಳದಿ ಹರುಷದಿಂದಲೆದು
ಸೌಗಂಕದ ರಂಗವಲ್ಲಿಯನು ಬರೆದು
ಬೀಸತೊಡಗಿತು ಗಾಳಿ ಮಾಹೇಂದ್ರಗಿರಿಗೆ
ಹಕ್ಕಿ ಗರಿಬಿಚ್ಚಿದವು ಮೋಡಗಳ ಕರೆಗೆ
ಚಿಲಿಪಿಲಿಸಿ ಹಾರಿದವು ದಿಕ್ಕುಗಳನಳೆದು
ಹಣ್ಣೆಲೆಗಳುದುರಿದವು ಹಸಿರು ದಿನ ನೆನೆದು
ಹನಿಮಂಜು ತಂಪಿನಲಿ ಗಿರಿಯ ನೆಲ ತೊಯಿದು
ಪಕ್ಷಿ ಸೂಕ್ತವ ಕೇಳಿದೊಡನೆ ಕಣ್ತೆರೆದು
ಸೂರ್ಯಸಾರಥಿಯರುಣಪುತ್ರ ಸಂಪಾತಿ
ಸುಟ್ಟುಸೀಕರಿಗೊಂಡ ರೆಕ್ಕೆಗಳ ಚಾಚಿ
ಒಡಲನಡೆ ನಿತ್ರಾಣ ಕಾಲುಗಳ ನೀಡಿ
ಬಿದ್ದಲ್ಲೆ ಬಿದ್ದಿರಲು ಸುತ್ತಲೂ ನೋಡಿ
ಕಣ್ಣು ಹನಿದುಂಬಿದವು ಮೇಲಿತ್ತು ಮುಗಿಲು
ಕೆಳಗೆ ಮೈಚಾಚಿತ್ತು ನೊರೆನಗೆಯ ಕಡಲು
ಪರಿಮಳದ ಬೀಸಣಿಗೆ ಹಿಡಿದಿರುವ ಗಾಳಿ
ಕರೆಯತೊಡಗಿವೆ ದಿಕ್ಕು ಹೊಸ ಹಿಗ್ಗು ತಾಳಿ
ಉಕ್ಕಿಬಂದಿತು ದುಃಖ ''ಓ ನೀಲ ಮುಗಿಲೆ
ನೊರೆನಗೆಯ ರತ್ನಗರ್ಭದ ನೀಲಕಡಲೆ
ಪರಿಮಳದ ಹರಿಕಾರ ಓ ವಾಯುದೇವ
ಬೆಳಗಿ ಬೆಳೆಸುವ ಬಿಂಬ ಓ ಸೂರ್ಯದೇವ
ಮತ್ತೊಂದು ಬೆಳಗಾಯ್ತು. ಮತ್ತೊಂದು ಇರುಳು
ನನ್ನ ಪಾಲಿಗೆ ಮಾತ್ರ ಎಲ್ಲ ನೆರಳು''

೨

ಬೆಂದ ರೆಕ್ಕೆಯ ನೀಡಿ ಕನವರಿಸಿ ನುಡಿದು
ದಿಕ್ಕುಗಳ ಮೋಡಗಳ ದಾರಿಗಳ ನೆನೆದು
ಹುಲ್ಲುನೆಲದಲಿ ಮತ್ತೆ ಕೊರಳಿರಿಸಿಕೊಂಡು
ಮಲಗಿರಲು ಕಣ್ತೆರೆದು ಸುತ್ತಲೂ ಕಂಡು
ಚಿಕ್ಕಂದು ನೋಡಿರುವ ಬೆಳಕುಗಳ ನೆನಪು
ಮರಳಿ ಬರತೊಡಗಿತ್ತು ತಾಯನುಡಿ ನೆನಪು
ಒಂದು ದಿನ ಮುಂಜಾವು ಮುಗಿಲೆಲ್ಲ ಕೆಂಪು
ಬೆಳಕು ಚಿನ್ನದ ನೀರು ಗಾಳಿ ಬಲು ತಂಪು
ಮನೆಯ ಕಿಡಕಿಯ ತೆರೆದು ದೂರ ಕೈ ಮಾಡಿ
ತಾಯಿ ನುಡಿದಳು ತನಗೆ, "ಅಲ್ಲಿಹನು ನೋಡಿ
ಎಲ್ಲ ಬ್ರಹ್ಮಾಂಡಗಳ ಬೆಳಗುತಿಹ ಸೂರ್ಯ
ಇವನ ರಥ ನಡೆಸುವದೆ ತಂದೆಗಿಹ ಸೂರ್ಯ
ಇವನ ಬಿಂಬವೆ ಸಕಲಚೈತನ್ಯಮೂಲ
ಬ್ರಹ್ಮಾಂಡಗಳ ಬದುಕು ಈ ಸೂರ್ಯಗೋಲ
ನೆನಪಿಡಿರಿ ಮಕ್ಕಳೆ ಎತ್ತರಕೆ ನಡೆದು
ತೇಜಸ್ವಿಯಾಗಿರಿ, ಸೂರ್ಯನನು ನೆನೆದು"
ಸಂಪಾತಿ ಸೋದರ ಜಟಾಯುವನು ಕೂಡಿ
ಹರ್ಷಪಟ್ಟರು ಸೂರ್ಯಬಿಂಬವನು ನೋಡಿ

೩

ಮಲಗಿದೆಡೆ ಮರಳಿತ್ತು ಬಾಲ್ಯಗಳ ನೆನಪು
ತಾಯ, ತಮ್ಮಂದಿರ ವಾತ್ಸಲ್ಯಗಳ ನೆನಪು
ಒಂದು ದಿನ ಸಂಪಾತಿ ಜಟಾಯುವನು ಕೂಡಿ
ಸೂರ್ಯನನು ಮುಟ್ಟಿ ಬರುವಂಥ ಪಣಹೂಡಿ
ಹಾರಿ ನಡೆದರು ಮೇಲೆ ತಾಯ ನುಡಿ ನೆನೆದು
ಸುತ್ತಲೂ ಪವಡಿಸಿದ ಹೊಂಬಿಸಿಲಿಗೊಲಿದು
ಗಾಳಿಗಳ ಬಾಚಿದವು ಸೋದರರ ರೆಕ್ಕೆ

ಮೋಡಗಳ ದಾಟಿದವು ಮತ್ತೆ ಮೇಲಕ್ಕೆ
ಹಾರಿಯೇ ಹಾರಿದರು ಅಣ್ಣ ತಮ್ಮದಿರು
ಬೆಳಕಿನಲಿ ನಡೆದಷ್ಟು ಬಿಸುಪಾಯ್ತು ಕದಿರು
ಸೂರ್ಯ ನೆತ್ತಿಗೆ ಬಂದ ಬಿಸಿಲು ಸುಡುತಿತ್ತು
ಮೋಡಗಳೆ ಇರಲಿಲ್ಲ ಗಾಳಿಯಡಗಿತ್ತು
ಆದರೂ ಸೋದರರು ಹಾರಿದರು ಮೇಲೆ
ರೆಕ್ಕೆ ಚುರುಗುಟ್ಟಿದವು. ಬೆಳಕಿತ್ತು ಜ್ವಾಲೆ
ಜಟಾಯು ಹೇಳಿದ ''ಅಣ್ಣ ಸುಡುತಿಹವು ರೆಕ್ಕೆ
ಆದರೂ ಹೋಗೋಣ ಮತ್ತೆ ಮೇಲಕ್ಕೆ''
ಸೋದರರು ರೆಕ್ಕೆಗಳ ಬೀಸಿಯೆ ಬೀಸಿ
ಮತ್ತೆ ನಡೆದರು ಮೇಲೆ ಉರಿಬೆಳಕನೀಸಿ
ಬಳಲಿದ ಜಟಾಯುವಿನ ದುರ್ದೆಸೆಯ ಕಂಡು
ರೆಕ್ಕೆಗಳ ತಂಪಿನೊಳಗನವನಿರಿಸಿಕೊಂಡು
ಸಂಪಾತಿ ಹಾರಿರಲು ಇನ್ನಷ್ಟು ಮೇಲೆ
ಸುಟ್ಟುಬಿಟ್ಟಿತು ರೆಕ್ಕೆಗಳ ಸೂರ್ಯಜ್ವಾಲೆ
ಕುಸಿದುಬಿದ್ದನು ಆಗ ಸಂಪಾತಿ ಕೆಳಗೆ
ಆದರೂ ತಮ್ಮಗವಚಿದ್ದ ಗರಿಯೊಳಗೆ

೪

ಎದೆಗವಚಿಸಲುಹಿರುವ ತಮ್ಮನನು ನೆನೆದು
ಸುಟ್ಟುಕೊಂಡಿರುವಂಥ ರೆಕ್ಕೆಗಳ ನೆನೆದು
ಮಲಗಿರಲು ಕೇಳಿಸಿತು ಸಂಪಾತಿಗಂದು
ಗಿರಿಯಡಿಯೊಳಿಂಪಾದ ಜಯಘೋಷವೊಂದು
''ರಘುಪತಿ ರಾಘವ ರಾಜಾರಾಮ
ಪತಿತಪಾವನ ಸೀತಾರಾಮ''
ಕಿವಿಗಿಳಿಯಿತಮೃತವು ಎಚ್ಚರವು ಬಂದು
ಮೈಗಿಳಿಯಿತಮೃತವು ಮೈ ಪುಲಕಗೊಂಡು
ಮೆಲ್ಲಮೆಲ್ಲನೆ ತನ್ನ ಕೊರಳೆತ್ತಿಕೊಂಡು

ನೋಡಿರಲು ಕಾಣಿಸಿತು ಕಪಿಸೈನ್ಯವೊಂದು
ಶ್ರೀರಾಮಸೇವೆಯಲಿ ದೀಕ್ಷೆಯನು ತಳೆದು
ಜಾನಕಿಯ ಶೋಧಿಸುತ ಎಲ್ಲ ಕಡೆಗಲೆದು
ಎಲ್ಲಿಯೂ ಕಾಣದೆ ನಿರಾಶೆಯಲಿ ನೊಂದು
ಹನುಮಂತನೊಡನೆ ಕಪಿಸಂಕುಲವು ಬಂದು
ಅನ್ನನೀರನು ತೊರೆದು ದೀಕ್ಷೆಯಲಿ ಕುಳಿತು
ಹಾಡಿದವು ಮಂಗಗಳು ಗಿರಿಯಡಿಗೆ ಕಲೆತು
''ರಘುಪತಿ ನ ರಾಘವ ರಾಜಾರಾಮ
ಪತಿತಪಾವನ ಸೀತಾರಾಮ''
ಹಾಡು ಕೇಳಿಯೆ ಶಕ್ತಿಸೆಲೆ ಮೂಡುತಿತ್ತು
ಬೆಂದವಗೆ ರಾಮಕಥೆ ಬಲ ನೀಡುತಿತ್ತು

೫

ಮೈಯೆಲ್ಲ ಕಿವಿಯಾಗಿ ಕೇಳಿ ಸಂಪಾತಿ
ಎದ್ದು ಕುಳಿತನು ಸಾವಕಾಶ ಕಾಲೂರಿ

''ದಶರಥನಂದನ ಶ್ರೀರಾಮ
ಪ್ರಜೆಗಳ ಹೃದಯದ ಚಂದ್ರಾಮ ॥೧॥

ವಿಶ್ವಾಮಿತ್ರನ ಜೊತೆಗುಳಿದು
ಯಜ್ಞವ ಪೊರೆದನು ಬಿಲ್ಪಿಡಿದು ॥೨॥

ಋಷಿಸಂಕುಲವನು ಸಲುಹಿದನು
ಅಸುರರ ಶಿರಗಳನಿಳುಹಿದನು ॥೩॥

ಕಲ್ಲಿಗೆ ಕರುಣೆಯ ನೀಡಿದನು
ಅಹಲ್ಯೋದ್ಧಾರವ ಮಾಡಿದನು ॥೪॥

ಈಶ್ವರಧನುವನು ನೆಗಹಿದನು
ಸೀತೆಯ ಮಾಲೆಯ ಧರಿಸಿದನು ॥೫॥

ತಂದೆಯ ಮಾತನು ನಡೆಸಿದನು
ದೂರದ ಕಾಡಿಗೆ ತೆರಳಿದನು ॥೬॥

ಗುಹನಲಿ ಸ್ನೇಹವ ಮಾಡಿದನು
ಭರತಗೆ ಪಾದುಕೆ ನೀಡಿದನು ॥೭॥

ಚಿನ್ನದ ಜಿಂಕೆಯ ನೋಡಿದನು
ಅಸುರಗೆ ಬಾಣವ ಹೂಡಿದನು ॥೮॥

ಸೀತಾದೇವಿಯ ಹುಡುಕಿದನು
ಕಪಿಗಳ ಗೆಳೆತನ ಬೆಳೆಸಿದನು'' ॥೯॥

೬

ರಾಮಕಥೆಯೊಂದೊಂದು ಪಲ್ಲವಿಯ ಕೇಳಿ
ಬೆಂದ ಕಡೆಗೊಂದೊಂದು ಹೊಸರೆಕ್ಕೆ ತಾಳಿ
ಸಂಪಾತಿ ಆನಂದಬಾಷ್ಪಗಳ ಸುರಿಸಿ
ತಲೆದೂಗಿ ಆಲಿಸಿದ ರಾಮಕಥೆ ಸ್ಮರಿಸಿ
''ವೀರಜಟಾಯುವ ನೋಡಿದನು
ಅಮೃತಲೋಕವ ನೀಡಿದನು''
ಕಿವಿನಿಮಿರಿ ಕೇಳಿ ಹರ್ಷೋದ್ರೇಕಗೊಂಡು
ಕೂಗಿದನು ಸಂಪಾತಿ ''ಓ ತಮ್ಮ'' ಎಂದು
ಹೊಸರೆಕ್ಕೆಗಳ ತೆರೆದು ಹೊಸ ಆಸೆ ಮೂಡಿ
ಹಾರಿಬಂದನು ಬೇಗ ಕಪಿಯ ಬಳಿಗೋಡಿ
ವಿಸ್ತಾರವಾಗಿರುವ ರೆಕ್ಕೆಗಳ ನೆರಳು
ಹಾಡುತಿಹ ಮಂಗಗಳ ಸನಿಹದಲಿ ಬರಲು
ಬಳಿಗೆ ಬಂದಿರುವ ಹಿರಿಹಕ್ಕಿಯನು ಕಂಡು
ಮಂಗಗಳು ಕೇಳಿದವು ಆಶ್ಚರ್ಯಗೊಂಡು
''ಪಕ್ಷಿಯೇ ನೀನಾರು? ಇಲ್ಲಿಗೇಕಿಂದು
ಈ ಗಿರಿಯ ತಪ್ಪಲಿಗೆ ಬಂದಿರುವೆ?'' ಎಂದು
ಸಂಪಾತಿ ಹೇಳಿದನು ಹರ್ಷವನು ತಾಳಿ
''ರಾಮಕಥೆಯೊಂದೊಂದು ಪಲ್ಲವಿಯ ಕೇಳಿ
ಬೆಂದ ಬದಿಗೊಂದೊಂದು ಹೊಸರೆಕ್ಕೆ ಮೂಡಿ
ರಾಮಕಥೆ ಹಾಡುತಿಹ ಬಾಳುವೆಯು ಧನ್ಯ

ರಾಮಕಥೆಯ ಕೇಳಿಯೆ ನಾನಾದೆ ಧನ್ಯ
ಅರುಣಪುತ್ರನು ನಾನು ಹೆಸರು ಸಂಪಾತಿ
ನನ್ನ ತಮ್ಮ ಜಟಾಯು ನನಗೆ ಬಲುಪ್ರೀತಿ
ಎಲ್ಲಿಯಾದರು ಅವನ ಕಂಡಿರುವಿರೇನು?
ಹೆಸರುದೆಸೆ ಗುರುತುಗಳು ನಿಮಗಿರುವವೇನು?''

೭

ಸಂಪಾತಿಯಾಡಿರುವ ಮಾತುಗಳ ಕೇಳಿ
ಒಮ್ಮೆಲೆ ಮಂಗಗಳು ಮೌನವನು ತಾಳಿ
ಸುಮ್ಮನಾಗಲು ನುಡಿದ ಕಪಿ ಜಾಂಬುವಂತ
''ಅರಜೀವ ಜಟಾಯು ಬಲುಪುಣ್ಯವಂತ
ಸೀತೆಯನು ದಶಕಂಠ ಕದ್ದೊಯ್ಯುತಿರಲು
ಅದನು ಕಂಡ ಜಟಾಯು ಅವನೆದುರು ಬರಲು
ಜಾನಕಿಯ ರಕ್ಷಣೆಗೆ ಹೋರಾಟ ಹೂಡಿ
ರಾಮಕಾರ್ಯಕೆ ತನ್ನ ಪ್ರಾಣವನೆ ನೀಡಿ
ಧನ್ಯನಾದನು'' ಎಂಬ ಮಾತುಗಳ ಕೇಳಿ
''ಹಾ ತಮ್ಮ!'' ಎಂದಿದ್ದ ದುಃಖ ಎದೆ ಸೀಳಿ
ಕುಸಿಯತೊಡಗಿತು ಮತ್ತೆ ಮೈಯೊಳಿಹ ತ್ರಾಣ
ಕುತ್ತಿಗೆಗೆ ಬಂದಿತ್ತು ಶೋಕದಲಿ ಪ್ರಾಣ
ಒಂದೊಂದೆ ನೆನಪಾಗೆ ಸೋದರನ ಕುರಿತು
ಎಡೆಬಿಡದೆ ಸಂಪಾತಿ ಅಳುತಿರಲು ಕುಳಿತು
ಹನುಮಂತ ಹೇಳಿದನು ಅವನ ಬಳಿ ಬಂದು
''ಸಂಪಾತಿ ಅಳಬೇಡ ಸಹಿಸಿಕೊ'' ಎಂದು
''ರಾಮಕಾರ್ಯಕೆ ಪ್ರಾಣವಿತ್ತವನು ಧನ್ಯ!
ರಾಮಕಾರ್ಯಕ್ಕೆಂದೆ ಕೇಳುವೆನು ನಿನ್ನ
ಕಳ್ಳರಾಕ್ಷಸನೂರು ಕಂಡಿರುವೆಯೇನು?
ಅಲ್ಲಿ ತಲಪುವ ದಾರಿ ನೀ ಬಲ್ಲೆಯೇನು?''
ಉಕ್ಕಿಬರುತಿರುವಂಥ ದುಃಖವನು ತಡೆದು

ಹಿತವಚನಮೃತದ ಹನಿಗಳನು ಕುಡಿದು
ತಮ್ಮನಿಗೆ ಕರುಣಿಸಿದ ಸದ್ಗತಿಯ ನೆನೆದು
ಸಂಪಾತಿ ಹೇಳಿದನು ''ಈ ಕಡಲಿನಾಚೆ
ಲಂಕೆಯಿದೆ. ಅಲ್ಲಿಹುದು ರಾವಣನ ರಾಜ್ಯ
ಕಡಲಸೇತುವೆ ಕಟ್ಟಿ ಲಗ್ಗೆಯನು ಇಟ್ಟು
ಕೆಂಡಕದ್ದಿರುವವನ ಕುಲವೆಲ್ಲ ಸುಟ್ಟು
ತುಂಬಿತುಳುಕಿರುವಾಗ ರಾಕ್ಷಸನ ಕೊಡವು
ರಾಮಬಾಣವ ಹೂಡಲಿನ್ನೇಕೆ ತಡವು?
ಭೂಭಾರವಿಳಿಸಿ ಸಲುಹಯ್ಯ ಶ್ರೀರಾಮ
ಭಕ್ತವತ್ಸಲ ರಾಮ ನೀನಮೃತಧಾಮ''
ಸಂಪಾತಿ ಗದ್ಗರಿಸಿ ಕಣ್ಣೀರು ಸುರಿಸಿ
ಕರುಣಾಸಮುದ್ರ ಶ್ರೀರಾಮನನು ಸ್ಮರಿಸಿ
ಕಪಿಗಳಿಗೆ ಹೇಳಿದನು ''ಧನ್ಯರೈ ನೀವು
ರಾಮಚರಿತಾಮೃತವನೀಂಟಿದೆವು ನಾವು
ಬದುಕಿನಲಿ ಸಲುಹಿರಲು ಶ್ರೀರಾಮಹಸ್ತ
ಇನ್ನಾರ ಭಯವುಂಟು – ಈ ಜೀವ ಮುಕ್ತ!''

## ೫. ಊರ್ವಶೀ

೧

ಹೊಂಬೆಳಗಿನ ರಸಲೇಪದಚೆಲುವಿಗೆ ನೆಲಮುಗಿಲಿನ ಸೌಂದರ್ಯಸಿರಿ
ಹಸಿರು ತಪೋವನ ಧೂಮಸ್ತಂಭವ ದಿಟ್ಟಿಸಿ ನೋಡಿತು ನೀಲಗಿರಿ
ಗಾಳಿಯು ವಾನಪ್ರಸ್ಥಕೆ ತೆರಳಿತು ಕಾವಣ ಕಟ್ಟಿತು ಪರ್ಣಕುಟಿ
ಜಡೆಗಟ್ಟಿದ ಹೆಮ್ಮರಗಳು ಕುಳಿತವು ಕೊನರಿದ ಬಳ್ಳಿಯ ಬದ್ಧಕಟಿ
ಹಸಿರಿನ ಸುಂದರ ವನಗಿರಿ ಕಂದರ ಮಧುರನಿನಾದದಿ ಮೊಳಗಿದವು
ರೆಕ್ಕೆಯ ಋಷಿಗಳ ರಸಗಾಯತ್ರಿಗೆ ಕಂಪಿನ ಬಟ್ಟಲು ಬೆಳಗಿದವು
ಕಡಲಿನ ಪಾರವ ಹಾರೈಸುತ ನದಿ ರಮ್ಯ ನಿರಂತರ ನಡೆದಿತ್ತು
ಭಗವಂತನ ನಗೆ ಗರಿಗೆದರಲು ನೆಲ ಮುಗಿಲಿನನಂತತೆ ಪಡೆದಿತ್ತು
ನರನಾರಾಯಣ ಯಮಳರು ಕುಳಿತರು ಅಶ್ವತ್ಥದ ಮರದಡಿಯಲ್ಲಿ
ನರಕುಲ ನಾರಾಯಣಕುಲವಾಗಲಿ ಹಿರಣ್ಯಗರ್ಭದ ಗುಡಿಯಲ್ಲಿ

೨

ತೊಂಗಲು ಚಾಮರ ಬೀಸಿದ ಹಕ್ಕಿಗೆ ನೀಲದಿಗಂತವು ಕರೆದಿತ್ತು
ಪೀತಪತಂಗದ ಪಾಟಿಲ ರೆಕ್ಕೆಗೆ ಮೊಗ್ಗೆಯು ಬಾಯನೆ ತೆರೆದಿತ್ತು
ಪರ್ವತಕನ್ನೆಯ ನೀರಿನ ಹೊಳಲಿಗೆ ನೊರೆ ನಗೆಮಲ್ಲಿಗೆ ಮುಡಿಸಿತ್ತು
ಚೆಲುವಿನ ತೇಜಃಪುಂಜವಿಲಾಸಕೆ ಕಾನನ ಮುರಲಿಯ ನುಡಿಸಿತ್ತು
ಹೂವಿನ ಗುರುಕುಲಪೀಠದಿ ಕುಳಿತವು ಮಧುವನ ವಿಹರಿಸಿ ಮರಿದುಂಬಿ
ಮಾಮರದಳಿರಿನ ಕೋಕಿಲ ಹಾಡಿತು ಪಂಚಮದಿಂಚರ ಮಧು ತುಂಬಿ
ಮನದನುರಾಗದ ಹೃದಯಪರಾಗದ ನೀಲಿಮವರ್ಣದ ಕ್ರೌಂಚವಧು
ಕಾದಲನಿಗೆ ಕನವರಿಸಿತು ಬನದಲಿ ಮನದಲಿ ಕುಡಿಯುತ ಸ್ವಪ್ನಮಧು
ನರನಾರಾಯಣ ಯಮಳರು ಕುಳಿತರು ಅಶ್ವತ್ಥದ ಮರದಡಿಯಲ್ಲಿ
ನರಕುಲ ನಾರಾಯಣಕುಲವಾಗಲಿ ಹಿರಣ್ಯಗರ್ಭದ ಗುಡಿಯಲ್ಲಿ

೩

ಮುಗಿಲ ದಿಗಂತದ ಧ್ಯಾನಸಮಾಗೆ ತೇಲುವ ಮೋಡಗಳೋಡಿದವು
ಮನುಕುಲ ಮಾನಸಹಂಸಗಳೆಲ್ಲ ಚಿರಂತನ ಸರಸಿಯ ನೋಡಿದವು
ತಾಮಸರೆಲ್ಲರು ತಾಪಸರಾದರು ಅಂಧಂತಮನ ನಿರಾಕರಿಸಿ
ಭಗವಂತನ ಕರುಣೆಯ ಮಂದಾಕಿನಿಯಿಳಿದಳು ಜೀವರನುದ್ಧರಿಸಿ
ತಾಪಸ ಯಮಳರ ತಪಸಂಜೀವಿನಿ ಮರ್ತ್ಯರಿಗಮೃತವುಣಿಸಿತ್ತು
ಸಗುಣಬ್ರಹ್ಮಸಮಾಯ ಲೀಲೆಗೆ ಜ್ಯೋತಿರ್ಮಯ ತಿರೆ ಬೆಳಗಿತ್ತು
ಮೃತ್ಯುಂಜಯ ಕುಲ ವಿಜಯವಿಲಾಸವು ಇಂದ್ರನ ಲೋಕಕೆ ಮೊಳಗಿತ್ತು
ನರನಾರಾಯಣ ಯಮಳರು ಕುಳಿತರು ಅಶ್ವತ್ಥದ ಮರದಡಿಯಲ್ಲಿ
ನರಕುಲ ನಾರಾಯಣಕುಲವಾಗಲಿ ಹಿರಣ್ಯಗರ್ಭದ ಗುಡಿಯಲ್ಲಿ

೪

ತಾಪಸ ಯಮಳರ ತೇಜಃಸ್ತೂಪವ ನೋಡಿದ ಮುಗಿಲಿಗೆ ದಿಗಿಲಾಯ್ತು
ಅಮರಾವತಿಯಲಿ ದೇವೇಂದ್ರನ ಮನ ಮತ್ಸರ ಮಾಯೆಯ ಭುಗಿಲಾಯ್ತು
ಮನ್ಮಥದೇವನ ಕರೆಸುತ ನುಡಿದನು ಸುರಪತಿ ಮಿತ್ರಾಲಾಪದಲಿ
"ತಾಪಸ ಯಮಳರ ತಪವನು ಭಂಗಿಸು ಸುರಸುಂದರಿಯರ ರೂಪದಲಿ"
ನವಯೌವನದಪ್ಸರಸುಂದರಿಯರ ಸಮೂಹ ಬಂದಿತು ಮುಗಿಲಿಳಿದು
ನೂಪುರ ಪೈಜಣ ಘಿಲುಕಲು ಕಲಕಲ ತುಳುಕಿತು ನಗೆಯಲಿ ಬನ ಸುಳಿದು
ಮದನಕುಮಾರನ ದಿಬ್ಬಣ ಬಂದಿತು ತಾಪಸ ಯಮಳರ ಬನದೊಳಗೆ
ಕಾಮನಬಿಲ್ಲಿಗೆ ಹೂಡಿದ ಮಲ್ಲಿಗೆ ವೀಣೆ ಮೃದಂಗ ಸ್ವರ ಮೊಳಗೆ
ನರನಾರಾಯಣ ಯಮಳರು ಕುಳಿತರು ಅಶ್ವತ್ಥದ ಮರದಡಿಯಲ್ಲಿ
ನರಕುಲ ನಾರಾಯಣಕುಲವಾಗಲಿ ಹಿರಣ್ಯಗರ್ಭದ ಗುಡಿಯಲ್ಲಿ

೫

ಹೆಜ್ಜೆಯ ಮಂಜುಳ ಗೆಜ್ಜೆಯ ನಿಸ್ವರ ಕಲ ಮಧುರ ಸ್ವರ ತುಳುಕಿಸಿತು
ಲಾಸ್ಯವಿಲಾಸಕೆ ಪಲ್ಲವ ಹಾಸ್ಯಕೆ ಅಪ್ಸರಲತೆಯರಬಳುಕಿಸಿತು
ಕಾಮತರಂಗಿಣಿ ನವಮದರಂಗಿಣಿ ನೃತ್ಯಾಪ್ಸರೆಯರ ನೋಟದಲಿ
ಭೋಗಸಮಾಧಿಯ ತಡಸಲು ಧುಮುಕಿತು ತಾಪಸ ಯಮಳ ತೋಟದಲಿ

ಹೂಡಿದ ಹೂವಿನ ಬಾಣವ ಹೊಡೆದನು ಪಂಚಶರಾಸನ ಚಾಪದಲಿ
ನಿತ್ಯನಿಲಿಂಪರು ಕಣ್ದೆರೆದರು ನಸುನಕ್ಕರು ಮನುದನುತಾಪದಲಿ
ನೃತ್ಯಾಪ್ಸರೆಯರ ನೋಡುತ ನುಡಿದರು ಮದನಕುಮಾರನ ಕನಿಕರಿಸಿ
"ನಂದನವನದೀ ಚೆಲುವಿನ ಮೊಗ್ಗೆಗಳೇತಕೆ ಬಂದಿಹವನುಕರಿಸಿ"
ನರನಾರಾಯಣ ಯಮಳರು ಕುಳಿತರು ಅಶ್ವತ್ಥದ ಮರದಡಿಯಲ್ಲಿ
ನರಕುಲ ನಾರಾಯಣಕುಲವಾಗಲಿ ಹಿರಣ್ಯಗರ್ಭದ ಗುಡಿಯಲ್ಲಿ

೬

"ಅಮರಾವತಿಯೊಳಪ್ಸರ ಚೆಲುವಿನ ಮೊಗ್ಗೆಗಳಿನ್ನೂ ಅರಳಿಲ್ಲ
ತಪಸೌಂದರ್ಯದ ಹೂವಿನ ರಾಯಸ ನಂದನವನದೆಡೆ ತೆರಳಿಲ್ಲ"
ನರ ನಸುನಕ್ಕನು ನಾರಾಯಣ ತೊಡೆ ಹೂವನು ಮಂತ್ರಿಸಿ ಹಾರಿಸಲು
ನವಯೌವನ ರತ್ನಪ್ರಭೆ ಊರ್ವಶಿ ರೂಪವಿಲಾಸದ ತೋರಿಸಲು
ತೇಜಃಪುಂಜದ ಕೆಂದಾವರೆ ಮುಖಮಂಡಲ ಗೋಲಕ ಹರಿಣಾಕ್ಷಿ
ಕುಂತಲವೇಣಿಯ ವೀಣಾವಾಣಿಯ ಕುಂಡಲಲೋಕ ನಳಿನಾಕ್ಷಿ
ನೀಲಿಯ ವಸನದ ಹಸಿರಿನ ಮೇಲುದ ಊರ್ವಶಿ ನಿಂತಳು ತಲೆವಾಗಿ
ಕಾಮನು ಸೋತನು ಕಾಮಾಕ್ಷಿಗೆ ಮನಸೋತನು ಸುರಪತಿ ತಲೆದೂಗಿ
ತಪಸೌಂದರ್ಯದ ಕನ್ನೆಯ ಕೊಟ್ಟರು ದೇವೇಂದ್ರನಿಗುಡುಗೊರೆಯಾಗಿ
ಕಾಮಾಕ್ಷಿಯ ಕಡೆಗಣ್ಣಿನ ಬೆಂಕಿಗೆ ಹಣೆಗಟ್ಟಿನ ಕಿಡಿ ಬೇಡಿದರು
ಮರ್ತ್ಯಸೃಷ್ಟಿಯ ತಪಸೌಂದರ್ಯದ ದೇವಸೃಷ್ಟಿಗೆ ನೀಡಿದರು

## ೬. ಮಿಸುನಿಜಿಂಕೆ

೧

ಹಸಿರುಮಲೆತ ಮಲೆಗಂಧಮಾದನಿಯ ಬಯಲ ತಪ್ಪಲೋಡಿ
ಮಿಸುನಿಜಿಂಕೆ ಬಲು ಮುಂದೆ ಮುಂದೆ ನೆಗೆದಿತ್ತು ಹಿಂದೆ ನೋಡಿ
ತೊಳಗುತಿತ್ತು ಥಳಥಳಿಸುತಿತ್ತು ಮೈಬಣ್ಣ ಕಣ್ಣು ಕುಕ್ಕಿ
ನಯನವಲಯಗಳ ನಡುವೆ ಹಸಿರು ಹೊಳೆದಿದ್ದವೆರಡು ಚಿಕ್ಕಿ
ನೀಲಶೃಂಗ ಸಿಂಗಾರ ಮೈಯ ಬಂಗಾರ ಮಿಂಚನಿಟ್ಟು
ಒಪ್ಪುತಿರಲು ನೆಗೆದಿತ್ತು ಮುಗಿಲ ನಕ್ಷತ್ರಮಾಲೆ ತೊಟ್ಟು
ಕಾಲ ಕೆಳಗೆ ನೆಲ ಓಡುತಿತ್ತು ನಭ ನೋಡುತಿತ್ತು ಮೇಲೆ
ಬಯಲ ನುಂಗಿ ಬೆಳಗಿತ್ತು ಹೇಮಹರಿಣದ ಸುವರ್ಣಲೀಲೆ
ಬಯಲು ದಿನ್ನೆ ಗಿರಿದರಿಯ ನೆಗೆದು ನಡೆದಿಂದ್ರಮಂಡಲಕ್ಕೆ
ಮಿಸುನಿಜಿಂಕೆ ನೀರಡಸಿ ಬಂದಿತಮರಾವತಿಯ ಪುರಕ್ಕೆ

೨

ಚೆಲುವು ಚಿಗಿತು ಬಯಲಾಗಿ ಬಯಲು ಬನವಾಗಿ ಮೆರೆಯುತಿತ್ತು
ನವನಮೇರು ಮಂದಾರವೃಕ್ಷಗಳು ನಿಂತು ಸುತ್ತುಮುತ್ತು
ಚೆಲುವು ಹಸಿರು ಪಲ್ಲವಿಸಿದಂತೆ ಮರಮರಕೆ ಬಳ್ಳಿ ಹಬ್ಬಿ
ಅಲ್ಲಿ ಹೂತು ಬನಸಿರಿಗೆ ಸೋತು ಬಂದಿತ್ತು ಗಾಳಿ ತಬ್ಬಿ
ಸಾಲುಸಾಲು ನಿಂತಂಥ ಗಿಡದ ಬುಡದಲ್ಲಿ ಬಳ್ಳಿವರಿದು
ಮರದ ಕಂಪು ಕನವರಿಸಿ ತಂಪು ತೊರೆ ನಡೆದವೆಷ್ಟೊ ಹರಿದು
ಬಣ್ಣ ಬಣ್ಣಗಳ ಹಕ್ಕಿ ಹೂವು ಮರಿದುಂಬಿ ಚಿಟ್ಟೆ ಬಂದು
ಬನವ ಬಳಿಸಿದವು ರೆಕ್ಕೆವಡೆದ ಸೌಂದರ್ಯರೂಪವೆಂದು
ನೆಳಲ ತಂಪು ಹೂಗಂಪು ಹಕ್ಕಿಯುಲಿಯಿಂಪು ತುಂಬಿತೀಚೆ
ಮಿಸುನಿಜಿಂಕೆ ಕುಡಿದಿತ್ತು ನೀರು ಸುರನದಿಯ ದಂಡೆಯಾಚೆ

೩

ಇಂಥ ದಿವ್ಯನಂದನವನಕ್ಕೆ ಬಂದಿದ್ದಳೆಂದು ಸಾರಿ
ಸಖಿಯರೊಡನೆ ದೇವೇಂದ್ರಕನ್ನಿಕಾ ಜಯಂತೀಕುಮಾರಿ
ಚೆಲುವು ದುಂಡುಮುಖ ಹೊಳೆವ ಚಿಗುರೆಗಣ್ ನೀಳನಾಗವೇಣಿ
ನೀಲಕಮಲಕರ್ಣಾವತಂಸಗಳನಿಟ್ಟು ಪದ್ಮಪಾಣಿ
ಉಟ್ಟ ಹೊಸತು ಕೇಸರದುಕೂಲ ಮೇಖಲೆಯ ಟೊಂಕಕಿಟ್ಟು
ನವಿಲ ಹೆಜ್ಜೆ ನಡೆದಿರೆ ಜಯಂತಿ ನೂಪುರದ ನಾದಗೊಟ್ಟು
ನೀರು ಕುಡಿಯುತಿರೆ ಮಿಸುನಿಜಿಂಕೆಯನು ದೂರದಿಂದೆ ಕಂಡು
ನಲಿದು ಬಯಸಿ ಸಖಿಯರಿಗೆ ಹೇಳಿದಳು ತುಂಬ ಬೆರಗುಗೊಂಡು
''ಅಲ್ಲಿ ಕಾಣಿರೆ ಮಿಸುನಿಜಿಂಕೆ ಕಂಡವರ ಪುಣ್ಯವಿಂದು
ನನ್ನ ಜೀವ ಹಾರೈಸುತಿಹುದೆ ಸಖಿ ಆದೇ ಜಿಂಕೆಗೆಂದು''

೪

ಮನೆಗೆ ಮರಳಿ ಬಂದಳು ಜಯಂತಿ ಗೆಳೆಯರ ಕೂಡಿಕೊಂಡು
ಅಮರಸಭೆಯ ಮಂಟಪದಿ ಕುಳಿತ ದೇವೇಂದ್ರನನ್ನು ಕಂಡು
ನುಡಿದಳಾತನಿಗೆ ''ತಾತ ಕೇಳು ಕಂಡವರ ಪುಣ್ಯವಿಂದು
ನನ್ನ ಜೀವ ಹಾರೈಸುತಿರುವುದಾ ಮಿಸುನಿಜಿಂಕೆಗೆಂದು''
ನುಡಿಯ ಕೇಳಿ ದೇವೇಂದ್ರನಿಳಿದ ಹರಿಪೀಠದಿಂದ ಕೆಳಗೆ
ಉತ್ತರೀಯ ಸಾವರಿಸಿಕೊಂಡು ಬಂದಿದ್ದ ಮಗಳ ಬಳಿಗೆ
''ಯಾವ ಮಿಸುನಿಯದು? ಯಾವ ಜಿಂಕೆ ಬಯಸಿರುವೆ ಮುದ್ದು ಕುವರಿ?''
ಎಂದು ತಂದೆ ಕೇಳಿರಲು ಮಗಳ ಮುಂಗುರುಳ ತಿದ್ದಿ ಸವರಿ
ಮಗಳು ನುಡಿಯೆ ವಿಸ್ತರಿಸಿ ಕೇಳಿ ಸಂತೈಸಿ ನುಡಿದನಂದು
''ಹೋಗಿ ಕಳಿಸು ನಿಮ್ಮಣ್ಣನನ್ನು ನಾ ತಿರಿಸಿ ಕೊಡುವೆ''ನೆಂದು

೫

ಬೆಟ್ಟದಂಥ ಬಿಳಿಗುದುರೆಯೇರಿ ನಡೆದಿದ್ದ ಇಂದ್ರಪುತ್ರ
ಥಡಿಯ ಮೇಲೆ ನಿಂತಿತ್ತು ತಂಪುನೆಳಲಿತ್ತು ನೀಲಛತ್ರ
ಹೆಗಲಿಗಿರಿಸಿ ಬತ್ತಳಿಕೆಬಿಲ್ಲು ಕಡಿವಾಣ ಕೈಯ ಜಗ್ಗಿ

ಕುದುರೆಯೇರಿ ಬಂದನು ಜಯಂತ ನಂದನವನಕ್ಕೆ ನುಗ್ಗಿ
ನೀರು ಕುಡಿದು ನಿಂತಿದ್ದ ಮಿಸುನಿಜಿಂಕೆಯನು ದೂರ ಕಂಡು
ತಂದ ಮೂರು ಬಲೆಸೂತ್ರಗಳನು ಕೈಬೆರಳಿಗಿಟ್ಟುಕೊಂಡು
ವಾಯುವೇಗದಲಿ ಬರಲು ಜಿಂಕೆ ನೆಗೆದಿತ್ತು ಮುಂದಕೋಡಿ
ಬಯಲು ದಿನ್ನೆ ಗಿರಿದರಿಯ ದಾಟಿ ಜಿಗಿದಿತ್ತು ಹಿಂದೆ ನೋಡಿ
ಯುಗದ ಹೆಜ್ಜೆಗಳನಿಟ್ಟು ಜಿಂಕೆ ನೆಗೆದಿತ್ತು ನಡೆದು ಮುಂದೆ
ಇಂದ್ರಪುತ್ರ ಬೆನ್ನಟ್ಟಬಂದ ಬಲೆ ಪಿಡಿದು ಹಿಂದಿನಿಂದೆ

೬

ಬಕುಲವೃಕ್ಷದಡಿಯಲ್ಲಿ ನಿಂತಿತೊ ಮಿಸುನಿಜಿಂಕೆ ಬಂದು
ಇಂದ್ರಪುತ್ರ ಬೆನ್ನಟ್ಟಿ ಬಂದನೀ ಜಿಂಕೆ ಸಿಕ್ಕಿತೆಂದು
ಅರಸಿಬಂದ ಗುರಿ ಸಿಕ್ಕಿತೆಂದು ಮನದಲ್ಲಿ ಹರುಷಪಟ್ಟು
ಮೊದಲು ಮಿಸುನಿಬಲೆಸೂತ್ರಗಳನು ಬಲಗೈಯ ಬೆರಳಿಗಿಟ್ಟು
ಕಡಲ ಬೆನ್ನ ಚಪ್ಪರಿಸಿ ನೀರನಪ್ಪಳಿಸಿ ಬಂದ ಗಾಳಿ
ಜಲಗಭೀರ ಝುಂಝೂಸಮೀರ ಹಿಡಿದೂದಿದಂತೆ ಕಾಳಿ
ಭಾದ್ರಪದದ ಕೋಲ್ಮಿಂಚು ಗುಡುಗಿ ಕುಣಿದಂತೆ ಬಾನ ಸೂಸಿ
ಇಂದ್ರಪುತ್ರ ತಂದಿದ್ದ ಬಲೆಯ ಹೊಯ್ದಿದ್ದ ಗುರಿಗೆ ಬೀಸಿ
ಕಾಲ ಕೆಳಗೆ ನೆಲ ಓಡುತಿತ್ತು ನಭ ನೋಡುತಿತ್ತು ಮೇಲೆ
ಹೊಯ್ದ ಮಿಸುನಿಬಲೆ ಮಿಸುನಿಜಿಂಕೆಗಾಗಿತ್ತು ಕೊರಳ ಮಾಲೆ

೭

ಪಾರಿಜಾತದಡಿಯಲ್ಲಿ ನಿಂತಿತೊ ಮಿಸುನಿಜಿಂಕೆ ಬಂದು
ಇಂದ್ರಪುತ್ರ ಬೆನ್ನಟ್ಟಿಬಂದನೀ ಜಿಂಕೆ ಸಿಕ್ಕಿತೆಂದು
ಅರಸಿಬಂದ ಗುರಿ ಸಿಕ್ಕಿತೆಂದು ಮನದಲ್ಲಿ ಹರುಷಪಟ್ಟು
ತಂದ ನಾದಬಲೆಸೂತ್ರಗಳನು ಬಲಗೈಯ ಬೆರಳಿಗಿಟ್ಟು
ಗೋಲಗೋಲಗಳ ತಾಲಕಿಳಿದುಬಂದಂತೆ ನಾದಗಂಗೆ
ಕೊಳಲಗಾನ ವೀಣಾವಿತಾನಕಿಳಿದಂತೆ ಸ್ವರತರಂಗೆ
ಚೈತ್ರನಭದ ನಕ್ಷತ್ರಕನ್ನೆಯರ ಗಾನದಂತೆ ಸೂಸಿ

ಇಂದ್ರಪುತ್ರ ತಂದಿದ್ದ ಬಲೆಯ ಹೊಯ್ದಿದ್ದ ಗುರಿಗೆ ಬೀಸಿ
ಕಾಲ ಕೆಳಗೆ ನೆಲ ಓಡುತಿತ್ತು ನಭ ನೋಡುತ್ತಿತ್ತು ಮೇಲೆ
ಹೊಯ್ದ ನಾದಬಲೆ ಮಿಸುನಿಜಿಂಕೆಗಾಗಿತ್ತು ಶೃಂಗಮಾಲೆ

೮

ಕದಂಬವೃಕ್ಷದಡಿಯಲ್ಲಿ ನಿಂತಿತೊ ಮಿಸುನಿಜಿಂಕೆ ಬಂದು
ಇಂದ್ರಪುತ್ರ ಬೆನ್ನಟ್ಟಿಬಂದನೀ ಜಿಂಕಿ ಸಿಕ್ಕಿತೆಂದು
ಅರಸಿಬಂದ ಗುರಿ ಸಿಕ್ಕಿತೆಂದು ಮನದಲ್ಲಿ ಹರುಷಪಟ್ಟು
ತಂದ ಶಬ್ದಬಲೆಸೂತ್ರಗಳನು ಬಲಗೈಯ ಬೆರಳಿಗಿಟ್ಟು
ನಾಲ್ಕು ವೇದ ಹದಿನೆಂಟು ಗ್ರಂಥಗಳ ಸೂತ್ರಮಾಲೆ ಬಳುಕಿ
ಯೋಗ ತರ್ಕ ಮೀಮಾಂಸೆ ಮಾತುಗಡಲನ್ನೆ ತುಂಬಿ ತುಳುಕಿ
ಮಾತಿನರ್ಥ ಮಾತಾಡಿದಂತೆ ಮರೆ ಮಾತಿನಾಚೆ ಸೂಸಿ
ಇಂದ್ರಪುತ್ರ ತಂದಿದ್ದ ಬಲೆಯ ಹೊಯ್ದಿದ್ದ ಗುರಿಗೆ ಬೀಸಿ
ಕಾಲ ಕೆಳಗೆ ನೆಲ ಓಡುತಿತ್ತು ನಭ ನೋಡುತಿತ್ತು ಮೇಲೆ
ಹೊಯ್ದ ಶಬ್ದಬಲೆ ಮಿಸುನಿಜಿಂಕೆಗಾಗಿತ್ತು ಚಿತ್ತಮಾಲೆ

೯

ಯುಗದ ಹೆಜ್ಜೆಗಳನಿಟ್ಟು ಜಿಂಕೆ ನಡೆದಿತ್ತು ನೆಗೆದು ಮುಂದೆ
ಇಂದ್ರಪುತ್ರ ಬೆನ್ನಟ್ಟಿ ಹಗುರು ಬರುತಿದ್ದ ಹಿಂದಿನಿಂದೆ
ಉಸಿರು ಬಂತು ನಿಟ್ಟುಸಿರನೂದಿ ಒಳದುಗುಡದೇಕತಾರಿ
ಬಂದ ಸೋಲಿಗತಿನೊಂದ ಚಿತ್ತ ಮಿಡಿದಿತ್ತು ಕಣ್ಣ ಸೇರಿ
ಅತಿನಿರಾಸೆ ಹರಿದಾಡಿ ಬಂತು ಮೈಮೂಡಿ ಬಂತು ನುಗ್ಗಿ
ಇಂದ್ರಪುತ್ರ ಬೆನ್ನಟ್ಟಿ ಹಗುರು ಬರುತಿದ್ದ ಚಿತ್ತ ಕುಗ್ಗಿ
ಕಣ್ಣ ಗುರಿಯ ಬೆನ್ನಟ್ಟಿ ಚಿತ್ತ ನಿರ್ವಿಣ್ಣವಾಗಿ ಸೋತು
ಸೋಲಿನೊಡಲನುಡಿಯಾಗಿ ಗೆಲುವು ಗುಡುಗಿತ್ತು ಮಿಂಚುಮಾತು
ಇಂದ್ರಪುತ್ರ ಬೆನ್ನಟ್ಟಿ ಹಗುರು ನಡೆದಿದ್ದ ಚಿತ್ತ ನೊಂದು
ಕೈಗೆ ಸಿಕ್ಕ ಗುರಿ ಕೈಯ ಬಲೆಗೆ ಸಿಗಲಿಲ್ಲವಲ್ಲವೆಂದು

೧೦

ಬೆಟ್ಟದಂಥ ಬಿಳಿಗುದುರೆಯೇರಿ ನಡೆದಿದ್ದನಿಂದ್ರಪುತ್ರ
ಥಡಿಯ ಮೇಲೆ ನಿಂತಿತ್ತು ತಂಪು ನೆಳಲಿತ್ತು ನೀಲಛತ್ರ
ಮನದಿ ನೊಂದು ನಡೆದಿರಲು ನೋಡಿದನು ಬಯಲ ಮಧ್ಯದಲ್ಲಿ
ಹಸಿರು ತಳಿತಮರ ಸುತ್ತುಮುತ್ತು ತಣ್ಣೆಳಲ ಹೂವ ಚೆಲ್ಲಿ
ಅಲ್ಲಿ ಮರದ ನೆರಳಲ್ಲಿ ಕುಳಿತನಾ ಮುನಿಕುಮಾರ ಕುತ್ಸ
ತಪೋಮಿಥುನ ಆರ್ಜುನಿಸ್ಪಿತ್ರೆ ದಂಪತಿಯ ಮುದ್ದು ವತ್ಸ
ಬ್ರಹ್ಮತೇಜ ಹಿಡಿದಂತೆ ತನ್ನ ಮುಂಗೈಯೊಳಿಂದ್ರದೀಪ
ಸೂರ್ಯಬಿಂಬ ಶೈಶವವ ತಳೆದು ಕುಳಿತಂತೆ ಕುತ್ಸರೂಪ
ನೋಡಿ ಕುದುರೆಯಿಳಿದಿಂದ್ರಪುತ್ರ ಬಂದಿದ್ದ ಕಾಲಿಗೆರಗಿ
''ಶರಣು ಎಂದೆ ಮುನಿಕುವರ ಕುತ್ಸ''ನೆಂದಿದ್ದ ಚಿತ್ತ ಮರುಗಿ

೧೧

ಮಣಿದ ಮುಕುಟ ತೊಳಗಿತ್ತು ಪಾದ ತೊಳೆದಿತ್ತು ಬೆಳಕಿನಿಂದ
ಇಂದ್ರಪುತ್ರ ನಮಿಸಿರಲು ಗಲ್ಲ ಪಿಡಿದೆತ್ತಿ ಕುತ್ಸನಂದ
''ಏನು ಬಂದಿರೈ ನಿಮ್ಮ ಚಿತ್ತ ದುಮ್ಮಾನ ತುಂಬಿತೇಕೆ?
ಯಾವ ಕಡಲ ಬಿರುಗಾಳಿ ಸುಯ್ಯಲಾಡಿಹುದು ಚಿತ್ತನೌಕೆ?''
ಇಂದ್ರಪುತ್ರ ನುಡಿದಿದ್ದ ಮಣಿದು ''ಭಗವಾನಕುಮಾರ ಕುತ್ಸ
ತಪೋಮಿಥುನ ಆರ್ಜುನಿಸ್ಪಿತ್ರೆದಂಪತಿಯ ಮುದ್ದುವತ್ಸ
ಅರಸುಗುರಿಯನೊಂದರಸಿಬಂದ ಚಿತ್ತಕ್ಕೆ ಸೋಲು ಬಂತು
ಸೋಲು ತಂದ ಬಿರುಗಾಳಿಗುಯ್ಯಲಾಡಿಹುದು ಚಿತ್ತವಿಂತು''
ನುಡಿಯ ಕೇಳಿ ನುಡಿದಿದ್ದನಾಗ ಮುನಿಕುವರ ಕುತ್ಸನಂದು

೧೨

''ಸೋಲುಗೆಲುವುಗಳ ಮೀರಿದರಸುಗುರಿ ನಿಮ್ಮದಾವುದೆಂದು?''
ಇಂದ್ರಪುತ್ರ ನುಡಿದಿದ್ದ ''ಕೇಳಿ ಭಗವಾನಕುಮಾರ ಗುರುವೆ
ನುಡಿವೆನರಸಿಬಂದರಸುಗುರಿಯ ಕಾರುಣ್ಯಕಲ್ಪತರುವೆ
ಒಂದು ದಿವಸ ಸೋದರಿ ಜಯಂತಿ ನಂದನವನಕ್ಕೆ ಸಾರಿ

ಸಖಿಯರೊಡನೆ ನಲಿದಾಡುತಿರಲು ಮಂದಾರವನವಿಹಾರಿ
ಮಿಸುನಿಜಿಂಕೆಯೊಂದನ್ನು ಕಂಡು ಕಂಡವರ ಪುಣ್ಯವೆಂದು
ಮೊರೆದಳಿದನು ಹಾರೈಸಿ ತಾತನೆಡೆ ಮನೆಗೆ ಮರಳಿ ಬಂದು
ತಾತನಪ್ಪಣೆಯ ಪಡೆದು ಬಂದು ಬೆನ್ನಟ್ಟಿ ಜಿಂಕೆಗರಸಿ
ದೇವಲೋಕ ಕೊಟ್ಟಿತ್ತು ಮಿಸುನಿಬಲೆಯರಸುಗುರಿಯ ಹರಸಿ
ನಾದಬಲೆಯ ಗಂಧರ್ವಲೋಕ ಕೊಟ್ಟಿತ್ತು ಬ್ರಹ್ಮಲೋಕ
ಶಬ್ದಬಲೆಯ ಕೊಟ್ಟಿತ್ತು ಮೂರನೂ ಮೀರಿಬಂತು ಶೋಕ

೧೩

ಕಾಲ ಕೆಳಗೆ ನೆಲ ಓಡುತಿತ್ತು ನಭ ನೋಡುತಿತ್ತು ಮೇಲೆ
ಹೊಯ್ದ ಮಿಸುನಿಬಲೆ ಮಿಸುನಿಜಿಂಕೆಗಾಗಿತ್ತು ಕೊರಳಮಾಲೆ
ಹೊಯ್ದ ನಾದಬಲೆ ಮಿಸುನಿಜಿಂಕೆಗಾಗಿತ್ತು ಶೃಂಗಮಾಲೆ
ಹೊಯ್ದ ಶಬ್ದಬಲೆ ಮಿಸುನಿಜಿಂಕೆಗಾಗಿತ್ತು ಚಿತ್ತಮಾಲೆ
ಮೂರು ಬಲೆಗಳನು ಮೀರಿಸಿತ್ತು ಹೌಹಾರಿಸಿತ್ತು ಸೋಲೆ
ಮೂರು ಜಾಲಗಳ ಮಾಲೆಯಾಗಿಸಿತ್ತಿಂದು ವಿಯ ಲೀಲೆ'
ಅರಸುಗುರಿಯನರಸಿರುವ ಚಿತ್ತದುಮ್ಮಾನ ಮೌನತಾಳಿ
ಇಂದ್ರಪುತ್ರ ನುಡಿದಂಥ ಮಾತ ಮುನಿಕುವರ ಕುತ್ಸ ಕೇಳಿ
ನುಡಿದ ''ಸೋಲುಗೆಲುವನ್ನು ಮೀರೆ ಗುರಿ ಬಳಸುತಿರಲಿ ಚಿತ್ತ''
ನುಡಿದ ಕುತ್ಸ ಬಳಿಗಿರುವ ಸಾರಬಲೆಯಿಂದ್ರಪುತ್ರಗಿತ್ತ

೧೪

ದೇವದಾರುಮರದಡಿಗೆ ನಿಂತಿತಾ ಮಿಸುನಿಜಿಂಕೆ ಬಂದು
ಇಂದ್ರಪುತ್ರ ಬೆನ್ನಟ್ಟಿಬಂದನೀ ಜಿಂಕೆ ಸಿಕ್ಕಿತೆಂದು
ಅರಸಿಬಂದ ಗುರಿ ಸಿಕ್ಕಿತೆಂದು ಮನದಲ್ಲಿ ಹರುಷಪಟ್ಟು
ತಂದ ಸಾರಬಲೆಸೂತ್ರಗಳನು ಬಲಗೈಯ ಬೆರಳಿಗಿಟ್ಟು
ಸಪ್ತ ಲೋಕಗಳ ಸುಪ್ತಚಿತ್ತ ಬೆಳಗಿ ಬಂದು
ಭೂಮಿವ್ಯೋಮಗಳ ಹೆಣೆಯುವಂತೆ ರವಿಕಿರಣವೊಂದೆ ಒಂದು
ಮುಗಿಲ ಕಣ್ಣು ತೆರೆದಂತೆ ತಿಮಿರ ಹರಿದಂತೆ ಬಾನ ಸೂಸಿ

ಇಂದ್ರಪುತ್ರ ತಂದಿದ್ದ ಬಲೆಯ ಹೊಯ್ದಿದ್ದ ಗುರಿಗೆ ಬೀಸಿ
ತಪದ ಸಾರ ಬಲೆಯಲ್ಲಿ ಸಿಕ್ಕಿತು ಮಿಸುನಿಜಿಂಕೆಯಂದು
ಮನದಲಂಪಿನೊಳಗಿಂದ್ರಪುತ್ರ ಮರಳಿದನು ಮನೆಗೆ ತಂದು

೧೫

ತಂದ ಜಿಂಕೆಯನು ನೋಡಿ ನಲಿದಳೋಲಾಡಿ ಹರುಷಪಟ್ಟು
ಹೊಳೆವ ಹೊಸತು ಬಂಗಾರ ಸರಪಳಿಯ ಕಟ್ಟಿ ಕೊರಳ ಕಟ್ಟು
ಚಂದ್ರವದನೆ ದೇವೇಂದ್ರಕನ್ನಿಕಾ ನೀಳನಾಗವೇಣಿ
ನೀಲಕಮಲಕರ್ಣಾವತಂಸಗಳನಿಟ್ಟು ಪದ್ಮಪಾಣಿ
ಚಾಚಿ ತನ್ನ ನಿಡಿದೋಳು ತೆಕ್ಕೆಯೊಳು ಜಿಂಕೆಗಪ್ಪಿಕೊಂಡು
ಮುದ್ದುಗರೆದು ತುಟಿಗಿಟ್ಟು ತುಟಿಯ ಕಣ್ಣಲ್ಲಿ ಕಣ್ಣ ಕಂಡು
ನಲಿದು ಕಣ್ಣ ಮುಚ್ಚಿರಲು ಜಿಂಕೆ ಕರಗಿತ್ತು ಮಾಯವಾಗಿ
ಅವಳಿಗೊಲಿದು ಕುಳಿತಿದ್ದನೆದುರಿಗಾಚಾರ್ಯ ಶುಕ್ರಯೋಗಿ
ಕಣ್ಣು ತೆರೆದು ಕೆಂಪೇರಿ ಬೆಚ್ಚಿ ನಾಚಿರೆ ಜಯಂತಿ ನಿಂದು
ಗಲ್ಲವಿಡಿದು ಬಳಿಗಪ್ಪಿ ನುಡಿದನಾಚಾರ್ಯನವಳಿಗಂದು
''ನನ್ನ ಜೀವ ಹಾರೈಸಿ ಬಂತೆ ಸಖಿ ಇದೇ ಜಿಂಕೆಗಾಗಿ''

## ೭. ಮಿಥಿಲೆ

ಎಂದಾದರೊಂದು ದಿನ ನಾನು ಮಿಥಿಲೆಗೆ ಹೋಗಿ
ಬೀದಿ ಬೀದಿಯನಲೆದು ನೋಡಬೇಕು
ಅಲ್ಲಿ ಎಲ್ಲಾದರೂ ಮರದ ನೆರಳಿಗೆ ಕುಳಿತು
ರಾಮಭದ್ರನ ಮಹಿಮೆ ಹಾಡಬೇಕು ೧

ಅಲ್ಲಿಹವು ಎತ್ತರದ ಮನೆಗಳು ಮಂದಿರವು
ಅಲ್ಲಿ ಬೇಕಾದಷ್ಟು ತುಳಸಿ ಹೂವು
ಹೆಜ್ಜೆಹೆಜ್ಜೆಗೆ ಅಲ್ಲಿ ಸಂಪಿಗೆಯ ಮರಗಳಿವೆ
ಗಿಳಿಗಳಿವೆ. ಇಲ್ಲ ಪಂಜರದ ನೋವು ೨

ಅಲ್ಲಿ ಪುಷ್ಕರಿಣಿಗಳ ತುಂಬ ತಾವರೆಯಿಹವು
ಅಲ್ಲಿ ಬೀಸುವ ಗಾಳಿ ಚೈತ್ರಗಂಧ
ಅಲ್ಲಿ ಹಾರುವ ಹಂಸ, ಮೈಥಿಲೆಯ ಕನಸಿನೊಲು
ಬೆಡಗಿನಲಿ, ಗರಿಯೊಡೆದ ಹಿಗ್ಗಿನಿಂದ ೩

ಅಲ್ಲಿ ವಿಶ್ವಾಮಿತ್ರ ಕುಳಿತಂಥ ಕಲ್ಲು ಇದೆ
ರಾಮಭದ್ರನು ನಿಂತ ಮರದ ನೆರಳು
ಇಂದಿಗೂ ನೆನೆಸುತಿದೆ ಮಣ್ಣು ಕಣಕಣ ಕೂಡ
ಶಿವನ ಬಿಲ್ಲಿನ ಹಗ್ಗವೆಳೆದ ಬೆರಳು ೪

ಅಲ್ಲಿ ಮಣ್ಣೇ ಹಾಗೆ ಎಲ್ಲೆತ್ತಿಕೊಂಡರೂ
ರಾಮಭದ್ರನ ಕರುಣೆ ಸ್ಪಂದಿಸುವುದು
ಎಲ್ಲಿ ಹೊಲ ಉತ್ತರೂ ದೊರೆಯುವುದು ಹೆಣ್ಣು ಮಗು
ಜನಕರಾಜನ ಭಾಗ್ಯನಿಯ ತೆರೆದು ೫

ಬಿಲ್ಲನೆತ್ತುವ ದಿವಸ ದೇಶವೇ ನೆರೆದಿತ್ತು
ರಾಮಭದ್ರನು ತಮ್ಮನೊಡನೆ ಬರಲು
ದಾರಿಯುದ್ದಕೂ ಹೂವ ಸುರಿಸಿದವು ಹೆಮ್ಮರವು
ದಿವ್ಯಮಂಗಲವಾದ್ಯ ಮೊಳಗುತಿರಲು ೬

ಹೃದಯತಟ್ಟೆಗಳಲ್ಲಿ ಕಣ್ಣಿನಾರತಿ ಎತ್ತಿ
ಮಿಥಿಲೆ ಸಂಭ್ರಮದಿಂದ ಎದುರುಗೊಂಡು
ವೈದೇಹಿಯನು ಬಯಸಿ ಬಂದ ರಾಜರ ಆಸೆ
ಶಿವನ ಬಿಲ್ಲಿನ ಜೊತೆಗೆ ತುಂಡು ತುಂಡು ೭

ಸುರಿದ ಮಂತ್ರಾಕ್ಷತೆಯ ಸುತ್ತ ಜಯಜಯಕಾರ
ರಾಮಭದ್ರಗೆ ಕಮಲಮಾಲೆ ಹಾಕಿ
ಬದಿಗೆ ನಿಂತಳು ಸೀತೆ, ಜನಕರಾಜನ ಭಾಗ್ಯ
ಲೋಕಗಳ ಹರ್ಷವೇ ಹರಿಯಿತುಕ್ಕಿ ೮

ಮಗಳ ಮನೆತುಂಬಿಸುತ ಬೀಳ್ಕೊಡಲು ಜನಕನು
ಹನಿದುಂಬಿದುವು ಮಿಥಿಲೆಯ ಹೃದಯ – ಕಣ್ಣು
"ಮಗಳೆ ಮಂಗಲವಿರಲಿ" ಎಂದು ಉಡುಗೊರೆಯಿತ್ತ
ಬಂಗಾರ ಕರಡಿಗೆ ತುಂಬ ಹೊಲದ ಮಣ್ಣು ೯

ಎಂದಾದರೊಂದು ದಿನ ನಾನು ಮಿಥಿಲೆಗೆ ಹೋಗಿ
ಬೀದಿಬೀದಿಯನಲೆದು ನೋಡಿ ಬರುವೆ
ರಾಮಭದ್ರನ ಕಥೆಯ ಹಾಡಿ ಕರಡಿಗೆಯಲ್ಲಿ
ಜನಕರಾಜನ ಹೊಲದ ಮಣ್ಣು ತರುವೆ ೧೦

# ೮. ಮಹಾಶ್ವೇತೆ

## ಭಾಗ ೧

ಹೇಮಕೂಟ ಗಂಧರ್ವರಾಜ್ಯದಲಿ ಹಂಸನೆಂಬ ರಾಜ,
ಗೌರಿಯೆಂಬ ಸಿರಿಗೌರಿಯಂಥ ಸತಿವೆರಸಿ ಚಂದ್ರತೇಜ.
ಕಮಲವನ ಶರತ್ಕಾಲ ಕಾಮರತಿ ಬಾಳಿದಂತೆ ಕೂಡಿ,
ಗಂಗೆ ಹಾಲುಗಡಲಪ್ಪಿದಂತೆ ಕಂಗೊಳಿಸಿತವರ ಜೋಡಿ ॥೧॥

ಮನದಿ ಹಲುಬಿ ಕನವರಿಸುತಿರಲು ಸಂತಾನವಿಲ್ಲವೆಂದು,
ದಿನವ ನೂಕುತಿರೆ ಮೊರೆಯ ಮೆಚ್ಚಿ ಹರಿಸಿತ್ತು ದೈವ ಬಂದು.
ಇಂಥ ದಿವ್ಯ ಗಂಧರ್ವ ಮಿಥುನದೆರಕಕ್ಕೆ ಮೊಗ್ಗೆಯೊಡೆದು,
ಮಹಾಶ್ವೇತೆ ಬೆಳಗಿಸಿದಳವರ ಕುಲದೀಪ ಚಿಂತೆ ತೊಡೆದು ॥೨॥

ಕುಲದ ಬಳ್ಳಿ ಕುಡಿಯೊಡೆದು ಬರಲು ಹರಿದಾಡಿ ಮನೆಯ ತುಂಬಿ,
ಮನದಲಂಪುಗಡಲುಕ್ಕಿಸಿತ್ತು ಹಸುಗೂಸು ಕಣ್ಣುಗೊಂಬಿ.
ತೊದಲು ವಾಣಿ ಕಲಮಧುರ ವೀಣೆಯಸ್ಪಷ್ಟ ತಾನವಾಗಿ,
ಸೊಗಸಿದಂಥ ಶೈಶವವು ಕಳೆದು ಬಂದಿತ್ತು ಹರಯ ಸಾಗಿ ॥೩॥

ಮರಿ ದುಂಬಿಯಲ್ಲಿ ಬಂದಂತೆ ನಾದದುನ್ಮಾದ ರೆಕ್ಕೆವಡೆದು,
ತೆರೆದಲರನರಿಸಿ ಬಂದಂತೆ ದುಂಬಿ ಮಕರಂದ ಸೂಕ್ತ ನುಡಿದು.
ಬಣ್ಣವಡೆದು ಬಂದಂತೆ ಬನಕೆ ಮಧುಮಾಸ ಕುಕಿಲನಿಟ್ಟು
ಹರಯ ಬಂತು ಗಂಧರ್ವಕನ್ನೆಗಪ್ಸರೆಯ ರೂಪ ಕೊಟ್ಟು ॥೪॥

ಧವಲ ದೀತಿಯ ಚೆಲುವು ಬಂತು ಯೌವನೆಯ ರೂಪ ತೊಟ್ಟು
ಚಂದ್ರವದನೆಯೊಪ್ಪಿದಳು ನೊಸಲ ಕಸ್ತೂರಿ ತಿಲಕವಿಟ್ಟು
ತೊಳಗುತಿತ್ತು ಕಟಿರತ್ನ ಮೇಖಲಾ ನೀಲ ರತ್ನಹಾರ,
ಮಹಾಶ್ವೇತೆ ಗಂಧರ್ವಕನ್ನೆಗೊಪ್ಪಿದವು ಕರ್ಣಪೂರ ॥೫॥

## ಭಾಗ ೨

ತಳಿತ ಮಾವಿನೆಳಹೂವ ಕಂಡು ಮನಕರಳುತಿತ್ತು ಕಾಮ,
ಕೊಳದ ಕಮಲವನದಲ್ಲಿ ಬಂದಿತೋಕುಳಿಯನಾಡಿ ಪ್ರೇಮ,

ತೀಡಿ ಬಂದ ತಂಬೆಲರು ದುಂಬಿ ಝೇಂಕಾರ ವೀಣೆ ನುಡಿಸಿ,
ಚೆಲುವು ಬನಕೆ ಬಂದಿತ್ತು ಬಕುಲ ವನದಲ್ಲಿ ಹೂವ ತೊಡಿಸಿ ॥೬॥

ಬಣ್ಣಬಣ್ಣಗಳ ತುಂಡು ಮೋಡ ನಡೆದಿರಲು ಮುಗಿಲ ದಾರಿ,
ತಳಿತ ಮಾವಿನೆಲೆ ನುಡಿಸುತಿತ್ತು ಮಧುಮಾಸದೇಕತಾರಿ.

ಚೈತ್ರಮಾಸ ತಂಬೆಲರನೂದಿ ನಡೆದಿರಲು ಮೊಗ್ಗೆ ಬಿಡಿಸಿ,
ಚೆಲುವು ಬನಕೆ ಬಂದಿತ್ತು ಶೋಕ ವನದಲ್ಲಿ ಹೂವ ತೊಡಿಸಿ ॥೭॥

ಮರದ ತಪದ ಹೆಸರಾಗಿ ಬನದ ಹಸಿರಾಗಿ ಬಂದ ಚೆಲುವು,
ಗಿಡದ ಗೊಂಚಲಲ್ಲುಯ್ಯಲಾಡಿ ಬಂದಿತ್ತು ನೆಲದ ನಲವು.

ಆರಳಿದಲರ ವೇದಿಕೆಯೊಳೊಯ್ದು ಮರಿದುಂಬಿ ಜೇನ ಕುಡಿಸಿ,
ಚೆಲುವು ಬನಕೆ ಬಂದಿತ್ತು ಬೆಳ್ಳಿ ಮಂಟಪಕೆ ಹೂವ ತೊಡಿಸಿ ॥೮॥

ಹಸಿರು ಮರದಡಿಯಲಿ ನಲಿಯುತಿದ್ದವೊ ನವಿಲು ನಾಟ್ಯವಾಡಿ,
ಗಿಡದ ಬುಡದಿ ಗುಟಕರಿಸುತಿತ್ತು ಹಾರೀತ ಪಕ್ಷಿ ಹಾಡಿ.

ಹೂವಿನೊಡಲ ಮಕರಂದ ಕಣಜಗಳ ರೆಂಬೆರೆಂಬೆಗಿಡಿಸಿ,
ಚೆಲುವು ಬನಕೆ ಬಂದಿತ್ತು ಗಂಧ ವನದಲ್ಲಿ ಹೂವ ತೊಡಿಸಿ ॥೯॥

ಇಂಥ ಚೈತ್ರವನದಲ್ಲಿ ಮೆರೆಯಿತಚ್ಛೋದವೆಂಬ ಸರಿಸಿ,
ಕಮಲವೇದಿಕೆಯನೇರಿ ಕುಳಿತ ಕಲಹಂಸವೃಂದದರಸಿ.

ಬನದ ಹಸಿರು ಬಯಲಲ್ಲಿ ಗಿಡದ ನೆರಳಲ್ಲಿ ಸೀಳು ದಾರಿ,
ಬಳ್ಳಿವರಿದು ಸುತ್ತಾಡಿ ಬಂದವೊ ಸರಸ್ತೀರ ಸೇರಿ ॥೧೦॥

## ಭಾಗ ೩

ಇದೇ ಚೈತ್ರವನದಿದೇ ಕೊಳದ ನೀರ ಮೀಯಲೆಂದು
ಗೆಳತಿಯೊಡನೆ ಗಂಧರ್ವಕನ್ನೆ ಬನಬನವ ಬಳಸಿ ಬಂದು.

ಗಂಧವನದ ನೆರಳಲ್ಲಿ ಬಳ್ಳಿವರಿದಂಥ ಸೀಳು ದಾರಿ,
ನಡೆದು ಬಂದಳಾ ಮಹಾಶ್ವೇತೆ ಗಂಧರ್ವಕನ್ನೆ ಸಾರಿ ॥೧೧॥

ಧವಲ ದೀತಿಯ ಚೆಲುವು ಬಂತು ಯೌವನೆಯ ರೂಪ ತೊಟ್ಟು,
ಚಂದ್ರವದನೆಯೊಪ್ಪಿದಳು ನೊಸಲ ಕಸ್ತೂರಿ ತಿಲಕವಿಟ್ಟು.
ತೊಳಗುತಿತ್ತು ಕಟಿರತ್ನ ಮೇಖಲಾ ನೀಲರತ್ನ ಹಾರ,
ಗಂಧವನದ ಗಂಧರ್ವಕನ್ನೆಗೊಪ್ಪಿತ್ತು ಕರ್ಣಪೂರ ॥೧೨॥

ಉಟ್ಟ ಪಾಟಲದ ವಸನ ಹೊದೆದು ನಭನೀಲ ಮೇಲು ಹೊದಿಕೆ,
ಕರ್ಣಕಿರಿಸಿ ಮಣಿಕರ್ಣಪೂರ ನೂಪುರವನಿರಿಸಿ ಪದಕೆ.
ಚಂದ್ರಮಂಡಲದ ಚೆಲುವೆ ನಡೆದು ಕಲಹಂಸಪಾದಳಾಗಿ,
ಗಂಧವನದಿ ಬಂದಿದ್ದಳೆಂದು ಗಂಧರ್ವಕನ್ನೆ ಸಾಗಿ ॥೧೩॥

ಬೆರಳಿಗುಯ್ಯಲಾಡಿಸಿದ ಕಮಲಕೆರಗಿತ್ತು ದುಂಬಿವಿಂಡು,
ಪಂಚವರ್ಣದರಗಿಳಿಯ ತನ್ನ ಮುಂಗೈಯೊಳಿರಿಸಿಕೊಂಡು.
ತೊಳಗುತಿರಲು ಮಣಿಕರ್ಣ ಕುಂಡಲಾಭರಣ ಹಾಲು ಕೆನ್ನೆ
ಗಂಧವನದಿ ಬಂದಿದ್ದಳೆಂದು ಗಂಧರ್ವ ರಾಜಕನ್ನೆ ॥೧೪॥

ಹೂವನರಸಿ ಬಂದಂತೆ ದುಂಬಿಯಾಕಾಂಕ್ಷೆ ಬರಲು ಹೊತು,
ಮಹಾಶ್ವೇತೆ ನವಪಾರಿಜಾತ ಪರಿಮಳಕೆ ಚಿತ್ತ ಸೋತು.
ಗೆಳತಿಯೊಡನೆ ನಡೆದಿರಲು ನೋಡಿ ಮುನಿ ಪುಂಡರೀಕ ರೂಪ,
ಕಂಡಕಣ್ಣೆಗೊಡಮೂಡಿ ಬಂದಿತನುರಾಗದಿಂದ್ರಚಾಪ ॥೧೫॥

## ಭಾಗ ೪

ಧವಲ ವರ್ಣ ಕೆಂದುಟಿಯ ದುಂಡು ಮುಖ ನೀಲ ನಯನ ಹೊಳೆದು,
ಮಿಸುನಿ ಜಡೆಯ ಸುಕುಮಾರ ರೂಪವೊಪ್ಪಿತ್ತು ಭಸ್ಮ ತಳೆದು.
ಮುಂಜಮೇಖಲೆಯ ಕಟ್ಟಿ ಬೆರಳ ರುದ್ರಾಕ್ಷಿಮಾಲೆ ಹಿಡಿದು,
ಕಪಿಂಜಲನ ಜತೆಯಲ್ಲಿ ಬಂದ ಮುನಿ ಪುಂಡರೀಕ ನಡೆದು ॥೧೬॥

ರತಿಯ ಬೆವರು ಹನಿ ಯೆಸಳು ತೆರೆದು ಬಂದಂತೆ ಮೊಗ್ಗೆಯೊಡೆದು,
ಮುಗಿಲ ಕೃತ್ತಿಕಾ ಪುಂಜ ಹೂತ ನವಪಾರಿಜಾತ ಮುಡಿದು
ಹಿಡಿದ ದಂಡ ಕೈಕಮಂಡಲುಗಳೊಪ್ಪಿರಲು ಮುನಿಕುಮಾರ,
ಮಹಾಶ್ವೇತೆ ನಿಂತಲ್ಲೆ ನಿಂತು ನೋಡಿದಳು ಕರ್ಣಪೂರ ॥೧೭॥

ಕಮಲನಯನೆ ಕಣ್ತುಂಬ ನೋಡಿದಳು ಸೋಲಲಿಲ್ಲ ನೋಡಿ,
ನೋಡಿದಷ್ಟು ಮನ ತುಂಬುತಿತ್ತು ಮುನಿರೂಪ ಕಾಮ ಹೂಡಿ.
ಮೊಗ್ಗೆ ನಯನಗಳನರಸಿತ್ತು ಮನ ಕೆರಳಿಸಿತ್ತು ಕಾಮ,
ಕಣ್ಣಿನುಯ್ಯಲೆಯನಾಡುತಿತ್ತು ಗಂಧರ್ವಕನ್ಯೆ ಪ್ರೇಮ ॥೧೮॥

ಅವಳ ಚಿತ್ತಚಾತಕವು ಬಯಸಿ ನಿಂತಿತ್ತು ಪ್ರೇಮಮೇಘ,
ಹುಚ್ಚು ಹೊಳೆಯು ಹರಿದಂತೆ ಕೊಚ್ಚಿ ಬಂದಿತ್ತು ಕಾಮದೋಘ.
ಎದುರು ಬಂದು ನಿಂತಿರಲು ನೋಡಿ ಮುನಿ ಪುಂಡರೀಕ ರೂಪ,
ಮಹಾಶ್ವೇತೆಯೊಳಗೊಳಗೆ ಮೂಡಿದವು ಕಾಮದಿಂದ್ರ ಚಾಪ ॥೧೯॥

ಹೃದಯವೀಣೆಯನುರಾಗರಾಗವಡೆದಿತ್ತು ನೂರು ರೀತಿ,
ತೆರೆದ ಕಣ್ಣುಮರೆಯಲ್ಲಿ ಕಣ್ಣು ಚಿವುಟಿತ್ತು ಭೋಗ ಪ್ರೀತಿ.
ಬನದ ಹಸಿರು ಕೊಳದಲ್ಲಿ ಕಮಲ ಮಧುಮಾಸ ದುಂಬಿಯಾಡಿ,
ಮಹಾಶ್ವೇತೆಯನುರಾಗ ಬಣ್ಣವಡೆದಿತ್ತು ಚೆಲುವು ನೋಡಿ ॥೨೦॥

## ಭಾಗ ೫

ಬೆವತು ನಾಚಿ ಕೆಂಪೇರಿ ಕದಪು ನಿಂತಿರಲು ಚಿತ್ತ ಸೋತು,
ಮಹಾಶ್ವೇತೆ ಮುನಿಪುಂಡರೀಕ ಸೌಂದರ್ಯರೂಪಕೋತು,
ಕರ್ಣಕುಂಡಲಗಳುಯ್ಯಲಾಡುತಿರೆ ಮಣಿದಳವನ ಪದಕೆ,
ಎದ್ದುನಿಂತು ಸಾವರಿಸಿಕೊಂಡು ನಭನೀಲ ಮೇಲು ಹೊದಿಕೆ ॥೨೧॥

ಕಪಿಂಜಲನ ಬಳಿಸಾರಿ ನಮಿಸಿ ಕೇಳಿದಳು ಮನದಿ ನಾಚಿ,
ಪುಂಡರೀಕ ದೇವರ್ಷಿಯೆಡೆಗೆ ಲಾವಣ್ಯದೃಷ್ಟಿ ಚಾಚಿ.

"ನಿಮ್ಮ ಗೆಳೆಯರಿವರಾರು? ಧರಿಸಿದಾಹೂವದಾವು"ದೆಂದು,
ಗಂಧವನದಿ ಗಂಧರ್ವ ಕನ್ನೆ ಕೇಳಿದಳು ಪ್ರೀತಿ ಮಿಂದು ॥೨೨॥

ಕಪಿಂಜಲನು ನುಡಿದಿದ್ದ "ದೇವಿ, ಸಖ ಪುಂಡರೀಕನೀತ,
"ಶ್ವೇತಕೇತು ದೇವರ್ಷಿ ವತ್ಸನಾ ಹೂವೆ ಪಾರಿಜಾತ."
"ದೇವ ವನದ ವನದೇವಿಯೊಲಿದು ಕೊಟ್ಟಿರುವ ಕರ್ಣಪೂರ"
ನುಡಿಯುತಿರಲು ಬಳಿಸಾರಿ ಬಂದ ದೇವರ್ಷಿ ಮುನಿಕುಮಾರ ॥೨೩॥

ನೀಲನಯನಗಳ ನೆಟ್ಟನೋಟ ವ್ಯಾಕುಲಿತ ಚಿತ್ತಬಿಂಬ,
ಪುಂಡರೀಕನನುರಾಗ ಧುಮುಕಿ ಬಂದಿತ್ತು ಕಣ್ಣತುಂಬ.
ಕರ್ಣದಿಂದ ತೆಗೆದಿರಿಸಿಕೊಂಡು ಬೆರಳಲ್ಲಿ ಕರ್ಣಪೂರ,
ಗಿರಿಯನಿಳಿದು ನದಿಯೋಡುವಂತೆ ಬಂದಿದ್ದ ಮುನಿಕುಮಾರ ॥೨೪॥

ನೀಲನಯನ ಕಣ್ತುಂಬ ನೋಡಿದನು ಸೋಲಲಿಲ್ಲ ನೋಡಿ,
ನೋಡಿದಷ್ಟು ಮನತುಂಬಿ ಬಂದಳಾ ಚಂದ್ರವದನೆ ಮೂಡಿ.
ಪುಂಡರೀಕ ಮೈಮರೆದು ನಿಂತುಕೊಂಡಿದ್ದ ಬಳಿಗೆ ಬಂದು,
ಕಡಲ ಕಡೆದ ಶ್ರಾವಣ ಸಮೀರ ಬಂದಂತೆ ನೀರ ಮಿಂದು ॥೨೫॥

## ಭಾಗ ೬

ಹೃದಯವೀಣೆಯನುರಾಗ ರಾಗವಡೆದಿತ್ತು ನೂರು ರೀತಿ,
ತೆರೆದ ಕಣ್ಣಮರೆಯಲ್ಲಿ ಕಣ್ಣು ಚಿವುಟಿತ್ತು ಭೋಗ ಪ್ರೀತಿ.
ಪುಂಡರೀಕನನುರಾಗ ಮೂಡಿ ಬಂದಿತ್ತು ಕಣ್ಣಸೂಸಿ,
ಧೂಮಕೇತು ನಡೆದಂತೆ ಬಾನ ಬೆಳುದಿಂಗಳಲ್ಲಿ ಬೀಸಿ ॥೨೬॥

ಝೊಂಪಿಸಿತ್ತು ತನು ಕಂಪಿಸಿತ್ತು ಕೈಬೆರಳಿನಕ್ಷಮಾಲೆ,
ಬನವ ತುಂಬಿ ಮುನಿಮನವ ತುಂಬಿ ಕುಣಿದಿತ್ತು ಕಾಮಲೀಲೆ.
ಮದನಯೋಗ ಮನ ತುಂಬಿ ನುಡಿದ ದೇವರ್ಷಿ ಬಳಿಗೆ ಬಂದು,
"ಪರಿಗ್ರಹಿಸಿದೋ ದೇವಿ ಹೂವ ಕರ್ಣಾವತಂಸಕೆಂದು" ॥೨೭॥

ಪುಂಡರೀಕ ಗಂಧರ್ವಕನ್ನೆಗಿರಿಸಿರಲು ಪಾರಿಜಾತ,
ಕದಪು ಕರತಲ ಸ್ಪರ್ಶ ಸೋಂಕು ನುಡಿದಿತ್ತು ಮಿಂಚು ಮಾತ.
ಬಂಧವಿಲ್ಲದಾನಂದದಲ್ಲಿ ಮೈಮರೆತವೆರಡು ಜೀವ,
ಚಂದ್ರವದನೆ ನಸುನಗಲು ಕದಪಿನಲಿ ತೊಟ್ಟು ಪ್ರೀತಿ ಹೂವ ॥೨೮॥

ಬೆವತು ನಾಚಿ ಕೆಂಪೇರಿ ಕದಪು ನಿಂತಿದ್ದ ಮುನಿಕುಮಾರ,
ರಾಸಲೀಲೆಯಲಿ ಚಿತ್ತ ಬೆರೆತು ಮೈಮರೆತು ಹರ್ಷಪೂರ.
ನಡಗುತಿರಲು ಬೆರಳಕ್ಷಮಾಲೆ ಜಾರಿತ್ತು ಕೈಯ ಕೆಳಗೆ,
ಮಹಾಶ್ವೇತೆಯದನೆತ್ತಿಕೊಂಡಳೋ ಮಿಂಚುವೇಗದೊಳಗೆ ॥೨೯॥

ಚಂದ್ರವದನೆ ನಸುನಗಲು ಕದಪಿನಲಿ ತೊಟ್ಟು ಪ್ರೀತಿ ಹೂವ,
ತಪದ ಚಂದ್ರಶಿಲೆಯೊಸರುತಿತ್ತು ಬಿಸಿಯುಸಿರುತಿತ್ತು ಜೀವ.
ಮುನಿಯ ಬೆರಳ ರುದ್ರಾಕ್ಷಿಮಾಲೆ ಕಾಮಾಕ್ಷಿ ಕೊರಳ ಸುತ್ತು,
ಬಳ್ಳಿವರೆಯಲನುರಾಗ ಯೋಗ ಹನಿ ಮಂಜು ಕರಗುತಿತ್ತು. ॥೩೦॥

## ಭಾಗ ೭

ಪಾರಿಜಾತ ಕರ್ಣಾವತಂಸ ರುದ್ರಾಕ್ಷಿ ಮಾಲೆಯಿಟ್ಟು
ಮಹಾಶ್ವೇತೆ ಗಂಧರ್ವಕನ್ನೆ ನಿಂತಿರಲು ಲಜ್ಜೆಪಟ್ಟು
ಹಗಲುಗನಸು ಹರಿದಾಡುತಿತ್ತು ಹೂಬಿಸಿಲ ಶಯ್ಯೆ ಹಾಸಿ,
ಸ್ವಪ್ನಲೋಕ ತೆರೆದಿತ್ತು ಭೋಗ ಕರೆದಿತ್ತು ಕೈಯ ಬೀಸಿ ॥೩೧॥

ಸನಿಹವೆರಡು ಮಾಮರಕೆ ತಬ್ಬಿನಿಂತಿರಲು ಹೂವತಾಳಿ,
ಮುಗ್ಧ ಮಾಧವೀ ಬಳ್ಳಿ ಗುಯ್ಯಲಾಡಿತ್ತು ಮಂದ ಗಾಳಿ.
ಪುಂಡರೀಕ ದೇವರ್ಷಿ ರೂಪ ಕಣ್ತುಂಬಿ ತುಂಬಿಕೊಂಡು,
ನಿಂತಳಲ್ಲಿ ಗಂಧರ್ವಕನ್ನೆ ಕನವರಿಕೆ ಜೇನನುಂಡು ॥೩೨॥

ಬಣ್ಣ ಬಣ್ಣಗಳ ಚಿಕ್ಕೆ ಮಾಲೆಯುಯ್ಯಾಲೆಯಲ್ಲಿ ತೂಗಿ,
ಪ್ರೀತಿ ನುಡಿಸಿ ಬಂದಿತ್ತು ವೀಣೆ ಬನ ಮನದ ಮೌನವಾಗಿ.

ಗಂಧವನದಿ ಗಂಧರ್ವಕನ್ನೆ ನಿಂತಿರಲು ಲಜ್ಜೆಪಟ್ಟು
ಹೃದಯ ಕಮಲದಲಿ ರಾಜಹಂಸ ಹಾರೈಸಿ ಪೀಠ ಕೊಟ್ಟು ॥೩.೩॥

ಪಂಚವರ್ಣದರಗಿಳಿಯ ತನ್ನ ಮುಂಗೈಯೊಳಿರಿಸಿಕೊಂಡು,
ದೇವಕನ್ನೆ ಸಖಿಯೊಡನೆ ತೆರಳಿರಲು ದೇವಮುನಿಯ ಕಂಡು.

ಕಲ್ಪ ಕಲ್ಪಗಳ ಮುಳುಗಿಸಿತ್ತು ಮೂಡಿಸಿದ ಪ್ರೇಮಸೃಷ್ಟಿ
ಯೋಗಶೈಲಗಳನುರುಳಿಸಿತ್ತು ಕನ್ನಿಕೆಯ ಕಾಮದೃಷ್ಟಿ ॥೩.೪॥

ವಿರಹ ತುಂಬಿ ತುಳುಕಿರಲು ಹೃದಯ ಮುನಿ ಪುಂಡರೀಕ ನೊಂದು,
ನಡೆದ ದಾರಿಯನೆ ನೋಡಿ ನಡೆದ ನಿಟ್ಟುಸಿರ ಬಿಟ್ಟು ನಿಂದು.

''ದೇವಿ ಬರಲಿ ಗಿಳಿಜನ್ಮ ಇರಲಿ ಸಾನ್ನಿಧ್ಯ ನಿನ್ನದೊಂದು,
ದೈವ. ನಕ್ಕು ನುಡಿದಿತ್ತು ಮುನಿಯ ನುಡಿ ಸತ್ಯವಾಗಲೆಂದು ॥೩.೫॥

## ಭಾಗ ೮

ಹೆಜ್ಜೆಗೊಮ್ಮೆ ಲಾವಣ್ಯದೃಷ್ಟಿಗಳ ಚಾಚಿ ಹಿಂದೆ ಹಿಂದೆ,
ಮಹಾಶ್ವೇತೆ ತರಳಿಕೆಯ ಜೊತೆಗೆ ನಡೆದಿರಲು ಮುಂದೆ ಮುಂದೆ.

ಪುಂಡರೀಕ ದೇವರ್ಷಿ ನಿಂತುನಿಂತಲ್ಲೆ ಮೈಯ ಮರೆತು,
ತಪೋಮಂಡಲದ ಚಂದ್ರ ಹೊಳೆದ ರೋಹಿಣಿಗೆ ಚಿತ್ತ ಬೆರೆತು ॥೩.೬॥

ಮಂದ ಮಂದ ಘುಲುಕಿರಲು ಹೆಜ್ಜೆಗಳ ಗೆಜ್ಜೆ ನಡೆಗೆ ಸೋತು,
ಪಾರಿಜಾತ ಕರ್ಣಾವತಂಸ ನುಡಿದಿರಲು ನೂರು ಮಾತು.

ಕೊರಳ ಮಾಲೆ ನುಡಿದಿತ್ತು ''ದೇವಿ ನಿಲ್ ಹೆಜ್ಜೆ ಹಿಂದಕಿರಿಸು,
ಪ್ರೀತಿರೂಪ ಸೌಂದರ್ಯ ಯೌವನದ ಬಾಳ ಜೇನನರಸು'' ॥೩.೭॥

ಕಣ್ಣು ತುಂಬಿ ನಿರ್ವಿಣ್ಣ ನೀಲ ಕರೆದಿತ್ತು ಭೋಗಲೀಲೆ,
ಪ್ರೀತಿ ತಳಿರ ಕೆಂದಳಿರಿಗಾಗಿ ಹಂಬಲಿಸಿ ದೇವಬಾಲೆ.

ಬಿಟ್ಟ ಉಸಿರು ನಿಟ್ಟುಸಿರು. ದೃಷ್ಟಿ ನಡೆದಿತ್ತು ಕನ್ನೆಯೆಡೆಗೆ,
ಯೋಗಮಂಡಲದ ಚಿಕ್ಕೆಯುರುಳಿ ನೆಲದಲ್ಲಿ ಬೆಳ್ಳಿ ಹುಡಿಗೆ ॥೩.೮॥

ಮುನಿಯ ಕೊರಳ ರುದ್ರಾಕ್ಷಿಮಾಲೆ ಕಾಮಾಕ್ಷಿ ಕನ್ನೆ ತೊಟ್ಟು
ಮಹಾಶ್ವೇತೆ ನಡೆದಿರಲು ಬೆರಳ ಸವರುತ್ತ ಮುತ್ತನಿಟ್ಟು
ಪಂಚವರ್ಣದರಗಿಳಿಯ ತನ್ನ ಮುಂಗೈಯೊಳಿರಿಸಿಕೊಂಡು,
ಕೊರಳ ನೀಲಸರ ಗಿಳಿಗೆ ಕೊಟ್ಟು ದೇವರ್ಷಿಯೆಡೆಗೆ ಕಂಡು ॥೩೯॥

''ದೇವಮುನಿಗೆ ಕೊಡು ನನ್ನ ನೀಲನವರತ್ನಹಾರ''ವೆಂದು,
ದೇವಕನ್ನೆ ನುಡಿದಿರಲು ರೆಕ್ಕೆಗೆದರಿತ್ತು ಹಾರಿ ಬಂದು.
''ರುದ್ರಾಕ್ಷಿಮಾಲೆ ನನಗಿರಲಿ ಬರಲಿ ವಲ್ಕಲ ವಿಲಾಸ''ವೆಂದು,
ದೇವಿ ನುಡಿಯೆ ನುಡಿದಿತ್ತು ದೈವನುಡಿ ಸತ್ಯವಾಗಲೆಂದು ॥೪೦॥

## ಭಾಗ ೯

ಪಂಚವರ್ಣದರಗಿಳಿಯು ಚುಂಚಿನೊಳಗಿರಿಸಿ ರತ್ನಮಾಲೆ,
ಪ್ರೀತಿ ರಾಯಸದ ಹಕ್ಕಿ ಬಂತು ಕಳಿಸಿರಲು ದೇವಬಾಲೆ.
ದೇವಮುನಿಯ ಮುಂಗೈಯಿಗಿಳಿದು ತೆರೆದಿತ್ತು ತನ್ನ ರೆಕ್ಕೆ,
ಹೂತ ಮಲ್ಲಿಗೆಯ ಬಳ್ಳಿ ಬಳ್ಳಿವರೆದಂತೆ ಮಾವು ತೆಕ್ಕೆ ॥೪೧॥

ಐದು ಬಣ್ಣಗಳ ಚೆಲುವು ರೆಕ್ಕೆ ತೆರೆದಿತ್ತು ಹಚ್ಚಹಸಿರು,
ಪ್ರೀತಿ ಪಕ್ಷಿ ಕುಳಿತಿತ್ತು ರೆಕ್ಕೆ ತಳೆದಿತ್ತು ಪ್ರೀತಿಯುಸಿರು.
ಕೆಂಪು ಚುಂಚಿನಲಿ ನೀಲಮಾಲೆಯುಯ್ಯಾಲೆಯಾಡುತಿತ್ತು,
ಹೂವುಗಾಳಿಯೆಡೆ ನೋಡಿದಂತೆ ಕೊರಳೆತ್ತಿ ನೋಡುತಿತ್ತು ॥೪೨॥

ಪುಂಡರೀಕ ದೇವರ್ಷಿ ಕಂಡು ನಲವೇರಿ ಹಿಗ್ಗು ಹೀಚಿ,
ಕಮಂಡಲುವ ಕೆಳಗಿರಿಸಿ ನೋಡಿದನು ಗಿಳಿಯ ಕಡೆಗೆ ನಾಚಿ.
ತಂದ ನೀಲ ನವರತ್ನಮಾಲೆ ಮುನಿ ಕೊರಳ ಸುತ್ತಿ ತಂದು,
ಪಕ್ಷಿ ತಂದ ಕಾಮಾಕ್ಷಿಮಾಲೆ ರುದ್ರಾಕ್ಷಿಯಾಯಿತೆಂದು. ॥೪೩॥

ಮೇರು ಪರ್ವತವ ಸೀಳಿ ಬಂತೆ ಹೂ ಬಾಣದಿಂದ್ರಚಾಪ,
ಭೋಗದೇಗುಲದ ಹಣತೆಗಿಳಿದು ಹೊಳೆದಂತೆ ಯೋಗ ದೀಪ.

ಚಂದ್ರವದನೆ ಗಂಧರ್ವಕನ್ನೆ ದೇವರ್ಷಿ ಪುಂಡರೀಕ,
ಕಪಿಂಜಲನು ಮನನೊಂದು ನಿಂತ ನಿಂತಂತೆ ಮೌನ ಶೋಕ ॥೪೪॥

ಮಹಾಶ್ವೇತೆಯೆಡೆ ಗಿಳಿಯು ಹಾರಿ ಹೊರಟಿತ್ತು ಹಾರ ಕೊಟ್ಟು
ಪುಂಡರೀಕ ದೇವರ್ಷಿ ಕಂಡ ಹಾರೈಸಿ ದೃಷ್ಟಿಯಿಟ್ಟು
"ದೇವಿ ಬರಲಿ ಗಿಳಿ ಜನ್ಮ ಇರಲಿ ಸಾನ್ನಿಧ್ಯ ನಿನ್ನದೊಂದು"
ದೈವ ನಕ್ಕು ನುಡಿದಿತ್ತು ಮುನಿಯ ನುಡಿ ಸತ್ಯವಾಗಲೆಂದು ॥೪೫॥

## ಭಾಗ ೧೦

ಮಹಾಶ್ವೇತೆ ಮರಳಿದಳು ಮನೆಗೆ ತರಳಿಕೆಯ ಬನದಿ ಬಿಟ್ಟು
ತಾಯಿ ಗೌರಿ ಸಿರಿಗೌರಿಯೊಡನೆ ಮನದಲ್ಲಿ ಲಜ್ಜೆ ಪಟ್ಟು
ಚೈತ್ರವನದ ಸರಸಿಯಲಿ ಮಿಂದು ಯೌವನ ವಿಲಾಸ ಬೆರೆತು,
ದೇವಕನ್ನೆ ದೇವರ್ಷಿಗಾಗಿ ಕನವರಿಸಿ ಮೋಹವರಿತು ॥೪೬॥

ಮಹಾಶ್ವೇತೆ ಗಂಧರ್ವಕನ್ನೆ ನಡೆದಿರಲು ಬನದ ದಾರಿ,
ತಾಯಿ ಗೌರಿ ಶ್ರೀಗೌರಿಯೊಡನೆ ಮುನಿ ಮನದ ರೂಪ ಕೋರಿ.
ಬಳ್ಳಿ ಮಂಟಪದ ಹಸಿರು ಬನದ ಸೌಂದರ್ಯ ಕಾಣದಂತೆ,
ದೇವಕನ್ನೆ ಕನವರಿಸುತಿರಲು ದೇವರ್ಷಿ ರೂಪ ಚಿಂತೆ ॥೪೭॥

ಐದು ಬಣ್ಣದರಗಿಳಿಯ ತನ್ನ ಮುಂಗೈಯೊಳಿರಿಸಿಕೊಂಡು,
ಬೆರಳ ಸವರಿ ಕೊರಳಕ್ಷಮಾಲೆ ಮುನಿರೂಪ ಸ್ಮರಿಸಿಕೊಂಡು,
ಪಾರಿಜಾತ ಪರಿಮಳದ ನವಿರು ಸವಿನೆನಪು ನುಡಿಯುತಿತ್ತು,
ದೇವಕನ್ನೆ ದೇವರ್ಷಿಗಾಗಿ ಕನಲಿದಳು ಸುತ್ತುಮುತ್ತು ॥೪೮॥

ಪುಂಡರೀಕ ವ್ಯಾಕುಲಿತಚಿತ್ತನಾಗಿದ್ದ ಕನ್ನೆಗೊಲಿದು,
ಹೃದಯಸರಸಿಯಲಿ ತೇಲಿಬರಲು ಗಂಧರ್ವಹಂಸಿಯಲೆದು,
ಹಸಿರು ಚೈತ್ರವನದಲ್ಲಿ ಮೆರೆಯಿತಚ್ಛೋದವೆಂಬ ಸರಸಿ,
ಕೊಳದ ತೀರದಲಿ ಕುಳಿತುಕೊಂಡ ದೇವರ್ಷಿ ದೇವಿಗರಸಿ ॥೪೯॥

ಪಾರಿಜಾತವನು ಕೊಟ್ಟ ದೇವವನದೇವಿ ಬನವನಲೆದು,
ಅಲ್ಲಿ ಮರದ ಮರೆಯಲ್ಲಿ ನಿಂತು ದೇವರ್ಷಿ ರೂಪಕೊಲಿದು.
ಮಹಾಶ್ವೇತೆಗೊಲಿದಿರುವ ದೇವಮುನಿ ಮನದ ವಿರಹ ಕಂಡು,
''ದೇವಗಿತ್ತ ಹೂ ದೇವಿಗರ್ಪಿಸಿದರೆಂದು'' ನೊಂದುಕೊಂಡು. ||೫೦||

## ಭಾಗ ೧೧

ಲಜ್ಜೆಪಟ್ಟು ಮರಳಿದಳು ಮನದಿ ಹಂಬಲಿಸಿ ತುಂಬ ನೊಂದು,
''ಮುಗ್ಧಮಲ್ಲಿಕಾಲತೆಯು ಬರಲು ಮಾಮರನ ತಬ್ಬಲೆಂದು.
ಮಾವು ಕೈಯ ಚಾಚಿತ್ತು ಕರೆದು ಬಳಿಯಲಿ ವಸಂತಶ್ರೀಗೆ,''
ಪ್ರೀತಿ ಬಿತ್ತಿರುವ ಚಿಕ್ಕೆ ಬಂದ ಬೆಳೆ ಧೂಮಕೇತುವಾಗೆ ||೫೧||

ಮಹಾಶ್ವೇತೆ ಮರಳಿದಳು ಮನೆಗೆ ಗಂಧರ್ವ ಚಂದ್ರಶಾಲೆ,
ನೀಲಸ್ತಂಭಗಳ ದಾಟಿ ನಡೆದು ಗಂಧರ್ವರಾಜಬಾಲೆ.
ಹಾಲುಗಲ್ಲಿನರಮನೆಯ ತಂಪಿನಂತಃಪುರಕ್ಕೆ ಬಂದು,
ಕುಳಿತುಕೊಂಡು ಕನವರಿಸತೊಡಗಿದಳು ಮಿಲನವೆಂದಿಗೆಂದು ||೫೨||

ಮುನಿಯ ರೂಪ ಸೌಂದರ್ಯಮೂರ್ತಿ ಒಡಮೂಡಿ ನಿಲ್ಲುತ್ತಿರಲು,
ನೆನಹು ಹೂವು ಮಳೆ ಕರೆದು ಹೃದಯದಂಗಳದಿ ಚೆಲ್ಲುತ್ತಿರಲು.
ಕನ್ನೆವಾಡದಲಿ ಕುಳಿತುಕೊಂಡು ಗಂಧರ್ವಕನ್ನೆಯಂದು,
ಒಲವಿನಲ್ಲಿ ಕನವರಿಸತೊಡಗಿದಳು ಮಿಲನವೆಂದಿಗೆಂದು ||೫೩||

ಕನ್ನೆವಾಡದಲ್ಲಿ ಹಂಸತೂಲಿಕಾತಲ್ಪ ಮಧ್ಯದಲ್ಲಿ,
ಬಣ್ಣಬಣ್ಣಗಳ ಕುಸುರನೆಳೆದ ನವರಂಗ ಶಿಲ್ಪವಲ್ಲಿ.
ಮುತ್ತುಮಾಲೆ ಝುಲ್ಲರಿಯ ತೂಗಿ ತೋರಣವ ಸಾಲು ಸಾಲು,
ನೀಲ ರತ್ನಗಂಬಳಿಯ ಬಳಿಯ ನೆಲ್ಲವೆಲ್ಲ ಕಲ್ಲು ಹಾಲು ||೫೪||

ಹಂಸತೂಲಿಕಾತಲ್ಪದಲ್ಲಿ ಕುಳಿತಿರಲು ದೇವಬಾಲೆ,
ಕೈಯ ಬೆರಳಿನೊಳಗುಯ್ಯಾಲಾಡಿಸುತ ಮುನಿಯ ಅಕ್ಷಮಾಲೆ.

ನೊಂದಮನಕೆ ಶ್ರೀಗಂಧವಿಡಲು ಬರುತಿತ್ತು ತಂಪುಗಾಳಿ,
ಒಲಿದ ಮನದ ಹೂಶಯ್ಯೆಯಲ್ಲಿ ನಡೆಸಿತ್ತು ರಾಸಕೇಳಿ ||೫೫||

## ಭಾಗ ೧೨

ನವಿಲುಗರಿಯ ಬೀಸಣಿಕೆಯಿರಿಸಿ ಬಯಸಿರಲು ನಾದವಾಣಿ,
ಹೊದೆದು ದಿವ್ಯ ರೇಷಿಮೆಯ ಜವನಿಕೆಯ ಹಸ್ತಿದಂತ ವೀಣೆ.

ನೀಲವಲ್ಕಲದ ಸೂತ್ರವೆಳೆದು ತೆಗೆದೆತ್ತಿಕೊಂಡು ಒರಗಿ,
ಮಿಡಿದ ತಂತಿ ನುಡಿದಿತ್ತು ಶ್ರುತಿಯ ಹಿಡಿದಿತ್ತು ಪ್ರೇಮ ಕೊರಗಿ ||೫೬||

ರಾಗ ಮೀಟಿತನುರಾಗ ರಾಗಿಣಿಯ ಭೋಗದಾಸೆ ಮಿಡಿದು,
ನಾದಲಹರಿ ಸುಳಿದಿತ್ತು ಪ್ರೇಮದುನ್ಮಾದ ವೀಣೆ ನುಡಿದು.

ಒಲವಿನಿಂದ ಸ್ವಚ್ಛಂದ ಗಾನವೀಣಾವಿತಾನ ಸವಿದು,
ಅಂತರಂಗದಲಿ ನಿಂತು ಪ್ರೀತಿ ರಿಂಗಣಿಸುತಿತ್ತು ಕರೆದು ||೫೭||

ಹಸ್ತಿದಂತ ಕಲಮಧುರ ವೀಣೆಯೊರಗಿತ್ತು ಮೌನವಾಗಿ,
ಹಂಸತೊಲಿಕಾತಲ್ಪದಿಂದ ಗಂಧರ್ವಕನ್ನೆ ಸಾಗಿ.

ಹವಳಜಾಲಮಣಿಮಾಲೆ ತೂಗಿರುವ ಕಿಟಕಿಯನ್ನು ತೆರೆದು,
ಮಹಾಶ್ವೇತೆ ಹಾರೈಸಿ ನೋಡಿದಳು ದೂರದೃಷ್ಟಿಯೆರೆದು ||೫೮||

ಮಹಾಶ್ವೇತೆ ನಸುನಕ್ಕು ನೋಡುತಿರೆ ಮೇಘವರ್ಣ ಮಾಲೆ,
ಗೆಳತಿ ತರಳಿಕೆಯು ಮರಳಿ ಬಂದು ಗಂಧರ್ವ ರಾಜಬಾಲೆ.

ಸೇರಿ ಸಖಿಯ ಬಳಿಸಾರಿ "ದೇವಿ ಕೈಕೊಳ್ಳಿ ನಿಮ್ಮ ಚಿತ್ತ,
ಹೂವ ಕೊಟ್ಟು ಹೂಮಾಲೆ ಬೇಡಿದರು ಋಷಿಯು ನಮ್ಮ ಸುತ್ತ" ||೫೯||

ನುಡಿದು ತೆರೆದು ತಾಂಬೂಲ ಕರಡಿಗೆಯೊಳಿರುವ ಪ್ರೀತಿಯೋಲೆ,
ಗೆಳತಿ ತರಳಿಕೆಯು ಕೊಡಲು ಪ್ರೇಮರಾಯಸವ ದೇವಬಾಲೆ.

"ಪುಂಡರೀಕ ದೇವರ್ಷಿ ಕೊಟ್ಟು ಕೇಳಿದರು ನಿಮ್ಮ ಕ್ಷೇಮ,
ಹೂವ ಕೊಟ್ಟು ಹೂಮಾಲೆ ಬಯಸುತಿದೆ ದೇವಮುನಿಯ ಪ್ರೇಮ ||೬೦||

## ಭಾಗ ೧೩

ಸಪ್ತವರ್ಣದಭಿಲಾಷೆ ಮೂಡಿರಲು ಮನದಿ ದೇವಕನ್ನೆ,
ಪ್ರೀತಿ ಪಾಟಲದ ಲಜ್ಜೆ ಲಹರಿ ಮಸಗಿರಲು ಹಾಲುಕೆನ್ನೆ,
ಮೋದ ತುಂಬಿದುನ್ಮಾದ ಓದಿದಳು ಮುನಿಯ ಪ್ರೀತಿಯೋಲೆ,
ಪ್ರೇಮನಂದನದಿ ಚೈತ್ರ ಕುಳಿತು ಹೆಣೆದಿತ್ತು ಸ್ವಪ್ನಮಾಲೆ ||೬೧||

ಕಮಲವದನೆ ಕಣ್ತುಂಬ ಓದಿದಳು. ಮನದಲಂಪು ತುಳುಕಿ,
ಗಾಳಿ ಬರಲು ಮೈತಾಳಿ ಸ್ನೇಹಲತೆಯಂತೆ ಹಿಗ್ಗಿ ಬಳುಕಿ.
''ಎಲ್ಲಿ ನಿಂದು ನಿನಗೆಲ್ಲಿ ಬಂದು ಸಲ್ಲಿಸಿದರೋಲೆಯನ್ನು?
ಎಲ್ಲಿ ಸಿಕ್ಕರೊಡನಾಡಿ ಬಂದೆ ನುಡಿ ಗೆಳತಿ ಬೇಗವಿನ್ನು'' ||೬೨||

ನುಡಿದ ಪ್ರೇಮಕಾತುರತೆ ಕನ್ನೆಯಾತುರತೆ ಮಾತ ಕೇಳಿ,
ಗೆಳತಿ ತರಳಿಕೆಯು ಒಲಿದ ಮುನಿಯ ವೃತ್ತಾಂತವನ್ನೆ ಹೇಳಿ.
''ದೇವಿ! ಮರದ ನೆರಳನಲ್ಲಿ ಕುಳಿತು ಹೂಮಾಲೆ ಹೆಣೆಯುತ್ತಿರಲು,
ಕಪಿಂಜಲನ ಕಣ್‌ಮರೆಸಿ ದೇವಮುನಿ ನನ್ನ ಕಡೆಗೆ ಬರಲು ||೬೩||

ಎದ್ದು ನಿಂತು ಸಾವರಿಸಿಕೊಂಡು ಕೈಮುಗಿದೆ. ಕಂಡು ಮೇಲೆ,
ಪುಂಡರೀಕ ದೇವರ್ಷಿ ಕೇಳಿದರು ನನಗೆ ಪ್ರಶ್ನೆ ಮಾಲೆ.
''ನಿನ್ನ ಗೆಳತಿ ಆವಳಾರು? ಎಲ್ಲಿ? ಮೆಚ್ಚಿದಳೆ? ಪಾರಿಜಾತ?
ಆವಳ ಕೈಗೆ ತಲುಪಿಸುವಿಯೇನು ಮನದೊಂದು ಗುಪ್ತಮಾತ?'' ||೬೪||

ಹೊದೆದ ವಲ್ಕಲದ ತುಂಡು ಹರಿದು ಅಂಗೈಯೊಳಿರಿಸಿಕೊಂಡು,
ತಮಾಲವೃಕ್ಷದೆಳಟೊಂಗೆ ಮುರಿದು ಹರಿದಂಥ ರಸವ ಕೊಂಡು,
ಗಂಧಗಜದಮದಹರ್ಷ ತಾಳಿ ಕನವರಿಸಿ ಓಲೆ ಬರೆದು,
ನಿನ್ನ ಗೆಳತಿಗಿದು ಗುಪ್ತ ಪ್ರೇಮಸಂದೇಶವೆಂದು ತೆರೆದು ||೬೫||

## ಭಾಗ ೧೪

ಬರೆದ ಕಾಗದವನೋದಿ ಹೇಳಿದಳು ಗೆಳತಿಯೋಲೆ ಹಿಡಿದು,
ಚೈತ್ರಪಲ್ಲವದ ಚೆಲುವ ತಾಳಿ ಬಂದಿರಲು ಪ್ರೀತಿ ನಡೆದು.

''ದೂರ ಹಾರುತಿರುವಂಥ ಹಂಸವೇ ಕೊಳವು ಕರೆಯುತಿಹುದು,
ಸರಸ್ತೀರದಲಿ ಶರತ್ಕಾಲ ಬಾಗಿಲವ ತೆರೆಯುತಿಹುದು'' ॥೬೬॥

ಹಾಲು ರೆಕ್ಕೆಗಳ ಹಂಸಪಕ್ಷಿ ಬಾ ಕೊಳದ ನೀರಮೇಲೆ,
ಕಮಲಪುಷ್ಪಗಳು ಕಾಯುತಿಹವು ನಿನಗಾಗಿ ಪಕ್ಷಿ ಬಾಲೆ.

ತುಂಬಿ ತುಳುಕಿ ಮಕರಂದವಿಳಿಯುತಿದೆ ಮೃದುಮೃಣಾಲದಲ್ಲಿ,
ಹೂವ ಸುರಿಸಿ ಕಾದಿಹುದು ಪ್ರೇಮ ಬನದೀತಮಾಲದಲ್ಲಿ ॥೬೭॥

ಕೇಳಿ ತರಳಿಕೆಯು ತಂದ ಪ್ರೀತಿ ರಾಯಸದ ಕಂಪನುಂಡು,
ಮಹಾಶ್ವೇತೆ ಗಂಧರ್ವಕನ್ನೆ ಮನಸೋತು ವಿರಹಗೊಂಡು

ಶರತ್ಕಾಲ ಸಂದೇಶ ಕೇಳಿ, ಸಂಚಾರ ಮಾರ್ಗ ತೊರೆದು,
ಹಂಸಪಕ್ಷಿಯಿಳಿದಂತೆ ಮನದಿ ನೆನೆಸಿದಳು ಮುನಿಯ ಕರೆದು ॥೬೮॥

ಸಂಜೆ ಬಂತು ಸಿಂಧೂರ ಬರೆದು ಪಡುವಣದ ಕ್ಷಿತಿಜದಲ್ಲಿ,
ಕೊಳದಿ ನಿಂತ ತಾವರೆಗಳೆಲ್ಲ ಮುದುಡಿದವು ಮೌನದಲ್ಲಿ,

ಚಕ್ರವಾಕಗಳು ಬಂಧವಗಲಿ ಹಲುಬಿದವು ಸುತ್ತುಮುತ್ತು,
ಚಂದ್ರವದನೆ ಗಂಧರ್ವಕನ್ನೆಯೆಡೆ ಬಂದಳೊಬ್ಬ ತೊತ್ತು. ॥೬೯॥

ರಾಜವೂಳಿಗದ ಚೇಟಿ ಬಂದು ಗಂಧರ್ವಕನ್ನೆಯೆಡೆಗೆ,
ಮುನಿಕುಮಾರ ಬಂದಿಹರು ನಿಮ್ಮ ಕಡೆಗೆ.''

''ಹೋಗು ಕರೆದು ತಾ ಬೇಗ''ವೆಂದು ಗಂಧರ್ವಕನ್ನೆ ನುಡಿದು,
ಕಪಿಂಜಲನು ಬಂದುದನು ಕಂಡು ನಮಿಸಿದಳು ಚರಣವಿಡಿದು ॥೭೦॥

## ಭಾಗ ೧೫

ಅರ್ಘ್ಯಪಾದ್ಯಗಳ ಕೊಂಡು ಸ್ವರ್ಣದಾಸನದಿ ಕುಳಿತುಕೊಂಡು,
ಮನದ ೀರ ಗಂಭೀರ ವಾಣಿಯಲಿ ಕನ್ನೆಯನ್ನು ಕಂಡು.

ಕಪಿಂಜಲನು ನುಡಿದಿದ್ದ ''ದೇವಿ ಬಂದಿರುವೆ ಗೆಳೆಯನಾಗಿ,
ಕೈಯ ಜೋಡಿಸುವೆ ಪ್ರಾಣವುಳಿಸು ದೇವರ್ಷಿಯೊಲವಿಗಾಗಿ ॥೭೧॥

ಗಂಧವನದ ಕುಟಿಯಲ್ಲಿ ಮಲಗಿ ಮೈಮರೆತು ನಿನ್ನ ನೆನೆದು,
ಕಾಮವಿರಹದಲಿ ಕೊರಗಿ ಪ್ರಾಣ ನಿತ್ರಾಣವಾಯಿತೊಲಿದು.

ಉಸಿರಿಗೊಮ್ಮೆ ನಿಟ್ಟುಸಿರನೂದಿ ನಿರ್ಜೀವ ಜೀವ ಕೊರಗಿ,
ಮಹಾಶ್ವೇತೆ ನೀನುಳಿಸಬೇಕು ನಿನ್ನವನ ದೆಸೆಗೆ ಮರುಗಿ'' ॥೭೨॥

ಕಪಿಂಜಲನ ಕಣ್ಣೀರ ಕಂಡು ಕರಗಿದಳು ದೇವಕನ್ನೆ,
ಬಾಷ್ಪಬಿಂದು ಧುಮುಕಿದವು ತೊಳೆದು ಗಂಧರ್ವಕನ್ನೆ ಕೆನ್ನೆ,

ಕಪಿಂಜಲನು ಹೊರನಡೆದ ನುಸುಳಿ ಕಂಚುಕಿಯು ಸಾರುತಿರಲು,
ಗೌರಿಯೆಂಬ ಗಂಧರ್ವರಾಣಿಯಂತಃಪುರಕ್ಕೆ ಬರಲು ॥೭೩॥

ಮಗಳ ಕಂಡು ಮಾತಾಡಿ ಮರಳಿದಳು ಏನೊ ಏನೊ ಮಾತು,
ಕರುಣೆ ಕೂಗಿ ಕರೆದಾಗ ಭೋಗ ತೆರೆದಾಗ ಚಿತ್ತಸೋತು.

ಮಿಲನವಿಂದಿನಿರುಳೆಂದು ನುಡಿದು ನಿರ್ಧರಿಸಿ ಗೆಳತಿಯೊಡನೆ,
ಮಹಾಶ್ವೇತೆ ಕನಲಿದಳು ''ಚಂದ್ರಮಾ ಬೇಗ ಮೂಡಿ ಬಿಡನೆ'' ॥೭೪॥

ಶಿವನ ಕೆಂಜೆಡೆಯ ಹರಳು ಮೂಡಿ ಮೂಡಲ ದಿಗಂತದಲ್ಲಿ,
ಚಂದ್ರನುದಯಿಸಲು ಪೂರ್ಣಬಿಂಬ ಬಂಗಾರ ತಳಿಗೆಯಲ್ಲಿ,

ಒಲವು ಮರುಕದುಯ್ಯಾಲೆಯಾಡಿ ಕರಗಿತ್ತು ಕಣ್ಣತುಂಬ,
ಚಂದ್ರಶಾಲೆಯಲಿ ಚಂದ್ರವದನೆ ನೋಡಿದಳು ಚಂದ್ರಬಿಂಬ ॥೭೫॥

## ಭಾಗ ೧೬

ರತ್ನಮುಕುರದೆದುರಲ್ಲಿ ನಿಂತು ಸಿಂಗರಿಸಿಕೊಂಡಳುಡಿಗೆ,
ನೀಲರೇಷಿಮೆಯ ವಸನವುಟ್ಟು ಗಿಳಿಹಸಿರು ಮೇಲು ತೊಡಿಗೆ.

ಕರ್ಣಕಿರಿಸಿ ಮಣಿಕರ್ಣಪೂರ ನೂಪುರವ ಕಾಲಿಗಿರಿಸಿ,
ರತ್ನಮೇಖಲೆಯ ಕಟಿಯೊಳಿಟ್ಟಳಭಿಸಾರಯೋಗ ಸ್ಮರಿಸಿ ॥೭೬॥

ಧವಲದೀತಿಯ ಚೆಲುವು ನಿಂತು ಯೌವನೆಯ ರೂಪ ತೊಟ್ಟು
ಚಂದ್ರವದನೆಯೊಪ್ಪಿದಳು ನೊಸಲ ಕಸ್ತೂರಿ ತಿಲಕವಿಟ್ಟು

ಅಂಗರಾಗ ಮದರಂಗಿ ಮಕರಿಕಾಪಾತ್ರ ಕದಪಿಗಿರಿಸಿ,
ಚಂದ್ರವದನೆ ಸಿಂಗರಿಸಿಕೊಂಡಳಭಿಸಾರಯೋಗ ಸ್ಮರಿಸಿ ॥೭೭॥

ತೋಳಬಂದಿಗಳನಿರಿಸಿ ಕೊರಳಿನಲಿ ನೀಲರತ್ನಹಾರ,
ಕರ್ಣಕುಂಡಲಗಳುಯ್ಯಲಾಡಿ ಬೆಳಗಿದವು ಕರ್ಣಪೂರ,

ದೇವಮುನಿಯ ಬಳಿಸಾರಿ ನಡೆದಳಭಿಸಾರಿಕಾಕುಮಾರಿ,
ಗಂಧವನದಿ ಗಂಧರ್ವಕನ್ನೆ ಚಂದ್ರಿಕೆಯ ಬನವ ಸೇರಿ ||೭೮||

ಹಾಲು ಸುರಿದು ಹೊಳೆದಿತ್ತು ಮುಗಿಲು ಬೆಳುದಿಂಗಳಲ್ಲಿ ಬೆಳಗಿ,
ಝಣಾತ್ಕರಿಸಿ ನೂಪುರದ ನಾದ ಕಲಹಂಸಪಾದ ಮೊಳಗಿ.

ಮಂದ ಘುಲುಕಿದವು ಗೆಜ್ಜೆ ಹೆಜ್ಜೆಯಿಡೆ ಬನದ ಮೌನದಲ್ಲಿ,
ಹಾರುತಿತ್ತು ಬಲಗಣ್ಣು ದೇವಿ ಭಯಭೀತ ಗ್ಲಾನಿಯಲ್ಲಿ ||೭೯||

ಇರುಳ ಮೌನವನು ಸೀಳಿ ಬಂತು "ಹಾ ಪುಂಡರೀಕ!"ವೆಂದು,
"ಅಯ್ಯೋ ಹೂವ ಕೊಯ್ದಿತ್ತು ಮೊಗ್ಗೆಯಿರುವಾಗ ಸಾವು ಬಂದು."

ಮೌನಸೃಷ್ಟಿ ಮಾರ್ಮೊಳಗುತಿತ್ತು ಸುತ್ತಲೂ ಶೋಕವಾಣಿ,
ಕರುಳು ಕೊರೆಯುವಂತಿತ್ತು ಕೂಗು ಸ್ನೇಹಿತನ ದುಃಖವಾಣಿ ||೮೦||

## ಭಾಗ ೧೭

"ವಿಧಿಯ ಸಿಡಿಲು ಹೊಡೆದಿತ್ತು ದುಃಖ ಹಿಡಿದಿತ್ತು ವಜ್ರಮುಷ್ಟಿ
ವಿಷಯಭೋಗ ವಿಷಯೋಗವಾಗಿ ನಿಸ್ತೇಜಬ್ರಹ್ಮದೃಷ್ಟಿ

ತಪದ ಮುಗಿಲಿನಲಿ ಬಂದ ಚಂದ್ರಮಂಡಲಕೆ ಶಾಪ ಕೊಟ್ಟು
ಇರುಳ ಕಡಲಿನಲಿ ಕರಗಿದಂತೆ ನೀ ನಡೆದೆ ನನ್ನ ಬಿಟ್ಟು" ||೮೧||

"ಮೃತ್ಯುಸರ್ಪವನೆ ತುಳಿಯಬಲ್ಲ ವಲ್ಕಲದ ವೈನತೇಯ,
ಕಾಲಕೂಟವನೆ ಕುಡಿಯಬಲ್ಲ ದೇವರ್ಷಿ ನೀನಜೇಯ.

ಹೂವ ಹಿಡಿದ ಕಾಮಾಕ್ಷಿ, ಶಿವಶಿವಾ! ಕಾಮದೃಷ್ಟಿ ಪತನ,
ಮುಗಿಲಿನಿಂದ ಕೆಳಗುರುಳುತಿತ್ತು ನಕ್ಷತ್ರ ನೀಲಮಿಥುನ" ||೮೨||

"ಎಂಥ ಮರಣವಿದು ಗೆಳೆಯ! ಹೂವು ಕಾಮಾಕ್ಷಿ ತಂದ ನಂಜು,
ಚೆಲುವಿಗಾಗಿ ಮನಸೋತ ಜೀವ ಕಂಡಿತ್ತು ಬರಿಯ ಮಂಜು.

ವಜ್ರಕವಚವನು ಸೀಳಿ ಬಂತು ಸೌಂದರ್ಯ ಭೋಗದೃಷ್ಟಿ
ಬರಿಯ ಗಾಳಿಗೋಪುರವೆ ಗೆಳೆಯನೆ ತಪದ ಬ್ರಹ್ಮಸೃಷ್ಟಿ" ||೮೩||

"ಎಂಥ ಮರಣವಿದು ಗೆಳೆಯ! ಹೂವು ಕಾಮಾಕ್ಷಿ ತಂದ ನಂಜು,
ಹಾ ಪುಂಡರೀಕ ! ಹದಿನಾಲ್ಕು ಲೋಕಗಳು ಶೂನ್ಯ ಸುತ್ತುಮುತ್ತು.

ಚಂದ್ರಚೂಡ ಶಿವಪೂಜೆಗಾಗಿ ಬಂದವರು ಮರಳಲಿಲ್ಲ,
ಹಾ ತಪಸ್ವಿ ಸಖಿ! ಹೃದಯಕಮಲ ಕೈವಲ್ಯ ಕೆರಳಲಿಲ್ಲ ॥೮೪॥

ಗಾಳಿ ನರಳಿ ನಡೆದಿತ್ತು ಗಂಧವನದಲ್ಲಿ ನೀರವಕ್ಕೆ,
ಕಪಿಂಜಲನು ಜಡೆಗೆದರಿ ಸುರಿಸಿ ಕಣ್ಣೀರು ಶೋಕವುಕ್ಕೆ
''ಎಲ್ಲ ಶೂನ್ಯ ದೇವರ್ಷಿ! ಎಲ್ಲಿ ಬದುಕಿರಲಿ ನಿನ್ನ ಬಿಟ್ಟು?''
ಕಪಿಂಜಲನು ದುಃಖಾರ್ತನಾಗಿ ಕಣ್ಣೀರಧಾರೆಯಿಟ್ಟು ॥೮೫॥

## ಭಾಗ ೧೮

ಸ್ವರ್ಣಕರಡಿಗೆಯ ಹಿಡಿದುಕೊಂಡು ತರಳಿಕೆಯು ಮುಂದೆ ಮುದೆ,
ಮಹಾಶ್ವೇತೆ ಗಂಧರ್ವಕನ್ನೆ ಬಂದಿರಲು ಹಿಂದಿನಿಂದೆ.
ಮಂದ ಮಂದ ಘುಲುಕಿದವು ಗೆಜ್ಜೆ ನೂಪುರವು ಝಣಿಸುತಿತ್ತು,
ಹಾರುತಿತ್ತು ಬಲಗಣ್ಣು ಚಿತ್ತವೇನೇನೊ ಎಣಿಸುತಿತ್ತು ॥೮೬॥

ಚಂದ್ರಬಿಂಬ ಹೊಳೆದಿತ್ತು ಮುಗಿಲನಿಳಿದಿತ್ತು ಕುಂಭವಿಡಿದು,
ಗಂಧವನದ ಮರಮರದ ಮರೆಗೆ ನೆರಳಲ್ಲಿ ನಿಂತು ನಡೆದು.
ಬೆಳುದಿಂಗಳಲ್ಲಿ ಬನದಂಗಳದಲಿ ನೂಪುರದ ರಮ್ಯ ಸರಕೆ,
ಹೆಜ್ಜೆಗೊಮ್ಮೆ ಹರಿಣಾಕ್ಷಿ ನೋಡಿದಳು ತೆರೆದು ಮೇಲು ಹೊದಿಕೆ ॥೮೭॥

ಗಂಧವನದ ಬೆಳುದಿಂಗಳಲ್ಲಿ ಲಾವಣ್ಯದೃಷ್ಟಿ ಚಾಚಿ,
ಋಷಿಯ ಪ್ರೀತಿಯಭಿಸಾರ ಮಿಲನವನು ನೆನೆದು ಹಿಗ್ಗಿಹೇಚಿ.
ಮಹಾಶ್ವೇತೆ ಗಂಧರ್ವಕನ್ನೆ ಕನವರಿಸಿ ನಡೆಯುತಿರಲು,
ಹಾರುತಿತ್ತು ಬಲಗಣ್ಣು ಬನದ ತಂಬೆಲರು ಬೀಸಿ ಬರಲು ॥೮೮॥

ಇರುಳ ಮೌನವನು ಸೀಳಿ ಬಂತು ''ಹಾ ಪುಂಡರೀಕ''ವೆಂದು,
''ಅಯ್ಯೊ ಹೊವ ಕೊಯ್ದಿತ್ತು ಮೊಗ್ಗೆಯಿರುವಾಗ ಸಾವು ಬಂದು.''
ಮೌನಸೃಷ್ಟಿ ಪಡಿನುಡಿಯುತಿತ್ತು ಸುತ್ತೆಲ್ಲ ಬಿರಿದ ಶೋಕ,
ಕಲ್ಲು ಕೂಡ ಕಣ್ಣೀರ ಬಿಟ್ಟು ನಿಲುವಂತೆ ದುಃಖ ಮೂಕ ॥೮೯॥

ಗಾಳಿ ನರಳಿ ನಡೆದಿತ್ತು ಗಂಧವನದಲ್ಲಿ ಮಂದ ಬೀಸಿ,
ಶೋಕವಾಣಿ ನಡೆದಿತ್ತು ಗಂಧವನದಂತರಂಗ ಸೂಸಿ.

ಆರ್ತದುಃಖದಾಕ್ರಂದನಕ್ಕೆ ಹೌಹಾರಿ ದೇವಕನ್ನೆ
ಮೇಲು ಹೊದಿಕೆಯನು ತೆರೆದು ನೋಡಿದಳು ದುಃಖಮೂಲವನ್ನೆ ॥೯೦॥

## ಭಾಗ ೧೯

ಕಪಿಂಜಲನು ಕುಳಿತಿರಲು ದೇವಮುನಿ ಶವದ ಬಳಿಗೆ ನರಳಿ,
ಮಹಾಶ್ವೇತೆಯೆಳಬಾಳೆಯಂತೆ ಯೆರಗಿದರು ಮೂರ್ಛೆಯುರುಳಿ.

ಗೆಳತಿ ತರಳಿಕೆಯು ಮೆಲ್ಲನೆತ್ತಿ ಭಯಭೀತಚಿತ್ತಳಾಗಿ,
ತೊಡೆಯ ಮೇಲೆ ಮಲಗಿಸಿದಳಾಗ ದೇವಿಯ ಚಿಕಿತ್ಸೆಗಾಗಿ ॥೯೧॥

ತಾಲವೃಕ್ಷ ರಸಲೇಪ ತಂದ ಶ್ರೀಗಂಧ ಬಳಿಯುತಿರಲು,
ನವಿಲುಗರಿಯ ಬೀಸಣಿಕೆ ಬೀಸಿ ತಂಗಾಳಿ ಸುಳಿಯುತಿರಲು.

ಮೂರ್ಛೆಯಳಿದು ಕರಗಿತ್ತು, ಮೆಲ್ಲನೆಚ್ಚತ್ತು ಕುಳಿತುಕೊಂಡು
ಸಖಿಯ ಹೆಗಲಿನೊಳಗೊರಗಿ ಹರಿಸಿ ಕಣ್ಣೀರು ಸುತ್ತ ಕಂಡು ॥೯೨॥

''ಹೊನಲ ವಧುವು ಮುಂಬರಿವ ಮುನ್ನ ಬತ್ತಿಹುದು ಬಾಳಕಡಲು,
ಒಲಿದ ಹೃದಯದಭಿಸಾರ ಭೋಗವನದಲ್ಲಿ ಬಿತ್ತು ಸಿಡಿಲು.

ಮಧುವ ಬಯಸಿ ಬಂದಿರುವ ಹೃದಯ ಪಡೆದಿತ್ತು ಕಾಲಕೂಟ,
ಹಂಸಪಕ್ಷಿಯಿಳಿದಂಥ ಕೊಳವನೊಣಗಿಸಿತು ದೈವದಾಟ'' ॥೯೩॥

''ದಿವ್ಯ ರೂಪದನುರಾಗ ಬಯಸಿ ನಾ ನಿಮ್ಮನರಸಿ ಬಂದೆ,
ಧವಲಹಂಸ ಗಂಧರ್ವರೂಪ ಯೌವನವು ನಿಮ್ಮದೆಂದೆ.

ಒಲಿದ ಹೃದಯದಭಿಸಾರ ಮಿಲನ ಹಾರೈಸಿ ಬಂದೆನಿಲ್ಲಿ,
ವಿಯ ಕೊಡಲಿ ಹೊಡೆದಾಗ ಮರವನೀಬಳ್ಳಿಗಾಸರೆಲ್ಲಿ?'' ॥೯೪॥

''ನೀವೆ ನನ್ನ ಸರ್ವಸ್ವವೆಂದು ಹಾರೈಸಿ ಬಂದೆನಿಲ್ಲಿ
ತಾಯಿ ತಂದೆ ಪರಿವಾರ ತೊರೆದು ಸರ್ವಸ್ವವೆಂದೆನಿಲ್ಲಿ,

ನಿಮ್ಮ ಕಣ್ಣಿನಲ್ಲಿ ಕಣ್ಣನಿಟ್ಟು ಹಾರೈಸಿ ಬಂದೆನೊಲವು,
ಕುಸಿದು ಬಿತ್ತು ಭೂಕಂಪದಲ್ಲಿ ಹಾರೈಕೆ ನಿಂತ ನೆಲವು'' ॥೯೫॥

## ಭಾಗ ೨೦

''ದಿವ್ಯ ಭೋಗವನು ಬಯಸಿ ಬಂದೆ ನಿಮ್ಮಲ್ಲಿ ನುಡಿಯಿರೊಮ್ಮೆ,
ತುಟಿಯ ತುಂಬ ಮಕರಂದ ಕುಂಭ ತಂದಿರುವೆ ಕುಡಿಯಿರೊಮ್ಮೆ.
ಧವಲ ದಿವ್ಯ ಸೌಂದರ್ಯವೀಣೆಯನುರಾಗ ಮಿಡಿಯಿರೊಮ್ಮೆ
ಬಾಹುಪಾಶದಲಿ ಗಾಳಿ ಹೊಡೆದ ಎಳಬಾಳೆ ಹಿಡಿಯಿರೊಮ್ಮೆ ॥೯೬॥

ಕೈಜೋಡಿಸುವೆನು ಕೈಲಾಸನಾಥ! ಕಾಪಾಡು ದುಃಖದೊಳಗೆ,
ಗಂಧವನದ ವನದೇವಿ! ನೀಡು ನಮ್ಮವರ ನನ್ನ ಬಳಿಗೆ.
ಓ ಪೃಥ್ವಿಮಾತೆ! ಓ ದೈವ! ಶಿವಶಿವಾ!'' ದೈವಭಿಕ್ಷೆ ಬೇಡಿ,
ಮಹಾಶ್ವೇತೆ ಹಲುಬಿದಳು ಕುಳಿತು ಕಣ್ಣೀರು ಸುರಿಸಿ ನೋಡಿ ॥೯೭॥

ಮಹಾಶ್ವೇತೆ ಹಲುಬಿರಲು ಸುರಿಸಿ ಕಣ್ಣೀರನಿನಿಯಗಾಗಿ,
ಕಪಿಂಜಲನು ಬಳಿಸಾರಿ ನಿಂತು ಕನಿಕರಿಸಿ ಕಂಡು ಬಾಗಿ.
ದೇವಿ ದುಃಖ ಸಂತವಿಸು ನಿನ್ನ ದುರ್ದೈವ ನಮ್ಮದಿಂದು,
ಹೂವಿಗಾಗಿ ಹಾರೈಸಿಬಂದವರ ಸಾವು ಕರೆಯಿತಿಂದು ॥೯೮॥

ಮಹಾಶ್ವೇತೆ ದೇವರ್ಷಿಗಾಗಿ ಹಲುಬಿರಲು ಬಳಿಗೆ ಬಂದು
ಚಂದ್ರಮಂಡಲದ ಯಕ್ಷನೊಬ್ಬ ಪ್ರತ್ಯಕ್ಷನಾಗಿ ನಿಂದು,
ದೇವಮುನಿಯ ಶವವೆತ್ತಿಕೊಂಡು ಸಂತೈಸಿ ನುಡಿದು ಹಾರಿ,
ಮಾಯವಾಗಿ ಮರಳಿದನು ''ಮುಂದಕಿದೆ ಮಿಲನ''ವೆಂದು ಸಾರಿ ॥೯೯॥

ಮೆಲ್ಲನೆದ್ದು ಸಾವರಿಸಿಕೊಂಡು ಕಣ್ಣೀರಕೋಡಿಯೊರಿಸಿ,
ಕಮಂಡಲವ ಕೈಗೆತ್ತಿಕೊಂಡು ವಲ್ಕಲದ ಬಟ್ಟೆ ಧರಿಸಿ.
''ಅಕ್ಷಮಾಲೆ ನನಗಿರಲಿ ಬರಲಿ ವಲ್ಕಲದ ಭೋಗ''ವೆಂದು,
ಜನ್ಮ ಜನ್ಮಗಳ ಮಿಲನಕಾಗಿ ಹಾರೈಸಿ ಕುಳಿತಳಂದು ॥೧೦೦॥

# ೯. ಭಗವಂತನು ನೀರೆರೆದನು

ಹಸಿರು ಹಾಸಿದಂಥ ಬಯಲು ನಡುವೆ ನಿಂತ ಗುಡಿಸಲು
ಕನಕದಾಸ ಧ್ಯಾನಲೀನ ಹೃದಯವೀಣೆ ನುಡಿಸಲು
ಮಧುರಗೀತ ವನ ಪುನೀತಗೊಳಿಸಿ ಸುತ್ತ ಮೊಳಗಿತು
ಮಣ್ಣಿನ ಕಿರಿಹಣತೆಯಲ್ಲಿ ಪರಂಜ್ಯೋತಿ ಬೆಳಗಿತು
ಮರಗಳೆಲ್ಲ ಹೂಬಟ್ಟಲು ತೆರೆದು ಕರೆದು ನಿಂದವು
ನಿರಂಜನರ ಮಂದಾನಿಲ ಧ್ಯಾನ ದೇಹಿಯೆಂದವು
ಧ್ಯಾನಲೀನ ಕನಕದಾಸ ನಲಿದಿರೆ ಮನದಲ್ಲಿ
ಭಗವಂತನು ನೀರೆರೆದನು ತುಳಸೀವನದಲ್ಲಿ ೧

ಹೊಳೆಯುತಿರುವ ಸ್ವರ್ಣಮುಕುಟ ನಡುವೆ ನೀಲ ನವಿಲುಗರಿ
ಪೀತಾಂಬರಧಾರಿ ಬರಲು ಶ್ಯಾಮವರ್ಣ ಶ್ರೀಹರಿ
ಶಂಖಚಕ್ರಗದಾಪದ್ಮ ಚಾರುಕರ್ಣ ಕುಂಡಲ
ಮೈತಳೆಯಿತು ಪರಂಜ್ಯೋತಿ ತುಳುಕಿ ಸಪ್ತಮಂಡಲ
ತೆರೆದ ಹೃದಯಕಮಲವರಳಿ ಗಂಧಪೀಠ ಕೊಟ್ಟಿತು
ಧ್ಯಾನಲೀನ ಕನಕದಾಸ ನಲಿದಿರೆ ಮನದಲ್ಲಿ
ಭಗವಂತನು ನೀರೆರೆದನು ತುಳಸೀವನದಲ್ಲಿ ೨

ಹಿಡಿದ ಸುದರ್ಶನವು ತನ್ನ ಸುತ್ತು ತಾನೆ ತಿರುಗಿತು
ಸ್ವರ್ಣ ಗದಾದಂಡ ಹಸಿರು ಹುಲ್ಲು ಶಯ್ಯೆಗೊರಗಿತು
ಸತ್ಯಶ್ವೇತ ಸುಳಿಯ ಹೊಡೆದ ಪಾಂಚಜನ್ಯ ಬೆಳಗಿತು
ನಭಗಂಭೀರ ವನಸಮೀರವಾಣಿಯಾಗಿ ಮೊಳಗಿತು
ದಲವ ತರುವ ಭಕ್ತವನಕೆ ಜಲವ ತರುವ ಪ್ರೀತಿಯು
ಹೂವು ಕೊಂಡು ಹಣ್ಣು ಕೊಡುವೆನೆಂಬ ಪರಂಜ್ಯೋತಿಯು
ಧ್ಯಾನಲೀನ ಕನಕದಾಸ ನಲಿದಿರೆ ಮನದಲ್ಲಿ
ಭಗವಂತನು ನೀರೆರೆದನು ತುಲಸೀವನದಲ್ಲಿ ೩

ಮಠದ ಪೌಳಿಯಲ್ಲಿ ನಿಂತು ವಾದಿರಾಜಯತಿವರ
ನೋಡುತಿರಲು ಕನಕ ವನದಿ ಸುಳಿಯುವ ಪೀತಾಂಬರ
ಹಿಡಿದ ಮಣ್ಣು ಮಡಿಕೆ ಸ್ವರ್ಣಕುಂಭ. ಜಲವ ಸುರಿಯಿತು
ತುಳಸೀವನ ತಳಿರನೊಡೆದು ಚೆಲುವ ಚೆಲ್ಲವರಿಯಿತು
ವಾದಿರಾಜಯತಿಯು ಕನಕನದಾಸರೆಡೆಗೆ ಬಂದರು
''ಗುಡಿಸಲದೊಳಗಿರುವ ಬೆಳಕು ಗುಡಿಯೊಳಿಲ್ಲ''ವೆಂದರು ೪

## ೧೦. ಕುಬ್ಜಾಂಗನಾ

ಭಗವದ್ಭಕ್ತನ ರಥವಿಳಿದು
ಮಧುರೆಯ ಮಂಗಲಪಥಗಳ ತುಳಿದು
ಬಂದಿರುವರು ಬಲರಾಮ ಯಶೋದಾ
ನಂದನ-ನಂದವ್ರಜ ಬೃಂದಾವನ
ಗೋ ಗೋಪಾಲಕ ಗೋಪೀಜನಮನ
ವಿರಹ ವ್ಯಾಕುಲ ವಿಹ್ವಲಗೊಳಿಸಿ
ಕಾಣುವ ಕಣ್ಣಿಗೆ ಕಂಗೊಳಿಸಿ
ಜಾಂಬೂನದ ರಮ್ಯಾಂಬರವುಟ್ಟು
ಸುವರ್ಣ ಮುಕುಟವ ತಲೆಗಿಟ್ಟು
ದಿಟ್ಟಿಸಿ ನಡೆದನು ಬಲರಾಮ
ಕೋಟಿ ಚಂದ್ರಮರ ಕೋಮಲ
ಶೀತಲ ಕಳೆಯಂತೆ
ಚೆಲುವಿನ ಚೆಲುವೇ ಮೈತಳೆದಂತೆ
ಅರಿಷಿಣ ಮಂಗಲ ವಸನವನುಟ್ಟು
ನವಿಲು ತುರಾಯಿ ಕಿರೀಟವನಿಟ್ಟು
ಕಮಲವದನ ಕಮಲಾಕ್ಷ ಶ್ರೀಧರ
ಸಂಕರ್ಷಣ ಶ್ರೀ ಹರಿ ಮುರುಲೀಧರ
ಜೊತೆ ನಡೆದನು ಮೇಘಶ್ಯಾಮ
ಮನೆ ಮಂದಿರ ಮಾಂದಳಿರಿನ ತೋರಣ
ಉಪವನಗಳ ಕಮ್ಮಲರಿನ ಕಾವಣ
ನೋಡುತ ನಗರದಿ ನಡೆದಿರಲು
ಭಗವದ್ರೂಪ ಸುದರ್ಶನ ಮಾತ್ರಕೆ
ಮಧುರೆಯ ಹೃದಯಗಳರಳಿದವು :
ತಲೆ ಬಾಗಿಸಿ ಕೈಜೋಡಿಸಿ
''ಓಂ ನಮೋ ಭಗವತೇ ವಾಸುದೇವಾಯ''
ಎಂದು ನರಳಿದವು ೧

೨

ನುಡಿದನು ಮಾಧವ ಮೇಘಶ್ಯಾಮ
"ಕೇಳಿಸಿತೇ ಬಲರಾಮ
ಮಧುರೆಯ ಮನೆಗಳ ನರಳಿಕೆಯು?
ಕಾಲನೇಮಿಯೀ ಕಂಸನ ದರ್ಪಕೆ
ಆಸುರವಿಷದಕಾರದ ಸರ್ಪಕೆ
ಹೆಡೆ ಜಡೆಗಟ್ಟಿವೆ ಫೂತ್ಕರಿಸಿ.
ಬಾಗಿಲ ತಲೆಗಳ ತೊತ್ತುಳಿದಾಟಕೆ
ತಾಮಸ ಸಿಂಹಾಸನದುರಿದಾಟಕೆ
ದುರ್ಬಲವಾಗಿದೆ ಕೆರಳಿಕೆಯು
ನೆನಪಿದೆಯೆ ಕಾಲಂದಿಯ ಮಡುವು?" ೨

೩

ಒಮ್ಮಿಂದೊಮ್ಮೆಲೆ ಬೀದಿಯ ನಡುವೆ
ಪಾಟಲ ವರ್ಣದ ವಸನವನುಟ್ಟು
ಗಿಳಿಹಸಿರಿನ ಮೇಲುದವನೆ ತೊಟ್ಟು
ಶ್ರೀಗಂಧದ ಹೊಂಬಟ್ಟಲು ಹಿಡಿದು
ಮೆ... ಲ್ಲ... ಗೆ... ಮೆ... ಲ್ಲ... ಗೆ... ನಡೆದು
ಕಮಲಾನನೆ ಕುಬ್ಜಾಂಗನೆ ಬರಲು
ಮಣಿಸಿದೆ ಜನ್ಮಾಂತರಗಳ ವಿಯ ವಿಕಾರ
ಸ್ತ್ರೈರ್ರ್ರಿಯ ಕೋಮಲ ಸುಕುಮಾರ
ಬಾಗಿದ, ಬೆನ್ನು ತ್ರಿವಕ್ರಿಯ ರೂಪ
ಹೊರಲಾರದೆ ಹೊತ್ತಿದೆ ದೈವದ ಶಾಪ
ಪರಮಾನಂದ ಮುಕುಂದನ ಕಂಡು
ದಿಟ್ಟಿಸಿ ನೋಡುತ ನಿಂತಲ್ಲಿಯೆ ನಿಂತಿರಲು
ಪ್ರಕೃತಿಯ ದಿಗ್ಬಂಧನಗಳ ಮರೆಗೆ
ಪಲ್ಲಟಿಸುವ ಸುಖದುಃಖದ ತೆರೆಗೆ

ದೈವದ ದಾರುಣ ಸೆರೆಗೆ
ಕಳವಳಿಸುವ ಮಾನವ ಜೀವನದಾಕ್ರಂದನದಂತೆ
ಮೂಕವೇದನೆಗೆ ಮಹಾಪೂರ ಬಂದಂತೆ
ಕುಬ್ಜೆಯು ದಳದಳದಳ ಕಣ್ಣೀರನು ಸುರಿಸಿರಲು
ಭಗವಂತನ ಮನ ಕರಗಿರಲು
ದೀನಾಕ್ಷಿಯ ಕಣ್ಣೀರುಗಳಿಳಿದು
ಪತಿತೋದ್ಧಾರನ ಚರಣಕಮಲಗಳ ತೊಳೆದು
ಕನಿಕರವಲಯದ ಕಂಬನಿಯುರುಳಿದವು
ಭಗವಂತನ ಚರಣಾರ್ಪಿತವಾಗಿ
ಕಳವಳಿಸುತ ಬಿಡುಗಡೆಗಾಗಿ
''ಓ ನಮೋ ಭಗವತೇ ವಾಸುದೇವಾಯ''
ಎಂದು ನರಳಿದವು ೩.

ಕರುಣಾಕರನನು ಕಂಪಿಸಿ ನುಡಿದನು :
''ಹೇ ದೀನಾಕ್ಷಿಯೆ ಚಂದನಕನ್ನೆಯೆ
ನೀನಾರಲ್ಲಿಗೆ ನಡೆದಿರುವೆ?
ಶ್ರೀಗಂಧದ ಹೊಂಬಟ್ಟಲು ಕೈಯಲಿ ನೀ
ನೇತಕೆ ಹಿಡಿದಿರುವೆ?''
ಚಂದ್ರಾನನೆ ಸೈರಂಧ್ರಿಯು ನುಡಿದಳು :
''ಕುಬ್ಜಾಂಗನೆ ನಾ ಕಂಸನ ಚಂದನ
ದೂಳಿಗದೊಳಗಿಹೆನು
ವಿಷವಡವಾಗ್ನಿಯ ದೈತ್ಯಶರೀರಕೆ
ಚಂದನ ಲೇಪನ ಫಲವೇನು?'' ೪

ಭಗವಂತನ ಬಳಿಸಾರುತ ನುಡಿದಳು
''ಪರಿಗ್ರಹಿಸಿರೀ ಶ್ರೀಗಂಧ''
ವೆನ್ನುತ ಹೊಂಬಟ್ಟಲು ಭಗವಂತನ ಕೈಗಿರಿಸಿ
''ಕೇಶವ ನಾರಾಯಣ ಗೋವಿಂದ
ಮಾಧವ ಮೇಘಶ್ಯಾಮ ಮುಕುಂದ

ಮೋಹನ ಪುರುಷೋತ್ತಮ ಅರವಿಂದ
ಗೋ ಗೋಪಾಲಕ ಪರಮಾನಂದ
ಗೋವರ್ಧನ ಗಿರಿಧಾರಿ ಮುರಾರಿ
ವನಮಾಲಾ ಪೀತಾಂಬರಧಾರಿ
ಕಮಲವದನ ಕಮಲಾಕ್ಷ ಶ್ರೀಧರ
ಸಂಕರ್ಷಣ ಶ್ರೀಹರಿ ಮುರಲೀಧರ
ನಾರಾಯಣ ಮಧುಸೂದನ ಮೋಹನ
ವಾಸುದೇವ ಪ್ರದ್ಯುಮ್ನ ಜನಾರ್ದನ
ನಮೋ ನಮೋ ಹೇ ಚಂದ್ರ ಶತಾನನ
ನಮೋ ನಮೋ ನಿಖಿಲಾತ್ಮ ನಿರಂಜನ''
ಧ್ಯಾನಕೆ ಸೋಲುವ ದೇವರ ಸ್ಮರಿಸುತ
ಲೇಪಿಸಿದಳು ಶ್ರೀಗಂಧವನು.
ಆನಂದದ ಬುದ್ಬುದಗಳ ತೆರೆಸಿ
ಹೃಷಿಕೇಶ ನುಡಿದನು ಕನಿಕರಿಸಿ
''ಕಳವಳಿಸದಿರೇ ಕುಬ್ಜಾಂಗನೆ
ನಾ ಬಂದುದೆ ಬಿಡುಗಡೆಗಾಗಿ'' ೫

''ಶ್ರೀಗಂಧಕೆ ಮನಸೋತಿಹೆನೆಂದು
ಪ್ರತಿಫಲವಿದೆಕೋ ಬಿನ್ನಹ'' ಕೆಂದು
ಮುರಲೀಧರನನು ಕಂಪಿಸಿ ನುಡಿದನು
ಆಲಂಗಿಸಿದನು ಕುಬ್ಜಾಂಗನೆಯನು
ಬಿಡುಗಡೆಯಿಂದ ಸಮಾಗಮವುಂಟೆ?
ತ್ರಿವಿಕ್ರಮನ ಕಾರುಣ್ಯದ ಸೋಂಕಿಗೆ
ಅವಳ ತ್ರಿವಕ್ರತೆಯಡಗಿತ್ತು
ಅಪ್ಸರೆಯಾದಳು
ಕುಬ್ಜೆಯು ನುಡಿದಳು :
''ಗೋಪಿಯಾಗಿ ಶ್ರೀಗಂಧವನಿತ್ತನು
ರಾಸಕ್ರೀಡೆಯು ನಮಗೆಂದು?'' ೬

## ೧೧. ಕಂಡಿರೇನು ಕಂದನ

"ಅಮ್ಮ ನಿಮ್ಮ ಮನೆಗಳಲ್ಲಿ
ಕಂಡಿರೇನು ಕಂದನ?"

ಗೋಪಿ ಮ್ಲಾನವದನೆಯಾಗಿ
ನಂದಗೋಕುಲದಲಿ ಕೂಗಿ
ಹುಡುಕಿದಳು ಮುಕುಂದನ.

ಜಾವದಲ್ಲಿ ಹೂವಿನಲ್ಲಿ
ಅಮೃತಬಿಂದು ಮೂಡಿದಾಗ
ಪಾರಿಜಾತ ವಾರಿಜಾತ
ದಲ್ಲಿ ದುಂಬಿ ಹಾಡಿದಾಗ
ತಳಿರ ತೊಂಗಲಲ್ಲಿ ಕೂಗಿ
ಉಷೆಯಲಂಪಿನಲ್ಲಿ ಕೂಗಿ
ಗಾಳಿ ತಂಪು ತೀಡಿದಾಗ
ಹಸುಗಳೆದ್ದು ಹಸಿರ ಬಯಸಿ
ಗುಡ್ಡದತ್ತ ನೋಡಿದಾಗ
ಕೈಯಲಿ ಕಡಗೋಲು ಹಗ್ಗ
ಹಿಡಿದು ಮಾಯವಾದನು
ನನ್ನ ಮುದ್ದು ಕಂದ ಕೃಷ್ಣ
ಎಲ್ಲೊ ಏನೋ ಹೋದನು.

ಹಡಗು ಹತ್ತಿ ಬಂದ ಕೃಷ್ಣ
ಉಡುಪಿಯಲ್ಲೆ ಗೋಕುಲ
ಅಲ್ಲಿ ಮಾತ್ರ ಹುಡುಕಿ ಹುಡುಕಿ
ಮಗುವು ಕಾಣನೆಂದು ಮಿಡುಕಿ

ತಾಯಿ ತುಂಬ ವ್ಯಾಕುಲ.
''ಅಮ್ಮ ನಿಮ್ಮ ಮನೆಗಳಲ್ಲಿ
ಕಂಡಿರೇನು ಕಂದನ?''

ಗೋಪಿ ಮ್ಲಾನ ವದನೆಯಾಗಿ
ನಂದಗೋಕುಲದಲಿ ಕೂಗಿ
ಹುಡುಕಿದಳು ಮುಕುಂದನ.

## ೧೨. ಬುದ್ಧದೇವ

### ೧

''ಬುದ್ಧಮ್ ಶರಣಮ್ ಗಚ್ಛಾಮಿ;
ಸಂಘಮ್ ಶರಣಮ್ ಗಚ್ಛಾಮಿ;
ಧರ್ಮಮ್ ಶರಣಮ್ ಗಚ್ಛಾಮಿ.''
ಬೆಳುದಿಂಗಳಿನಿರುಳಿನಲ್ಲಿ,
ವಿರಹ ವೀಣೆ ಕೆರಳಿದಲ್ಲಿ,
ಸ್ವಪ್ನಮಾಯೆಯರಳಿದಲ್ಲಿ,
ಸೃಷ್ಟಿಯೊಡಲ ಭಾರ ಹೊತ್ತು,
ಭೂಮಿ ತನ್ನ ಸುತ್ತುಮುತ್ತು,
ಕಡಲ ವಿರಹ ಮೊರೆಯುತಿತ್ತು.
ಚಂದ್ರಶಿಲೆಗಳೊಸರುವಲ್ಲಿ,
ಇಂದ್ರಗೋಪರುಸಿರುವಲ್ಲಿ,
ಗಂಧವನದ ಹಸಿರಿನಲ್ಲಿ,
ಹಾಲುಹೊನಲು ಹರಿಯುತಿತ್ತು.
ನದಿಯ ತೆರೆಗಳೊಂದಕೊಂದು,
ಮಳಲದಂಡೆಗೋಡಿಬಂದು,
ಚಂದ್ರಕಿರಣದಮೃತ ಮಿಂದು,
ಪದ್ಮಪಟಲ ಮೆರೆಯುತಿತ್ತು.
ಕೋವಿದಾರ ಮರದ ಸಾಲು,
ಕುಡಿಯುತಿರಲು ಮುಗಿಲ ಹಾಲು,
ತೇನೆಹಕ್ಕಿ ತನ್ನ ಪಾಲು,
ಬೇಡಲು ಹಾಽತೊರೆಯುತಿತ್ತು.
ರಜತಗಿರಿಯನೇರಿ ಹೋಗಿ,
ಮಲಯವಧುವಿನೊಲವಿಗಾಗಿ,
ಚಂದನಗಳ ಚೆಲುವೆಗಾಗಿ,

ಗಾಳಿ ಹಲುಬಿ ಕರೆಯುತಿತ್ತು.
ಇರುಳಿನಲರಪಟಲವರಳಿ,
ಹೃದಯವಿರಹ ಕಂಪು ಕೆರಳಿ,
ಬಳ್ಳಿಶಯ್ಯೆಯಲ್ಲಿ ಹೊರಳಿ,
ಮೊಗ್ಗೆ ಕಣ್ಣು ತೆರೆಯುತಿತ್ತು.
ಯೋಗಮುದ್ರೆ ಮೂಡಿದಲ್ಲಿ
ನೆರೆಯ ದಟ್ಟ ಕಾಡಿನಲ್ಲಿ
ಬೆಳೆದ ಗಿಡದ ಗೂಡಿನಲ್ಲಿ
ತಾಯಿಹಕ್ಕಿ ರೆಕ್ಕೆ ತೆರೆದು,
ಬಳಿಗೆ ತನ್ನ ಮರಿಯ ಕರೆದು,
ಆದಕೆ ಲಾಲಿಯೊರೆಯುತಿತ್ತು.
ಕೇಳಿ ದೂರ ಗಾಳಿಗೊಳಲು,
ಕುಣಿಯುತಿರಲು ಬೆಳಕು ನೆಳಲು,
ಹರಿಣವನದ ಹಸಿರು ಬಯಲು,
ತೊಡೆದು ಚಂದ್ರ-ಚಂದನ,
ತಾಯಿ ಜಿಂಕೆ ಮಮತೆವೆರಸಿ,
ನಾಲಗೆಯಲಿ ಜೇನ ಸುರಿಸಿ,
ಕೊರಳಮೇಲೆ ಕೊರಳನಿರಿಸಿ,
ಮೂಸುತಿತ್ತು ಕಂದನ.
ಕಣ್ಣು ತೆರೆದ ಮುಗಿಲ ಚಿಕ್ಕೆ,
ಕಂಡಿತಿವರ ಕರುಳತೆಕ್ಕೆ,
ತಾಯ ಮಾಯ ಬಂಧನ.
ಜೊನ್ನವೀಣೆ ಮಿಡಿಯುತಿತ್ತು,
ಯಕ್ಷವಾಣಿ ನುಡಿಯುತಿತ್ತು,
ನೆಲಮುಗಿಲಿನ ಸ್ಪಂದನ.

೨

ರೋಹಿಣೀ ತಟಾಕದಲ್ಲಿ
ಬೆಳುದಿಂಗಳವಸನವುಟ್ಟು

ಮಹಾಮೌನ ಮುಕುಟವಿಟ್ಟು
ರೌಪ್ಯಕವಚ ಮೈಗೆ ತೊಟ್ಟು
ಕಪಿಲವಸ್ತು ನಿಂದಿತು.
ಮುಗಿಲ ಹಾಲಿನಂಗಳದಲಿ,
ತುಳುಕಿದ ಬೆಳುದಿಂಗಳಿನಲಿ,
ಗುಡಿಗೋಪುರ ಮಿಂದಿತು.
ನಿದ್ರೆ ಮಾಯೆಗೋಲು ಹಿಡಿದು,
ರಾಜಬೀದಿಗಳನು ನಡೆದು,
ಸ್ವಪ್ನ ಮಧುರವೀಣೆ ಮಿಡಿದು,
ಶಾಕ್ಯನಾಡ ಕಂಗಳಲ್ಲಿ,
ಸಮ್ಮೋಹನವೆಂದಿತು.
ಮನೆಮನಗಳ ಕಣ್ಣು ಮುಚ್ಚಿ
ಆಸೆಗೆರಡು ಬಣ್ಣ ಹಚ್ಚಿ
ನವನವೀನ ಪರೆಯ ಬಿಚ್ಚಿ
ನಾಡ ಬಳಸಿ ಬಂದಿತು.
ಹಗಲು ಬಾಳ ಬವರ ಸೋತು,
ಆಸೆ ನಿರಾಸೆಯಲಿ ಹೂತು.
ಜನನ ಮರಣದೆಳೆಗೆ ಜೋತು,
ನಿಂತ ಜೀವ ನೊಂದಿತು.
ಹಾಲು ಬೆಳಕು ತೆರೆಯನೆಳೆದು,
ತುಟಿಗೆ ಸ್ವಪ್ನ ಜೇನು ಬಳೆದು,
ಮಂತ್ರಮುಗ್ಧ ಮನವ ಸೆಳೆದು,
ಜಗತ್‌ಶೂನ್ಯ ಬಾನನಿಳಿದು,
ಬಂಧನವನೆ ತಂದಿತು.
ದುಃಖದ ತಿರುಗಣೆಗೆ ಸುಳಿದು,
ಅಂಧಂತಮದಾಳಕಿಳಿದು,
ಜೀವಕಮಲ ಕಂದಿತು.
ಬೆಳ್ಳಿಯೊಪ್ಪ ತೊಟ್ಟ ಬೀದಿ,
ಹೊಳೆದು ಹರಿದವೆಷ್ಟೊ ಹಾದಿ,

ಸಾಲು ಸಾವಿರಾರು ಮರ.
ಒಂದೊ ಎರಡೊ ಹಕ್ಕಿ ಸ್ವರ,
ತಾಯಿ ಕಪಿಲೆಗಾಗಿ ಕನಲಿ,
'ಅಂಬೆ'ಯೆಂದೊರಲುತಿತ್ತು.
ತಾಯ ನೆನೆದು ಕರೆಯುತಿತ್ತು,
ಕಪಿಲೆಯ ಹಸುವೊಂದು.
ಶಾಕ್ಯನಾಡ ರಾಜಧಾನಿ,
ಇರುಳು ಮಹಾ ಮೌನಧ್ಯಾನಿ-
ಯಂತೆ ನಿಂತು ಮೆರೆಯುತಿತ್ತು,
ಕಪಿಲವಸ್ತುವಂದು.
ಎಲ್ಲೆಲ್ಲೂ ಮರ್ತ್ಯಲೋಕ,
ಬಂಧನದಲಿ ಸಿಲುಕಿ ಮೂಕ-
ವೇದನೆಯಲಿ ನಿತ್ಯಶೋಕ,
ಗಾಢನಿದ್ರೆ ಪಡೆಯಿತು.
ನೆನೆದು ಮುಗಿಲ ಮುಕ್ತಿಹೂವ,
ಬಂಧನದಲಿ ನೊಂದ ಜೀವ,
ನೆಲ ಮುಗಿಲಿಗೆ ನುಡಿಯಿತು :
''ದುಃಖಕೆ ಕೊನೆಯೆಂದು?''

೩

ಬುದ್ಧದೇವ ಸೆರೆಮನೆಯಲಿ,
ಶುದ್ಧೋದನನರಮನೆಯಲಿ !
ಇರುಳ ಮೌನವನ್ನೆ ಸೀಳಿ,
ಸಪ್ತಸ್ವರ ಲೋಕವಾಳಿ,
ದಂಡಿಗೆ ಝೇಂಕರಿಸುತಿರಲು,
ನಾದದ ಹೊಳೆ ಹರಿಸುತಿರಲು,
ವೀಣೆ ಜೇನು ಸುರಿಸುತಿರಲು,
ಸ್ವರತರಂಗದುನ್ಮದ!
ರಾಗ ರಾಸಲೀಲೆಯಾಡಿ,
ಸ್ವರಾಲಾಪ ತಾಳಗೂಡಿ,

ಮೃದುಮೃದಂಗದುದ್ಭುದ
ನಾದನ ನಿಸ್ವನ ಬಲೆ ಹೆಣೆದಿರಲು,
ನೂಪುರ ಪೈಜಣ ಝಣಝಣೆಸಿರಲು,
ಸ್ವರಲೋಕದ ತೆರೆ ದುಮುದುಮಿಸಿರಲು,
ಝೇಂಕರಿಸಿತು ಹೂದಂಡಿಗೆ ಕೊರಲು,
ಜೇನಿನ ಹೊಳೆಯನು ಮೀಟಲು ಬೆರಲು.
ವಿಧವಿಧವರ್ಣಗಳುಡಿಗೆಯನುಟ್ಟು
ಕಾಮನಬಿಲ್ಲಿನ ತೊಡಿಗೆಯ ತೊಟ್ಟು
ಹೂವಿನ ಬಾಣಕೆ ಗರಿಗರಿ ಮೂಡಿ,
ಕಣ್ಣಿಗೆ ಭೋಗದ ಕೆಚ್ಚನೆ ಹೂಡಿ,
ಯೋಗದ್ರುಮದಲಿ ಬರಸಿಡಿಲಾಡಿ
ಚಂದ್ರನ ಬಿಂಬದ ಚೆಲುವನೆ ತುಂಬಿದ,
ರಾಗದ ಭೋಗದ ಮದವನೆ ತುಂಬಿದ,
ಕಾಮದ ಕಂಪಿನ ಹೂನಗೆಯರಳಿಸಿ,
ಭೋಗದ ಕುಲುಮೆಯ ಕೆಂಡವನರಳಿಸಿ,
ಬಣ್ಣದ ಕೋಲ್ಮಿಂಚಿನ ಗೆರೆ ಕೊರೆದು,
ಬಗೆಯೊಳಸಂಚಿನ ನಗೆಮಿಂಚೆರೆದು,
ಮೃದುಪದಗತಿಯಲಿ ಮೆಲ್ಲಗೆ ಮೊರೆದು,
ಮದನವಿಹಂಗಮ ರಂಗವ ತೆರೆದು,
ನೂಪುರಚರಣದ ಮಂಜುಳ ನಾದಕೆ,
ಭೋಗದ ಹೂವಿನ ರಾಗೋನ್ಮಾದಕೆ,
ನವಯೌವನೆಯರ ಮಧುರ ಸುಹಾಸ,
ಭೋಗಮಯೂರದ ನೃತ್ಯವಿಲಾಸ,
ಕನ್ನಿಕೆಯರು ಕುಣಿದಾಡಿರು.
ಕಣ್ಣಿಗೆ ಚೆಲುವಿನ ಬಣ್ಣದ ಹೊಳೆಯನೆ,
ಹರಿಸುವ ಲಾಸ್ಯವನಾಡಿದರು.
ಸಿದ್ಧಾರ್ಥನ ಮನ ಹೊರಳಿಸುವಂತೆ,
ಬುದ್ಧದೇವ ಮನ ಕೆರಳಿಸುವಂತೆ,
ತ್ಯಾಗದ ಶಿಖರವನುರುಳಿಸುವಂತೆ,

ಸುತ್ತೆಲ್ಲಾ ಸುಳಿದಾಡಿದರು.
ಕಣ್ಣ ಬಳಸಿ ಬರಲು ನಿದ್ರೆ,
ತಡವರಿಸಲು ಕಲಾಮುದ್ರೆ,
ಲಾಸ್ಯವಾಡಿ ದಣಿದ ಹೆಜ್ಜೆ
ಘುಲುಕುತಿರಲು ಮಂದ ಗೆಜ್ಜೆ
ಮಿಡಿದ ಬೆರಳು ತಡೆದು ಬರಲು,
ನುಡಿದ ಕೊರಲು ಮೌನವಿರಲು,
ಬುದ್ಧದೇವ ಪೀಠವಿಳಿದು,
ಬಂದು ನುಡಿದನವರಿಗಂದು :
"ಲಾಸ್ಯವಾಡಿ ದಣಿದ ಮುದ್ದು
ನವಿಲುಗಳೇ ಮಲಗಿರಿ."

೪

ಸಪ್ತಸ್ವರಗಳ ತರಂಗ,
ನಾದಲೋಕದಂತರಂಗ;
ಸೀಳಿ ಹೊಡೆದು ಸಾರುತಿತ್ತು,
ದುಃಖ ತನ್ನ ಡಂಗುರ.
ಸುಪ್ತಲೋಕದುಸಿರ ತೂಗಿ,
ಇರುಳ ಮರೆಗೆ ನಿಂತು ಕೂಗಿ,
ಬದುಕಿಗೆಲ್ಲ ಸಾರುತಿತ್ತು
ಜೀವಿತ ಕ್ಷಣಭಂಗುರ.
ಇಂದ್ರಶಿಲ್ಪ ಕೊರೆದ ಕನಸು,
ಸ್ತೂಪ ಕಟ್ಟುತಿರಲು ಮನಸು,
ಬುದ್ಧದೇವ ನಡೆದು ಬಂದು,
ಚಂದ್ರಶಾಲೆಯಲ್ಲಿ ನಿಂದು,
ಸುತ್ತಬಳಿಸಿ ನೋಡುತಿರಲು,
ತುಂಡು ಮೋಡ ಓಡುತಿರಲು,
ಭಿಕ್ಕುಗಣ ವಿಹಾರದಂತೆ,
ಬಯಲಿನಾಚೆಯಲ್ಲಿ ನಿಂತ,

ರಜತಗಿರಿಯ ಕಂಡನು.
ನಿರ್ವಾಣದ ಜೇನನರಸಿ,
ಭೋಗದ ಕರೆ ನಿರಾಕರಿಸಿ,
ಮೋಹದ ಮೇಲುದವ ತೆರೆಸಿ,
ಬೆಳಕಿನನ್ನವುಂಡನು.
ಮರ್ತ್ಯವೊಂದಪಾರ ಕಡಲು,
ಜನನ ಮರಣವಿದರ ಮಡಲು,
ಇಲ್ಲಿ ಪಯಣ ನಡೆದ ಜೀವ,
ನೆನೆದುಕೊಂಡು ಮುಕ್ತಿಹೂವ,
ನಡೆಯುತಿರಲು ಮಹಾಯಾತ್ರೆ,
ಪಯಣ ಕೊನೆಯ ಮುಟ್ಟಬಹುದೆ?
ತಡಿಗೆ ಬಂದು ತಟ್ಟಬಹುದೆ?
ಮಹಾಶಾಂತಿ ಹುಟ್ಟಬಹುದೆ?
ನರಳಿ ನಡೆದ ದುಃಖಪಾತ್ರೆ,
ಜೀವ–ಕೇಳಿ ಕೂಗಲು,
ಮಹಾಕರುಣೆ ಬುದ್ಧದೇವ
ಬಂಧದಾಚೆ ಕಾಣಲೆಂದು,
ಸಂಸಾರವ ಮಾಣಲೆಂದು,
ಅಂತಃಪುರದೊಳಗೆ ಬಂದು,
ಕನ್ನೆವಾಡ ನೋಡಲು,
ಲಾಸ್ಯವಾಡಿ ದಣಿದ ಹೆಣ್ಣು
ನಿದ್ರೆ ತೆರೆಯನೆಳೆದ ಕಣ್ಣು
ಮುಚ್ಚಿ ಮಲಗಿಕೊಳ್ಳಲು.
ಮೆಲ್ಲಮೆಲ್ಲನಡಿಯನಿಟ್ಟು
ನಿರ್ವಾಣದ ಪಣವ ತೊಟ್ಟು
ಸಿದ್ಧಾರ್ಥ ಕುಮಾರ ಬಂದು,
ನೋಡೆ ಹೊಸ್ತಿಲಲ್ಲಿ ನಿಂದು,
ರಾಜಸತಿ ಯಶೋಧರೆ–
ಪವಡಿಸಿರಲು ಶಯ್ಯೆಯಲ್ಲಿ,

ರಾಹುಲನೆಡೆ ತೋಳ ಚೆಲ್ಲಿ,
ಕರುಣೆ ಕೈಯನೆತ್ತಿ ನಿಂದು,
ಅಭಯ ವಾಣಿ ನುಡಿಯಿತಂದು :
''ಬದ್ಧರಾಗಿ ಬಂದವರೇ,
ಬುದ್ಧರಾಗಿ ತೆರಳಿರಿ.''

೫

ವೈಶಾಖ ಶುಕ್ಲ ಪೂರ್ಣಿಮಾ.
ನಿರ್ವಾಣದ ಕಮಲವರಳಿ-
ದಂತೆ ಹೊಳೆವ ಚಂದ್ರಮ.
ಶಾಕ್ಯಕುಲದ ಕೀರ್ತಿವಲ್ಲಿ
ಬಳ್ಳಿವರೆದು ಕೊನರುವಲ್ಲಿ
ಬುದ್ಧದೇವ ನಡೆಯುವಲ್ಲಿ
ಮಣ್ಣು ಪುಣ್ಯ ಪಡೆಯುವಲ್ಲಿ
ಚರಣಕೆ ಹುಡಿ ಹೂವ ಚೆಲ್ಲಿ
ಮುಕ್ತಿ ಮುದ್ರೆ ಮೂಡುವಲ್ಲಿ
ರಾಜಬೀದಿ ಚಾಚಿತು.
ಮನದ ಕತ್ತಲೋಡುವಲ್ಲಿ
ಬೆಳಕು ಹಿಗ್ಗಿ ಹೀಚಿತು.
ಚಾರಣರೇ ಹಾಡುವಲ್ಲಿ
ಸಿದ್ಧಪುರುಷರಾಡುವಲ್ಲಿ
ದುಃಖ ಮರೆಯ ಮಾಚಿತು.
ನುಸುಳಿ ನಡೆದ ಮೂರು ನೆರಳು,
ಮುಂದೆ ಮುಂದುವರಿದವು.
ಬೆಳಕಿನ ಹೊಳೆ ಹರಿಯಲೆಂದು,
ತುಂಡು ಮೋಡ ಸರಿದವು.
ಸಿದ್ಧಿ ಪೂರ್ಣವಾಗಲೆಂದು,
ಬುದ್ಧದೇವನೊಡನೆ ಬಂದು,
ರಾಜಕುದುರೆ ಕಂಥಕ!

ಕೊನೆಯ ಸೇವೆ ಸಲ್ಲಲೆಂದು,
ಹಯವ ಹಿಡಿದ ಛಂದಕ!
ನಾಲ್ಕು ಹೆಜ್ಜೆ ನಡೆದು ಬರಲು,
ಅಲ್ಲಿ ದಾರಿ ಕವಲೊಡೆಯಲು,
ಛಂದಕ ಕಂಬನಿ ಮಿಡಿಯಲು,
ನುಡಿದು 'ಸ್ವಸ್ತಿ ವೃದ್ಧ ಜೀವ!'
ಹಯವನೇರಿ ಬುದ್ಧದೇವ,
ಅಭಯ ಮುದ್ರೆ ತಳೆಯಲು,
ಬಂಗಾರದ ರೆಕ್ಕೆ ಮೂಡಿ,
ಕಂಥಕ ನೆಲ ತುಳಿಯಲು :
ಬಯಲು ಕೊಳ್ಳ ಗಿರಿಯ ನೆಗೆದು,
ಹರಿಣ ವನದೊಳಿಳಿಯಲು,
ಸುತ್ತಲು ಸುಕುಮಾರ ರೂಪ,
ಹಿಡಿದು ಕನಿಸಿನಿಂದ್ರದೀಪ.
ಬೆಳಕು ಕಟ್ಟುತ್ತಿರಲು ಸ್ತೂಪ,
ಬುದ್ಧದೇವ ಪದ್ಮಪಾಣಿ,
ತಿಳಿವಿನೊಂದು ತೊಟ್ಟಿಲಲ್ಲಿ,
ನಿರ್ವಾಣದ ಬಟ್ಟಲಲ್ಲಿ,
ಬೋಧಿವೃಕ್ಷದಡಿಗೆ ಕುಳಿತು
ಕರುಣೆಯ ಸುಧೆಯುಂಡನು,
ತ್ಯಾಗ ಪ್ರೀತಿ–ಚಿಗಿತು ನಿಂತ,
ಸತ್ಯವೃಕ್ಷ ಕಂಡನು.
ಮೊಳಗುತಿರಲು ಬುದ್ಧವಾಣಿ,
ಜೀವರೆಕ್ಕೆ ಪಡೆಯುತಿತ್ತು,
'ಊರ್ಧ್ವ'ಗತಿಯ ನಡೆಯುತಿತ್ತು
ಬುದ್ಧಸೃಷ್ಟಿ ನುಡಿಯುತಿತ್ತು:
"ಬುದ್ಧಮ್ ಶರಣಮ್ ಗಚ್ಛಾಮಿ;
ಸಂಘಮ್ ಶರಣಮ್ ಗಚ್ಛಾಮಿ;
ಧರ್ಮಮ್ ಶರಣಮ್ ಗಚ್ಛಾಮಿ."

# ೧೩. ದೂರು

ಗೋಪಿಯರು:
"ಒಳ್ಳೆಯದೇನೆ ಇದು – ಯಶೋದೆ
ಒಳ್ಳೆಯದೇನೆ ಇದು?"

ಯಾರೂ ಇಲ್ಲದ ಹೊತ್ತಿಗೆ ಬರುವನು
ಹಾಲು ಮೊಸರು ಬೆಣ್ಣೆಗೆ
ಹಿಂಡುಹುಡುಗರನೆಲ್ಲ ಕೂಡಿಸಿ
ಕೊಂಡು ಒಬ್ಬರ ಮೇಲೆ ಒಬ್ಬರು
ಪುಂಡತನದಲಿ ಮೊಸರು ಬೆಣ್ಣೆಯ-
ನುಂಡು ಬೆಕ್ಕಿಗೆ ತಿನಿಸಿ ಹೋಗುವ. ೧

ಅಡಕಲಿನೊಳಗೇರಿಸಿ, ಇಟ್ಟಂಥ
ಮಡಕೆಯೊಡೆದು ಸೋರಿಸಿ
ಕೊಟ್ಟಿಗೆಯ ಹಸುಗಳಿಗೆ ಕೊರಳಿನ
ಕಟ್ಟು ಬಿಡಿಸಲು ಗೋವುಗಳಿಗಿರು
ವಷ್ಟು ಹಾಲನು ಕುಡಿಸಿ ನಮಗೊಂ
ದಿಷ್ಟು ಉಳಿಸದೆ ಕೆಡಿಸಿ ಬಿಡುವನು. ೨

ಗೋಪಿಯರ ಕಂಡರೆ ಕೊಡುವನು
ಎಲ್ಲೂ ಇಲ್ಲದ ತೊಂದರೆ
ನೀರಿಗಿಳಿದರೆ ನಾವು ಸ್ನಾನಕೆ
ಸೀರೆಗಳ ಕದ್ದೊಯ್ದು ಮರವನು
ಏರಿ ಕುಳಿತವ ಕೊಳಲನೂದುತ
ಬಾಲೆ ಕೈಮುಗಿಯೆಂದು ಕೇಳುವ. ೩

ಯಶೋದೆ :
''ಸುಮ್ಮನೆ ದೂರುವಿರೆ ಕಂದನ
ಸುಮ್ಮನೆ ದೂರುವಿರೆ
ಇಷ್ಟು ಹೊತ್ತಿನವರೆಗೆ ಹರಿಯನು
ಕಟ್ಟಿಹಾಕಿದೆ ವರಳುಕಲ್ಲಿಗೆ
ಬಿಟ್ಟು ಸರಿದಾಡಿಲ್ಲ ಕಂದನಿ
ಗಿಷ್ಟು ಮಾತುಗಳನ್ನು ಆಡುವ ೪

ಒಳ್ಳೆಯದೇನೆ ಇದು ಗೋಪಿಯರೆ
ಒಳ್ಳೆಯದೇನೆ ಇದು''

## ೧೪. ಪಯಣ

೧

ಬರ್ದಿಲಪಥವಿದ್ದು ಸುವರ್ಣ ರಥವಿದು, ಮುತ್ತಿನ ಮಂಟಪ ಕಂಬಗಳು.
ನೀಲಿಮರತ್ನದ ವಲ್ಲರಿಯಂಚಿಗೆ ಕೆತ್ತಿದ ಚಿನ್ನದ ಗೊಂಬೆಗಳು
ಪಾಟಲವರ್ಣದ ಪೀಠದ ಸುತ್ತಲು ಝಲ್ಲರಿಸಿದ ಹೂಮಾಲೆಗಳು
ಕಂಡರಿಸಿದ ಗ್ರಹಮಂಡಲದಂಚಿಗೆ ಕಾಂಚನ ತೋರಣದೋಲೆಗಳು
ಉದಯಾದ್ರಿಯ ರವಿಮಂಡಲ ರಾಗದ ಚಕ್ರಗಳೆಸೆದವು ಮಾಟದಲಿ
ಹೊಳೆಯಿತು ಪುಣ್ಯ ಶತಕ್ರತು ಸಿದ್ಧಿಯ ವರ್ತುಲವಿಂದ್ರ ಕಿರೀಟದಲಿ
ಬಿಳಿಗುದುರೆಯ ಕಡಿವಾಣವ ಸಡಿಲಿಸಿ ಮಾತಲಿ ಕುಳಿತನು ಮುಂಬದಿಗೆ
ತಾಮಸ ಗಿರಿಗಳ ಸೀಳುವ ತಾಪಸ ವಜ್ರಾಯುಧವಿರೆ ಹಿಂಬದಿಗೆ
ನರನೊಳಗಿನ ನಾರಾಯಣನುದಯಿಸಿ ನರಕಾಸುರನನು ಮೆಟ್ಟಿರಲಿ
ಆತ್ಮಜ್ಯೋತಿಗಳಾರತಿಯೆತ್ತಲು ಪರಂಜ್ಯೋತಿಪರ ಹುಟ್ಟಿರಲಿ

೨

ಬರ್ದಿಲಪಥವಿದು ಸುವರ್ಣರಥವಿದು ದೇವೇಂದ್ರನ ನವವಾಹನವು
ಕಾಂಚನಗೋಪುರಕೇತನದಡಿಯಲಿ ನಡೆದಿದೆ ಋಷಿಯಾವಾಹನವು
ಇಂದ್ರಿಯದರಮನೆ ಇಂದ್ರನ ಸೆರೆಮನೆ ವಜ್ರಾಯುಧ ಕೈಗಿಳಿದಿರಲಿ
ದಿಗ್ಬಂಧನಗಳ ಸಡಿಲಿಸಿ ಮಂಗಳ ಚೈತ್ಯಪುರುಷನೆಡೆ ಸುಳಿದಿರಲಿ
ಧವಲಗಿರಿಯ ಸುಕುಮಾರ ಸ್ವರೂಪಕೆ ಕೆಂಜೆಡೆಗಳು ಹೊಳೆಹೊಳೆದಂತೆ
ಶರದಾಕಾಶದ ರಾಜಹಂಸವರವಿಂದ ಪರಾಗದೊಳಿಳಿದಂತೆ
ತಾಪಸ ತೇಜೋಬಲದಾವಾಹನ ಮಂತ್ರಕೆ ಮೆಚ್ಚಿದನವತರಿಸಿ
ಇಂದ್ರನ ಸಂಗಡ ರಥದಲಿ ಕುಳಿತನು ಕುತ್ಸಿಕುಮಾರನು ಕನಿಕರಿಸಿ
ನರನೊಳಗಿನ ನಾರಾಯಣನುದಯಿಸಿ ನರಕಾಸುರನನು ಮೆಟ್ಟಿರಲಿ
ಆತ್ಮಜ್ಯೋತಿಗಳಾರತಿಯೆತ್ತಲು ಪರಂಜ್ಯೋತಿಪರ ಹುಟ್ಟಿರಲಿ

೩

ಮಾತಲಿ ಕಡಿವಾಣವೆಳೆದು ಚಮ್ಮಟಿಕೆಯ ಸೆಳೆಯಲು
ದೇವಪಯಣ ಪಥಕೆ ರಥವ ಬಿಳಿಗುದುರೆಗಳೆಳೆಯಲು

ಅಸುರರಾಕೆವಾಳರೆಲ್ಲ ಮೋಹರಿಸಲು ಕವಿದರು
ತಿಮಿರಕಡಲ ತೆರೆಗಳಂತೆ ಹೊಯ್ದು ಹೊಯ್ದು ತಿವಿದರು
ದೇವಪಯಣ ಕತ್ತರಿಸಲು ದೈತ್ಯರಡ್ಡ ಬಂದರು
ದೇವರಥವ ತತ್ತರಿಸಲು ಸಿಡಿಲು ಹೊಡೆದು ನಿಂದರು
ಅಗ್ನಿಮೇಘ ಪರ್ವತಗಳನೆಳೆದುರುಳಿಸಿ ತಂದರು
ಕುದಿವ ಲೋಹರಸವ ಸುರಿದು ಹಗೆಯ ಹೊಯ್ಕಿರೆಂದರು
ಇಂದ್ರನೆಳೆದು ವಜ್ರಾಯುಧ ಸುಡುವ ಸಿಡಿಲ ಹೊಡೆಯಲು
''ತೇಜಸ್ವಿನಾವತಮಸ್ತು'' ಕುತ್ಸಿವಾಣಿ ನುಡಿಯಲು

೪

ಕತ್ತಲ ಕತ್ತರಿಸಿತು ವಜ್ರಾಯುಧ ತತ್ತರಿಸಿತು ದಿತಿಸಂತಾನ
ಮಳಲಿನ ಪುತ್ಥಳಿಗಳು ಹುಡಿಯೊಡೆದವು ರಾಕ್ಷಸರಾದರು ಲಯಲೀನ
ಎಲ್ಲೆಲ್ಲೂ ಬೆಳಗಾಯಿತು ಮುಗಿಲಿನ ಬಣ್ಣದ ಮೋಡಗಳೋಡಿರಲು
ಬರ್ದಿಲ ಪಯಣದ ಗೆಲುವಿನ ಬೆಳಕನು ವ್ಯೋಮಕುಮಾರನು ನೋಡಿರಲು
ಊರ್ವಶಿ ರಂಭೆ ತಿಲೋತ್ತಮೆ ಮೇನಕೆ ಅಪ್ಸರ ಗೀತವ ಹಾಡಿರಲು
ನಂದನವನಮಂದಾರದ ಬನದಲಿ ಮಂದಾಕಿನಿ ಸುಳಿದಾಡಿರಲು
ನೆಲೆಯಿಲ್ಲದ ನಭನೀಲ ಪಟಾಂಗಣದಡಿಯಲಿ ಜೋತವು ಮಾಲೆಗಳು
ತಾರಾಮಂಡಲ ಸುವರ್ಣ ಸರಪಳಿಗಿಳಿದವು ದೀಪಜ್ವಾಲೆಗಳು
ಕುತ್ಸಕುಮಾರನ ನಾರುಡೆಜಡೆಗಳು ಮರೆಯಾದವು ಮಟಮಾಯದಲಿ
ರತ್ನ ಕಿರೀಟದ ಕುಂಡಲಹಾರದ ಕೇಯೂರದ ಸುರಛಾಯೆಯಲಿ
ಬರ್ದಿಲಪಥದಲಿ ಸುವರ್ಣರಥದಲಿ ಅಮರಾವತಿಯನು ಮುಟ್ಟಿರಲು
ದೇವೇಂದ್ರನ ಪ್ರತಿರೂಪದ ರೂಪವ ಕುತ್ಸಿಕುಮಾರನು ತೊಟ್ಟಿರಲು
ಸುರಪತಿಯಮಳರ ಕಾಣುತ ವಿಸ್ಮಿತಳಾದಳು ನಾಕದೊಳಿಂದ್ರಾಣಿ
ಸತ್ಯಸ್ವರೂಪವನರಿತಳು ಗುರುತಿಸಿ ಸಸ್ಮಿತಳಾದಳು ಸುರರಾಣಿ
ಬರ್ದಿಲಪಥದಲಿ ಜೀವನರಥದಲಿ ಮುತ್ತಿನ ಮಂಟಪ ಕಂಬಗಳು
ಪಯಣಕೆ ತೆರಳಿದ ಜೀವಗಳೆಲ್ಲಾ ದೇವರವೇ ಪ್ರತಿಬಿಂಬಗಳು
ನರನೊಳಗಿನ ನಾರಾಯಣನುದಯಿಸಿ ನರಕಾಸುರನು ಮೆಟ್ಟಿರಲಿ
ಆತ್ಮಜ್ಯೋತಿಗಳಾರತಿಯೆತ್ತಲು ಪರಂಜ್ಯೋತಿಪರ ಹುಟ್ಟಿರಲಿ.

# ೧೫. ಶ್ವೇತಕೇತು ದೇವರ್ಷಿ

ಉಷಾ ಸೂಕ್ತದೊಡನೆದ್ದು ಬಂದಿತೊ ಬಾನ ಬೆಳ್ಳಿ ಚಿಕ್ಕೆ
ದಿಗ್ದಿಗಂತಕ್ಕೂ ಸಡಿಲುತಿದ್ದಿತೊ ಇರುಳ ತೋಳ ತೆಕ್ಕೆ
ರವಿಯ ಮಿಸುನಿ ರಥವೇರಿ ಬಂದಿತೊ ಮುಗಿಲ ಮೂಡಲಕ್ಕೆ
ರೆಂಬೆರೆಂಬೆಗಳ ಋಷಿಗಳೆಲ್ಲ ಕೆದರಿದರು ತಮ್ಮ ರೆಕ್ಕೆ
ಶ್ವೇತಕೇತು ದೇವರ್ಷಿ ಬಂದ ಮಂದಾಕಿನೀ ತಟಕ್ಕೆ ೧

ದುಂಡುಮಲ್ಲಿಗೆಯ ಗೊಂಚಲಲ್ಲಿ ಕಿವಿಮಾತನೇನೋ ಹೇಳಿ
ಮಂದಗಂಧಗಾಯತ್ರಿ ಹಾಡಿ ಬಂದಿತ್ತು ತಂಪುಗಾಳಿ
ಚಕ್ರವಾಕ ಕಲಹಂಸ ನಲಿದು ನಡೆಸಿದುವು ನೀರ ಕೇಳಿ
ಚೆಲ್ಲುವರಿದು ಬೆಳಕೆಲ್ಲಕಡೆಗೆ ಪಲ್ಲವಿಸಿತಿರುಳು ಹೂಳಿ
ಶ್ವೇತಕೇತು ದೇವರ್ಷಿ ನಿಂತನಂಜುಳಿಯೊಳರ್ಘ್ಯತಾಳಿ ೨

ಬಣ್ಣ ಬಣ್ಣಗಳ ಕುಂಚವಿಡಿದು ನೆಲಮುಗಿಲ ಬಳಸಿ ಸುತ್ತು
ಛಂದ ಬಂಧ ಸ್ವಚ್ಛಂದ ಬ್ರಹ್ಮಲಿಪಿ ಚೆಲುವು ಬರೆಯುತಿತ್ತು
ನೀರ ಕಂಪು ನವಿರೆದ್ದು ನಕ್ಕಿತೋ ನದಿಯ ಸುತ್ತುಮುತ್ತು
ದಿನದ ದಿಬ್ಬಣದ ನಡುವೆ ನಿಂತು ಮರಿಜಿಂಕೆ ನೋಡುತಿತ್ತು
ಶ್ವೇತಕೇತು ದೇವರ್ಷಿ ನಿಂತ ರವಿದೇವಗರ್ಘ್ಯವಿತ್ತು ೩

ನದಿಯ ದಂಡೆ-ಮಳಲಲ್ಲಿ ಬೆಳೆದ ಗಿಡಗಿಡಕೆ ಮಿಳ್ಳಿಯಾಡಿ
ರಂಗವಲ್ಲಿ ಬರೆದಿತ್ತು ನೆರಳು ಹೊಂಬಿಸಿಲು ಬಣ್ಣ ತೀಡಿ
ಚೈತ್ರಮಾಸ ವನವಾಸ ಬರಲು ವೈಶಾಖ ವಧುವ ಕೂಡಿ
ಭಾದ್ರಪದದ ಕಾರ್ಮುಗಿಲು ಮಿಂಚು ನೆನೆಸಿತ್ತು ನವಿಲ ಜೋಡಿ
ಶ್ವೇತಕೇತು ದೇವರ್ಷಿ ನಿಂತನಾನಂದಚಿತ್ತ ಮೂಡಿ ೪

ಮಿಂಚುದೇಹ ನಿಡಿದೋಳು ದುಂಡುಮುಖ ನೊಸಲಗಂಧವಿಟ್ಟು
ಕಾಮರೂಪ ಮೈತುಂಬಿ ಬಂತು ಯಜ್ಞೋಪವೀತ ತೊಟ್ಟು
ನೋಡಿದಶ್ವಿನೀಕುವರರೆಲ್ಲ ಕಚ್ಚಿದರು ತಮ್ಮ ಬೊಟ್ಟು
ತುಂಬಿಬಂದ ಹೊಂಬಿಸಿಲು ಮಿಂದು ನಿಂದಿರಲು ಹರುಷಪಟ್ಟು
ಶ್ವೇತಕೇತು ಮಂದಾರಮರದ ವಲ್ಕಲದ ವಸನವುಟ್ಟು ೫

ಮೂರು ಲೋಕಗಳ ಕಣ್ಣಿಗೀತ ಸೌಂದರ್ಯದಿಂದ್ರದೀಪ
ಕಂಡ ಕಣ್ಣು ಕನವರಿಕೆ ಸುಟ್ಟಿತೆದೆಯಲ್ಲಿ ಕಾಮಧೂಪ
ನೋಡಿ ನಲಿದ ಹರಿಣಾಕ್ಷಿ ಚಿತ್ತ ನುಡಿಸಿತ್ತು ವಿರಹತಾಪ
ರಂಭೆ ಮದನ ಕೈಗೊಂಬೆ ಮೊರೆದಳಭಿಸಾರಿಕಾವಿಲಾಪ
ಶ್ವೇತಕೇತು ದೇವರ್ಷಿ ಚೆಲುವು ನಿಂತಂಥ ನಿಲುವು ರೂಪ ೬

ಸಹಸ್ರಾರ ಬಿಳಿಕಮಲವರಳಿ ತೆರೆದಿರಲು ಪೀಠ ಕೊಟ್ಟು
ಎಂದಿನಂತೆ ಮಂದಾಕಿನಿಯಲಿ ಹೊಸ ಹಸಿರು ಮಡಿಯುಟ್ಟು
ಮುಕುಟ ಮಾಲೆ ಮೇಖಲೆ ಸುವರ್ಣ ಮಣಿಕರ್ಣಪೂರ ತೊಟ್ಟು
ಕಮಲವದನೆ ಕಮಲಾಕ್ಷಿಲಕ್ಷ್ಮಿ ಸಿಂಧೂರ ತಿಲಕವಿಟ್ಟು;
ಕುಳಿತು ನೋಡೆ ಋಷಿರೂಪ ಮೂಡಿತನುರಾಗರಾಗಪಟ್ಟು ೭

ನಯನಗೋಲಗಳ ತುಂಬಿತುಳುಕಿ ತನುರಾಗವೇರಿನಿಂದು
ಕಮಲಪೀಠದಲ್ಲಿ ಕುಳಿತ ಕ್ಷೀರಸಾಗರದ ಕುವರಿಗಂದು.
ಹುದುಗಿದಂಥ ಹೆಂಗರುಳಿನಾಸೆಗೊಡೆದಿರಲು ನಯನ ಬಿಂದು
ಮನದ ಭೋಗದಭಿಲಾಷೆ ನಯನಜಲಭಾಷೆಯಾಡಿ ಬಂದು
ಮದನ ಯೋಗ ಮನ ತುಂಬುತಿತ್ತು ಋಷಿರೂಪ ರೂಪಕೆಂದು ೮

ಚೆಲುವುತೆತ್ತ ಕಡೆಗೋಲು ಚಿತ್ತವನು ಕಾಮರಾಗ ಹಿಡಿದು
ಕಮಲಶಯ್ಯೆಯಲಿ ಕುಳಿತು ದೇವಿಯೊಳಹೃದಯ ಕಡಲ ಕಡೆದು
ಋಷಿಯ ರೂಪದನುರಾಗ ಸತಿಯ ಸಂಯೋಗದಾಸೆ ಮಿಡಿದು
ಬರಿಯ ನೋಟದಲಿ ಸುರತಕೂಟ ಸುಖಚಿತ್ತ ತೃಪ್ತಿ ಪಡೆದು
ಕಮಲವದನೆ ಕಮಲಾಕ್ಷಿ ನಲಿದಳೋಲಾಡಿ ಗಂಡು ಹಡೆದು ೯

ತೋಳ ತೊಟ್ಟಿಲಲಿ ಮಗುವ ತೂಗಿ ಕೇಳಿದಳು ಹರುಷ ಮಿಂದು
''ಏನ ಬಯಸುತಿದೆ ತಮ್ಮ ಚಿತ್ತ ದೇವರ್ಷಿ ನದಿಯಲಿಂದು''
ನುಡಿದನಾಗ ಋಷಿ : ''ದೇವಿ ಬಯಸುತಿದೆ ಪುಂಡರೀಕಕೆಂದು.''
ದೇವಿ ನಾಚಿ ಕೈಕೂಸ ಚಾಚಿ ಹೇಳಿದಳು ''ಹಿಡಿಯಿರೆಂದು''
ಹೂವ ಬಯಸಿದರೆ ಹೆಣ್ಣಿನೊಲುಮೆ ಹಸುಗೂಸನ್ನಿತ್ತಂದು ೧೦

## ೧೬. ಸಂತಾನ

ಬೆಳದಿಂಗಳಿನುಡಿಗೆಯುಟ್ಟು
ನಕ್ಷತ್ರದ ತೊಡಿಗೆ ತೊಟ್ಟು
ಗ್ರಹಮಂಡಲ ಮಾಲೆಯಿಟ್ಟು
ತೇಜಸ್ವಿನಿ ಬೆಳಕು ಬಂದು
ಸೃಷ್ಟಿಕರ್ತನೆದುರು ನಿಂದು
''ಸಂತಾನವ ಕರುಣಿಸೆಂ''ದು
ದೈನ್ಯವಾಣಿ ಮೊರೆಯಿತು
ದೇವವಾಣಿ ಮೊಳಗಿತು

''ತಥಾಸ್ತು'' ೧

ಅಂಧಕಾರದುಡಿಗೆಯುಟ್ಟು
ಭಯದ ತಿಮಿರ ತೊಡಿಗೆ ತೊಟ್ಟು
ಲಯದ ಬಳ್ಳಿಮಾಲೆಯಿಟ್ಟು
ತಾಮಸಿ ಕತ್ತಲೆಯು ಬಂದು
ಸೃಷ್ಟಿಕರ್ತನೆದುರು ನಿಂದು
''ಸಂತಾನವ ಕರುಣಿಸೆ''ಂದು
ದೈವವಾಣಿ ಮೊರೆಯಿತು
ದೇವವಾಣಿ ಮೊಳಗಿತು

''ತಥಾಸ್ತು''

ಆದಿತಿ ಬೆಳಕು ತೇಜಸ್ವಿನಿ, ಸಂತಾನವೆ ದೇವಕುಲ
ದಿತಿ ತಾಮಸಿ ನಿಶಾಚಾರಿಯು, ಸಂತಾನವೆ ದೈತ್ಯಕುಲ. ೨

# ೧೭. ಕಾಲಿಯಾ ಮರ್ದನ

ವೃಂದಾವನಜನಪರಮಾನಂದ
ಗೋವಿಂದಾ ಹರಿ ಗೋವಿಂದಾ ॥ಪ॥

ಕಾಲಂದಿಯ ಕರ್ಮಡುವನೆ ಸೇರಿ
ಉಲ್ಬಣವಿಷ ಕಿಲ್ಬಷವನೆ ಕಾರಿ
ಕಾಲಿಯನುರಿದಾಡಲು ಮದವೇರಿ
ಗೋಕುಲ ನಡುಗಿತು ಭಯದಿಂದ ೧

ಹಾರುವ ಹಕ್ಕಿಯ ತಾನುರುಳಿಸಿ ಕೆಳಗೆ
ನೀರಡಿಸಿದವರು ಬಂದರೆ ಬಳಿಗೆ
ನೀಗಿದರಸುವನು ವಿಷಜಲದೊಳಗೆ
ಕಾಲಿಯ ಸರ್ಪನ ದೆಸೆಯಿಂದ ೨

ವ್ಯಾಕುಲಿಸಲು ಗೋಕುಲ ಹೌಹಾರಿ
ನೀಲಮನೋಹರ ಬಾಲವಿಹಾರಿ
ಬಂದನು ಮಧುಕೈಟಭಸಂಹಾರಿ
ಯಮುನಾತೀರದ ಬದಿಯಿಂದ ೩

ಹೊಂಬೆಳಗಿನ ಹನಿ ಮುಗಿಲಿಳಿವಂದು
ವಿಷಸಂತಾನವ ತುಳಿಯುವೆನೆಂದು
ಬಾಲಮುಕುಂದನು ಧುಮುಕಿದ ಬಂದು
ಕದಂಬವೃಕ್ಷದ ತುದಿಯಿಂದ ೪

ಕಾಲಂದಿಯ ಪುಲಿನದ ಬಳಿ ಸೇರಿ
ಗೋವಳರೆಲ್ಲರು ಚಿಟ್ಟನೆ ಚೀರಿ
ಸುರಿಸಲು ಕಂಬನಿಗಳ ಹೌಹಾರಿ
ಕಾಳಿಯ ಸರ್ಪನ ಎಳೆತಂದ ೫

ಪೂತ್ಕರಿಸುತ ಹೆಡೆಗಳ ಹಿಡಿದಾಡಿ
ಕಾಲಿಯ ಸರ್ಪನ ತಲೆ ತುಳಿದಾಡಿ

ಬಾಲಮುಕುಂದನು ಕುಣಿಕುಣಿದಾಡಿ
ನಲಿದಾಡಿದ ಹರಿ ಗೋವಿಂದ ೬

ನೀಲಮ ಮೇಘ ಮೃದಂಗವ ಬಡಿದು
ಗಾಳಿಯು ಮಳೆಯಲಿ ಮುರಲಿಯ ನುಡಿದು
ಕಾಲಿಯ ಸರ್ಪನ ಬಾಲವ ಹಿಡಿದು
ನಾಟ್ಯವನಾಡಿದ ಗೋವಿಂದ ೭

ಬ್ರಹ್ಮಾಂಡದ ಪದಭಾರದಿ ತುಳಿದು
ಕುಣಿದಾಡಲು ಕಾಲಿಯು ವಿಷವಳಿದು
ಜರ್ಜರ ಮೂರ್ಛಿತ ಫಣಿಗಳನೆಳೆದು
ವಿಲಿವಿಲಿ ನರಳಿದ ಭಯದಿಂದ ೮

ಕಾಳಿಂಗನ ದುರ್ದೆಸೆಯನು ನೋಡಿ
ಶರಣಾಗತಬಾಂಧವನೆಡೆಗೋಡಿ
ನಾಗಿಣಿಯರು ಹರಿಪೂಜೆಯ ಮಾಡಿ
ಕೈಮುಗಿದರು ಕನಿಕರದಿಂದ ೯

ಕುಣಿದನು ಶ್ರೀಹರಿ ಕ್ಷಮಿಸು ಮುಕುಂದ
ಶರಣಾಗತಬಾಂಧವ ಗೋವಿಂದ
ಕಣ್ಣೀರನು ಸುರಿಸುತ ಸಲಹೆಂದ
ಕಾಲಿಯು ಗದ್ಗದಸ್ವರದಿಂದ ೧೦

ಕಾಳಿಂಗನು ಹರಿಚರಣಕೆ ನಮಿಸಿ
ಶರಣಾಗತನಾಗಲು ಹರಿ ಕ್ಷಮಿಸಿ
ರಮಣಕ ದ್ವೀಪಕೆ ತೆರಳಲು ರಮಿಸಿ
ಗೋಕುಲ ಸಲಹಿದ ಗೋವಿಂದ ೧೧

ಕಾಲಂದಿಯ ಕರ್ಮಡುವನೆ ತೊರೆದು
ಕಾಲಿಯ ರಮಣಕ ದ್ವೀಪಕೆ ಹರಿದು
ಗೋಕುಲ ನಲಿಯಿತು ಹೂಮಳೆ ಕರೆದು
ಕಾಲಿಯಮರ್ದನ ಗೋವಿಂದ ೧೨

## ೧೮. ಉಭಯ ಸರಸ್ವತಿ

### ೧

ಮೂಡಲ ಕಂಪಿನ ಬೆಳಕಿನ ಕೆಂಪಿನ
ಬಂಗಾರದ ಹೂವರಳಿತ್ತು.
ಕೊಳ ಬನಗಳ ಪರಿಮಳ ಸಂಚಯನಕೆ
ಪಡುವಣ ಗಾಳಿಯು ತೆರಳಿತ್ತು.
ಹಿಮ ಕೌಪೀನವ ಧರಿಸಿದ ಶೈಲಕೆ
ಸನ್ಯಾಸದ ಕಳೆಯೇರಿತ್ತು.
ಮಾನಸ ಹಂಸವು ಶೈಲ ಶ್ರೇಣಿಗೆ
ಪರಮಹಂಸ ಪದ ತೋರಿತ್ತು.
ತೇಲುವ ಮೋಡದ ತುಂಡಿನ ತಂಡಕೆ
ಅಪರಂಜಿಯ ಕಳೆ ಬಳೆದಿತ್ತು.
ಗರಿಗೆದರಿದ ಸೌಂದರ್ಯ ಮಯೂರವು
ಹಸಿರಿನ ಮರಡಿಯನಿಳಿದಿತ್ತು.
ಹೊಂಬೆಳಗಿನ ರಸಲೋಕದ ಚೆಲುವಿಗೆ
ವನವಿದ್ಯಾಧರರೋಡಿದರು.
ಮಂಡಲ ತೇಜಃಪುಂಜದ ನಿಲುವಿಗೆ
ಚಾರಣ ಗೀತವ ಹಾಡಿದರು.
ಧುಮುಕಿತು ಮೂಡಲ ಬೆಳಕಿನ ತಡಸಲು
ಪಾತಾಳದ ತಳ ಹುಡಿ ಮಾಡಿ.
ಭಾವ ಸಮಾಯ ಶೈಲಗಳೆದ್ದವು
ಜ್ಞಾನದ ಸಾವಿರ ಹೆಡೆಯಾಡಿ.
ವನಗಳು ದಂಡಕಮಂಡಲು ಹಿಡಿದವು
ಕುಳಿರ್ಗಾಳಿಯು ತತ್ತರಿಸಿ.
ಹಿಮಪರ್ವತಗಳ ಮೆಟ್ಟಲು ಕೊರೆದು
ಜ್ಞಾನದ ಹೊಳೆ ಕೆಳಗಿಳಿಯಿತು ಹರಿದು
ರಿಂಗಣ ಗುಣಿಸುತ ತತ್ವಮಸಿ.

೨

ಮಾಹಿಷ್ಮತಿಯಲಿ ನಗರ ಸಮೀಪದ
ಹೊಳೆಯಲಿ ಮಿಂದರು ಸನ್ಯಾಸಿ
ಶ್ರೀ ಶಂಕರಾಚಾರ್ಯ ಪ್ರಸ್ಥಾನ ತ್ರಯಗಳ
ದಂಡ ಕಮಂಡಲು ವಿನ್ಯಾಸಿ.
ಬ್ರಹ್ಮ ಸಮಾಯ ಪೀಠದಿ ಮಂಡಿಸಿ
ಕೈವಲ್ಯವೆ ಮನದುಯ್ಯಾಲೆ
ಬಣ್ಣದ ಹಕ್ಕಿಯ ಬನದಲಿ ಹಿಡಿಯಲು
ಹೂವಿನ ಮಂಜಿನ ಮಣಿಮಾಲೆ.
ಕರ್ಮದ ಕುಲಪರ್ವತಗಳ ಹುಡುಕುತ
ವಜ್ರಾಯುಧ ನಭ ಸುಳಿವಂತೆ
ಸಗರ ಕುಮಾರರ ಪುನರುತ್ಥಾನಕೆ
ಮಂದಾಕಿನಿ ಮುಗಿಲಿಳಿವಂತೆ
ಮರದಡಿ ಹಸಿರಿನ ಗದ್ದುಗೆಯಿಳಿದರು
ಕೌಪೀನದ ವಸನವನುಟ್ಟು
ಮನದಲಿ ಸೋಹಂ ಭಾವಾವೇಶಕೆ
ಲುಳಿಮಸಗಲು ಹಣೆ ಹೊಳಪಿಟ್ಟು
ಮೈ ತಳೆಯಿತು ನಿಗಮಾಗಮ ಜ್ಞಾನದ
ತೇಜೋಮಂಡಲ ನಡೆದಂತೆ
ವೇದ ಸನಾತನ ವಾಣೀಶ್ವರಿ ಹೊಳೆ
ಮಿಂಚಿನ ಕಾರ್ಮುಕ ಹಿಡಿದಂತೆ
ಪ್ರಣವ ಜ್ಞಾನ ಸಮೀರಣ ಲೋಕಕೆ
ಶ್ರುತಿಗಳ ಸೌರಭ ಬಿತ್ತರಿಸಿ
ಹಿಮ ಪರ್ವತಗಳ ಮೆಟ್ಟಲು ಕೊರೆದು
ಜ್ಞಾನದ ಹೊಳೆ ಕೆಳಗಿಳಿಯಿತು ಹರಿದು
ರಿಂಗಣ ಗುಣಿಸುತ ತತ್ವಮಸಿ.

೩

ಮಾಹಿಷ್ಮತಿಯಲಿ ನಗರ ದ್ವಾರದ
ಬಳಿಯಲಿ ಬಂದರು ಸನ್ಯಾಸಿ
ಶ್ರೀ ಶಂಕರಾಚಾರ್ಯ ಪ್ರಸ್ಥಾನ ತ್ರಯಗಳ
ದಂಡ ಕಮಂಡಲು ವಿನ್ಯಾಸಿ,
ಅಗ್ನಿಯ ವಸನವ ಧರಿಸಿದ ಚಂದ್ರಮ
ನಗರದ ಬೀದಿಯ ನಡೆದಂತೆ
ಮನೆ ಮಂದಿರಗಳ ನೋಡುತ ಬಂದರು
ಮಾಯಾ ಮರ್ತ್ಯದ ಹುಸಿ ಸಂತೆ.
ಗುಡಿಗೋಪುರಗಳ ತೋರಣ ಕಾರಣೆ
ಶೃಂಗಾರದ ಕುರು ಮಾಡಗಳು.
ಋತ್ವಿಜ ಘೋಷದ ಮಂತ್ರೋಚ್ಚಾರಣೆ
ಹೊಗೆಯಾಡುವ ನೆಲೆ ವೀಡುಗಳು.
ಆಚಾರ್ಯರು ನಸು ನಕ್ಕರು ಕಂಡರು
ಮಕ್ಕಳ ಮರಿಗಳ ನಗೆಯಾಟ
ನೀರಿಗೆ ನಡೆದರು ಬ್ರಾಹ್ಮಣ ಸತಿಯರು
ಕಪಿಲೆಯ ಹಸುಗಳ ನೆಗೆದಾಟ.
ತುಳಸಿ ವೃಂದಾವನಗಳ ಸುತ್ತಲು
ಬಲಗೊಂಬುವ ಮುತ್ತೈದೆಯರು
ಯಜ್ಞದ ಬೆಂಕಿಗೆ ಹವಿಯನೆ ಹೊಯ್ಯುವ
ದರ್ಭೆಯ ಬೆರಳಿನ ವೈದಿಕರು.
ಸನ್ಯಾಸಿಯ ಕೌಪೀನದ ಹೊಳಪಿಗೆ
ಬೆಂಕಿಯು ನಕ್ಕಿತು ಕಳಕಳಿಸಿ
ಕುಲಪರ್ವತಗಳ ಮೆಟ್ಟಲು ಕೊರೆದು
ಬೆಳಕಿನ ಹೊಳೆ ಮುನ್ನಡೆಯಿತು ಹರಿದು
ರಿಂಗಣ ಗುಣಿಸುತ 'ತತ್ವಮಸಿ'.

ಳ

ಶಂಕರ ಭಗವತ್ಪಾದರು ಕಂಡರು
ಹೂವಿನ ಚಾಮರ ಮರಗಳನು.
ಮಾಧುರ್ಯಕೆ ಮನಸೋತರು ಕೇಳುತ
ಬಣ್ಣದ ಹಕ್ಕಿಯ ಸ್ವರಗಳನು.
ಮಾಹಿಷ್ಮತಿಯಲಿ ವಿಪ್ರವೃಂದದ
ಮನೆಗಳ ನೋಡುತ ನಡೆದಿರಲು
ತುಂಬಿದ ನೀರಿನ ಕುಂಭದ ಭಾರದಿ
ಮುಪ್ಪಿನ ಮುತ್ತೈದೆಯು ಬರಲು.
ಶಂಕರ ಭಗವತ್ಪಾದರು ನುಡಿದರು
''ಕ್ಷಮಿಸಿರಿ ತಾಯಿ! ತುಸು ನಿಲ್ಲಿ
ನಾವೀ ನಗರಕೆ ಹೊಸಬರು ಇಲ್ಲಿಯ
ಮಂಡನ ಮಿಶ್ರರ ಮನೆಯೆಲ್ಲಿ?''
ಮುತ್ತೈದೆಯು ಕೇಳುತ ವಿನಯೋಕ್ತಿಯ
ಸನ್ಯಾಸಿಯ ನಸು ನೋಡಿದರು
ಭಯ ಭಕ್ತಿ ಸ್ಮಿತ ಗೌರವ ವಿಸ್ಮಿತ
ಮುತ್ತೈದೆಯು ಮಾತಾಡಿದರು
''ಬಿಲ್ವವೃಕ್ಷಗಳೆರಡಿವೆ ಮಂಡನ
ಮಿಶ್ರಾಚಾರ್ಯರ ಮನೆಯೆದುರು
ಎರಡರಗಿಳಿಗಳು ಪಂಜರ ಪೀಠದಿ
ಮಂಡಿಸಿ ವಾದವಿವಾದಿಸಿವೆ.
ಪರಬ್ರಹ್ಮ ಪರಮಾತ್ಮ ಸ್ವರೂಪದ
ಕರ್ಮಜ್ಞಾನ ನಿವೇದಿಸಿವೆ.''
ಕುಲ ಪರ್ವತಗಳ ಮೆಟ್ಟಲು ಕೊರೆದು
ಬೆಳಕಿನ ಹೊಳೆ ಮುನ್ನಡೆಯಿತು ಹರಿದು
ರಿಂಗಣ ಗುಣಿಸುತ 'ತತ್ವಮಸಿ'.

೫

ಜ್ಞಾನದ ತೇಜೋಮಂಡಲ ನಡೆಯಿತು
ಮಂಡನ ಮಿಶ್ರರ ಮನೆಯರಸಿ
ನಿಗಮಾಗಮಗಳ ಜ್ಞಾನ ಶರಾಸನ
ಪುನರುತ್ಥಾಪನ ಗುರಿಯಿರಿಸಿ
ಮುಂಬರಿಯಿತು ಸನ್ಯಾಸದ ಶರ, ಜನ
ಕಂಡರು ಕೆಚ್ಚಿನ ದೀತಿಯ,
ಮಿಂಚಿನ ಮಲ್ಲಿಗೆ ಗೊಂಚಲು ತೆರೆಗಳ
ಜ್ಞಾನದ ಹೊಳೆಯ ವ್ಯಾಹತಿಯ
ಪ್ರಾಯದ ಸುಕುಮಾರಕೆ ಕೌಪೀನದ
ಕಿಚ್ಚೆದ್ದಿತು ಕವಚದ ಭುಗಿಲು.
ಮುಪ್ಪಿನ ಮುತ್ತೈದೆಯ ಮನ ತುಳುಕಿತು
ಕರುಣಾ ಗೌರವಗಳ ದಿಗಿಲು.
ತುಂಬಿದ ನೀರಿನ ಕುಂಭದ ಭಾರದಿ
ಹೆಂಗಸು ನಡೆದರು ಮನೆಯೆಡೆಗೆ,
ಸನ್ಯಾಸದ ಸಿಡಿಲಿಳಿಯಿತು, ಸಂಸಾರ
ದ ಸುಳಿಬಾಳೆಯ ಬನದೆಡೆಗೆ.
ಶಂಕರ ಭಗವತ್ಪಾದಾಚಾರ್ಯರು
ನಿಂತರು ಬಿಲ್ವವೃಕ್ಷದಡಿ
ಪಂಜರದರಗಿಳಿಗಳು ಮಾತಾಡಲು
ನಿಗಮಾಗಮಗಳ ಮಧುರ ನುಡಿ.
ಪರಬ್ರಹ್ಮ ಪರಮಾತ್ಮ ಸ್ವರೂಪದ
ಕರ್ಮಜ್ಞಾನ ನಿವೇದಿಸುತ
ಜ್ಞಾನದ ಹೊಳೆಯನು ತಡೆಯಿತು ಕುಲಗಿರಿ
ಗುಡುಗಿತು ಸನ್ಯಾಸಿಯ ನುಡಿ ವೈಖರಿ
''ಓಂ ಭವತಿ ಭಿಕ್ಷಾಂ ದೇಹಿ.''

೬

ಎರಡರಗಿಳಿಗಳು ಪಂಜರ ಪೀಠದಿ
ಮಂಡಿಸಿ ವಾದ ವಿವಾದಿಸಲು
ಪರಬ್ರಹ್ಮ ಪರಮಾತ್ಮ ಸ್ವರೂಪದ
ಕರ್ಮಜ್ಞಾನ ನಿವೇದಿಸಲು.
ಶಂಕರ ಭಗವತ್ಪಾದರು ನಿಂತರು
ಕೇಳುತ ಗಿಳಿಗಳ ವಾದವನು
ಗಿಳಿಯೊಂದುಸುರಿತು ಕರ್ಮದ ಯೋಗವ
ಸೃಷ್ಟಿ ಸ್ಥಿತಿಲಯ ಭೇದವನು.
ಇನ್ನೊಂದುಸುರಿತು ಜ್ಞಾನವೆ ದಾರಿಯು
ಮಾಯಾ ಚಕ್ರವ್ಯೂಹದಲಿ
ಮೊದಲಿನದುಸುರಿತು ಜೀವದ ಹಕ್ಕಿಯ
ದೇಹದ ಪಂಜರ ಮೋಹದಲಿ
ಕರ್ಮವೆ ಕೆಡಹಿತು. ಕರ್ಮವೆ ಬಂಧನ
ಕರ್ಮವೆ ಬಿಡುಗಡೆಗಿಹ ದಾರಿ
ಮತ್ತೊಂದುಸುರಿತು ಅವಧೂತರ ಪಥ
ಜ್ಞಾನವೆ ಮೋಕ್ಷದ ರಹದಾರಿ.
ಸನ್ಯಾಸಿಯು ನಸು ನಕ್ಕರು ಕೇಳುತ
ಗಿಳಿಗಳ ವಾದ ವಿವಾದವನು.
ಮಂಡನ ಮಿಶ್ರರ ಮನೆಯಲಿ ದೇವರ
ಪೂಜೆಯ ಘಂಟಾನಾದವನು.
ನಿಗಮಾಗಮಗಳ ಕರ್ಮಜ್ಞಾನದ
ಮಿಂಚಿನ ವಲ್ಕಲ ತೆರೆಗಳಲಿ
ಜ್ಞಾನದ ಹೊಳೆಯನು ತಡೆಯಿತು ಕುಲಗಿರಿ
ಗುಡುಗಿತು ಸನ್ಯಾಸಿಯ ನುಡಿ ವೈಖರಿ
"ಓಂ ಭಗವತಿ ಭಿಕ್ಷಾಂ ದೇಹಿ."

೭

ಮಂಡನ ಮಿಶ್ರರ ಹೆಂಡತಿ ಬಂದರು
ಬಾಗಿಲ ತೆರೆದರು ನೋಡಿದರು
ಉಭಯ ಸರಸ್ವತಿ ಹಣ್ಣು ಹಸಾದವ
ಜೋಳಿಗೆಗಿರಿಸಲು ನೀಡಿದರು.
ಶಂಕರಭಗವತ್ಪಾದಾಚಾರ್ಯರು
ಮೆಲ್ಲಗೆ ನುಡಿದರು ಸನ್ಯಾಸಿ
ನಿಗಮಾಗಮಗಳ ತೇಜೋಮಂಡಲ
ದಂಡಕಮಂಡಲು ವಿನ್ಯಾಸಿ.
''ಆತ್ಮದ ಹಸಿವನು ಹಿಂಗಿಸ ಬಂದೆವು
ಹಣ್ಣು ಹಸಾದಕೆ ಹಿಂಗೀತೆ?''
ಉಭಯ ಸರಸ್ವತಿ ವಿಸ್ಮಿತರಾದರು
ಭಗವತ್ಪಾದರ ನುಡಿ ಕೇಳಿ
''ಭಗವಾನ್ ಆತ್ಮದ ಹಸಿವಿನ ತುತ್ತಿಗೆ
ಹಣ್ಣು ಹಸಾದವ ನೀವೆ ಹೇಳಿ''
ಉಭಯ ಸರಸ್ವತಿ ಕೇಳಲು ನುಡಿದರು
ತೇಜೋಮಂಡಲ ಸನ್ಯಾಸಿ
ಗಿಳಿಗಳ ಪಂಜರದೆಡೆ ಕೈ ಮಾಡುತ.
ದಂಡ ಕಮಂಡಲು ವಿನ್ಯಾಸಿ
''ವಾದವಿವಾದವು ಹಣ್ಣು ಹಸಾದವು
ಆತ್ಮದ ಹಸಿವನು ಹಿಂಗಿಸಲು,
ವೇದ ಸಮುದ್ರದ ಮಂಥನ ಭಿಕ್ಷೆಯು
ವಾದವಿವಾದವೆ ಕಡೆಗೋಲು''
ನಿಗಮಾಗಮಗಳ ಕಡಲನು ಕಡೆದು
ನುಡಿಯಿತು ಸನ್ಯಾಸದ ಸಿಡಿಲೊಡೆದು
''ಓಂ ಭವತಿ ಭಿಕ್ಷಾಂ ದೇಹಿ.''

## ೮

ಮಂಡನ ಮಿಶ್ರಾಚಾರ್ಯರು ಬಂದು
ವೈರಾಗ್ಯದ ಕಾಯಕಯೋಗಿ
ನೋಡುತ ಭಗವತ್ಪಾದರು ನುಡಿದರು
''ವಾದದ ಭಿಕ್ಷೆಯೆ ನಿಮಗಾಗಿ?
ನಿರಾಕರಿಸಲಾರೆವು ನಾವೆಂದಿಗು
ವೇದದ ವಾದ ವಿವಾದವನು.''
ಉಳಿಮಸಗಿತು ಸನ್ಯಾಸಿಯ ನಸುನಗೆ
ಸೋಹಂ ಭಾವೋನ್ಮಾದವನು.
ಮಂಡನ ಮಿಶ್ರಾಚಾರ್ಯರು ನುಡಿದರು
''ವಾದ ವಿವಾದದ ಪಣವೇನು?
ನಿಗಮಾಗಮಗಳ ತರ್ಕದ್ಯೂತಕೆ
ಒಪ್ಪಿಸ ಬಯಸುವ ಋಣವೇನು?''
ಶಂಕರ ಭಗವತ್ಪಾದರು ನುಡಿದರು
''ಸೋತರೆ ನಾವೀವಾದದಲಿ
ಸನ್ಯಾಸವ ಬಿಡುವೆನು ಧುಮುಕುವೆನೀ
ಮರ್ತ್ಯದ ಹುಸಿ ಸಂಸಾರದಲಿ.''
ಮಂಡನ ಮಿಶ್ರಾಚಾರ್ಯರು ನುಡಿದರು
''ಕೇಳಿರಿ ನಮ್ಮೀ ಪಂಥವನು
ಸೋತರೆ ನಾವೀವಾದದಿ ತೊಡುವೆವು
ಕೌಪೀನದ ಹುಸಿ ಕಂತೆಯನು.''
ಬೆವರೊಡೆಯಿತು ಮುಖ ಕಮಲವು ಉಭಯ
ಸರಸ್ವತಿ ಕಂಪಿಸಿ ಬೆಚ್ಚಿದರು
ಶಂಕರಭಗವತ್ಪಾದರು ನಡೆದರು
ಬ್ರಹ್ಮಾಸ್ತ್ರಿಯ ರಸಮಂತ್ರವ ನುಡಿದರು
ರಿಂಗಣ ಗುಣಿಸುತ 'ತತ್ವಮಸಿ'.

೯

ವಿಪ್ರಕುಲೋತ್ತಮರೆಲ್ಲಾ ನೆರೆದರು
ವಾದವಿವಾದದ ರಂಗದಲಿ
ವೇದ ಸಮುದ್ರದ ಮಂಥನ ಕಾಣಲು
ಕೂಡಿದರೀ ರಸರಂಗದಲಿ.
ಉಭಯ ಸರಸ್ವತಿ ತೇಜಸ್ವಿನಿ ಸತಿ
ಕುಳಿತರು ನಿರ್ಣಾಯ ಪೀಠದಲಿ
ಜ್ಞಾನ ಕಮಲ ಮುಖಿ ಶ್ವೇತಾಂಬರಿ ವಾ
ಣೀಶ್ವರಿಯೆಸೆದರು ಮಾಟದಲಿ
ಉಭಯ ಸರಸ್ವತಿ ನುಡಿದರು ವಿಪ್ರ
ವೃಂದಕೆ ಜ್ಞಾನದ ಸೂಕ್ತಿಯಲಿ
ಸಂಸಾರದ ಸನ್ಯಾಸದ ಪಂಥದ
ವಾದದ ಕತೆ ವಿನಯೋಕ್ತಿಯಲಿ.
ಕರದಲಿ ಹೂವಿನ ಮಾಲೆಗಳೆರಡನು
ತೇಜಸ್ವಿನಿ ಸತಿ ತೋರಿದರು.
ಮಂಡನ ಮಿಶ್ರರ ಭಗವತ್ಪಾದರ
ಕೊರಳಿಗೆ ಹಾಕುತ ಸಾರಿದರು.
''ಮೊದಲಿಗೆ ಬಾಡುವ ಮಾಲೆಯೆ ಕೊರಳಿನ
ನುಡಿಯೇ ಸೋಲಿನ ಸಂಕೇತ.''
ವೇದ ಸಮುದ್ರದ ಮಂಥನ ನಡೆಯಲ್
ಮಿಂಚಿತು ವಾದದ ಸಂಗೀತ.
ಸಂಸಾರದ ವರ್ಣಾಶ್ರಮ ಧರ್ಮದ
ಜೀವದನಾದಿಯ ಬಿತ್ತರಿಸಿ
ಮಂಡನ ಮಿಶ್ರಾಚಾರ್ಯರು ನುಡಿದರು
ವಾದಕೆ ವಾದವನುತ್ತರಿಸಿ
ರಿಂಗಣಗುಣಿಸಿತು 'ತತ್ವಮಸಿ'.

## ೧೦

ಪ್ರಸ್ಥಾನ ತ್ರಯ ಸೃಷ್ಟಿ ಸ್ಥಿತಿಲಯ
ಮಾಯೆಯ ನಾರಿಯು ಗೋಚರಕೆ,
ಕರ್ಮವೆ ಕಲ್ಪಿಸಿ ರೂಪವ ಕೊಡುತಿದೆ
ಲೋಕದೊಳೆಲ್ಲ ಚರಾಚರಕೆ.
ಪರಮಾತ್ಮನ ಮನ ಮಾಯಾ ಸೃಷ್ಟಿಯು
ಜೀವ ಬ್ರಹ್ಮ ಸನಾತನನು.
ಕಾಯಕ ಯೋಗದಿ ಕೈವಲ್ಯವ ಪಡೆ
ಯಜ್ಞಾಗ್ನಿಯಲಿ ಪುನೀತನನು
ಜ್ಞಾನಾದೇವತು ಕೈವಲ್ಯಂ ಸು
ಜ್ಞಾನಾನಂದ ವಿನೂತನನು,
ದಿನಗಳು ಕಳೆದವು, ದಿನಗಳು ಬಂದವು
ವಾದವಿವಾದಕೆ ನಿಲವಿಲ್ಲ,
ಹಣ್ಣಿನ ಮರದಲಿ ಹಕ್ಕಿಗಳೆರಡಿವೆ
ಒಂದಕೆ ತಿನ್ನುವ ಒಲವಿಲ್ಲ,
ತಿನ್ನುವ ಹಕ್ಕಿಯ ನೋಡುತ ಕುಳಿತಿದೆ
ಜ್ಞಾನಿಗೆ ಕರ್ಮದ ಫಲವಿಲ್ಲ,
ಸಂಸಾರಿಗ ಸನ್ಯಾಸಿಯು ಕಡೆದರು
ವೇದ ಸಮುದ್ರದ ವಿಸ್ತಾರ.
ಕರ್ಮವೊ? ಜ್ಞಾನವೊ? ತೀರದ ತೀರವು
ಪರಬ್ರಹ್ಮವಪರಂ ಪಾರ
ಫಕ್ಕನೆ ಮಂಡನ ಮಿಶ್ರರ ಕೊರಳಿನ
ಮಾಲೆಯು ಅರ್ಧಕೆ ಬಾಡಿತ್ತು.
ಉಭಯ ಸರಸ್ವತಿ ತೇಜಸ್ವಿನಿ ಸತಿ
ನುಡಿದರು ವಿಪ್ರರ ಸಭೆಗೆಲ್ಲ,
''ಮಂಡನ ಮಿಶ್ರರ ಸೋಲಾದರು, ಅವ
ರರ್ಧಾಂಗಿಗೆ ಸೋಲ್ಬರಲಿಲ್ಲ.''

## ೧೯. ಶಬರಿ

ಚಿನ್ನದ ಬಿಂದಿಗೆ ಬೆಳಕನು ಸುರಿಯಿತು ಮೂಡಲ ದೆಸೆಯಿಂದ
ಮಂಜಿನ ಹನಿಗಳನೆಸೆಯುತ ಬಂದಿತು ಗಾಳಿ ಬೊಗಸೆಯಿಂದ
ಮೊಗ್ಗೆಯ ಬಾಯನು ಬಿಡಿಸುತ ಬಂದವು ದುಂಬಿಯ ಪರಿವಾರ
ಸೇರಲು ಮೋಡವು ತೊಡಿಸುತ ಇಳಿದವು ಕಣಿವೆಗೆ ಹೂಹಾರ
ಹೂಬಿಸಿಲಿನ ವನಕೋಡುತ ಬಂದವು ಚಿಗರೆಯ ಹಿಂಡುಗಳು
ಮಧುವಿನ ಕೊಡಗಳ ತುಂಬಿಕೊಂಡವು ದುಂಬಿಯ ದಂಡುಗಳು
ಹಕ್ಕಿಗಳೆದ್ದುವು ಮುಗಿಲಿಗೆ ಹಾರುತ, ಚಿಲಿಪಿಲಿ ಹಾಡುಗಳು
ಮೆಲ್ಲಗೆ ಶಬರಿಯ ಕಾಡಿಗೆ ನಡೆದವು ಕುಂಕುಮ ಮೋಡಗಳು
ಗಿಳಿಗಳ ಬಳಗವು ರಾಮನ ಹುಡುಕುತ ಮುಗಿಲೊಳಗೋಡಿದವು
ಗಿಡಮರಗಳ ತಂಬೂರಿಯ ನುಡಿಸುತ ಬನಗಳು ಹಾಡಿದವು
ರಾಮನ ಹಂಬಲು ಹೃದಯವ ತುಂಬಲು ಬುಟ್ಟಿಯ ಹಿಡಕೊಂಡು
ಶಬರಿಯು ಬಂದಳು ಬುಗರಿಯ ಕಾಡಿಗೆ ಮೆಲ್ಲನೆ ನಡಕೊಂಡು
ರಾಮ ರಾಮ ಶ್ರೀರಾಮನ ಕರೆಯುತ ರಾಮನ ನೆನೆಸಿದಳು
ರಾಮ ರಾಮ ಶ್ರೀರಾಮನ ಧ್ಯಾನವ ಕಾಡಿಗೆ ಕಲಿಸಿದಳು
ರಾಮ ರಾಮ ಶ್ರೀರಾಮ ಸ್ಮರಣೆಯಲಿ ಕಾಡನೆ ನಿಲಿಸಿದಳು
ರಾಮ ರಾಮ ಶ್ರೀರಾಮಗೆ ಹಲುಬುತ ಗಿಡಗಿಡ ನಡೆದಿಹಳು
ರಾಮ ರಾಮ ಶ್ರೀರಾಮನ ನೆನೆಯುತ ಬುಟ್ಟಿಯ ಹಿಡಿದಿಹಳು
ಕಾಡಿನ ಗಿಡಗಳ ಎಲೆಕೊಂಬೆಗಳು ರಾಮನ ಸ್ಮರಿಸಿದವು
ರಾಮ ರಾಮ ಶ್ರೀರಾಮನ ನೆನೆಯುತ ಹೂವನುದುರಿಸಿದವು
ರಾಮ ರಾಮ ಶ್ರೀರಾಮನಿಗಾಗಿಯೆ ಹಣ್ಣನು ಸುರಿಸಿದವು
ಹಣ್ಣಿನ ರುಚಿಯನು ನೋಡುತ ನಡೆದಳು ''ರಾಮ ರಾಮ'' ಎಂದು
ಹುಳಿಹುಣ್ಣುಗಳನು ಎಸೆಯುತ ನಡೆದಳು ''ರಾಮ ರಾಮ'' ಎಂದು
ಸವಿ ಸವಿ ಹಣ್ಣನು ಬುಟ್ಟಿಗಿಳಿಸಿದಳು ''ರಾಮ ರಾಮ'' ಎಂದು
ನೆಲಮುಗಿಲಿನ ತುಟಿ ಬಿಡಿಸುತ ನುಡಿದಳು ''ರಾಮ ರಾಮ'' ಎಂದು
ಕಾಡಿಗೆ ಕಾಡೆ ಹರುಷದಿ ಹಾಡಿತು ''ರಾಮ ರಾಮ'' ಎಂದು ೧

ಕಾಡಿಗೆ ಕಾಡೆ 'ರಾಮ' ಎಂದಿರಲು ಲಕ್ಷ್ಮಣ ಬೆರಗಾದ
ಗಿಡ ಮರ ಎಲೆ ಹೂ 'ರಾಮ' ಎಂದಿರಲು ಲಕ್ಷ್ಮಣ ಬೆರಗಾದ
ಗಿಳಿ ಕೋಗಿಲೆಗಳು 'ರಾಮ' ಎಂದಿರಲು ಲಕ್ಷ್ಮಣ ಬೆರಗಾದ
ಬನದ ಹೃದಯವೆ 'ರಾಮ' ಎಂದಿರಲು ಲಕ್ಷ್ಮಣ ಬೆರಗಾದ
ಕಾಡಿನ ಕಣಿವೆಯ ಸೀಳು ದಾರಿಯಲಿ ಬಂದನು ಶ್ರೀರಾಮ
ಶಬರಿಯ ಮೊರೆಯನು ಆಲಿಸಿ ಬಂದನು ಕಾಡಿಗೆ ಶ್ರೀರಾಮ
ನೋಡಿದ ಗಿಳಿಗಳು ಕೂಗಿ ಹೇಳಿದವು "ಬಂದನು ಶ್ರೀರಾಮ"
ಗೂಡಿನ ಜೇನುಗಳೆಲ್ಲ ಹಾಡಿದವು "ಬಂದನು ಶ್ರೀರಾಮ"
ಕಾಡಿನ ಗಿಡ ಮರ ಹೂವು ಹಾಡಿದವು "ಬಂದನು ಶ್ರೀರಾಮ"
ಬೀಸುವ ಗಾಳಿಗಳೆಲ್ಲ ಸಾರಿದವು "ಬಂದನು ಶ್ರೀರಾಮ"
ಕೂಡಿದ ಚಿಗರೆಯ ಹಿಂಡು ಕೂಗಿದವು "ಬಂದನು ಶ್ರೀರಾಮ"
ಸೊಂಡಿಲನೆತ್ತಿದ ಆನೆ ಸಾರಿದವು "ಬಂದನು ಶ್ರೀರಾಮ"
ಸೀಳು ದಾರಿಯಲಿ ಮೆಲ್ಲನೆ ಬೀಸಿತು ಗಾಳಿಯೋಡಿ ಬಂದು
ದಾರಿಯುದ್ದಕ್ಕೂ ಹೂವಿನ ಮಳೆಯನು ಸುರಿಸಿತು ಬನವಂದು
ಕಾಮನ ಬಿಲ್ಲು ಕಮಾನು ಕಟ್ಟಿದವು ರಾಮ ಬಂದನೆಂದು
ಮೇಘಮಾಲೆ ತೂಗಾಡಿ ಬೆಳಗಿದವು ರಾಮ ಬಂದನೆಂದು
ಬನದ ಹಕ್ಕಿಗಳು ಹಾಡತೊಡಗಿದವು ರಾಮ ಬಂದನೆಂದು
ಬಣ್ಣದ ನವಿಲುಗಳಾಡತೊಡಗಿದವು ರಾಮ ಬಂದನೆಂದು
ಚಿತ್ರವಿಚಿತ್ರ ಪತಂಗ ಹಾರಿದವು ರಾಮ ಬಂದನೆಂದು
ಅಳಿಲು ಟೊಂಗೆಯಲಿ ಕುಳಿತು ಕೈಯಜೋಡಿಸಿತು ಸ್ವಾಮಿಗೆಂದು
ಕಾಡಿನೊಲವ ಕೈಕೊಳ್ಳುತ ಬಂದನು ಕಾಡಿಗೆ ಶ್ರೀರಾಮ
ಶಬರಿಯ ಬಳಗದ ಕರೆಯನು ಲಾಲಿಸಿ ಬಂದನು ಶ್ರೀರಾಮ
ವಿಸ್ಮಿತಗತಿಯಲಿ ಲಕ್ಷ್ಮಣ ನುಡಿದನು, "ಅದ್ಭುತವೀಪ್ರೇಮ" ೨

ಶಬರಿಯ ಗುಡಿಸಲಿನಂಗಳದಲಿ ಶ್ರೀರಾಮಚಂದ್ರ ಬಂದ
ಚಂದ್ರಬಿಂಬ ಮುಖ ತುಂಬಿ ಮುಗುಳ ನಗೆ ನೀಲವರ್ಣದಿಂದ
ಕಟ್ಟಿಕೊಂಡ ಜಡೆಯಲ್ಲಿ ಇಟ್ಟ ಮುಡಿಯಲ್ಲಿ ಹೂವನೊಂದ
ತೂಗುತಿತ್ತು ಬತ್ತಳಿಕೆ ಬಿಲ್ಲು ಹೆಗಲಲ್ಲಿ ಠೀವಿಯಿಂದ.
ಉಟ್ಟ ವಲ್ಕಲದ ಬಟ್ಟೆ ಮಿಂಚಿದವು ಚಂದಚಂದದಿಂದ,

ನೀಲವಜ್ರ ವಿಸ್ತಾರ ವಕ್ಷದಲಿ ಹಾರವಿಳಿಯುತಿತ್ತು
ಚಾಚಿದಂಥ ನಿಡಿದೋಳು ತಳಿರು ಕೈಕಮಲ ಹೊಳೆಯುತಿತ್ತು.
ಶಬರಿ ನೋಡಿದಳು ರಾಮರೂಪ ಶ್ರೀರಾಮ ರಾಮ ಎಂದು
ಅರ್ಘ್ಯಪಾದ್ಯ ಸತ್ಕಾರ ನೀಡಿದಳು ರಾಮ ರಾಮ ಎಂದು
ಕುಳ್ಳಿರೆಂದು ಜಗುಲಿಯಲಿ ಹಾಸಿದಳು ಹರಕು ಚಾಪೆ ತಂದು
ಕುಳಿತು ರಾಮಲಕ್ಷ್ಮಣರ ನೋಡಿ ಕಣ್ತುಂಬ ನೀರ ತಂದು
ಹಣ್ಣು ಕೂದಲಿನ ಹಣ್ಣು ಜೀವ ಕೈಮುಗಿದು ನುಡಿದಳಂದು
''ಇಷ್ಟು ದಿವಸವೂ ಕಾದು ಕುಳಿತೆವು ನೀವು ಬರುವಿರೆಂದು''
''ಇಷ್ಟು ದಿವಸ ಹಾರೈಸುತಿದ್ದೆವು ನೀವು ಬರುವಿರೆಂದು''
''ಕಿವಿಯ ತುಂಬಿ ಬಂದವರು ಬಂದಿರೊ ಕಣ್ಣ ತುಂಬಿ ಇಂದು''
''ಮನವ ತುಂಬಿ ಬಂದವರು ಬಂದಿರೊ ವನವ ತುಂಬಿ ಇಂದು''
''ಹೃದಯ ತುಂಬಿ ಬಂದವರು ಬಂದಿರೊ ಎದುರಿನಲ್ಲಿ ಇಂದು''
''ತಿಳಿದ ಕಣ್ಣಿನಲಿ ಹೊಳೆದ ಬೆಳಕು ಮೈತಳೆದು ಬಂದಿರಿಂದು''
''ಋಷಿಯ ಹರುಷರಸ ಮಂತ್ರರೂಪ ಮೈತಳೆದು ಬಂದಿರಿಂದು''
''ನಿಮ್ಮ ಕರುಣೆಗಿಲ್ಲಂತಪಾರಗಳು ಸ್ವಾಮಿ ದೀನಬಂಧು''
''ರಾಮ ರಾಮ ರಘುರಾಮ ರಾಮ ಶ್ರೀರಾಮ ರಾಮ'' ಎಂದು
ಹಾಡಿ ಹೊಗಳ ನೀಡಿದರು ಹಣ್ಣುಗಳ ತಂದು ತಿನ್ನಿರೆಂದು.
ಹಣ್ಣು ಕೂದಲಿನ ಹಣ್ಣು ಜೀವ ಕೈಮುಗಿದು ಹೇಳಿದಂದು
ಭಕ್ತವತ್ಸಲನು ತಿಂದನೆಂಜಲನು ಬುಟ್ಟಿತುಂಬ ಹಣ್ಣು
ನೋಡುತಿತ್ತು ಹನಿಗೂಡುತಿತ್ತು ಲಕ್ಷ್ಮಣನ ಬೆರಗುಗಣ್ಣು
ಉಗಿದ ಬೀಜಗಳನೆತ್ತಿಕೊಂಡವು ಹಕ್ಕಿ ಹಾರಿ ಬಂದು
''ಧನ್ಯ ಧನ್ಯ ಶ್ರೀರಾಮ ಪ್ರಸಾದವು ನಮಗೆ ದೊರಕಿತೆಂದು''
ಶ್ರೀರಾಮಚಂದ್ರ ಕೈತೊಳೆದು ಹೇಳಿದನು ''ಹೋಗಿಬರುವೆನೆಂದು''
''ನೀಡಿದಂಥ ಸವಿಹಣ್ಣು ತಿಂದು ಸಂತೋಷವಾಯಿತೆಂದು''
ವರದ ಹಸ್ತವನು ಚಾಚಿ ಹೇಳಿದನು ಸ್ವಾಮಿ ''ಸ್ವಸ್ತಿ'' ಎಂದು
ಮರಳಿ ನಡೆದ ಲಕ್ಷ್ಮಣನ ಕೂಡ ಶ್ರೀರಾಮ ದೀನಬಂಧು
ಹಣ್ಣು ಕೂದಲಿನ ಹಣ್ಣು ಜೀವ ನೀಡಿರುವ ಹಣ್ಣು ತಿಂದು
ಕಾಡು ಕಣಿವೆಯಲಿ ಸೀಳು ದಾರಿಯಲಿ ಹೋದ ದೂರ ದೂರ
ಭಕ್ತವತ್ಸಲನ ಕರುಣೆ ಪ್ರೀತಿಗಳಿಗಿಲ್ಲವಂತಪಾರ.

ಒಲಿದು ಬಂದನಿವ ತಿಂದನೆಂಜಲವ ಒಲುಮೆಗೆಂಜಲಿಲ್ಲ
ಕರುಣೆದೋರಿ ಕಾಡಿಗೂ ಬಂದನಿವ ಕರುಣೆಗೆಂಜಲಿಲ್ಲ,
ಕಾಡು ಕಣಿವೆಯಲಿ ಸೀಳು ದಾರಿಯಲಿ ಸ್ವಾಮಿ ಮುಂದೆ ಮುಂದೆ
ಬೆರಗುಗೊಂಡು ಬಂದಿದ್ದ ಲಕ್ಷ್ಮಣನು ನೆರಳಿನಂತೆ ಹಿಂದೆ
ಕಾಡು ದೂರದಲಿ ಹಾಡುತಿತ್ತು ಶ್ರೀರಾಮ ರಾಮ ಎಂದು
ಎಲ್ಲ ಜೀವಗಳ ಕಾಯಬಲ್ಲುದೊ ರಾಮನಾಮವೊಂದು

## ೨೦. ವಸ್ತ್ರಾಪಹರಣ

ಹಂಸತೂಲಿಕಾತಲ್ಪದಲ್ಲಿ ಹೇಮಂತ ಕಣ್ಣು ತರೆದು
ಸ್ವರ್ಣಛಾಯೆ ಸಿಂಧೂರ ಲೇಪ ಬಳಿದಂತೆ ಬಣ್ಣವೆರೆದು
ಉಷಾಯಾತ್ರೆಯದ್ಘೋಷದಲ್ಲಿ ಹೂ ಬಿಸಿಲು ಕುಂಭ ಸುರಿದು
ಬೆಳಕು ಬಂತು ದಿಗ್ವಲಯಕಿಂತು ಚಳಿ ಮಂಜಿನಾಟವಾಡಿ
ಕುಳಿಗಾಳಿಯೆಳೆದಿತ್ತು ಬಂದು ಹೊಂಬಿಸಿಲ ತೇರ ನೋಡಿ ೧

ಬಂದು ಗೋಪಿಕಾವೃಂದ ನೀಲ ಕಾಲಿಂದಿಯಂಚಿನಲ್ಲಿ
ಗೋಪಾಲಕೃಷ್ಣ ಪತಿಯಾಗಲೆಂದು ಹಾರೈಸಿ ಹೊಂಚಿನಲ್ಲಿ
ಜಾಜಿ ಬಕುಲ ಸಂಪಿಗೆಯ ಪುಷ್ಪ ಶೃಂಗಾರ ಮಂಚದಲ್ಲಿ
ಪೂಜಿಸಿದರು ಕಾತ್ಯಾಯಿನಿಯನು ಕಾರುಣ್ಯಪೂರ್ಣೆಯೆಂದು
ಉಟ್ಟ ಸೀರೆಗಳ ಬಿಚ್ಚಿ ನುಗ್ಗಿದರು ನದಿಗೆ ಮೀಯಲೆಂದು ೨

ಸ್ವರ್ಣಪುತ್ಥಳಿಗಳಂತೆ ಬೆಳಗಿ ಗೋಪಾಂಗನೆಯರು ನಿಂದು
ಜಲಕ್ರೀಡೆಯಾಡಿದರು ನೀಲಕಾಲಿಂದಿಯಲ್ಲಿ ಬಂದು
ಹೃದಯ ಕಮಲವಿದು ಕಮಲನಾಭ ವನಮಾಲಿ ಕೃಷ್ಣಗೆಂದು
ಹಂಸಗತಿಯೊಳಲೆದಾಡುತಿರಲು ಯಮುನಾವಿಹಾರಿಯಾಗಿ
ನಾದಲೋಲ ಗೋಪಾಲಕೃಷ್ಣ ಬಂದಿದ್ದನಲ್ಲಿ ಸಾಗಿ ೩

ನವಿಲು ಗರಿಯ ಕಿರೀಟ ನವಪುಷ್ಪಮಾಲೆ ಧರಿಸಿ
ಮುಗುಳು ನಕ್ಕು ಕೊಳಲೂದುತಿರಲು ವನದಲ್ಲಿ ಮೋದವೆರಸಿ
ಬಣ್ಣ ಬಣ್ಣಗಳ ಸೀರೆಯೆತ್ತಿ ಮರವೇರಿ ರೆಂಬೆಗಿರಿಸಿ
ಕೊಳಲನೂದಿದನು. ಕೇಳಿ ಗೋಪಿ ದಿಙ್ಮೂಢರಾಗಿ ನಿಂತು
ಕಂಡು ಕೃಷ್ಣನನು ಹರುಷ-ಲಜ್ಜೆ ನಸುಗೆಂಪು ಮೂಡಿ ಬಂತು ೪

ಹಂಸಪಕ್ಷಿಗಳ ಹಿಂಡಿನಂತೆ ನೀರಾಟ ಬಿಟ್ಟು ಬಂದು
ಒಬ್ಬರೊಬ್ಬರು ತಬ್ಬಿಕೊಂಡು ಹೆಮ್ಮರದ ಮರೆಗೆ ನಿಂದು
ಬಣ್ಣಬಣ್ಣಗಳ ಸೀರೆ ತೂಗಿದವು ರೆಂಬೆರೆಂಬೆಗೊಂದು

ಸುಯ್ಯನೆದ್ದ ಚಳಿಗಾಳಿಗೊಡ್ಡಿ ಮೈ ನಡುಗಿ ನಿಂದು ನೋಡಿ
ಅಂಗಲಾಚಿದರು ನಾಚಿ ಗೋಪಿಯರು ಕೃಷ್ಣನನ್ನು ಬೇಡಿ ೫

''ಅಪ್ಪ ಸೀರೆ ಕೊಡು'' ಎಂದು ಬೇಡಿದರು ಹರಿಯು ಮರುಗದಿರಲು
''ಅಣ್ಣ ಸೀರೆ ಕೊಡು'' ಎಂದು ಕೇಳಿದರು ಹರಿಯು ಕರಗಲಿಲ್ಲ
''ನಂದ ಗೋಪನಿಗೆ ಹೇಳಿ ಹೊಡೆಸುವೆವು'' ಇಷ್ಟು ಹೆದರಲಿಲ್ಲ
ಹಂಸಪಕ್ಷಿಗಳ ಹಿಂಡಿನಂತೆ ಮರೆಯಲ್ಲಿ ನಿಂತುಕೊಂಡು
ಅಂಗಲಾಚಿದರು ನಾಚಿ ಗೋಪಿಯರು ಕೃಷ್ಣನನ್ನು ಕಂಡು ೬

ಮುಗುಳು ನಕ್ಕು ಶ್ರೀಕೃಷ್ಣ ನುಡಿದ ಗೋಪಾಂಗನೆಯರ ನೋಡಿ
''ನಗ್ನರಾಗಿ ನದಿಯಲಿ ನುಗ್ಗಿದಿರಿ ಜಲಕ್ರೀಡೆಯಾಡಿ
ಎದುರು ಬಂದು ತಪ್ಪಾಯಿತೆಂದು ಕೈಮುಗಿದು ಕ್ಷಮೆಯ ಬೇಡಿ''
ಎದೆಯ ಮೇಲೆ ಬಲಗೈಯನಿಟ್ಟು ಎಡಗೈಯ ಮುಚ್ಚಿಕೊಂಡು
''ಅಂಗಲಾಚಿದರು ನಾಚಿ ಗೋಪಿಯರು ಕೃಷ್ಣನನ್ನು ಕಂಡು'' ೭

''ಅಪ್ಪ ಸಾಕು ಹುಡುಗಾಟ ಸೀರೆ ಕೊಡು'' ಹರಿಯು ಮರುಗಲಿಲ್ಲ
''ಅಣ್ಣ ಚಳಿಗೆ ನಡುಕಾಟ, ಕೊಟ್ಟುಬಿಡು'' ಹರಿಯು ಕರಗಲಿಲ್ಲ
''ಕೈಗೆ ಸಿಕ್ಕರೊಳಿತಲ್ಲ ಥಳಿಸುವೆವು'' ಇಷ್ಟು ಹೆದರಲಿಲ್ಲ
''ಹಣೆಯ ಮೇಲೆ ಬಲಗೈಯನಿಟ್ಟು ಎಡಗೈಯ ಮುಚ್ಚಿಕೊಂಡು
ಅಂಗಲಾಚಿದರು ನಾಚಿ ಗೋಪಿಯರು ಕೃಷ್ಣನನ್ನು ಕಂಡು'' ೮

ಹಂಸಪಕ್ಷಿಗಳ ಹಿಂಡಿನಂತೆ ಹರಿಯೆದುರು ನಿಂತುಕೊಂಡು
ಅಂಗಲಾಚಿ ಗೋಪಿಯರು ನಾಚಿ ಬೇಡಿರಲು ಕೂಗಿಕೊಂಡು
ಮುಗುಳು ನಕ್ಕು ಶ್ರೀಕೃಷ್ಣ ನುಡಿದನವರಲ್ಲಿ ಮರಕುಗೊಂಡು
''ಎರಡು ಕೈಯಿಗಳನೆತ್ತಿ ಜೋಡಿಸಿರಿ. ನಿಮ್ಮ ಸೀರೆ ನಿಮಗೆ
ಕ್ಷಮಿಸಿ ಬಿಡಲಿ ಕಾಲಿಂದಿಯೆನ್ನುವೆವು. ನಮ್ಮ ದಾರಿ ನಮಗೆ'' ೯

''ನಮ್ಮ ಮಾನ ಮರ್ಯಾದೆ ಎಲ್ಲವೂ ನಿನ್ನ'ದೆಂದುಕೊಂಡು
ಆರ್ತಭಕ್ತಿಯಲ್ಲಿ ಶರಣುಯೆಂದು ಕೈಮುಗಿಯುತಿರಲು ಕಂಡು
ನಿಮ್ಮ ದೇವಿ ಕಾರುಣ್ಯಪೂರ್ಣೆ, ನಿಮ್ಮಿಷ್ಟ ಸಲಿಸಲೆಂದು
ವಸ್ತ್ರವಿತ್ತು ವನಮಾಲಿ ಪಡೆದ ಗೋಪಿಯರ ಪುಷ್ಪಮಾಲೆ
ಅಕ್ಷಯಾಂಬರವನೀವ ಕೈಗೆ ವಸ್ತ್ರಾಪಹರಣ ಲೀಲೆ ೧೦

# ೨೧. ಬುಟ್ಟಿ ಮತ್ತು ಬೀಗದ ಕೈ

ಆದದ್ದೆಲ್ಲ ಒಳಿತೇ ಆಯಿತು ॥ಪ॥ ನಮ್ಮ
ಶ್ರೀಧರನ್ನ ಸೇವೆಗೆ ಸಾಧನ ಸಂಪತ್ತಾಯಿತು ॥ಅ॥
ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ ಮಾಚಿ ನಾಚುತ್ತಿದೆ
ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ
ಗೋಪಾಲಬುಟ್ಟಿ ಹಿಡಿಯುವುದಕ್ಕೆ
ಭೂಪತಿಯಂತೆ ಗರ್ವಿಸುತ್ತಿದ್ದೆ
ಆ ಪತ್ನಿ ಕುಲ ಸಾವಿರವಾಗಲಿ
ಗೋಪಾಲಬುಟ್ಟಿ ಹಿಡಿಸಿದಳಯ್ಯ

– ಪುರಂದರದಾಸರು

ಇಲ್ಲಿ ಬೆಳಕಿನ ಕಿರಣ ಕಾಲಿಡದು. ಇಲ್ಲಿಯೆ
ಮುತ್ತು ರತ್ನಗಳುಂಟು ಚಿನ್ನವುಂಟು
ರಾಮಟೆಂಕಿಗಳುಂಟು. ಗದ್ಯಾಣ ಪಣ್ಯಗಳು
ಹೊರಲಾರದಷ್ಟು ನಾಣ್ಯಗಳ ಗಂಟು ೧

ಇದು ಸರಾಫರ ಕಟ್ಟೆ ನಾಯಕರು ಕುಳಿತಲ್ಲಿ
ಸದ್ದಿಲ್ಲ, ಸುಳಿವಿಲ್ಲ, ಎಲ್ಲ ಮೌನ
ಗುಬ್ಬಿಗಳಿಗೂ ಇಲ್ಲಿ ಚಿಲಿಪಿಲಿಯ ಕೊರಳಿಲ್ಲ
ಇಲ್ಲಿ ನಡೆಯುವುದೊಂದೆ ಧನದ ಧ್ಯಾನ ೨

ತನ್ನ ನೆರಳಿಗೆ ತಾನೆ ಅಂಜಿ ನಡೆಯುವರಿಲ್ಲಿ
ಒಂದು ದಿನ ಬ್ರಾಹ್ಮಣರು, ಒಬ್ಬ ಬಂದು
ನಾಯಕರ ಕೇಳಿದರು. "ಬೇಡವೆ ನಿಮಗಿವು?
ಬುಟ್ಟಿ ಬೀಗದ ಕೈ ಈಗ" ಎಂದು ೩

ನಾಯಕರ ಕಣ್ಣಲ್ಲಿ ಬಂಡೆಗಲ್ಲುಗಳು. ಆಗ
ಬ್ರಾಹ್ಮಣರು ಅಂದರು, ಕೈಯ ಮುಗಿದು
ಸಾಮಾನ್ಯವಲ್ಲ ಈ ಬುಟ್ಟಿ ಇದು ಅಕ್ಷಯವು
ದಣಿದು ಹೋಗುವಿರಿಲ್ಲಿ ಧನವ ತೆಗೆದು ೪

ಸಾಮಾನ್ಯವಲ್ಲ ಬೀಗದ ಕೈ, ಇದಕಾಗಿ
ದೇವತೆಗಳೂ ಕೂಡ ಹಗಲು, ಇರುಳು
ದುಂಬಾಲು ಬಿದ್ದರು, ಯಾರಿಗೂ ಕೊಡಲಿಲ್ಲ
ಇಲ್ಲಿಗೆ ಕಳಿಸಿದರು ನಿಮಗೆ ಕೊಡಲು ೫

ನಾಯಕರ ಕಣ್ಣಲ್ಲಿ ಮಿಂಚು, ಕೊರಳಲ್ಲಿತ್ತು
ಗುಡುಗು, ಕೇಳಿದರಾಗ, "ಏನು ಸ್ವಾಮಿ?
ಯಾರು ನಿಮ್ಮನ್ನಿಲ್ಲಿ ಕಳಿಸಿದರು?" "ಇನ್ನಾರು!
ನಿಮ್ಮ ಹೆಂಡತಿ ಸ್ವಾಮಿ, ಧರ್ಮಪತ್ನಿ" ೬

ಬುಟ್ಟಿ ತುಂಬಿದ ಕಣಜ ಲೋಕದಲ್ಲೆ ಇಲ್ಲ
ಕೀಲಿಕೈ ತೆರೆಯದ ತಿಜೋರಿಯಿಲ್ಲ
ಇವೆರಡ್ಡಿದರೆ ಸಾಕು. ನಿಮ್ಮ ಸಮರ್ಥ್ಯಾರುಂಟು?
"ಹೋಗಿರಯ್ಯ ಆಚೆ.. ಬಲ್ಲೆವೆಲ್ಲ" ೭

ಬ್ರಾಹ್ಮಣರು ಅಂದರು, "ಇನ್ನೊಮ್ಮೆ ಯೋಚಿಸಿರಿ.
ಇಷ್ಟು ಹೊತ್ತಿಗೆ ನಾಳೆ ಬರುವೆ ನಾನು"
ನಾಯಕರು ಬಂದೊಡನೆ ಹೆಂಡತಿ ಕೇಳಿದಳು
"ಸಾಮಾನು ಕಳಿಸಿದ್ದೆ ಸಿಕ್ಕವೇನು?" ೮

ನಾಯಕರು ಮಾತಾಡಲಿಲ್ಲ, ಅಂದೇತಕೊ
ಬೆಳಕಿನಲ್ಲೆ ಅಲೆದರಿಡಿಯ ದಿವಸ
ಆಗೊಮ್ಮೆ ಈಗೊಮ್ಮೆ ಹೂವುಗಳ ಬಳಿ ನಿಂತು,
ಕೇಳಿದರು "ಎಲ್ಲುಂಟು ನಿಮ್ಮ ಹರುಷ?" ೯

ಮರುದಿನ ಅಷ್ಟುಹೊತ್ತಿಗೆ ಬಂದ ಬ್ರಾಹ್ಮಣರ
ಕಂಡೊಡನೆ ತಬ್ಬಿದರು ಒಳಗೆ ಕರೆದು
ಒಳಗೆಲ್ಲೊ ಒಂದುಕಡೆ ಹೊತ್ತಿರಲು ಜ್ಯೋತಿಯು
ಹಿಗ್ಗಿದರು ಕೀಲಿ ಕೈ ಬುಟ್ಟಿ ಪಡೆದು ೧೦

ಇಷ್ಟು ದಿನ ಜಡಿದಂಥ ಒಳ ಕದವು ತೆರೆಯಿತು
ಅಕ್ಷಯದ ಅಕ್ಷರದ ನಿಯ ಸುರಿದು
ಬೆರಳುಗಳ ಬುಟ್ಟಿಯನು ತುಂಬಿರಲು, ನಾಯಕರ
ಬಳಿ ಸಾರಿ, ದಂಡಿಗೆ ಬೆತ್ತ ಹಿಡಿದು ೧೧

ಹೆಂಡತಿಯು ಅಂದಳು, "ಹೋಗೋಣವೆ ಇನ್ನು
ಹಾಡುಗಳ ಮೈ ತೊಳೆವ ಹೊಳೆಯ ದಡಕೆ."
ನಾಯಕರು ಅಂದರು. "ಅಲ್ಲವೆ ಮತ್ತೆ
ಹೊಂಬೆಳಗು ಕಾದಿಹವು ನಮ್ಮ ನುಡಿಗೆ." ೧೨

# ೨೨. ಕುಚೇಲೋಪಾಖ್ಯಾನ

'ಧೋ' ಎಂದು ಜಡಿಮಳೆಯು ಸುರಿಯುತಿತ್ತು
ಇಳೆಗೆ ಹಸಿರಿನ ಭಾಗ್ಯ ತೆರೆಯುತಿತ್ತು
ಬಡ ಸುದಾಮನ ಜೀರ್ಣ ಪರ್ಣಶಾಲೆಯ ಸೇರಿ
ಮಳೆಯೆಲ್ಲ ತೊಯಿಸಿ ತಪ್ಪಡಿಸುತಿದೆ ಸೋರಿ
ಮೋಡಗಳು ಕೂಡ – ಸುರಿಯುತಿರಲು ಮನೆಯೊಳಗೆ
ಮಡದಿ ಮಕ್ಕಳು ಕೊರಗಿ ನಡುಗಿದರು ಚಳಿಗೆ
ದೇವರೆದುರಿಗೆ ಕುಳಿತು ನೋಡುತಲಿ ವ್ಯೋಮ
ಮುಗುಳು ನಗೆಯಲಿ ನೆನೆದು ನುಡಿದನು ಸುದಾಮ :
''ಇದುಭಾಗ್ಯವಿದುಭಾಗ್ಯವಿದುಭಾಗ್ಯವೆಮಗೆ
ಮುಗಿಲ ಕಪಿಲೆಯು ಕರೆಯುತಿಹುದು ಮನೆಯೊಳಗೆ'' ೧

'ಧೊ' ಎಂದು ಸುರಿಯುತಿರುವೀಮಳೆಯ ನೋಡಿ
ಬರುತಿಹುದು ಹಳೆಯು ಸಂಗತಿ ನೆನಪುಗೂಡಿ
ಸಾಂದೀಪನಿಗಳ ಗುರುಕುಲದೊಳಿರುವಂದು
ಒಮ್ಮೆ ಕಟ್ಟಿಗೆ ತರಲು ಕಾಡಿನಲಿ ಬಂದು
ದ್ವಾರಕೆಯ ದೊರೆ ಕೃಷ್ಣ ವಾಸುದೇವನ ಕೂಡ
ಅಲೆದಾಡುತಿರಲು, ಕಪ್ಪಿಟ್ಟು ಕಾರ್ಮೋಡ
ಕವಿದುಬಿಟ್ಟವು ಮುಗಿಲ, ಮಿಂಚು ಕುಣಿದಾಡಿ
ಸಿಡಿಲು ಜಡಿಮಳೆ ಹೊಡೆದವಿಳೆಯ ತುಳುಕಾಡಿ
ಶ್ರೀಕೃಷ್ಣನೊಂದು ಕಡೆ, ನಾನು ಮತ್ತೊಂದು ಕಡೆ
ಇರುಳೆಲ್ಲ ಹೆದರಿ ಮರವೇರಿ ಕುಳಿತು ಬಿಡೆ
ಹುಲಿ ಸಿಂಹ ಚಿರತೆಗಳು ಕಾಡಿನಲಿ ಕೂಗಿ
ಘೀಳಿಡಲು ವನ್ಯಮೃಗ ದಿಙ್ಮೂಢರಾಗಿ
ಕುಳಿತಲ್ಲೆ ಕುಳಿತು ಚಳಿ- ನಡುಗಿ ಹೌಹಾರಿ
ಮಾರನೆಯ ದಿವಸ ತಲುಪಿದೆವು ಮನೆಸೇರಿ ೨

''ದ್ವಾರಕೆಯ ದೊರೆ – ಸ್ನೇಹವಿರುವಾಗ ನಿಮಗೆ
ದಾರಿದ್ರ್ಯ ದುಃಖಗಳು ಇನ್ನೇಕೆ ನಮಗೆ?
ಹೋಗಿಬನ್ನಿರಿ ನಾಥ ಶ್ರೀಕೃಷ್ಣನೆಡೆಗೆ
ಶರಣು ಶರಣೆನ್ನುವೆವು ಶ್ರೀಕೃಷ್ಣನಡಿಗೆ''
ಮಡದಿ ಮಕ್ಕಳು ನುಡಿಯುತಿರಲು ಬಲು ನೊಂದು
ಕಂಡುಬರುವೆನು ಗೆಳೆಯ ಶ್ರೀಹರಿಯನೆಂದು
ವಿಪ್ರ ನಿರ್ಧರಿಸಿದನು ಹರುಷದೊಳಗಂದು
ದ್ವಾರಕೆಯ ದೊರೆಗೆ ಬಡ ಕಾಣಿಕೆಯನೊಂದು
ಕೊಡಲು ಬಯಸಿ ಕುಚೇಲ ಚಿಂತಿಸಿರಲಂದು
ಬೇಡಿ ತಂದೆರಡು ಹಿಡಿ ಭತ್ತವನು ಕುಟ್ಟಿ
ವಿಪ್ರಪತ್ನಿಯು ಕೊಡಲು ಅವಲಕ್ಕಿ ಕಟ್ಟಿ
ಹರಿಯ ಕಾಣುವೆನೆಂದು ಬಲು ಹರುಷಪಟ್ಟು
ಹರಕು ಚಿಂದಿಯ ಗಂಟು ಕಂಕುಳೊಳಗಿಟ್ಟು
ಮರುದಿನವೆ ಹಿಡಿದಿದ್ದ ದ್ವಾರಕೆಯ ದಾರಿ
ಸೂರ್ಯನಾರಾಯಣನು ಬರಲು ರಥವೇರಿ
ಉದಯರಾಗದಿ ಪಕ್ಷಿ ಮಂಗಲವ ಕೋರಿ
ಬೆಳಗಿದವು ಪಚ್ಚೆ ಪಯರಿನ ಬಣ್ಣ – ಹೂವು
''ವಿಷ್ಣು ಭಕ್ತರ ಕಂಡು ನಲಿಯುವೆವು ನಾವು'' ೩.

ದೂರದಿಂದಲೆ ದ್ವಾರಕಾಪುರವ ಕಂಡು
ಕೃಷ್ಣಭಕ್ತ ಕುಚೇಲ ಕೈಮುಗಿದುಕೊಂಡು
ಹೊಳೆವ ಚಿನ್ನದ ಕಳಸ ಮನೆಮಂದಿರಗಳು
ಪರಿಮಳದ ಗರಿಬಿಚ್ಚಿ ಹೂ ಹಂದರಗಳು
ಕಮಲ ಪುಷ್ಕರಣಿಗಳು ಹುಲ್ಲುಗಾವಲುಗಳು
ಹಾಲು ತೆನೆಗಳು ತುಂಬಿ ತೂಗುತಿಹ ಹೊಲಗಳು
ಮಂಜರಿಗಳಿಂದ ರಂಜಿಸುವ ತುಳಸೀವನ
ಇಂಪಾಗಿ ಧ್ವನಿಗೈವ ಹಕ್ಕಿಗಳ ನಿಸ್ವನ
ಗೋವಳರ ಕೊಳಲು ಸ್ವರ ಕುಣಿವ ಹಸು ಕಂಡು
ಮೇಯುತಿದ್ದವು ಗೋವು ಗೋವುಗಳ ಹಿಂಡು

ಬಡ ಸುದಾಮನು ಕೃಷ್ಣನರಮನೆಗೆ ಬಂದು
ನಿಂದಿರುವ ದ್ವಾರಪಾಲಕರ ಬಳಿಸಂದು
''ನಿಮ್ಮ ದೊರೆಗಳ ನಾವು ಕಾಣಬೇಕೆಂದು''
ನುಡಿದಿರಲು ಕೇಳಿ ಗಹಗಹಿಸಿದರು ನಿಂದು
ನಗುನಗುತ ಕೇಳಿದರು ಹೆಸರು, ದೆಸೆ, ಗುರುತು
ದ್ವಾರಕೆಯ ದೊರೆಯ ಸಹಪಾಠಿಯೆಂದರಿತು
ಜೀರ್ಣವಸ್ತ್ರವನುಟ್ಟ ಬ್ರಾಹ್ಮಣನ ಕಂಡು
ನಂಬಲಾರದೆ ನಕ್ಕರಾಶ್ಚರ್ಯಗೊಂಡು ೪

ಓಡಿ ಬಂದನು ಹರಿಯು ಹೆಬ್ಬಾಗಿಲೆಡೆಗೆ
ಓಡಿ ಬಂದನು ದೊರೆಯು ಹೆಬ್ಬಾಗಿಲೆಡೆಗೆ
ವಜ್ರಾಂಕುಶ ಧ್ವಜದ ಮುದ್ರೆಯಡಿಗಡಿಗೆ
ಬಳಲಿ ಬಂದ ಸುದಾಮ ಕರೆದಾರ್ತನುಡಿಗೆ.
ದಣಿದು ಬಂದ ಕುಚೇಲ ಕರೆದಾರ್ತನುಡಿಗೆ
ಓಡಿಬಂದನು ಸ್ವಾಮಿ ಸ್ನೇಹಿತನ ಕಡೆಗೆ.
ಹೊಳೆವ ರತ್ನಕಿರೀಟ ಕೇಯೂರ ಕುಂಡಲ
ಕೋಟಿ ಚಂದ್ರರ ಕಾಂತಿಯುಳ್ಳ ಮುಖಮಂಡಲ
ಓಡಿಬಂದನು ಕೃಷ್ಣ ಸ್ನೇಹಿತನ ಕಂಡು
ನಿಡುದೋಳುಗಳ ಚಾಚಿ ಕರೆದಪ್ಪಿಕೊಂಡು
ಕಣ್ತುಂಬಿ ನಲಿದು ಸ್ನೇಹಿತನ ನೋಡಿದನು
''ಕ್ಷೇಮವೇ? ಗೆಳೆಯ ಬಾ''ರೆಂದು ಕೈನೀಡಿದನು
ಆನಂದ ಬಾಷ್ಪಗಳ ಕಣ್ತುಂಬ ಸುರಿಸಿ
ಶ್ರೀಹರಿಯ ಕಾರುಣ್ಯ ಸ್ನೇಹಗಳ ಸ್ಮರಿಸಿ
ಶ್ರೀಹರಿಯ ಹೆಗಲಮೇಲಿರಿಸಿ ಕರವನ್ನು
ನಡೆದಿರಲು ಬ್ರಾಹ್ಮಣನು, ಕಂಡು ಬರವನ್ನು
ಸತ್ಯಭಾಮಾದೇವಿ ರುಕ್ಮಿಣೀದೇವಿಯರು
ಮುತ್ತಿನಾರತಿ ಹಿಡಿದು ಸ್ವಾಗತವ ಕೋರಿದರು
ಎದುರುಗೊಂಡರು ಮಂಗಳಾರತಿಯ ಬೆಳಗಿ
ಸತ್ಕರಿಸಿದರು ಕೊಂಬು ಕಹಳೆಗಳ ಮೊಳಗಿ.

ವಾಸುದೇವ ಸುದಾಮ ರತ್ನಮಂಚದಿ ಕುಳಿತು
ಆಡಿದರು ಗುರುಕುಲದ ಸವಿನೆನಪುಗಳ ಕುರಿತು
''ಅತ್ತಿಗೆಯು ಕಳಿಸಿರುವ ಕಾಣಿಕೆಯ ತಾ''ಯೆಂದು
ಹರಕು ಗಂಟನು ಬಿಚ್ಚಿ ಅವಲಕ್ಕಿಯನು ತಿಂದು
ಸತ್ಯಭಾಮಾದೇವಿ ರುಕ್ಮಿಣೀದೇವಿಯರು
ವಿಪ್ರಪತ್ನಿಯು ಕಳುಹಿದವಲಕ್ಕಿ ಬೇಡಿದರು
ಬಡ ಸುದಾಮನು ತಂದ ಅವಲಕ್ಕಿಯನು ಸವಿದು
''ಇದು ಭಾಗ್ಯ''ವೆಂದನುಗ್ರಹಿಸಿದರು ಒಲಿದು ೫೫

ಹರಿಯೊಡನೆ ಹಲವು ದಿನ ಹರುಷದಿಂದಲಿ ಕಳೆದು
ಮನೆಗೆ ಮರಳುವೆನೆಂದು ಮಡದಿ ಮಕ್ಕಳ ನೆನೆದು
''ಹೋಗಿಬರುವೆನು ಸ್ವಾಮಿ'' ಶ್ರೀಕೃಷ್ಣ ಹರಿಯೆ
''ಹೋಗಿಬರುವೆನು ಸ್ವಾಮಿ'' ದ್ವಾರಕೆಯ ದೊರೆಯೆ
ಸತ್ಯಭಾಮಾದೇವಿ ರುಕ್ಮಿಣಿಯರನು ಕಂಡು
''ಹೋಗಿಬರುವೆನು ತಾಯೆ'' ಎಂದು ಬೀಳ್ಕೊಂಡು
ಹೃತ್ಕಮಲದಲಿ ದಿವ್ಯ ಸ್ಮರಣೆಗಳನಿರಿಸಿ
ಆನಂದ ಬಾಷ್ಪಗಳ ಕಣ್ತುಂಬ ಸುರಿಸಿ
ಕೃಷ್ಣ ಭಕ್ತ ಸುದಾಮ ಮನೆಗೆ ನಡೆದಿದ್ದ
ಹೆಜ್ಜೆ ಹೆಜ್ಜೆಗೆ ಹರಿಯ ನೆನಪು ನುಡಿದಿದ್ದ
ಸೂರ್ಯನಾರಾಯಣನು ಬರಲು ರಥವೇರಿ
ಹಕ್ಕಿಗಳು ಹಾಡಿದವು ಮಂಗಲವ ಕೋರಿ
ಬೆಳಗಿದವು ಪಚ್ಚೆ ಪಯರಿನ ಬಣ್ಣ ಹೂವು
''ವಿಷ್ಣು ಭಕ್ತರ ಕಂಡು ನಲಿಯುವೆವು ನಾವು''
ಹರಿಯ ನೆನೆದು ಸುದಾಮ ಮನೆಗೆ ಬರುತಿರಲು
ಹೆಜ್ಜೆ ಹೆಜ್ಜೆಗೆ ಹರಿಯ ಕರುಣೆ ಸ್ಮರಿಸಿರಲು
ಸ್ವರ್ಣದಾರತಿಯೆತ್ತಿ ತಟ್ಟೆಯೊಳಗಿರಿಸಿ,
ಮುತ್ತು ರತ್ನಾಭರಣ ಮಾಲಿಕೆಯ ಧರಿಸಿ
ರೇಷಿಮೆಯ ವಸ್ತ್ರ ಪೀತಾಂಬರವನುಟ್ಟು
ಮಡದಿ ಮಕ್ಕಳು ಬರಲು ಆಶ್ಚರ್ಯಪಟ್ಟು

ಮುತ್ತಿನಾರತಿ ಬೆಳಗಿ ತಿಲಕ ಹಣೆಗಿಟ್ಟು
ಕರೆದೊಯ್ಯುತಿರಲು ಪರಮಾಶ್ಚರ್ಯಪಟ್ಟು
ನುಡಿದನು ಸುದಾಮ, ಶ್ರೀಕೃಷ್ಣನನು ಸ್ಮರಿಸಿ
ಹೃತ್ಕಮಲದಲಿ ದಿವ್ಯ ನೆನಪುಗಳನಿರಿಸಿ
''ಇದು ಭಾಗ್ಯವಿದುಭಾಗ್ಯ ಶ್ರೀಹರಿಯ ಕರುಣೆ
ಪದುಮನಾಭನ ಪಾದ ಪದುಮಗಳ ಸ್ಮರಣೆ''

## ೨೩. ಪರಿಗ್ರಹಿಸಿರೀ ಪಾರಿಜಾತ

ಹಸಿರು ಚೈತ್ರವನದಲ್ಲಿ ಮೆರೆಯಿತಚ್ಛೋದವೆಂಬ ಸರಸಿ
ಕಮಲವೇದಿಕೆಯನೇರಿ ಕುಳಿತ ಕಲಹಂಸವೃಂದದರಸಿ
ಬನದ ಹಸಿರು ಬಯಲಲ್ಲಿ ಗಿಡದ ನೆರಳಲ್ಲಿ ಸೀಳು ದಾರಿ
ಬಳ್ಳಿವರಿದು ಸುತ್ತಾಡಿ ಬಂದವೋ ಸರಸ್ತೀರ ಸೇರಿ ೧

ಬಕುಲವನದ ನರುಗಂಪು ತುಂಬಿತೊ ಬನದ ಸುತ್ತುಮುತ್ತು
ಮಂದಗಾಳಿ ಮಾಂದಳಿರಿನೊಡನೆ ಬಿನ್ನಾಣವಾಡುತಿತ್ತು
ಬಣ್ಣಬಣ್ಣಗಳ ಕಮಲವರಳಿದಚ್ಛೋದ ತೀರದಲ್ಲಿ
ಮಿಸುನಿಗೋಪುರದ ಶಿವಾಲಯವು ನಿಂತಿತ್ತು ದೂರದಲ್ಲಿ ೨

ಶಿವಾರ್ಚನೆಗೆ ನಡೆದಿದ್ದನೊಮ್ಮೆ ದೇವರ್ಷಿ ಪುಂಡರೀಕ
ಋಷಿಯ ರೂಪ ಸೌಂದರ್ಯ ಕಂಡು ನಲಿದಿತ್ತು ಮೂರು ಲೋಕ
ಅರುಣಗೋಲ ಬಂದಂತೆ ದಿವ್ಯ ಯಜ್ಞೋಪವೀತ ತೊಟ್ಟು
ಋತುವಸಂತ ನಡೆದಂತೆ ತಪಕೆ ವಲ್ಕಲದ ವಸನವುಟ್ಟು ೩

ಧವಲವರ್ಣ ಕೆಂದುಟಿಯ ದುಂಡುಮುಖ ನೀಲನಯನ ಹೊಳೆದು
ಮಿಸುನಿಜಡೆಯ ಸುಕುಮಾರ ರೂಪವೊಪ್ಪಿತ್ತು ಭಸ್ಮ ತಳೆದು
ಮುಂಜುಮೇಖಲೆಯ ಕಟ್ಟಿ ಬೆರಳ ರುದ್ರಾಕ್ಷಿಮಾಲೆ ಹಿಡಿದು
ಕಪಿಂಜಲನ ಜತೆಯಲ್ಲಿ ಬಂದನಾ ಪುಂಡರೀಕ ನಡೆದು ೪

ಹಿಡಿದ ದಂಡ ಕೈಕಮಂಡಲಗಳೊಪ್ಪಿರಲು ಪುಂಡರೀಕ
ಕಪಿಂಜಲನ ಜತೆಯಲ್ಲಿ ನಡೆದು ಬರುತಿದ್ದ ದೇವಲೋಕ
ಋಷಿಯ ರೂಪಸೌಂದರ್ಯ ನೋಡಬಯಸಿದ್ದರಲ್ಲಿ ನಿಂದು
ದೇವವನದ ವನದೇವಿ ಚಾರುಮಧುಮಾಸಲಕ್ಷ್ಮಿ ಬಂದು ೫

ಎದೆಯೊಡ್ಡಿ ನಿಂತ ಸಾಮ್ರಾಟ ಸಾಮಂತ ಪಡೆ
ಎಲ್ಲರನು ಗುಡಿಸಿ ಉರುಳಿರುವವಿಂದು

೧೦

ಹಸಿದವರ ತುತ್ತುಗಳ ಕಸಿದ ಕಪಟಿ
ಗಳು, ಗಾಳಿಗಳ ಬುಡದಲ್ಲಿ ಹುಡಿಯ ಹಾದಿ
ದುಡಿದವರ ಜಾಡುಗಟ್ಟಿದ ಕ್ರೋಧ ಮು
ಷ್ಟಿಯಲಿ, ಹೊಸಯುಗದ ಮಗುವನೆತ್ತುವಳು ದಾದಿ

೧೧

ದುಡಿವ ಜನ ಬರೆವರು ಚರಿತ್ರೆ. ಧಾನ್ಯಗಳ
ತೆನೆಯಲ್ಲಿ, ಕಾಲದ ಕುಲುಮೆಯಲ್ಲಿ
ಹೆಗಲೇರಿ ಕೂತವರ ಕೆಳಗೆಳೆದು ಹಾಕು
ವರು. ಶ್ರಮಜೀವಿಗಳ ಧ್ವಜದ ಗೆಲುವಿನಲ್ಲಿ.

೧೨

ದುಡಿವ ಕೈಯುರುಳಿಸುವ ಗಾಲಿಗಳ ವೈ
ಭವಕೆ ಹೆಗಲೊಡ್ಡಬೇಕೆಂಬ ತವಕದೊಳಗೆ
ಹೊಸಯುಗದ ಧೀರ ಮುನ್ನಡೆಯ ಸಂ
ಕಲ್ಪಗಳ ದೃಶ್ಯ ಕಂಡಿದ್ದ ಕಾರ್ಲ, ಕಿಡಕಿಯೊಳಗೆ.

## ೩೮. ಗಿರವಿ ಅಂಗಡಿಯಲ್ಲಿ

೧

ಗಿರವಿ ಅಂಗಡಿಯಲ್ಲಿ ಮುಂಗಟ್ಟುಗಳ ಸಾಲು, ಜನ
ಯಾವ್ಯಾವುದೊ ವಸ್ತುಗಳನು ತಂದು,
ಸಂಸಾರದ ಬವಣೆ ತೋಡಿಕೊಂಡರು.
''ಇಲ್ಲಿ ಬಡ್ಡಿಯಿಲ್ಲವೆ ದಯೆಗೆ ಕೂಡ ಇಂದು''

೨

ಬಡವರಿಗೆ ಕಷ್ಟಗಳು ಬಹಳ. ಒಬ್ಬೊಬ್ಬರೂ
ಕಂಕುಳಲಿ, ಹೆಗಲಲ್ಲಿ ಹೊತ್ತುಕೊಂಡು
ಸಾಹುಕಾರಗೆ ಕೈ ಮುಗಿದು ಅಂದರು : ''ಸ್ವಾ....
ಮಿ,... ತುಸು ಹಣವ ಕೊಡಿ, ಇದನ್ನಿಟ್ಟುಕೊಂಡು.''

೩

ಯಾವಾಗಲೂ ತೇವೆ-ಕಣ್ಣುಗಳಲ್ಲಿ, ಮನೆಯಲ್ಲಿ
ಬಾಣಂತಿ. ಹೊರಗೆ ಅಸಾಧ್ಯ ಚಳಿಯು
ಕಲ್ಲಿದ್ದಲಿಲ್ಲ ಅಗ್ಗಿಷ್ಟಿಕೆಗೆ. ಹಾಗಾಗಿ,
ಗಿರವಿಗೆ ತಂದದ್ದು ಒಂದೇ ಬಳೆಯು.

೪

''ತಾಯಿಗೆ ಒಮ್ಮೆಲೆ ಕಾಯಿಲೆ. ಹುಚ್ಚಂತೆ,
ನೆತ್ತರಿನ ಹನಿಯಿದ್ದ ಲೋಲಾಕಿವು.
ಅವಳೇ ಕಿತ್ತೆಸೆದದ್ದು. ಆಸ್ಪತ್ರೆ ಸೇರಿಸಲು.
ನಮಗಿನ್ನು ಬ್ರೆಡ್ಡು ತರುವವರು ಯಾರು?''

೫

''ಇದು ನಮ್ಮ ಮದುವೆಯುಂಗುರ. ಕಂದನಿಗೆ
ಹುಟ್ಟು ಹಬ್ಬವು ಅವಗೆ ನಾಳೆ ದಿನವೆ.
ಒಲೆಯ ಬಳಿ ಹರಿದು ಕೈ ಸುಟ್ಟುಕೊಂಡಿದೆ
ಗೊಂಬೆಯನು ತರಬೇಕು ಇಂದೆ ಅವಗೆ.''

೬

ಸಾಹುಕಾರನ ಕಿವಿಗೆ ಹರಿದದ್ದು ಕಷ್ಟಗಳೆ...
ಅಷ್ಟೋ ಇಷ್ಟೋ ಹಣವ ಕೈಗೆ ಸುರಿದು,
ತನ್ನ ಪಾಡಿಗೆ ತಾನು ಲೆಕ್ಕ ಬರೆಯುತ್ತಿದ್ದ
ಗಿರಿವಿಯಿಟ್ಟವರಿಗೆ ರಶೀದಿ ಹರಿದು.

೭

ತುಸು ದೂರ ನಿಂತ ರೈತ ಹೆಂಗಸು. ಅವಳ
ಕೈಯಲ್ಲಿ ಇತ್ತೊಂದು ಸಣ್ಣ ಗಂಟು.
ಸಾಹುಕಾರನು ನೋಡಿ ಕರೆದು ಕೇಳಿದನು-
''ಏನಾಗಬೇಕಿತ್ತು? ಏನು ಉಂಟು?''

೮

ಹೆಂಗಸಂದಳು ''ಸ್ವಾಮಿ, ಹಣ ಬೇಕಿತ್ತು
ಗಿರವಿಗೆ ತಂದಿದ್ದೆ ಇದನ್ನಿಂದು
ಗಂಟಿನಲ್ಲಿಟ್ಟಿರುವೆ,'' ಬಟ್ಟೆ ತೋರಿಸಿದಳು
ಅಂಗಿ, ಷರಾಯಿ, ಕೋಟು, ಟಾಯ್ ಒಂದು.

೯

ಹುಬ್ಬೇರಿಸುತ್ತಲೆ ಸಾಹುಕಾರನು ಅಂದ :
''ನಿಮ್ಮವೇನಲ್ಲ, ಇವು ಯಾರ ಬಟ್ಟೆ?''
ಹೆಂಗಸಂದಳು. ''ಒಡೆಯರವು. ಸಧ್ಯಕ್ಕೆ
ಅವರ ಸಂಸಾರಕ್ಕೆ ತುಂಬಾ ಕಷ್ಟ''

೧೦

ಹೆಂಡತಿಗೆ ಎದೆ ನೋವು. ಮಗನಿಗೆ ಕಾಯಿಲೆ
ಉಲ್ಬಣ. ಔಷಧಕೆ ಇಲ್ಲ ಕಾಸು.
ಇವನ್ನುಳಿದರೆ, ಬೇರೆ ಬಟ್ಟೆಗಳಿಲ್ಲ,
ಯಾರಿಗೂ ಬರಬಾರದಿಂಥ ತ್ರಾಸು.

೧೧

ಹಾಗೆಂದೆ ಆತ ಖುದ್ದಾಗಿ ಬಂದಿಲ್ಲ
ಉಪಕಾರವಾದೀತು ಇಂಥ ಸಮಯ.
ಬಟ್ಟೆಯೆತ್ತಿಕೊಳ್ಳುತ್ತ, ಸಾಹುಕಾರ ಕೇಳಿ
ದನು, ಬರೆದುಕೊಳ್ಳುತ್ತ ರಶೀತಿಯ.

೧೨

''ಹೆಸರೇನು ನಿನ್ನದು? ನಿನ್ನ ಆ ಒಡೆಯನದು?''
''ಹೆಲೆನ ಡೆಮ್ಯೂತ – ನನ್ನ ಹೆಸರು.
ಕಾರ್ಲ್‌ಮಾರ್ಕ್ಸ್ – ಒಡೆಯರದು.'' ಆಮೇ
ಲೆ ರಶೀತಿಯೊಂದಿಗೆ ಬಂತು ಸ್ವಲ್ಪ ಹಣವು.

# ೩೯. ರೊಟ್ಟಿ ಮತ್ತು ಕೋವಿ

ತಟ್ಟನೆ ನಿಂತು ನೋಡಿದೆ, ತೊಟ್ಟಿಯಾಚೆಂದ
ಹಸಿದ ಹಾವುಗಳಂತೆ ಇಳಿದು ಒಳಗೆ
ಎರಡು ಕೈಗಳು; ಸಿಕ್ಕ ಎಂಜಲಿನೆಲೆಯನ್ನು
ಹಿರಿದು ತೆಗೆದವು. ಕಸದಿಂದ ಹೊರಗೆ

ತಡಮಾಡಲಿಲ್ಲ, ತಡೆದನುಮಾನಿಸಲಿಲ್ಲ,
ಎಲ್ಲಾದರೂ ಉಂಟೆ ತುಂಡು ರೊಟ್ಟಿ?
ಮತ್ತು ಅನ್ನದ ಅಗಳು? ಎಲೆಯೆಲ್ಲ ಬಳಿದಾಗ
ಏನೋ ಸಿಕ್ಕಿತು; ತಣ್ಣಗಾತು ಹೊಟ್ಟೆ

ಎರಡು ಬ್ರೆಡ್ಡಿನ ತುಂಡು, ಚೆಲ್ಲಿದ ಹುಳಿಯನ್ನ
ಸಿಪ್ಪೆ ಉಪ್ಪಿನ ಕಾಯಿ ಕೂಡಿದುಪ್ಪು
ಎಲ್ಲಿಯೋ ಕಂಡಿದ್ದೆನಲ್ಲ ಈ ಕೈಗಳನು?
ಹೌದಿವೇ ಕೈಗಳು; ಬಲಿಷ್ಠ ಕಪ್ಪು.

ಆಷಾಢ ಮೋಡಗಳು 'ಧೋ'ಗುಟ್ಟಿ ಸುರಿದು
ಹೊಲಗದ್ದೆಗಳು ತೊಯ್ದು ತಪ್ಪಡ್ಯಾಗಿ
ಹೂಡಿದ್ದ ನೇಗಿಲಿನ ಹಾಡು, ರವಕೆಯ ಹಸಿರು
ತೊಡೆಸಿದ್ದವಲ್ಲವೆ ತೆನೆಯು ತೂಗಿ

ಅಂದು ಕೊಂಡೆನು. ಅಲ್ಲ ಇವುಗಳೆ ಅಲ್ಲವೆ
ಗಚ್ಚು ಗಾರೆಯ ಹೊತ್ತು ಹಗಲು ಇರುಳು.
ಉಪ್ಪರಿಗೆ ಬಂಗಲೆಯ ನಿಲ್ಲಿಸಿಲ್ಲವೆ? ಮ
ತ್ತೆ, ಇವುಗಳಿಂದಲ್ಲವೆ ಸುಖದ ನೆರಳು

ಹಸಿದ ಕೈಗಳಿಗೆ ದುಡಿಮೆಯೆಂದರೆ ಪ್ರೀತಿ
ಚೆಲುವೆಂದರೂ ಪ್ರೀತಿ ಕಾಣೊ ಅವಕೆ
ಹಾಗೆಂದೇ ಲಾವಣ್ಯ ವರ್ತುಲಗಳನು ಬರೆ
ವ, ಬೆಳ್ಳಕ್ಕಿಗಳ ಹಿಂಡು ಬೆರೆವ ಬಯಕೆ

ಕಣ್ಣಿಗಷ್ಟೆ ಅಲ್ಲ, ಕಿವಿಗಳೂ ಸಂತಸದ
ಹಕ್ಕಿಗಳ ಗೂಡಾಗಲೆಂದು, ನುಡಿಸಿ
ಯಾವ್ಯಾವುದೊ ವಾದ್ಯ. ಈ ಕೈಗಳಲ್ಲವೆ
ಇಂದೇಕೆ ಇಳಿದಿವೆ? ಎಂಜಲನು ಬಯಸಿ

ಹಸಿದ ಕೈಗಳಿಗೆ ಪ್ರೀತಿಯೆಂದರು ಪ್ರೀತಿ.
ಹಾಗೆಂದೆ ತಟ್ಟಿ ಎದೆ ಎದೆಯ ಕದವ
ಕಾದರೂ. ಹಸಿದವರಿಗವು ತೆರೆಯಲೆ ಇಲ್ಲ!
ಎಷ್ಟೆಂದು ತಡೆದಾರು? ತಮ್ಮ ಹಸಿವೆ?

ಕಸದ ತೊಟ್ಟಿಗೆ ಇನ್ನು ಹಸಿದ ಕೈ ಇಳಿಯವು.
ಅಂದುಕೊಂಡೆನು ಅಂಜಿ ನೊಂದುಕೊಂಡು.
ನೇಣುಗಂಬವ ಕೂಡ ಧಿಕ್ಕರಿಸಿ ನುಗ್ಗುವರು.
ಎತ್ತಿಕೊಳ್ಳಲು ಸಿಕ್ಕ ಕೋವಿ. ಗುಂಡು

ಹಸಿದವರು ಕೂಡ ಬದುಕಬೇಕಲ್ಲವೆ? ಮ
ತ್ತೆ, ಪ್ರೀತಿಯೂ ಬೇಕಲ್ಲ ದುಡಿವ ಜನಕೆ
ಎದೆಯ ಕದಗಳು ಮುಚ್ಚಿದಾಗ. ಮತ್ತಿನ್ನೇನು
ಮುಖ್ಯವಲ್ಲವೆ ಸಾವಿಗಿಂತ ಬಯಕೆ?

# ೪೦. ಚಿನ್ನಮ್ಮನ ಕಂದ

ರಾಜು, ಎಷ್ಟು ಹುಡುಕಿದೆ ಗೊತ್ತೆ? ಅಲ್ಲಿ ನೀನಿದ್ದಿಲ್ಲ
ಬೆಳ್ಳಗಿನ ಮೃದುವಾದ ಹಾಸು ಹೊದಿಕೆ.
ತುಂಬಿರುವ ತೊಟ್ಟಿಲುಗಳಲ್ಲಿ; ಅಲ್ಲೆ ತಾನೆ
ತೊಳಗುವದು ತಾಯ್ತನದ ಕನಸು ಹರಕೆ? ॥೧॥

ಹೆರಿಗೆ ಆಸ್ಪತ್ರೆ ಉದ್ದಗಲವೂ ಹುಡುಕಿದೆ
ಬೆಳ್ಳಕ್ಕಿಯಂತಲೆವ ದಾದಿಗಳನು
ಕೇಳಿದೆನು, "ಇಲ್ಲಿ ಎಲ್ಲಾದರೂ ಕಂಡಿರಾ?
ಚಿನ್ನಮ್ಮನ ಕಂದ ರಾಜುವನ್ನು?" ॥೨॥

ಸೋಜಿಗದಿ ಅಂದರು. "ಚಿನ್ನಮ್ಮ ! ರಾಜುವೆ?
ಯಾರವರು? ಕೇಳಲೇ ಇಲ್ಲ ಹೆಸರು?"
ಅಂದುಕೊಂಡಿದ್ದನು ಇಲ್ಲೆ ಎಲ್ಲಾದರೂ
ಹವಳದ ತುಟಿಯ ಕಂದ ಇರಬಹುದು ॥೩॥

ಬಿಸಿ ನೀರಿನಿಂದೆರೆದು. ಪೌಡರ, ಪಿಯರ್ಸಗಳ
ಪರಿಮಳದ ಹೊದಿಕೆಯಲಿ. ಅಪ್ಪಿಕೊಂಡು
ಬೆಳ್ಳಗಿನ ರೆಕ್ಕೆಗಳ ಈ ದಾದಿ. ನಿನ್ನನ್ನು
ಮಲಗಿಸಿರಬಹುದು. ಎಂದಿದ್ದೆ ತಂದು ॥೪॥

ಹಳದಿ ಹೂಗಳು ಸುರಿದ ಸಾಲುಗಿಡ. ಆಚೀ
ಚೆ – ಪ್ರೀತಿಸುವ ಆತುರದ ಸ್ವರಗಳಲ್ಲಿ
ಬರಹೋಗುವವರು. ಸ್ತೊತ್ರೋಭೂಷಣರು. ಹಕ್ಕಿ
ಗಳು ಗಾಯಗಳ ತೊಳೆದಿರುವ ಮರಗಳಲ್ಲಿ ॥೫॥

ಹೊಂಬಿಸಿಲು ಬ್ಯಾಂಡೇಜು ಬಿಚ್ಚಿರುವ ಕಿಟಕಿ
ಬೆಳಕಿನ ನಿಪಲ ಚೀಪಿರುವ ಮಕ್ಕಳೊಡನೆ
ಇಲ್ಲಿಯೇ ಮುನಿಸಿಪಲ್ ಹೆರಿಗೆ ಆಸ್ಪತ್ರೆಯ
ಲಿ. ಹಿಡಿದು ಹಾಲಿನ ಸೀಸೆ ಬೆರಳ ನಡುವೆ ॥೬॥

ಹರ್ಷ ಧ್ವನಿಯ ನುಡಿಸುತ್ತಿರಬಹುದೆಂದಿದ್ದೆ
ಹುಡುಕಿದೆ, ಕೇಳಿದೆ ಎಲ್ಲ ವ್ಯರ್ಥ.
''ಚಿನ್ನಮ್ಮನ ಕಂದ ರಾಜುವನು ಕಂಡಿರ?''
ತಿಳಿಯಲೇ ಇಲ್ಲ ಜನ. ಪ್ರಶ್ನೆಯರ್ಥ? ॥೭॥

ಆಗಲೆ ಒಂದು ದಿನ ತಿಳಿಯಿತು. ನೀನಿಲ್ಲಿ
ಕೆಂಪು ಹುಡಿ ಮೈಗೆಲ್ಲ ಬಳಿದುಕೊಂಡು
ಜಲ್ಲಿ ಕಲ್ಲನು ಹೊತ್ತ ಲಾರಿಗಳ ಗಾಲಿಗಳ
ಸಂದಣಿಯ ಸದ್ದುಗಳ ಅವಚಿಕೊಂಡು ॥೮॥

ಒಮ್ಮೆ ತಿಳಿನೀಲ ಮುಗಿಲಿನ ಹರಿದ ಮೋಡ
ಗಳ, ಇನೊಮ್ಮೆ ಯಾವುದೊ ಕಂದು ಹಕ್ಕಿ
ಲಕ್ಕವಳ್ಳಿಯ ಅಣೆಕಟ್ಟು ಬಳಿ ಕುಳಿತಾ
ಗ, ಎಸೆದಿರುವ ಪುಟ್ಟ ರೆಕ್ಕೆ ॥೯॥

ನೋಡುತ್ತ; ದಣಿದರೂ ಹಸಿದರೂ ಜುಲು
ಮಿಂದ, ಬತ್ತಿರುವ ತುಟಿಯಲ್ಲಿ ನಗುವ ತಿಕ್ಕಿ
ಬಳಿ ಬಂದು ಚಿನ್ನಮ್ಮ ಕೊಟ್ಟ ಆ ಜೋಲುಮೊ
ಲೆ, ಚೀಪಿರಲು ಮಿನುಗಿತ್ತು ದೂರ ಚಿಕ್ಕಿ ॥೧೦॥

ಆಗಲೆ ತಿಳಿದದ್ದು; ರಾಜುವಿನ ತೊಟ್ಟಿಲು
ಬೀದಿಯಲಿ ಹರಡಿದ್ದ ಸೀರೆ ತುಂಡು
ಮತ್ತೆ ಬೆಳಗಾದಾಗ, ಕೇಳದಂತಳುವದು
ಕೂಲಿಗೆ ತೆರಳುವ ತಾಯ ಕಂಡು ॥೧೧॥

## ೪೧. ಕಣಗಿಲು ಗಿಡದಲ್ಲಿ ಹುಡುಗ

ಬೇಸರದ ಬಿಸಿಲು ಮಧ್ಯಾಹ್ನ ಗೋಪುರದಲ್ಲಿ
ಗಡಿಯಾರ ಬಾರಿಸಿತು, ಗಂಟೆಯೊಂದು
ಶಾಲೆ ತಪ್ಪಿಸಿ ಹುಡುಗ, ಗುಡಿಯ ಹಿಂಬದಿಗಿರುವ
ಕಣಗಿಲದ ಗಿಡದಲ್ಲಿ ಕುಳಿತ ಬಂದು ೧

ಕೆಳಗೆಲ್ಲ ಬರಿದು, ತುದಿಯಲ್ಲಿ ಎಲೆಗಳು ಹೂವು
ಕಾಲು ತೂಗಿಸಿ ಆಡಿಸುತ್ತ ಕಂಡು
'ಪಾಪ ದುರ್ದೈವಿಗಳು' ಎಂದು ಕನಿಕರಿಸಿದನು
ಶಾಲೆಯಲ್ಲಿರುವವರ ನೆನೆಸಿಕೊಂಡು ೨

ಎಷ್ಟೊಂದು ಕಣಗಿಲದ ಹೂವು ಅರಳಿವೆ ಇಲ್ಲಿ
ಉಳುವ ಹೊಲದಲ್ಲಿರುವುದೆಂಥ ನಲಿವು !
ಅಲ್ಲಲ್ಲಿ ತೇಲುತಿವೆ ನೀಲ ಮೋಡದ ತುಂಡು
ಎಷ್ಟೊಂದು ವಿಸ್ತಾರವಿಹುದು ನೆಲವು ! ೩

ಇಲ್ಲಿ ಪಾಠಗಳಿಲ್ಲ, ಇಲ್ಲಿ ಸಂಧಿ ಸಮಾಸ
ಇಲ್ಲ ವನಜೂಲಾದ ರೇವು ರೈಲು
ಇಲ್ಲಿ ಸುಳಿಯವು ಕೋನ ತ್ರಿಜ್ಯಗಳ ಹಾವಳಿಯು
ಇಲ್ಲಿ ತೂಕಡಿಕೆಗಳ ದೊಡ್ಡ ಬೈಲು ೪

ಬಣ್ಣ ಬಣ್ಣದ ನೀರು ಸೀಸೆಯಲಿ ಸುರಿದಂತೆ
ಗಂಟೆ ಹೊಡೆದಾಗೊಂದು ವಿಷಯ ಸುರಿದು
ಒಮ್ಮೆ ಆವಾಟನಾಡಿ, ಇರುಳು ನಿದ್ದೆಯ ಮಾಡಿ
ಬಂದ ಮರುದಿವಸವೇ, ಸೀಸೆ ಬರಿದು ೫

ಪಾಠಗಳು ನಡೆದಲ್ಲಿ ಮೋಡ ತೇಲುವುದಿಲ್ಲ
ಗಾಳಿ ಬೀಸುವದಿಲ್ಲ ಎಲೆಗಳಿಲ್ಲ
ಯಾವ ರಾಸಾಯನಿಕ ಕ್ರಿಯೆಗೆ ಒಳಪಡಿಸಿಯೂ
ಮನದಲ್ಲಿ ಸಂತಸದ ಅಲೆಗಳಿಲ್ಲ ೬

ಪದ್ಯಗಳ ಹಾಡಿಯೂ ಹಕ್ಕಿಗಳ ಹಾಗಲ್ಲ
ಹುಲ್ಲಿನಂತಾದರೂ ಹಸಿರು ಇಲ್ಲ
ಧ್ರುವದಿಂದ ಧ್ರುವಕೆ ನಾವಲೆದರೂ, ನಮಗಿಲ್ಲಿ
ಆಡಿಸಲು ಒಂದಿಷ್ಟು ಉಸಿರು ಇಲ್ಲ ೭

ಮಳೆಯಂತೆ ಸುರಿದರೂ ನೆಲದಂತೆ ತೊಯ್ದಿಲ್ಲ
ಇರದವರಿಗಿಲ್ಲುಂಟು ನೂರು ದುಃಖ
ಸಿಡಿಲೆರಗಿ ಬೆಟ್ಟಗಳ ಸೀಳಿದರು ತಪ್ಪಿಲ್ಲ
ಹೆಗಲೇರಿ ಕುಳಿತವರ ಖೊಟ್ಟಿ ಲೆಖ್ಖ ೮

ಹೂವುಗಳ ನೆರೆಯಲ್ಲಿ ಹಾಡಿಕೊಂಡನು ಹುಡುಗ
ಬಿಡುಗಡೆಯ ಸವಿಯುಂಡ ಕೈದಿಯಂತೆ
ಧ್ವಜದಂತೆ ಮೇಲಿರುವದೆ ಮೇಲು ಮರೆಯಾಗಿ
ಕುಳಿತವರಿಗೆಲ್ಲಿಹುದು ನಿಲುವ ಚಿಂತೆ ೯

ಗಿಡದ ಎತ್ತರವನ್ನೆ ತನ್ನ ಎತ್ತರವೆಂದು
ತಿಳಿದು, ಹುಡುಗನು ಕುಳಿತ ಟೊಂಗೆಯಲ್ಲಿ
ಹೊರೆಗಳನು ಹೊತ್ತವರು, ಉರುಹಾಕಿ ಉಳಿದರು,
ಬೆಳೆಯದೆ, ಮೊದಲಿದ್ದ ವರ್ಗದಲ್ಲಿ ೧೦

ಇಷ್ಟೆಲ್ಲ ಮರೆಮಾಚಿ ಎಷ್ಟು ಮೇಲಿದ್ದರೂ
ಬಾರಿಸಿಯೆ ತೀರುವದು ಮತ್ತೆ ಗಂಟೆ!
ಕಲಿಯುಗದೊಳಿದ್ದವಗೆ, ಕಲಿಯುವುದು ತಪ್ಪೀತೆ?
ಹತ್ತಿದವ ಇಳಿದು ಬರದಿರುವದುಂಟೆ? ೧೧

## ೪೨. ನಾಗಿಯ ಕಥೆ

ಬೆಕ್ಕು ಬರುವುದಿಲ್ಲ ಮಗೂ, ಹಾಲು ಮಡಕೆ ಮುಚ್ಚಿಡು
ಕತ್ತಲಲ್ಲಿ ಎಡವದಂತೆ ದೀಪವೊಂದು ಹಚ್ಚಿಡು ೧

ಬೆಟ್ಟಗಳಿಗೆ ಹಗಲಿರುಳೂ ನೀಲ ನೀಲ ನಿದ್ದೆಯು
ಊರ ಸುತ್ತ ತೆನೆಗಳಿಂದ ತೊನೆವ ಹಸಿರು ಗದ್ದೆಯು
ಸಾಲು ಮರದ ನೆರಳಿನಲ್ಲಿ ಹಾವಿನಂಥ ಹಾದಿಯು
ಇಲ್ಲಿ ಹೆಜ್ಜೆಯಿಡುವ ಹೆಣ್ಣಿಗಿರುವ ಭಯ ಅನಾದಿಯು ೨

ಊರು ಉಡಿಯೊಳಿಟ್ಟುಕೊಂಡು ನಿಂತ ತೆಂಗು ಅಡಿಕೆಯು
ಸಾಲದಲ್ಲಿ ಸೋಲಿನಲ್ಲಿ ಬೇಯುವವರ ಮಡಕೆಯು
ಮುಗಿಲು ಹರಿದ ಹಾಗೆ ಸುರಿದುಬಿದ್ದ ಮಳೆಯ ನೀರಿಗೂ
ನೆಲದ ನೋವು ಎದೆಯ ಕಾವು ಆರಲಿಲ್ಲ ಯಾರಿಗೂ ೩

ಇಲ್ಲೆ ಇದ್ದ ಮಂಜು ಗೌಡ ಕೆರೆಯ ಬಯಲಿನಂಚಿಗೆ
ಹೂವ ಹೊದಿಸುತಿತ್ತು ಬಳ್ಳಿ ಹೆಣೆದ ಮನೆಯ ಹೆಂಚಿಗೆ
ಅವನಿಗಿದ್ದಳೊಬ್ಬ ಮಗಳು, ನಾಗಿ ನಾಗವೇಣಿಯು
ಹಾವಿನಂಥ ಜಡೆಯ ತುಂಬ ಹೂವ ಮುಡಿವ ರಾಣಿಯು ೪

ಬೊಗಸೆಗಣ್ಣು ಗಲ್ಲದಲ್ಲಿ ಮೂಡಿ ನಗೆಯ ಮಲ್ಲಿಗೆ
ಕಂಪು ಸೂಸಿ ಕರೆಯುತಿತ್ತು ಕನಸುಗಳನು ಮೆಲ್ಲಗೆ
ಅವಳ ನುಡಿಯ ಮಿಂಚುಕಿಡಿಯ ಹೊತ್ತಿಸಿತ್ತು ಸುತ್ತಲೂ
ಅವಳ ನಗೆಯ ನೂರು ಬಗೆಯ ನೆನಪು ಬುಗ್ಗೆ ಎತ್ತಲೂ ೫

ಹೊಳೆಯ ಅಲೆಗಳೆತ್ತಿಕೊಂಡು ಸಾಗುವಂತೆ ನಾವೆಗೆ
ಹಾಡು ಹರಿದು ಹೋಗುವಂತೆ ಮಾವಿನಿಂದ ಮಾವಿಗೆ
ಹುಲ್ಲು ಹೊರೆಯ ಹೊತ್ತುಕೊಂಡು ಅವಳು ಬರುವ ಹೊತ್ತಿಗೆ
ಸೂರ್ಯನೇಕೊ ತಣ್ಣಗಾದ ನಿಂತರೂನು ನೆತ್ತಿಗೆ ೬

ಅವಳ ಹಗುರು ಹೆಜ್ಜೆಯಲ್ಲಿ ಚೆಲುವು ಹೆಜ್ಜೆ ಇಟ್ಟಿತು
ಗೇರು ಹೂವಿನಂತೆ ಪ್ರೀತಿ ಎದೆಗೆ ಲಗ್ಗೆ ಇಟ್ಟಿತು
ಅವಳ ಕೈಯ ಕೊಡವ ಕಂಡು, ನೀರು ಬೇಗ ತುಂಬದು
''ನಿಲ್ಲು ನಾಗಿ ನಿಲ್ಲು, ನೋಡಬೇಕು ನಿನ್ನ'ನೆಂಬುದು ೭

ಒಮ್ಮೆ ಊರಿಗೆಲ್ಲ ತೇರನೆಳೆವ ದೊಡ್ಡ ಸಂಭ್ರಮ
ಮುಗಿಲು ತನ್ನ ಹಣೆಯೊಳಿಟ್ಟುಕೊಂಡು ದುಂಡು ಕುಂಕುಮ
ಅಂದು ಬೇಗ ಮಿಂದು ನಾಗಿ ಹಸಿರು ಸೀರೆಯುಟ್ಟಳು
ಇಂದ್ರಧನುವಿನಂತೆ ಹೊಳೆವ ರವಕೆಯನ್ನು ತೊಟ್ಟಳು ೮

ನಾಗಿ ಬಳುಕಿ ಸಾಗಿ ಬರಲು ಕರುವು ಕೂಡ ನಾಚಿತು
ಹಿಗ್ಗು ತುಂಬಿ ಹಸುವು ಎದ್ದು ಕೆಚ್ಚಲನ್ನು ಚಾಚಿತು
ಮಡಕೆ ತುಂಬ ಹಾಲು ಕರೆದು ತಾಯ ಕೈಗೆ ಕೊಟ್ಟಳು
''ತೇರ ನೋಡಿ ಬರುವ ಬಾರೆ'' ಎಂದು ಆಸೆಪಟ್ಟಳು ೯

ತಾಯಿ ಮಗಳು ಮನೆಯ ದಾಟಿ ನಡೆಯುತಿರಲು ತೇರಿಗೆ
ಕೊಕ್ಕರೆಗಳು ಇಳಿಯುತಿದ್ದವಾಗ ಕೆರೆಯ ನೀರಿಗೆ
ಚುಂಚಿನಲ್ಲಿ ಚುಂಚನಿರಿಸಿ, ಹಕ್ಕಿಯೆರಡು ಆಡಿವೆ
ನೆರಳು ದಾರಿಯಾಚೆ ಈಚೆ ಹಸಿದ ಕಣ್ಣು ನೋಡಿವೆ ೧೦

ತಾಯ ಜೊತೆಗೆ ನಡೆದ ನಾಗಿ, ಏಕೋ ನಿಂತುಕೊಂಡಳು
''ಅಮ್ಮ ಎಷ್ಟು ಚೆಂದ ಬೆಕ್ಕು ನೋಡೆ ಇಲ್ಲಿ'' ಅಂದಳು
ಕರುಳು ಕರಗುವಂಥ ಚೆಂದ ಬೆಕ್ಕಿನೊಂದು ಸ್ವರವನು
ತಾಯಿ ಮಗಳು ಆಲಿಸಿದರು 'ಮಿಯಾವ್' ಎಂಬ ಕರೆಯನು ೧೧

ಬದಿಗೆ ನೋಡಿದಾಗ ಇತ್ತು : ಅಲ್ಲೆ ಹಾದಿಯಲ್ಲಿಯೆ
ಎತ್ತಿ ಎದೆಯೊಳವಚಿಕೊಂಡ ನಾಗಿಗೆಂಥ ಲಲ್ಲೆಯೆ!
ಮುದ್ದು ಸುರಿವ ಬಿಳಿಯ ಬೆಕ್ಕು ಮೈಯ ಸುಖದ ತುಪ್ಪಳ
ಹಾಲಿಗಾಗಿ ಹೊಂಚಿಬರುವ ಕಾಲಿಗುಂಟೆ ಸಪ್ಪಳ ೧೨

ಎಲ್ಲಿ ನೋಡಿದಲ್ಲಿ ಜನರ ಗುಂಪು ಗುಂಪು ಗದ್ದಲ
ಹೆರಳು ಕಂಡು ನೆರಳು ಕಂಡು, ಜನರು ನೂಕು ನುಗ್ಗಲ

ಅಲ್ಲಿ ಕುಳಿತು ಕೂಗುತಿದ್ದ ಸೀರೆಯವನು ಸೀರೆಗೆ
'ಸೀರೆ ಬೇಕೆ ಸೀರೆ' ನಿಮಗೆ ಬನ್ನಿರೊಂದು ಬಾರಿಗೆ ೧೩

ಹಸಿರು ಸೀರೆ, ನೀಲ ಸೀರೆ, ಜರಿಯ ಸೆರಗು ಸೀರೆಯು
ಉಟ್ಟು ನೋಡಿ ತೊಟ್ಟು ನೋಡಿ ಹಸೆಯ ಮೆರಗು ಸೀರೆಯು
ತಾಯ ಜೊತೆಗೆ ನಾಗಿ ಅಲ್ಲಿ ಹೋಗಿ ನಿಂತುಕೊಂಡಳು
ಕಣ್ಣು ಸೆಳೆವ ಸೀರೆಯೊಡನೆ, ಸೀರೆಯವನ ಕಂಡಳು ೧೪

ಚಿಗುರು ಮೀಸೆ ಎಳೆಯ ನಗೆಯ ರೂಪವಂತ ಆತನು
ಎದೆಯ ಕದವ ತೆರೆದು ನುಡಿದ ಕಣ್ಣಿನಲ್ಲೆ ಮಾತನು
ಕಣ್ಣು ಕಣ್ಣಿನಲ್ಲಿ ಕೂಡಿ, ಝಳಪಿಸಿತ್ತು ಮಿಂಚನು!
ಪ್ರೀತಿಯೆಂಬ ಸಿಡಿಲು ಹೊಡೆಯುತಿತ್ತು ಹಾಕಿ ಹೊಂಚನು ೧೫

ಮೆತ್ತಗೊರಗಿದಂಥ ಬೆಕ್ಕು ಎದ್ದು ಬಾಲವಾಡಿಸಿ
ನಾಗಿಯೊಡನೆ ನಲಿಯುತಿತ್ತು ಕನಸುಗಳನು ಕಾಡಿಸಿ
ಆಗಿನಿಂದ ನಾಗಿ ಬೇರೆ, ಹಣೆಗೆ ಹವಳ ಮೂಡಲು
ಹಸಿದು ಬಂದ ಹಸಿರು ಕಣ್ಣು ಬಳಸಿ ಬಂದು ನೋಡಲು ೧೬

ಯಾರು ಹಾಕಿಹೋದರವಳ ಎದೆಗೆ ಗಂಧಧೂಪವ?
ಯಾರು ಹೊತ್ತಿಸಿಟ್ಟರೊಳಗೆ ಬಂಗಾರದ ದೀಪವ?
ಯಾವ ಕೆರೆಗೆ ಯಾರ ಕರೆಗೆ ಹಾರುತಿಹವು ಕೊಕ್ಕರೆ?
ಯಾವ ತಾರೆ ಇಲ್ಲಿ ಸೂರೆ ಮಾಡುತಿಹವು ಅಕ್ಕರೆ? ೧೭

ಅಂದಿನಿಂದ ನಾಗಿ ಬೇರೆ, ಬೆಕ್ಕಿನೊಂದಿಗಿರುವಳು
ಅದರ ಕೂಡ ಉಂಡುತಿಂದು ಅದರೊಂದಿಗೆ ನಲಿವಳು
ಹಾಲಿನಂಥ ಬಿಳಿಯ ಬೆಕ್ಕು, ಲಲ್ಲೆಯಾಡಿ ಕರೆಯಲು
ಮೆಲ್ಲನೆದ್ದು ಗಲ್ಲ ಮುಟ್ಟಿ, ಅಲ್ಲಿ ಇಲ್ಲಿ ಬರುವದು ೧೮

ಹಿಟ್ಟು ಚೆಲ್ಲಿದಂಥ ಬೆಳಕು ಚಂದ್ರನಿಂದ ಸುರಿಯಲು,
ಬೆಟ್ಟದಲ್ಲಿ ದಟ್ಟ ಮಂಜು ಕವಿದು ಮೇಲೆ ಸರಿಯಲು
ಕಣಿವೆಯಲ್ಲಿ ಹಾಲು ಮೌನ ಕಾಡಿಗೆಲ್ಲ ಹಬ್ಬಿತು
'ಸೀರೆ ಬೇಕೆ ಸೀರೆ ನಿಮಗೆ?' ಸೆರಗಿನಂತೆ ತಬ್ಬಿತು ೧೯

ತಾರೆಗಳನು ಸೂರೆ ಮಾಡಿ ಇರುಳು ಬರಲು ಬಾನಿಗೆ,
ತುಂಬಿ ಹರಿವ ತೊರೆಯ ಹಾಡಿಗಾಡುತಿರುವ ಮೀನಿಗೆ
ಪ್ರೀತಿ ಹೊತ್ತಿಸಿಟ್ಟ ದೀಪ, ದಾರಿಯಲ್ಲಿ ಕತ್ತಲು
ದೀಪ ನಿಲ್ಲಬಹುದೆ ಇಲ್ಲಿ ಗಾಳಿ ಬಂದು ಮುತ್ತಲು? ೨೦

ಪ್ರೀತಿಯೊಂದು ನಾಗಸ್ವರ ಆದರ ಕರೆಯನಾಲಿಸಿ,
ಯಾವ ರೇವಿಗೊಯ್ಯುತಿಹುದೊ ನಾಗಿಯನ್ನು ತೇಲಿಸಿ
ಊರ ಜನರಿಗೇನು ಗೊತ್ತು? ಸೀರೆಯವನ ಕೂಗಿಗೆ
ಪ್ರೀತಿ ಪಂಜು ಹೊತ್ತಿಸಿತ್ತು ನಾಗವೇಣಿ ನಾಗಿಗೆ ೨೧

ಸಾಲುಮರದ ನೆರಳಿನಲ್ಲಿ ಹಾವಿನಂಥ ಹಾದಿಗೆ
ಕೈಯೊಳೊಂದು ದೀಪ ಹಿಡಿದು ಸಾಗುತಿರಲು ನಾಗಿಗೆ
ತೆರೆದ ಹಾಲು ಮಡಕೆ ನೋಡಿ, ಬಿಳಿಯ ಬೆಕ್ಕುಹಾರಿತು
ಕತ್ತಲಲ್ಲಿ ಎಡಹುವಂತೆ ಹಿಡಿದ ದೀಪವಾರಿತು ೨೨

ತಾಯಿ ಬಂದು ನಾಗಿ ಎಂದು, ಅಲ್ಲಿ ಇಲ್ಲಿ ಕರೆದಳು
ಮಂಜು ಗೌಡ ಮಗಳ ಹುಡುಕಿ ಊರುಕೇರಿ ಅಲೆದನು
ಪ್ರೀತಿ ಹೆಜ್ಜೆಯಿಡುವ ಹಾದಿ, ಹಿಂದೆ ಬರದ ಹಾದಿಯು
ಇಲ್ಲೆ ಅಲ್ಲವೇನು ಹೆಣ್ಣಿಗಿರುವ ಭಯ ಅನಾದಿಯು ೨೩

# ೪೩. ಹುಡುಗಿಯ ಕಥೆ

ಮುರಿದುಹೋದ ಗುಡಿಸಲೊಂದು ಹರಿದುಹೋದ ಚಾಪೆಯು
ತೊಟ್ಟುಕೊಂಡ ಲಂಗದಲ್ಲಿ ಎಂಟೊ ಹತ್ತೊ ತೇಪೆಯು
ಸೊರಗಿಹೋದ ಕೊರಗಿಹೋದ ಮೈಯ ಕೆಂಡ ಕಂಡವು
ಪುಟ್ಟ ಹುಡುಗಿ ಅವಳ ಕಣ್ಣು ಏನೊ ಏನೊ ಕಂಡವು
ಮೂಲೆಗೊರಗಿದಂಥ ಅಜ್ಜಿ ಕೆಮ್ಮಿ ತೆವಳಿ ಬಂದಳು
''ಹೇಗೆ ಉಂಟು ಮಗೂ?'' ಎಂದು ಮೈಯ ಮುಟ್ಟಿ ಅಂದಳು
''ಬಾ ಅಜ್ಜಿ ಇಲ್ಲಿ ಬಾ ಕಾಫಿ ಹಾಕು ಕಪ್ಪಿಗೆ''
ಕಿವುಡ ಮುದುಕಿ ಅಜ್ಜಿ ಮಾತ್ರ ಕಲ್ಲಿನಂತೆ ತೆಪ್ಪಗೆ
ಚಳಿಗೆ ತುಟಿಗಳೆಲ್ಲ ಒಡೆದು ಕೂದಲೆಲ್ಲ ಕೆದರಿವೆ
ಒಡೆದ ಕಪ್ಪು ಹಿಡಿದ ಹುಡುಗಿ ಕಣ್ಣು ಹೊರಳಿ ಹೆದರಿವೆ
ಮಿಣುಕು ದೀಪದಲ್ಲಿ ನಿಂತ ಮಂಜು ನೆರಳು ಕಂಡಳು
ಸುಡುವ ಮೈಯ ಸುತ್ತಿಕೊಂಡ ಚಳಿಗೆ ನಡುಗಿಕೊಂಡಳು
''ಅಮ್ಮ ಬಂದಳಮ್ಮ ಈಗ. ಎಷ್ಟು ದಿವಸ ಆಯಿತೆ?
ಇಷ್ಟು ದಿವಸ ಎಲ್ಲಿ ಇದ್ದೆ ಈಗ ಹಂಬಲಾಯಿತೆ?
ಬಾ ಅಮ್ಮ ಇಲ್ಲಿ ಬಾ ಕಾಫಿ ಹಾಕು ಕಪ್ಪಿಗೆ''
ಹೋದವರಿಗೆ ಬರುವುದುಂಟೆ ಬದುಕಿದವರು ನೆಪ್ಪಿಗೆ
ಪುಟ್ಟ ಹುಡುಗಿ ಏನೊ ಏನೊ ನೆನೆದುಕೊಂಡು ನೊಂದಳು
ಅಲ್ಲಿ ಇಲ್ಲಿ ಮಗ್ಗುಲಾಗಿ ನೆರಳು ನೋಡಿ ಅಂದಳು
''ಅಪ್ಪ ಕೂಡ ಬಂದನಲ್ಲ ಅಪ್ಪ ಈಗ ಬಂದೆಯಾ?
ಎಲ್ಲಿ ಇದ್ದೆ ಇಷ್ಟು ದಿವಸ ನನ್ನ ಲಂಗ ತಂದೆಯಾ?
ಸಂಜೆಯಾಗಿ ಹೋಯಿತಲ್ಲ ನಿನ್ನ ಸಂತೆ ತೀರಿತೆ?
ಹೂಗಳಿದ್ದ ಕೆಂಪು ಲಂಗ ತರುವ ನೆಪ್ಪು ಹಾರಿತೆ?
ಬಾ ಅಪ್ಪ ಇಲ್ಲಿ ಬಾ ಕಾಫಿ ಹಾಕು ಕಪ್ಪಿಗೆ''
ಉಸಿರು ನಿಂತ ಪ್ರೀತಿಗುಂಟೆ ಕರುಳ ಬಳ್ಳಿ ಅಪ್ಪುಗೆ?
ನೋವಿನಲ್ಲಿ ನರಳಿ ಹುಡುಗಿ ಕಣ್ಣು ಮುಚ್ಚಿ ತೆರೆದಳು

ಕಂಡ ಕಂಡ ನೆರಳಿಗೆಲ್ಲ ಕೈಮಾಡಿ ಕರೆದಳು
ಗಾಳಿಗೊಡ್ಡಿದಂಥ ಮಿಣುಕು ದೀಪ ಕುಣಿಯ ತೊಡಗಿತು
ಬೇವಿನಲ್ಲಿ ಕುಳಿತುಕೊಂಡ ಗುಮ್ಮ ಒಮ್ಮೆ ಗುಡುಗಿತು
ಕಪ್ಪು ಬಂತು ಹಾರಿ ಹಾರಿ ಕಪ್ಪೆಯಂತೆ ಹತ್ತಿರ
ಕಾಗೆ ಬಂತು ಗೂಗೆ ಬಂತು ಬಂತು ಆಳಿನೆತ್ತರ
ದೊಡ್ಡದೊಂದು ಕರಡಿ ಬಂತು ಕೈಯ ಚಾಚಿ ಹತ್ತಿರ
ಹೆದರಿ ಹೆಪ್ಪುಗಟ್ಟುತಿತ್ತು. ಪಾಪ ಎಳೆಯನೆತ್ತರ
ಕುಣಿಯುತಿರುವ ಗಾಳಿಯೆಲ್ಲೊ ಕತ್ತಲಲ್ಲಿ ಅಡಗಿತು
ದಾಪುಗಾಲನಿಟ್ಟು ಬಂದ ಗುಮ್ಮ ಮತ್ತೆ ಗುಡುಗಿತು
ಉಸಿರಿಗೊಮ್ಮೆ ತೇಕು ಹತ್ತಿ ಅಲ್ಲಿ ಇಲ್ಲಿ ಹೊರಳುತ
ಗುಡ್ಡದಂಥ ಕಪ್ಪು ಕಂಡು ಕಣ್ಣು ಮುಚ್ಚಿ ತೆರೆಯುತ
ನೆನಪಿನೆಲೆಗಳುದುರುತಿರಲು 'ನೀರು ನೀರು' ಅಂದಳು
ಉಸಿರಗಡಿಯ ದಾಟುವಾಗ ಒಮ್ಮೆ ಚೀರಿಕೊಂಡಳು
"ಬಾ ಅಜ್ಜಿ ಇಲ್ಲಿ ಬಾ ಕಾಫಿ ಹಾ...ಕು ಕ...ಪ್ಪಿ..ಗೆ"
ದೀಪದೆಣ್ಣೆ ತೀರಿದಾಗ ಕೇಳಿಸುವುದೆ ಮುಪ್ಪಿಗೆ?
ಪುಟ್ಟದೊಂದು ಜೀವವಂದು ಒರಗಿ ತಣ್ಣಗಾಯಿತು
ಎರಡು ಕಣ್ಣು ಕಳೆದುಕೊಂಡು ಲೋಕ ಸಣ್ಣದಾಯಿತು.

# ೪೪. ಮಂಜುಗೌಡನ ಕಥೆ

ಎಳೆಬಿಸಿಲಿಗೆ ಮೈಯಕಾಸಿ ಮುಗಿಲಿಗೆ ಕೈ ಮುಗಿದು
ಹುಲಿಗೌಡನು ಹೇಳಿದನು, ಮಂಜನನ್ನು ಕರೆದು
''ಕೊಡಲಿ ತಗೊ, ಕಾಡಿಗ್ಹೋಗು, ಸೌದೆ ತರಬೇಕು
ಹೊತ್ತು ಮಾಡಬೇಡ ಮಗ, ಬ್ಯಾಗನೆ ಬರಬೇಕು'' ೧

ಕೋಳಿಗೆರಡು ಕಾಳನೆಸೆಯುವಂತೆ ನುಡಿದ ಮಾತು
ಕೇಳಿ ಮಂಜ ನುಡಿದನವಗೆ, ''ಆಯಿತಪ್ಪ ಆತು''
ಕೈ ಬಾಯನು ತೊಳೆದುಕೊಂಡು ಮಂಜುಗೌಡ ಬೇಗ
ಗಂಜಿ ಉಂಡು, ಕವಳ ಹಾಕಿ, ತಯಾರಾದ ಬೇಗ ೨

ಮರಿಗಳೊಡನೆ ಅಂಗಳದಲಿ ಓಡಾಡಿತು ಕೋಳಿ
ಕಾಳು ಸಿಕ್ಕ ಸಡಗರವನು ಊರಿಗೆಲ್ಲ ಹೇಳಿ
ಒಣಹುಲ್ಲಿನ ಬಣವೆಯೇರಿ ಕೂಗುತ್ತಿತ್ತು ಹುಂಜ
ಸುಗ್ಗಿ ಹಬ್ಬ ಕುಣಿವ ಹಾಗೆ ಮೆಟ್ಟಲಿಳಿದ ಮಂಜ ೩

ಹೆಗಲಿಗೊಂದು ಕೊಡಲಿ ಹೊತ್ತು, ಹಗ್ಗಬಲೆ ಹಿಡಿದು
ಕಾಡಿಗೆಂದು ನಡೆದುಬಿಟ್ಟ, ದೈವಕೆ ಕೈ ಮುಗಿದು
ಹೊಳೆಗೆ ಬಂದ, ಹೊರಟುನಿಂತ ದೋಣಿ ಹತ್ತಿ ಗೌಡ
ಕುಳಿತು, ಕಂಡ ನೀಲಬಾನೊಳಲೆವ ತುಂಡು ಮೋಡ ೪

ಹಕ್ಕಿಯ ಧ್ವನಿ ತುಂಬಿಕೊಂಡು, ಗೇರು ಹೂವ ಮೂಸಿ,
ಬೆಟ್ಟವಿಳಿದು ಓಡಿ ಬಂತು ಗಾಳಿ ಬೀಸಿ ಬೀಸಿ,
ಗದ್ದೆಯ ಹಾಳೆಯ ಮೇಲಿಂದೆದ್ದವು ಬೆಳ್ಳಕ್ಕಿ
ಬಿಸಿಲು ಕೂಡ ಬಾಡುತ್ತಿತ್ತು ಬೆಟ್ಟದ ಮೈತಿಕ್ಕಿ ೫

ಓಡುತ್ತಿತ್ತು ಹೊಳೆಯೊಂದಿಗೆ ದೋಣಿ, ಗದ್ದೆ ತೋಟ
ಹೊತ್ತೇರಲು, ಹೊಳೆಯ ತುಂಬ ನೆರಳು ಬೆಳಕಿನಾಟ
ನೀರಿನೊಳಗೆ ನೆರಳಾದವು ತೆಂಗು ಸಾಲು ಸಾಲು
ಹೊಳೆಯ ಮೀನು ಕುಡಿದವಲ್ಲಿ ಸೀಯಾಳದ ಹಾಲು ೬

ಕಾಡು ಬಂತು, ಕಣಿವೆ ಬಂತು, ಮಂಜ ದೋಣಿಯಿಳಿದ
ಸದ್ದಿಲ್ಲದ ಚಳಿಯ ಕೋಟೆ, ಕಾಡಿನಲ್ಲಿ ನಡೆದ
ನಡೆದಲ್ಲಿಯ ತಣ್ಣಗಿದ್ದ ತರಗೆಲೆಗಳ ಸದ್ದು
ಕಡಿದುಹೋದ ಬಾಂಧವ್ಯಕ್ಕೆ ಹಂಬಲಿಸುತ ಬಿದ್ದು ೭

ಅಲ್ಲಿಗಲ್ಲಿ ನಿಂತಿದ್ದವು ದೊಡ್ಡ ದೊಡ್ಡ ಮರಗಳು,
ಆಗಲೊಮ್ಮೆ ಈಗಲೊಮ್ಮೆ ಪಶುಪಕ್ಷಿಯ ಸ್ವರಗಳು
ಕವಿದುನಿಂತ ಚಳಿಯ ಮಂಜು ಕತ್ತಲನ್ನು ಕಂಡಿತು,
ಗಿಡಗಿಡವೂ ಅಂಜಿಕೊಂಡು, ಮೈಗೆ ಮುಳ್ಳು ಬಂದಿತು ೮

ಹೆಪ್ಪು ಹಾಕಿದಂಥ ಮೌನ, ಸುತ್ತ ಎಲ್ಲ ಸ್ತಬ್ಧವು,
ಹೊದರೂ ಕಂಟಿ ಪೊದೆಯ ಹಿಂದು ಎಲ್ಲ ನಿಶ್ಶಬ್ದವು
ಎಲೆಎಲೆಗಳ ಬಲೆಗಳಿಂದ ಬೆಳಕು ಸೋರಿ ಬಂದಿತು,
ಹಸಿಯ ಹಸಿರು ಕಾಡಿನಲ್ಲಿ, ಭಯವೊಂದೆ ಬೆಂದಿತು ೯

ಉರುಳಿ ಬಿದ್ದ ಮರಗಳಿಂದ ಟೊಂಗೆ ಹೊತ್ತು ಸೇರಿಸಿ
ಮಂಜುಗೌಡ ಸಾಗಿಸಿದ್ದ ಸೌದೆಗಾಗಿ ಪೇರಿಸಿ,
ಕಿರಿ ಬೆಟ್ಟದ ಮೇಲೆ ನಿಂತ ಎರಡು ಮರವ ಕಂಡನು
ಅವಳಿ ಮರದ ಚೆಲುವು ನೋಡಿ, ಮೈಯ ಮರೆತುಕೊಂಡನು ೧೦

ನಿಲುವು ಒಂದೆ ಚೆಲುವು ಒಂದೆ, ಬೆಳೆದವವೊಂದೆ ಎತ್ತರ
ಕೈಗೆ ಕೈಯ ಹಿಡಿದು ಕೊಂಡ ಹಾಗೆ ತೀರ ಹತ್ತಿರ,
ದಪ್ಪವಾಗಿ ಬೆಳೆದ ಟೊಂಗೆ, ಮುಚ್ಚಿ ಬೆಳೆದ ಎಲೆಗಳು,
ಒಂದರಲ್ಲಿ ಹಳದಿ, ಒಂದರಲ್ಲಿ ಕೆಂಪು ಹೂಗಳು ೧೧

ಭಯದ ಮೂಲ ಮಣ್ಣಿನಲ್ಲೇ; ಇಲ್ಲೇ ಮೊಳೆಯಲಿಲ್ಲವೆ?
ಎಲೆಗಳಾಗಿ ಮರಗಳಾಗಿ, ಇಲ್ಲೆ ಬೆಳೆಯಲಿಲ್ಲವೆ?
ಮರಗಳೆಲ್ಲ ಒಂದಕೊಂದು ಅಪ್ಪಿ ಉಳಿಯಲಿಲ್ಲವೆ?
ಪ್ರೀತಿಯೆಂದೆ ಕರುಣೆಯೆಂದೆ ರಕ್ಷೆಯೆಂದೆ ತಿಳಿಯಲಿಲ್ಲವೆ? ೧೨

ಹಳದಿಹೂಗಳಿಂದ ಸುರಿಯುತ್ತಿತ್ತು ಕೆಂಪು ಕುಂಕುಮ,
ಕೆಂಪು ಕೆಂಪು ಹೂಗಳಿಂದ ಸುರಿಯುತ್ತಿತ್ತು ಅರಿಷಿಣ,
ಎಂಟು ತೋಳಿನಂಥ ಟೊಂಗೆ, ಬಳೆಯ ಸದ್ದು ಕೇಳಲು,
ಮಂಜುಗೌಡ ಆರಳಿಮರದ ಬಳಿಗೆ ನಿಂತು ನೋಡಲು, ೧೩

ಕೊಡಲಿಯಿಟ್ಟು ಕೈಯ ಮುಗಿದ, "ಇವರು ಚೌಡಿ ಚಂಡಿಯೋ"
ಮರಗಳಾಗಿ ನಿಂತುಕೊಂಡ, ಅಮ್ಮನವರ ಬಂಡಿಯೋ
ಕಾಡಿನಮ್ಮ ಊರಿನಮ್ಮ ಕಾಯಬೇಕು ನಮ್ಮನು
ವರುಷಕೊಮ್ಮೆ ಇಲ್ಲಿ ಬಂದು, ಶರಣೆಂಬೆವು ನಿಮ್ಮನು ೧೪

ಅವಳಿ ಮರಕೆ ಮೂರು ಸುತ್ತು ಬಂದು, ಅಡ್ಡ ಬಿದ್ದನು
ಕಾಯಬೇಕು ತಾಯಿಯೆಂದು, ಮಂಜುಗೌಡ ಎದ್ದನು,
ಕಟ್ಟಿಕೊಂಡ ಹೊರೆಯ ಹೊತ್ತು, ಸೌದೆಯವರ ಸಂಗಡ
ಮಂಜುಗೌಡ ಸೇರಿಕೊಂಡ ಮರಳಿ ಬರುವ ಪಂಗಡ ೧೫

ಮನೆಗೆ ಬಂದ ಮಂಜುಗೌಡ, ಅವಳಿಮರದ ಹಂಬಲು,
ಕಾಡಿನಲ್ಲಿ ಕೈಯ ಹಿಡಿದು ನಿಂತ ನೆನಪು ತುಂಬಲು
ಮನಸಿನಲ್ಲಿ ನಿಂತ ಮರವು ಕನಸಿನಲ್ಲಿ ಬಂದವು
ಅಮ್ಮನಂತೆ ಕೈಯನೆತ್ತಿ ಮಂಜುಗೌಡಗಂದವು ೧೬

"ನಾವು ಅಕ್ಕ ತಂಗಿ; ಅವಳಿ ಮರಗಳಾಗಿ ನಿಂದೆವು
ಕಾಡಿನಲ್ಲು ಪ್ರೀತಿಗೇನು ಕೊರತೆಯಿಲ್ಲವೆಂದವು"
ಮುಗ್ಧಜೀವ ನೆನೆಸಿದಲ್ಲಿ ನೆರವು ಕೈಯ ನೀಡಿದೆ
ಭಯದ ಕಾಡಿನಲ್ಲಿ ಕೂಡ ಕರುಣೆಗೆ ಕೈ ಮುಗಿದೆ ೧೭

## ೪೫. ಯೋಧ ಮತ್ತು ಹೆಂಗಸು

ಉರಿಬಿಸಿಲು ಕೆಂಪುಹುಡಿ. ಮೈತುಂಬ ಧೂಳಿಡಿಗಿ
ಕುದುರೆಯಿಳಿದನು ಯೋಧ ಜನರ ಕಂಡು
''ನೀರು ಹಣಿಸುವಿರ ತುಸು'' ಅಂದಿರಲು ಹೆಂಗಸು
ಬೇಗ ಬಂದಳು ಮಡಕೆ ತುಂಬಿಕೊಂಡು ೧

''ಬಳಲಿದಿರಿ, ಪಾಪ. ಬನ್ನಿರಿ ಒಳಕೆ ವಿಶ್ರಮಿಸಿ.''
ಚಾಪೆಯನು ಹಾಸಿದಳು ಕೂತುಕೊಳಲು
''ಇರಲಿ ಬಿಡಿ. ಈ ಮರದ ನೆರಳಲ್ಲೆ ಕೂಡುವೆನು
ತಂಪಾಗಿ ತಬ್ಬಿರುವವಿದರ ಹೆಳಲು'' ೨

''ಬಟ್ಟಲಿನ ತುಂಬ ಇದೆ ಜೇನು. ಈ ಚೊಂಬಿನಲಿ
ತಣ್ಣಗಿನ ನೀರು ಇದೆ, ತೆಗೆದುಕೊಳ್ಳಿ
ಇಲ್ಲಿಹುದು ಬೀಸಣಿಕೆ, ಬಹಳ ಸೆಕೆ ಅಲ್ಲವೆ?
ಇದರಿಂದ ಗಾಳಿಯನು ಬೀಸಿಕೊಳ್ಳಿ'' ೩

ಆಗ ಒಮ್ಮೆಲೆ ಬೀಸಿ ಬಂತು ತೆಂಕಣ ಗಾಳಿ
ದೂರವೆಲ್ಲೋ ಕೇಳಿಬಂತು ಹಾಡು
ಮಾವಿನೆಳಚಿಗುರಿನಲಿ ಚಿಮ್ಮಿ, ಪಯಣಿಗನೆಂದ
''ಇದಕೆ ಜೋಳದ ಪಾಳಿಯಿಲ್ಲ ನೋಡು'' ೪

ಜೇನು ಸವಿದನು ನೀರು ಕುಡಿದು ಮೈಯೊಡ್ಡಿದನು.
ತುಸು ಹೊತ್ತು ತಂಬೆಲರ ನೆರಳಿಗೆಂದು
ಎದ್ದು ಕುದುರೆಗೆ ಥಡಿಯ ಹಾಕಿ ಅಣಿಗೊಳಿಸಿದನು
ಮತ್ತೆ ದೂರದ ತನ್ನ ಪಯಣಕೆಂದು ೫

''ಹೋಗಿ ಬರುವೆನು ತಾಯಿ'' ಎಂದು ಕವಚವ ತೊಟ್ಟು
ಖಡ್ಗವನು ಬಿಗಿದಿಟ್ಟ ಟೊಂಕದಲ್ಲಿ
ಹೆಂಗಸಂದಳು, ''ಆಯ್ತು ಹೋಗಿ ಬನ್ನಿರಿ ಮತ್ತೆ
ಬಂದಾಗ ಬರಬೇಕು ನೀವು ಇಲ್ಲಿ'' ೬

''ಮರೆತುಬಿಟ್ಟೆನು ನಿಮ್ಮ ಹೆಸರು ಕೇಳಲು. ನೀವು
ನಡೆದ ದಾರಿಗೆ ಇರಲಿ ಶುಭದ ನೆರಳು
ಬಿರಿದ ಮಲ್ಲಿಗೆ ಕಂಡು, ಕೋಗಿಲೆಯ ದನಿ ಕೇಳಿ
ತುಂಬಿಬಂದಿತ್ತೇಕೆ ಕಣ್ಣು, ಕೊರಳು?'' ೭

ಯೋಧ ನುಡಿದನು ''ತಾಯಿ ಮತ್ತೆ ನೆನಪಿಗೆ ಬಂತು
ನನ್ನೂರು ಬನವಾಸಿ ನನಗೆ ಇಂದು
ಯೋಧ ನಡೆಯುವ ದಾರಿ ಕವಿಯ ದಾರಿಯು ಕೂಡ.
ನನ್ನನ್ನು ಕರೆಯುವರು ಪಂಪನೆಂದು'' ೮

## ೪೬. ಪವಾಡ

೧

ದಾರಿಯಲ್ಲೆ ಕೆಟ್ಟು ಲಾರಿ ನಿಂತಿತು, ಧುಮುಕಿ
ಚಾಲಕನು ತೆರಳಿದನು ಬುಡದಿ ಒಳಗೆ,
ಕೂಲಿಯವ ನಿಲ್ಲಿಸಿದ ಜ್ಯಾಕನ್ನು ಎತ್ತರಿಸಿ
ಸರಿಪಡಿಸತೊಡಗಿದರು, ಒರಗಿ ಕೆಳಗೆ

೨

ಗಾಲಿ ಸರಿಯಿದ್ದವು ಬೋಲ್ಟು ಬಿಗಿಯಿದ್ದವು,
ಗಟ್ಟಿಯಾಗೆ ಇದ್ದವೆಲ್ಲ ನಟ್ಟು
ಬ್ರೇಕಿಗೂ ಇರಲಿಲ್ಲ ತೊಂದರೆಯು, ಹಿಡಿಚಕ್ರ
ಎಲ್ಲವೂ ಸರಿಯಾಗೆ ಇತ್ತು ಒಟ್ಟು

೩

ಆದರೂ ಎಂಜಿನ್ನು ಬುಸುಗುಟ್ಟಿ ಕೆಲಹೊತ್ತು
ನಿಂತು ಹೋಗುತ್ತಿತ್ತು ಉಸಿರುಕಟ್ಟಿ
ಬಿಸಿಯಾಯಿತೆಂದು ಒಂದೆರು ಬಾಲ್ದಿ ನೀರು
ಹೊಯ್ದು ಕಾದರು ಮತ್ತೆ ಮೈಯ ತಟ್ಟಿ

೪

ಎಷ್ಟು ಧಡಪಡಿಸಿದರು ಲಾರಿ ಮಿಸುಕಲೆ ಇಲ್ಲ
ಅಷ್ಟರಲ್ಲೇ ಬಂತು ಇನ್ನೊಂದು ಲಾರಿ
ಬದಿಗೆ ನಿಲ್ಲಿಸಿ ಗಾಡಿ, ಚಾಲಕನು ಕೇಳಿದನು
"ನಿಂತು ಹೋಗಿದೆಯಲ್ಲ ಬೆಂಝುಸವಾರಿ?"

೫

ಕುದುರೆ ಕುದುರೆಯ ಗೋಣು ತಿಕ್ಕಿ ನೆಕ್ಕಿದ ಹಾಗೆ
ಅಕ್ಕಪಕ್ಕದಿ ನಿಂತವೆರಡು ಲಾರಿ.
ಆಗಲೆ ನಡೆಯಿತು ಪವಾಡ; ಮುಂಚಿನ ಗಾಡಿ
ಓಡತೊಡಗಿತು ಸದ್ದುಮಾಡಿ ಭಾರಿ

೬

ಲಾರಿ ಲಾರಿಯ ಕಂಡು ಸ್ನೇಹ ಮಾಡುವದುಂಟು
ಮೊಂಡು ಹಿಡಿಯುವದುಂಟು ಜಗಳವಾಡಿ
ಬಾಡಿಗೆಯ ಭಾರವನು ಹೊತ್ತು ಮುಗಿಯದ ಪಯಣ
ಅದಕು ಬೇಸರವೆಂಬುದುಂಟು – ನೋಡಿ

## ೪೭. ಕಳ್ಳರು ಮತ್ತು ಸಂತ

ಒಲಿವ ಬೆಟ್ಟದಲಿ ಯೇಸು ಪ್ರಾರ್ಥಿಸಿದ
ಪ್ರಭು, ನಿನ್ನ ಸಂಕಲ್ಪ ಸತ್ಯವಿರಲಿ.
ಚಂದ್ರ ಮೂಡಿದ್ದನು. ಯಾವುದೊ ಕಾತರ
ಮಲಗಿದ್ದರು ಶಿಷ್ಯರೆಲ್ಲ ಬಳಲಿ. ೧

ಮಲಗದಿರಿ. ಏಳಿರಿ. ದೇವರನು ಪ್ರಾರ್ಥಿಸಿರಿ
ನಿಮಗೆಲ್ಲ ಎಚ್ಚರವು ಇರಲಿ, ಅಂದ.
ಸದ್ದಿರದ ಇರುಳಲ್ಲಿ ಹದ್ದು ಹಿಂಡಿನ ಜತೆ
ಜುದಾಸ ಯೇಸುವಿದ್ದಲ್ಲಿ ಬಂದ ೨

ಕತ್ತಲಿನ ಕೈಗಿಟ್ಟ ಮೂವತ್ತು ನಾಣ್ಯಗಳು
ಮುತ್ತಿಡುವ ಕೊರಳನೆ ಹಿಡಿಯಿರೆಂದು
ನಂಬಿಕೆಯ ನಿಲುವಂಗಿ ತೊಟ್ಟಿರುವ ಒಳಸಂಚು
ತಲೆಬಾಗಿ ನಿಂತಿರಲು ಮುಂದೆ ಬಂದು ೩.

ಯೇಸುವಿನ ಹಣೆಗೆ ಮುತ್ತಿಡಲು. ಕೇಳಿದನು
''ಮುತ್ತಿಟ್ಟು ದ್ರೋಹವನು ಬಗೆಯಲುಂಟೆ?''
ಅರ್ಚಕರ ಅಬ್ಬರದಿ ಯೋಧರೆಳೆದೊಯ್ದರು
ಯೇಸುವಿನ ಕಣ್ಗಳಿಗೆ ಬಿಗಿದು ಪಟ್ಟೆ ೪

ನಿಲುವಂಗಿ ತೊಡಿಸಿ, ಮುಳ್ಳಿನ ಕಿರೀಟವಿಟ್ಟು
ಕೈಯಲ್ಲಿ ಕೊಟ್ಟರು ಬಿದಿರು ತುಂಡು
ಹುಳಿಹೆಂಡ ಸುರಿದು ನಕ್ಕರು. ''ಇದೆಲ್ಲವೂ
ದೇವಪುತ್ರನಿಗೆ ಈ ದೊರೆಗೆ'' ಎಂದು ೫

ಪಿಲಾತನ ಮುಂದೆ ಬಿಗಿದೊಯ್ದು ನಿಲಿಸಿದರು
''ಇವನನ್ನು ದಂಡಿಸಿರಿ ಕೊಂದು ಹಾಕಿ''
ಎಂದೆಲ್ಲ ಕೂಗಿದರು. ಅರ್ಚಕರು ಹಿಂಡುಜನ
''ಧರ್ಮಕ್ಕೆ ದೇಶಕ್ಕೆ ಈತ ದ್ರೋಹಿ'' ೬

ತೆರಿಗೆಗಳ ಕೊಡದಿರಿ. ತಾನೆ ದೊರೆ ಎಂದವನು
ತಾನೆ ಪ್ರವಾದಿಯು ಎಂದುಕೊಂಡು
ಪಾತಕಿಯ ದಂಡಿಸಿರಿ. ಎನ್ನಲು ಪಿಲಾತನು
ಯೇಸುವನು ಕೇಳಿದನು. "ಹೌದೆ?" ಎಂದು ೭

ಹೌದೆಂದ ಯೇಸುವು ಗಂಭೀರ ಧ್ವನಿಯಲ್ಲಿ
ಶಾಂತಮುಖಿ. ಹೆಗಲಲ್ಲಿ ಇಳಿದ ಕುರುಳು.
ದೊಡ್ಡ ಹಣೆ ನಿಡುಮೂಗು ಕರುಣೆ ಹಚ್ಚಿಟ್ಟ
ದೀಪಗಳ ಹಾಗೆ ಹೊಳೆದವು ಕಣ್ಗಳು ೮

ಪಿಲಾತ ಯೋಚಿಸುತ ಅಂದನು, "ಬಿಟ್ಟುಬಿಡಿ
ಅಪರಾಧವೆಸಗಿದಂತಿಲ್ಲ ಈತ"
ಮತ್ಸರದ ಮಚ್ಚು ಹಿರಿದಾಗ ಜನ, ಅವರಿಗೇ
ಒಪ್ಪಿಸಿದ ಯೇಸುವನ್ನು ಪಿಲಾತ ೯

ಎಳೆದೊಯ್ದರೇಸುವನು. ಕಂಬನಿಯ ಕೊಳವಾಗಿ
ಹೆಂಗಸರು ಬಂದರು ಹಿಂದಿನಿಂದ
ಯೇಸುವೆಂದನು ಆಗ "ಮರುಗದಿರಿ ನನಗಾಗಿ
ನಿಮಗಾಗಿ ದುಃಖಿಸಿರಿ ಇಂದಿನಿಂದ" ೧೦

ಪಾತಕದ ಬೆಟ್ಟಗಳು ಎರಗಿವೆ ಮೈಮೇಲೆ
ಜೀವಂತ ವೃಕ್ಷವನು ಕಡಿವೆವೆಂದು
ಜೀವ ಜಲವೀವ ತೊರೆ ಬತ್ತಿಸಲು ಕೈಯೆತ್ತಿ
ಮರುಗುವೆನು ನಿಮ್ಮ ಗತಿಗಾಗಿ ಇಂದು" ೧೧

ಅವಿವೇಕಿಗಳ ಕೈಗೆ ಸಿಕ್ಕಿ ನಿಧಿ ಉಳಿದೀತೆ?
ಕೊಲ್ಗಂಬದಲಿ ಕರುಣೆ ಮೂಡಲುಂಟೆ?
ಒಲುಮೆ ಬತ್ತಿರುವ ಬೆಂಗಾಡಿನಲ್ಲಿ ಹಕ್ಕಿಗಳು
ಎಂದಾದರೂ ಬಂದು ಹಾಡಲುಂಟೆ? ೧೨

ಬಲಕೊಬ್ಬ ಎಡಕೊಬ್ಬ ಕಳ್ಳ ನಡುವೆ ಯೇಸು
ಮೂವರಿಗು ಮೊಳೆ ಜಡಿದು ತೂಗುಹಾಕಿ

ನಿಷ್ಪಾಪ ನಿರ್ಲಿಪ್ತ ಯೇಸುವನು ಕೇಳಿದರು
''ಸರಿಯಾಯಿತೆ?'' ಎಂದು ಕೂಗು ಹಾಕಿ ೧೩

ಬಲಕಿದ್ದ ಕಳ್ಳ ಯೇಸುವಿಗಂದ. ''ಏನಯ್ಯ
ನೀನಲ್ಲವೇನಯ್ಯ ದೇವದೂತ?
ಎಷ್ಟೋ ಪವಾಡಗಳ ಮಾಡಿದವ. ನಿನ್ನನ್ನು
ಉಳಿಸಿಕೊ. ಜತೆಗೆ ನಮ್ಮನ್ನು ಕೂಡ'' ೧೪

ಇನ್ನೊಬ್ಬ ಕೇಡಿ ಝಂಕಿಸಿದ ಆ ಕೇಡಿಯನು
''ಸಾಕಯ್ಯ ಸುಮ್ಮನಿರು ಸದ್ಯ ಈಗ
ನಾವೆಲ್ಲ ಪಾಪಿಗಳು ಈತ ನಿಷ್ಪಾಪಿಯು
ಮರೆಯದಿರು ನೀ ಸ್ವರ್ಗವೇರುವಾಗ''. ೧೫

ಅವಿವೇಕಿಗಳ ಕೈಗೆ ಸಿಕ್ಕ ತಕ್ಕಡಿಯಲ್ಲಿ
ಕಳ್ಳರೂ ಸಂತರೂ ಒಂದೆ ಸರಕು
ಕೊಲ್ಗಂಬದಲ್ಲಿ ಸಿಕ್ಕು ಸತ್ಯ ತೂಗಾಡುವದು
ಮರುಕಗಳ ಮಡಕೆ ಬಿಟ್ಟಲ್ಲಿ ಬಿರುಕು ೧೬

ಯೇಸು ಪ್ರಾರ್ಥಿಸಿದ ''ಓ ತಂದೆಯೆ ಕ್ಷಮಿಸು
ತಿಳಿಗೇಡಿ ಇವರನ್ನು'' ಎಂದು ಬೇಡಿ
ಕ್ರೌರ್ಯಗಳ ಆಚೆಗೂ ಉಂಟಲ್ಲ, ಸ್ವರ್ಗಕ್ಕೆ
ಕರೆದೊಯ್ಯಬಲ್ಲದು ಕ್ಷಮೆಯ ಏಣಿ ೧೭

## ೪೮. ದಾಸಿಮಯ್ಯ ಮತ್ತು ಬೆಕ್ಕು

ಒಂದು ದಿನ ಮುಂಜಾವು ಕೋಳಿ ಕೂಗಿತು. ಬಿಲ್ವ
ಮಠದಲ್ಲಿ ಶರಣರೆ ಏಳಿರೆಂದು.
ಸೂರ್ಯ ಮೂಡಿದನು ಬೆಟ್ಟವು ಹಸಿರು ಹಣೆಯಲ್ಲಿ
ಬಂಗಾರ ಭಸ್ಮವನು ಬಳಿಯಿತೆಂದು.

ಶರಣರೆದ್ದರು ಹಕ್ಕಿಗಳ ಹಾಗೆ ಚಿಲಿಪಿಲಿಸಿ
ಮಠದ ಬಾವಿಯ ಬಳಿಗೆ ಮೀಯಲೆಂದು
ಆಗಾಗ ಬಾರಿಸುವ ಗಂಟೆ ಗದ್ದುಗೆಯ ಬಳಿ
ಧೂಪವನು ಹಾಕಿದರು ಜನರು ತಂದು.

ಎಣ್ಣೆ ಹಾಕಿದರು ಕೆಲವರು ತೂಗುದೀಪಕ್ಕೆ
ಬಿಲ್ವದೆಲೆ ಹೂವುಗಳ ಸುರಿದುನಿಂದು
ಮತ್ತೆ ಕೆಲವರು ಕುಳಿತು ಗುಂಪಾಗಿ ಹಾಡಿದರು
ಹಾಡುಗಳೇ ಶಿವಗೆ ಹೂವಾಗಲೆಂದು.

ಕಾಯಕವೆ ಶಿವಪೂಜೆ ಎಂದು ನಂಬಿದ ಭಕ್ತ
ದಾಸಿಮಯ್ಯನ ಪೂಜೆಗಿಲ್ಲ ಗಡುವು
ಹಗಲಿರುಳು ಹೊಯ್ದಿರುವ ಮಗ್ಗದಲಿ ಮುಳುಗಿ
ಗದ್ದುಗೆಯ ಕಾಣಲೂ ಇಲ್ಲ ಬಿಡುವು.

''ಮಠವಿಲ್ಲ ಗುರುವಿಲ್ಲ ಇವನೆಂಥ ಭಕ್ತನೊ
ತೆರೆದೀತೆ ಕೈಲಾಸ ಇವಗೆ ಕದವ?''
ಪರರೇನು ಬಲ್ಲರು ಎಳೆಎಳೆಗು ಹೆಣೆದಿದ್ದ
ದಾಸಿಮಯ್ಯನ ಧ್ಯಾನದೆಳೆಯ ಹದವ?

''ಕರ್ಪೂರವ ಸುಡಲಿಲ್ಲ ಮಠಕೆ ಕಾಲಿಡಲಿಲ್ಲ
ತೆರೆದಾನೆ ಶಿವನಂದಿ ಇವಗೆ ಕದವ?''
ಪರರೇನು ಬಲ್ಲರು 'ರಾಮನಾಥಾ' ಎಂಬ
ಧ್ಯಾನ ಲಡಿನೂಲು ನೀಡಿರುವ ಮುದವ?

ಆರೆಂಟು ವರ್ಷಗಳ ಅಪರೂಪ ನೂಲೆಳೆದು
ದುಗ್ಗಲೆಯು ನೀಡಿರುವ ಲಡಿಯ ಹೊಯ್ದು
ಮನವೆಂಬ ಮಗ್ಗದಲಿ, ನೆನಹೆಂಬ ಎಳೆಬಿಟ್ಟು
'ರಾಮನಾಥಾ' ಎಂಬ ಬಟ್ಟೆ ನೆಯ್ದು.

ಲಾಳದಲಿ ಪುಟಿದಂತರಾಳದಲಿ ಹುದುಗಿತ್ತು
'ರಾಮನಾಥಾ' ಎಂಬ ಗಂಟೆಗೆಜ್ಜೆ
ದುಗ್ಗಲೆಯ ಶ್ರಮದ ಸುಂದರ ನೂಲಿನಲಿ ನೆಯ್ದು
ಬಟ್ಟೆಯಲಿ ಮೂಡಿದವು ಶಿವನ ಹೆಜ್ಜೆ.

ಒಂದು ದಿನ ದಾಸಿಮಯ್ಯನು ಮಠಕೆ ಬಂದಿದ್ದ
ಕೈಮುಗಿದು ಕೂತಿರಲು ಅವನ ಕಂಡು
''ಕಾಣೆಭೋ ವಿಸ್ಮಯ ಕಾಣೆಭೋ'' ಗಲಿಬಿಲಿಸಿ
ಕಿವಿಕಿವಿಯೊಳಾಡಿದರು ಬೆರಗುಗೊಂಡು.

''ಏನು ಬಂದಿರಿ ದಾಸಿಮಯ್ಯಗಳೆ? ಹದುಳವೆ?
ನೆನಪಾಯಿತೆ ಬಿಲ್ವಮಠವು ನಿಮಗೆ?''
ಕುಹಕದಲಿ ಕೇಳಿರಲು ಸುಮ್ಮನೆ ಕುಳಿತಿದ್ದ
ದಾಸಿಮಯ್ಯನು ಜನರ ನಗೆಯ ನಡುವೆ.

ಗದ್ದುಗೆಯ ಬಳಿಗೊಂದು ಬೆಕ್ಕು ಕೂತಿತ್ತು
ಧ್ಯಾನದಲಿ ಎಂಬಂತೆ ಕಣ್ಣು ಮುಚ್ಚಿ
ಬಿಲದಿಂದ ಇಲಿಯೊಂದು ಓಡಿರಲು ಥಂಗನೆ
ಹಾರಿತ್ತು ಹಿಡಿದು ಆ ಇಲಿಯ ಕಚ್ಚಿ

ದಾಸಿಮಯ್ಯನು ನುಡಿದ ''ಅಯ್ಯಗಳೆ ಕಂಡಿರೇ
ಬರಿ ಸಟುಗನ ಭಕ್ತಿಯಾಟ ಇಂದು
ಕಣ್‌ಮುಚ್ಚಿದವರೆಲ್ಲ ಧ್ಯಾನ ಮಾಡುವದಿಲ್ಲ
ಯಾವುದೋ 'ಇಲಿ'ಗೆ ಕಾದಿರುವರೆಂದು''

ಬಿಲ್ವಮಠ ಈಗೀಗ ಬಿಲದ ಮಠವಾಗಿಹುದು
ಯಾರಲ್ಲಿಯೂ ಇಲ್ಲ ಶಿವನ ಹುಚ್ಚು
ಸಿಕ್ಕಿದ್ದು ಸಿಕ್ಕಷ್ಟು ಮುಕ್ಕಿ ಕಣ್ಮರೆಯಾಗಿ
ಬದುಕಿರುವ ಇಲಿಗಳೆ ಇಲ್ಲಿ ಹೆಚ್ಚು

## ೪೯. ಕದವ ತಟ್ಟಿದರು

'ಬಂಡವಳ', ಬರೆಯುವದರಲ್ಲಿ ಮುಳುಗಿದ್ದ ಪತಿ
ಎದೆನೋವಿನಿಂದ ಮಲಗಿದ್ದ ಜೆನಿಯು
ಆಗೀಗ ಓಡಿರುವ ಬಂಡಿಗಳು; ಗಿಡದಲ್ಲಿ
ಜಿಗಿದಾಡುತಿದ್ದ ಮಕ್ಕಳದೆ ಧ್ವನಿಯು,
ಚಳಿಮಂಜು ಇಳಿದಂತೆ; ಹಾಡುಗಳು ಕರಗಿವೆ
ಕೊರಳಲ್ಲಿ ಅಲ್ಲಲ್ಲಿ ಸೃಷ್ಟಿಯೊಳಗೆ;
ಅಡುಗೆ ಕೆಲಸಗಳಲ್ಲಿ ತೊಡಗಿದ ಹೆಲೆನಳಿಗೆ
ಬಾಗಿಲವ ತಟ್ಟಿರುವ ಸದ್ದು ಕೆಳಗೆ
''ಯಾರವರು?'' ''ನಾನು''. ಬಂದವನು ಹಾಲಿನವ.
''ಇಂದಾದರೂ ಸಿಗುವುದೇನು ಹಣವು?''
ದಯವಿಟ್ಟು ಇನ್ನೆರಡು ದಿನ ಬಿಟ್ಟು ಬರುವಿರಾ?
ಮಲಗಿದಲ್ಲಿಂದಲೆ ನೊಂದ ಧ್ವನಿಯು.
ಹಿಂದಿರುಗಿದವು ಹೆಜ್ಜೆ ಗಾಯಗೊಂಡಿಹ ಮೌನ
ಮತ್ತೊಂದು ಬೆರಳು ತಟ್ಟಿತ್ತು ಕದವ.
ಮಾಂಸದವ ಬಂದಿದ್ದ ''ಮೈಹುಷಾರಿಲ್ಲವೆ?''
''ಇಂದಾದರೂ ಕೊಡುವಿರೇನು ಹಣವ?''
''ಈಗಿಲ್ಲ ದಯವಿಟ್ಟು ಇನ್ನೆರಡು ದಿನ ಬಿಟ್ಟು''
ಗಂಟಲಲಿ ಗಂಟಾಗಿ ನಿಂತ ಮಾತು
ಬಿರುನಡೆಯ ಬೂಟಿನಡಿ ಮೌನ ಹುಡಿ. ಆಗಲೂ
ಹಿಡಿಹೆಮ್ಮೆ ಏಕೊ ತುಸು ಉಡುಗಿಹೋತು.
ಮತ್ತೆ ಕದವತಟ್ಟಿದರು. ಬಂದವನು ಬ್ರೆಡ್ಡಿನವ
''ಇಂದು ಬೇಕಾಗಿತ್ತು ಸ್ವಲ್ಪ ಹಣವು
ಕೊಡುವಿರ?'' ''ದಯವಿಟ್ಟು ಈಗಿಲ್ಲ'' ಅಂದಾಗ
ಸೊರಗಿತ್ತು ಸಣ್ಣದಾಗಿತ್ತು ಧ್ವನಿಯು
ನೋವುಗಳು ನಿಲ್ಲಿಸಿದ ಮೌನಗಳ ಗೋಡೆಗಳು

ಆದರಾಚೆ ಕೇಳಿಸಿದ ನಗೆಯು, ಹಾಡು.
ಕಿಡಿಕಿಯಲ್ಲಿ ಬಿಚ್ಚಿಕೊಳ್ಳುವ ಹೊಗೆಯ ನೋಡುತ್ತ
ಅಂದುಕೊಂಡಳು ಹೆಲೆನ; ''ಎಂಥ ಪಾಡು!''
ಆಗಲೆ ಬಾಗಿಲವ ಮತ್ತೊಮ್ಮೆ ತಟ್ಟಿದನು
ಎಂಗೆಲ್ಸ, ಎಳೆಬಿಸಿಲಿನಂತೆ ಬಂದು
ಕೇಳಿದನು. ''ಜೆನಿ, ಈಗ ಹೇಗಿದ್ದೀರ?''
ಮಕ್ಕಳೆಲ್ಲರು ಎಲ್ಲಿ ಹೋದರೆಂದು.
ಬೇಸಗೆಯ ಧ್ವನಿ ಕೇಳಿ, ಹಿಂಡು ಸ್ವಾಲೊ ಹಾರಿ
ಬರುವಂತೆ. ಬಂದಿರಲು ಮಕ್ಕಳೆಲ್ಲ
ತಿಂಡಿತಿನಸು ಅವರ ಕೈಗಿಟ್ಟು ಸಾಗಿದನು
ಕ್ರಾಂತಿ, ಸಿಂಹದ ಬಳಿಗೆ; ಅಷ್ಟರಲ್ಲಿ
ಕಾಲವೆ ಕಾದಿರಲು ಕ್ರಾಂತಿಕದವನು ತಟ್ಟಿ
ಕೆಳಗಿಳಿದು ಬಂದು, ಬಾಗಿಲವ ತೆರೆದು
ಶ್ರಮಜೀವಿಗಳ ಬಂಧು, ಹೊಸಯುಗದ ಹರಿಕಾರ
ಕೈಕುಲುಕಿ ತಬ್ಬಿದನು ಒಳಗೆ ಕರೆದು.

## ೫೦. ಆಂಡರ್ಸನ್ ಬೀದಿ, ಲಂಡನ್ನಿನಲ್ಲಿ

ಜಿಟಿ ಜಿರೊ ಎಂದು ಮಳೆ ಸುರಿದಿತ್ತು ಹೊರಗೆ,
ಕೊರೆದಿತ್ತು ಚಳಿಯು ನಡುಗಿತ್ತು ಇಳೆಯು.
ಮುಗಿಲನ್ನು ತಬ್ಬಿತ್ತು ಮಬ್ಬು ಹೆಪ್ಪುಗಟ್ಟಿತ್ತು
ಒರಗಿಕೊಂಡಲ್ಲಿಯೆ–ಥೇಮ್ಸ ಹೊಳೆಯು ೧

''ಇಲ್ಲೆ ಇರು ಜೆನಿ. ಬೆಚ್ಚಗೆ ಹೊದ್ದುಕೊ
ಮಕ್ಕಳನು ಬಿಡಬೇಡ ಎಲ್ಲು ಹೊರಗೆ
ಒರಗಿದಲ್ಲೆ ತುಸು ಎದೆಯನ್ನು ಕಾಸಿಕೊ
ಹಿತವಾಗಬಹುದೀ ಅಸಾಧ್ಯ ಚಳಿಗೆ'' ೨

''ಲಕ್ಷ್ಯವಿರಲಿ ಹೆಲೆನೆ. ಬೇಗನೆ ಬರುವೆನು''
''ಕಾರ್ಲ. ಇಂಥ ಮಳೆಯಲ್ಲೆ ಹೋಗಬೇಕೆ?''
''ಹೌದಮ್ಮ ಹೌದು ಮನೆಯೊಂದು ಬೇಕಲ್ಲ
ಬಿಸಿನೀರು ಕಾಸು. ಮಕ್ಕಳನು – ಜೋಕೆ'' ೩

ಹೊಳೆವ ಕಣ್ಣುಗಳು ಪೊದೆಹುಬ್ಬು ಕುರು
ಚಲುಗಡ್ಡ ಧೀರನಡೆ ಕಂಚುಧ್ವನಿಯು
ಮರುಕವೆ ಮರೆತಂಥ ಮಳೆಯಲ್ಲಿ ಕೇಳಿ
ದರು. ''ಬಾಡಿಗೆಗೆ ಉಂಟೆ ಮನೆಯು?'' ೪

ಮುಚ್ಚಿರುವ ಕದ ಕಿಡಕಿ ಕಂಡಲ್ಲಿ ನಿಂತರು.
''ಬಾಡಿಗೆಗೆ ಉಂಟೆ ಮನೆಯು?''
''ನಾಲ್ಕು ಮಕ್ಕಳ ನಮ್ಮ ಸಂಸಾರ''ಕೆಂದಾಗ
ಉದುರಿದವು ನಾಲ್ಕು ದನಿಯು ೫

4, ಆಂಡರ್ಸನ ಬೀದಿ, ಲಂಡನದಲ್ಲಿ
ಕೂಗಿದರಮೀನರು. ಗುಂಪಿನೆದುರು
''ಹಾಸಿಗೆಗಳು ಬೇಕೆ? ದುಪ್ಪಟಿಗಳು ಬೇಕೆ?
1ನೇ ಸವಾಲ್ ಬೇಗ ಬೇಡಬಹುದು'' ೬

ಐದುವರ್ಷದ ಜೆನಿ, ತಾಯಿಗೆ ಅಂದಳು.
''ಹಾಸಿಗೆಗಳನ್ನೇಕೆ ಕೊಟ್ಟೆ ಅಮ್ಮ?''
''ನಾವೆಲ್ಲ ಮಲಗುವದೆಲ್ಲೀಗ? ಅಯ್ಯೊ''
ದುಪ್ಪಟ್ಟಿಗಳನ್ನೂ ಹೊತ್ತು ತಂದರಲ್ಲ ೭

ಬೇಲೀಫನನ್ನೆ ಕೈ ಹಿಡಿದು ಕೇಳಿದಳು.
ಲಾವುರೆ ''ಅಮ್ಮನಿಗೆ ಎದೆಯ ನೋವು.
ಎಡ್ಗರಗೆ ಕಾಯಿಲೆ, ನಮಗೆಲ್ಲ ಚಳಿಯಲ್ಲಿ
ದುಪ್ಪಟಿಯು ಬೇಡವೆ? ಹೇಳಿ ನೀವು.'' ೮

ಕೂಗಿದರಮೀನರು. ''ತೊಟ್ಟಿಲವು ಬೇಕೇನು?''
ಗಟ್ಟಿ ಅಳಹತ್ತಿದರು ಮಕ್ಕಳೆಲ್ಲ
''ಹೆನ್‌ರಿಚ್ ಮಲಗುವದು ಎಲ್ಲಮ್ಮ ಇನ್ನು
ಲಾಲಿಯ ಹಾಡುಗಳು ಅವನಿಗಿಲ್ಲ.'' ೯

ಗೊಂಬೆಗಳು ಬೇಕೆ? ಉಡುಪುಗಳು ಬೇಕೆ?
1ನೇ ಸವಾಲ್ ಬೇಗ ಬೇಡಬಹುದು
ಜೆನಿ ಅತ್ತಳು. ಲಾವುರ ಅತ್ತಳು.
ಬಾಡಿಗೆಯ ಹಣಕಿವೂ ಸಾಲದಿಹುದು ೧೦

ನೆರೆದ ಜನರೆಲ್ಲ ತಮ್ಮೊಳಗೆ ನುಡಿದರು.
''ಯಾರೊ ಪಾಪ. ಕಾರ್ಲಮಾರ್ಕ್ಸನಂತೆ !
ಬಾಡಿಗೆ ಹಣಕ್ಕೆ ಈ ಬವಣೆ ಕಾನೂನಿಗೆ
ಗೊಂಬೆಗಳು. ಕಾಯಿಲೆ ಎಂಬುದುಂಟೆ?'' ೧೧

ಹೆಲೆನ ಜೆನಿಯ ಎದೆಯನ್ನು ಕಾಸಿದಳು.
ಸಂತೈಸಿದಳು ಅಳುವ ಮಕ್ಕಳನ್ನು
ಇದ್ದುಬಿದ್ದುದ ಮಾರಿ. ಲೆಸ್ಟರ ಸ್ಕ್ವೇರಿನಲಿ
ಆಶ್ರಯಿಸಿದರು ಚಿಕ್ಕ ಹೋಟೆಲನ್ನು ೧೨

ಕಾರ್ಲ್‌ಮಾರ್ಕ್ಸ್ ಅಂದರು. ''ಋಣವಂತು ತೀರಿತು.
ಗಾಯಗಳು ಮಾತ್ರವೆ ಉಳಿದವಲ್ಲ,
ನೆಲೆಯಿಲ್ಲದವರೆಲ್ಲ ಒಂದಾಗಿ. ನೆಲವೆಲ್ಲ
ನೆಲೆಯಾಗಿ ಬಾಳ್ವದಿನ ದೂರವಿಲ್ಲ'' ೧೩

## ೫೧. ಹುಳ ಮತ್ತು ಕಿರೀಟ

೧

ಕತ್ತಲೆಯ ಕಾಡಿನಲಿ ಕಂಗೆಟ್ಟು ನಿಂದವರು
ನೊಂದವರು; ಕಾದಿರಲು ಭವದಿ ಬಂದು
ಒಳ್ನುಡಿಯ ಬೆಳಕಿತ್ತು ಸಲುಹಿ ದ್ವೈಪಾಯನರು
ಲೋಕಗಳ ಸಂಚರಿಸುತಿರಲು; ಒಂದು

೨

ಹುಳವನ್ನು ಕಂಡು ನಸುನಕ್ಕು ನುಡಿದರು, ''ನೀನು
ದೊರೆಯಾಗು, ಬಿಟ್ಟು ಬಿಡು ಕ್ಷುದ್ರದೇಹ.''
ಒಲ್ಲೆನೆಂದಿತು ಅದು. ಆಗ ಆ ಹುಳವನ್ನೆ
ದೊರೆಯಾಗಿ ಮಾಡಿದರು, ಎಂಥ ಮೋಹ!

೩

ಹಿಂದೊಮ್ಮೆ ಕೀಟವೆ ವೃಷಲ ಜನ್ಮವ ತಳೆದು
ದ್ವೈಪಾಯನರ ಭಕ್ತನಾಗಿ ಬಾಳಿ
ಕಡು ಲೋಭಿಯಾಗಿತ್ತು; ಹಾಗೆಂದೆ ಈಗ ಅದು
ಹುಟ್ಟಿತ್ತು ಹುಳದ ಈ ಜನ್ಮ ತಾಳಿ

೪

ದ್ವೈಪಾಯನರ ದಯದಿ ಹುಳವು ದೊರೆಯಾಯಿತು
ರಾಜರಾಜರು ಎಲ್ಲ ಮಣಿದರದಕೆ.
ತಪ್ಪದೆ ತೆರಿಗೆಗಳ ಕೊಡುವ ವರ್ತಕರಂತೆ
ಕಪ್ಪಕಾಣಿಕೆ ಸಲ್ಲಿಸಿದರು ಹುಳಕೆ

೫

ಭಗವಂತ ದ್ವೈಪಾಯನರು ಆದಕೆ ಹೇಳಿದರು,
''ಈ ಕ್ಷಣವೆ ಕೊಡಬಲ್ಲೆ ಮುಕ್ತಿ ನಿನಗೆ
ಆದರೂ ಇನ್ನೊಮ್ಮೆ ವಿಪ್ರ ಜನ್ಮವ ತಳೆದು
ನನ್ನ ದಯದಿಂದ ಪಡೆ ಮುಕ್ತಿ ಕೊನೆಗೆ''

೬

ದ್ವೈಪಾಯನರು ವಿಮಲ ಜ್ಞಾನ ನೀಡಿದರದಕೆ
ಭೂಮಿಯೆಲ್ಲವನಾಳಿ, ಕೀಟ ದೊರೆಯು
ಕೊನೆಗೆ ದೇಹವ ತೊರೆದು ವಿಪ್ರ ಜನ್ಮವ ತಳೆದು
ಹರಿಪದವ ಹೊಂದಿತು ಸುತತ್ವವರಿತು

೭

ಹೀಗೆ ಎಷ್ಟೆಷ್ಟೊ ಭವಬಂಧನವ ಬಿಡಿಸಿದರು.
ಬಾದರಾಯಣ ಸ್ವಾಮಿ, ಮುಕ್ತಿದಾತ
ಗೈದಿರುವ ಎಣೆಯಿರದ ಚಿಂತ್ಯ ಕರ್ಮಗಳನ್ನು
ಸುರರೆಲ್ಲ ಹಾಡಿ ಹೊಗಳುವರು ಸತತ.

# ೫೨ . ಕವಷ ಐಲೂಷ

| | | |
|---|---|---|
| ೧. | ಐತರೇಯ ಬ್ರಾಹ್ಮಣ | ೮-೧೯ |
| ೨. | ಕೌಷೀತಕೀ ಬ್ರಾಹ್ಮಣ | ೧೨-೩ |
| ೩. | ಋಗ್ವೇದ | ೧೦-೩೦-೩೪ |
| | | ೩. ಅನುವಾಕ್ |

ಒಮ್ಮೆ ಸರಸ್ವತಿಯ ತೀರದಲ್ಲಿ ಭೃಗು ಅಂಗೀರಸ ಮೊದಲಾದ ಮಾಧ್ಯಮರು ಸೋಮಾಯಾಗ ಮಾಡುತ್ತಿದ್ದರು. ಸೋಮಯಾಗ ಹನ್ನೆರಡು ದಿನಕ್ಕೆ ಕಡಿಮೆಯಿಲ್ಲದೆ ನಡೆಯುವ ಯಾಗ. ಈ ಬಗೆಯ ಯಾಗದಲ್ಲಿ ಅನೇಕ ಯಜಮಾನರಿರುವರು. ಆ ಯಾಗಕ್ಕೆ ಬಂದಿದ್ದ ಕವಷ ಐಲೂಷ ಋಷಿಯ ಮಗ. ಇವನು ಶೂದ್ರ. ದಾಸಿಯ ಪುತ್ರನು. ಸಾಲದ್ದಕ್ಕೆ ಜೂಜುಗಾರ. ಇವನನು ಗುರುತಿಸಿದವರೊಬ್ಬರು ಕೋಲಾಹಲವನ್ನು ಎಬ್ಬಿಸಿ, ಅವನನ್ನು ಯಾಗದಿಂದ ಹೊರಗಟ್ಟಿದರು. ನೀರಡಿಸಿ ಸರಸ್ವತಿಯ ಬಳಿ ಹೋದ ಕವಷನನ್ನು ಕಂಡು, ಸರಸ್ವತಿಯ ಜಲಪಾನ ಮಾಡಲು ಈ ಪಾಪಿಯು ಅರ್ಹನಲ್ಲವೆಂದು ಅಲ್ಲಿಂದಲೂ ಬೆಂಗಾಡಿಗೆ ಓಡಿಸಿದರು. ನೀರೂ ನೆರಳೂ ಇಲ್ಲದೆ ವ್ಯಥೆ ಪಡುತ್ತ ಕವಷ ಪ್ರಾರ್ಥನೆಯಲ್ಲಿ ತೊಡಗಿದಾಗ ಅವನಿಗ 'ಪ್ರದೇವತ್ರಾ ಬ್ರಹ್ಮಣೇ' ಎಂಬ ಸೂಕ್ತ ಗೋಚರಿಸಿತು. ಆಗ ಸರಸ್ವತಿ ಇವನ ಬಳಿಗೆ ಹರಿದು ಬಂದು, ಇವನನ್ನು ಸುತ್ತುವರಿಯಿತು. ಇವನು ನಿಂತಲ್ಲಿ ನಿಂತು, ನಡೆದಲ್ಲಿ ನಡೆದು ಓಲೈಸಿತು. ಆ ಬೆಂಗಾಡೂ ಇವನ ಪುಣ್ಯದಿಂದ ಜಲಮಯವಾಯಿತು. ಇದನ್ನು ಗಮನಿಸಿದ ಋತ್ವಿಜರು, ಇವನೊಬ್ಬ ಮಹಾತ್ಮನೆಂದರಿತು, ಇವನನ್ನು ಕರೆದೊಯ್ದು ಯಜ್ಞವನ್ನು ಇವನ ನೇತೃತ್ವದಲ್ಲಿ ಪೂರ್ಣಗೊಳಿಸಿದರು. ಇವನಿಗೆ ಗೋಚರಿಸಿದ ಸೂಕ್ತ 'ಆಪೋನಪ್ತ್ರೀಯ ಸೂಕ್ತ'. ಆ ಜಲಪ್ರದೇಶ ಈಗಲೂ ಪರಿಸಾರಕವೆಂದು ಹೆಸರಾದ ತೀರ್ಥಕ್ಷೇತ್ರ.

## ಕವಷ ಐಲೂಷ

೧

ಅಲೆಗಳೆದ್ದವು ಜೂಜು ಕಟ್ಟೆಯಲಿ ಮತ್ತೆ
ಗೆದ್ದವರ ಹಿಗ್ಗಿನಲೆ ಸೋತವರ ಸುತ್ತ
ಕಿಡಿಗೆದರಿದುರಿಯಂತೆ ಎದ್ದೆದ್ದು ಕುಣಿದು
ನೆರೆಬಂದ ಹೊಳೆಯಂತೆ ಅಲೆ ಅಲೆಗೆ ನೆಗೆದು.
ಸೋತವರ ಪ್ರಾಣಗಳ ಹನಿಹನಿಯನೆಳೆದು.
ಪ್ರಿಯಳ ಮುತ್ತಿಡುವಂತೆ ಮುತ್ತಿಟ್ಟ ದಾಳ
ಮಗುವನಪ್ಪಿಡುವಂತೆ ಅಪ್ಪಿಟ್ಟು ದಾಳ
ತುಂಬಿದರು ಪಣಕಿಟ್ಟ ನಿಷ್ಕಗಳನೆಳೆದು
ಅಲ್ಲಲ್ಲಿ ಸೋತವರ ಸೂತಕದ ಮೌನ
ತೂಕಡಿಸಿ ಕುಳಿತಿರುವ ಇರುಳಿನಲಿ ಲೀನ
ಕೈ ಹಿಡಿದು ಕರೆದೊಯ್ದು ಎತ್ತರಗಳಿಂದ
ಆಸೆಗಳು ಉರುಳಿದವು, ಒಳನೋವಿನಿಂದ.
ಹಣೆಯಲ್ಲಿ ಹನಿಯಾಗಿ ಕರಗಿದವು ಜೀವ
ಬಾಡಿಸುತ ಕಂಡೆಲ್ಲ ಕನಸುಗಳ ಹೂವ
ಹೂ ಬಿಸಿಲ ಪಾರಿವಾಳಗಳಂತೆ ನಡೆದು
ಐಶ್ವರ್ಯಗಳ ತರುವ ದಾಳಗಳ ಹಿಡಿದು.
ಎಣೆಯುಂಟೆ ಅವಕಿನ್ನು? ದಾಳಗಳೆ ಶರಣು
ಮಧುಮಂತ ದಾಳಗಳು. ಸುಖದ ತೇರೆಳೆದು
ಸಂತಾನ ಸಂಪದವ ನೀಡುವವು ಕರೆದು
ವಕ್ರಿಸಲು ಕೆಡಹುವವು ಪ್ರಾಣಗಳ ಸುಲಿದು.

೨

ಬೆಟ್ಟದಿಳುಕಲಿನಲ್ಲಿ ಬಿತ್ತರಿಸಿ ಹರಿದು
ಹೊರಳಾಡಿ ಕಂಪಿಸುವ ತೊರೆಯಂತೆ ಸರಿದು

ಪಗಡೆಗಳ ಹಾಸಿನಲಿ ದಾಳಗಳ ಸದ್ದು
ಕವಷ ಐಲೂಷನಿಗೆ ನೀಡಿದವು ಹಿಗ್ಗು
ಮೂಜನತ್ ಪರ್ವತದ ಸೋಮರಸದಿಂದ
ದೇವತೆಗಳೆಲ್ಲ ಪಡೆವಂತೆ ಆನಂದ.
ಜೂಜುಕಾರರನೆಲ್ಲ ಎಚ್ಚರಿಸಿ ತಿವಿದು
ಪಗಡೆಗಳ ಹಾಸಿನಲಿ ದಾಳಗಳು ಕುಣಿದು.
ಕವಷ ಐಲೂಷನನು ತಣಿಸಿದವು ಕರೆದು
"ಓ ದಾಳಗಳೆ ನಿಮ್ಮ ಪಡೆಯೊಡೆಯನಿಗೆ ನಮನ
ದಾಳಗಳೆ ನಿಮ್ಮ ಗಣಗಳ ದೊರೆಗೆ ನಮನ
ಗೆಲುವಿನ ಹಕ್ಕಿಗಳೆ, ಸ್ವರ್ಣಗರಿ ಬಿಡಿಸಿ.
ಮಿತ್ರತ್ವವನು ಬೆಳೆಸಿ, ನಮಗೆ ಸುಖ ಬಡಿಸಿ
ಕ್ರೋಧಗಳ ಹಾವುಗೆಯ ಹೊರಗಿರಿಸಿ ಬಂದು
ಸೋಲುಗಳ ಮೀಸಲಿಡಿ ಎದುರಾಳಿಗೆಂದು
ಹೊಂಬಣ್ಣದೆಳನಗೆಯ ಹಗ್ಗದಲ್ಲಿ ಹಿಡಿದು
ಸೋಲುಗಳ ಕಂಬಕ್ಕೆ ನಿಲ್ಲಿಸಿರಿ ಬಿಗಿದು
ದಾಳಗಳೆ ಭಾಗ್ಯದೆಳೆ ಕಡಿವೋಗದಿರಲಿ
ಹರ್ಷಗಳು ಪಗಡೆಗಳ ಕೈಹಿಡಿದು ಬರಲಿ
ಸಂಪದದ ಗೋವುಗಳು ನಮ್ಮ ಬಳಿಗಿರಲಿ

೩

ದಾಳಗಳ ಸವಿನಗೆಗೆ ಮನ ಸೋತು ಕವಷ
ಇದ್ದು ಬಿದ್ದುದ ದೋಚಿಕೊಂಡೊಂದು ದಿವಸ
ಜೂಜು ಕಟ್ಟೆಗೆ ಹೊರಡಲಣಿಯಾಗುತಿರಲು
ಗುಡಿಸಲಿನೊಳಲ್ಲಲ್ಲಿ ಮಳೆ ಜಿನುಗುತಿರಲು
ಕ್ಷೀಣ ಸ್ವರವೆತ್ತಿ ನುಡಿದಳು ತಾಯಿ, "ಇನ್ನು
ಸಾಲದೆ ಕಳೆದುದನು ಸರ್ವಸ್ವವನ್ನು?
ಲೋಭಕ್ಕೆ ಕಣ್ಣಿಗಿವೆ ಆದರೂ ಕುರುಡು
ಮೋಹಕ್ಕೆ ಕಿವಿಗಳಿವೆ ಆದರೂ ಕಿವುಡು

ಐವತ್ತು ಮೂರು ಬಾಗಿಲುಗಳಿಹ ಸೆರೆಯು
ಪಗಡೆಗಳ ಈ ಹಾಸು, ಹಾಕಿರುವ ಬರೆಯು
ಸಾಲದೆ ಓ ಮಗನೆ? ಸಾಲದೆ ಕವಷ?
ನಿತ್ಯವೂ ತಿನಿಸಿರುವ ದುಃಖದೀ ದವಸ.
ಕಣ್ವನಿಗೆ ಕಣ್ಣಿನಲಿ ಕಾಡಿಗೆಯ ತುಂಬಿ
ಕೂಡ್ರಿಸಿದ ಬಂಗಾರ ಪೀಠವಿದು, ನಂಬಿ
ಕೂತವನ ಸಂಕಟಕೆ ಕೊನೆಯಿಲ್ಲ ಮಗನೆ!''
ಕೊರಳ ಸರ ತೊಯ್ದಿರಲು, ಹೆಂಡತಿಯು ತಡೆದು
ಬೇಡಿದಳು, ''ಹೋಗದಿರಿ'' ಎಂದು ಕೈ ಮುಗಿದು.
ಕೆಡುಕಿನ ಕಿರಿದಾರಿ ಹಿಡಿದಿರುವ ಕವಷ
ಹಿತವಚನ ನೀಡುವದೆ ಕಿವುಡನಿಗೆ ಹರುಷ?
ಕವಷ ಹೊರಟೇಬಿಟ್ಟ ನಿಲ್ಲದೆಯೆ ನಿಮಿಷ.

೪

ಋತದ ಕುಂಭದ ಹಾಗೆ ಬೆಳಗಿದನು ಚಂದ್ರ
ಎಲ್ಲಿರುವರಶ್ವಿನಿಗಳೆಲ್ಲಿಹನು ಇಂದ್ರ?
ಹಾಲು ಚೆಲ್ಲುವ ದಿಕ್ಕು ಎಲ್ಲೆಲ್ಲು ಹರುಷ
ನೆರಳಾಗಿ ನೋವಾಗಿ ಮರಳಿದನು ಕವಷ.
ಕಂದು ಬಣ್ಣದ ಕುದುರೆ ಏರಿದವ ಉರುಳಿ
ಸಾಲದಲಿ ಮುಳುಗಿದವ ಸೋಲಿನಲಿ ನರಳಿ
ಬಾಡಿಹೋಗಿರುವ ಮುಖ, ತೊಳಗಿರುವ ಕಣ್ಣು
ಎಣ್ಣೆ ಕಾಣದ ಕೂದಲಿಳಿದಿರುವ ಬೆನ್ನು
ತೊಗಲ ಬಾವಲಿಯಂತೆ ಚಿಂತೆಗಳು ಹಾರಿ
ಕರಿನೆರಳು ತುಂಡುಗಳ ಕಂಡು ಹೌಹಾರಿ.
ಸೋಲುಗಳ ಹಸಿಸೌದೆಯಂತೆ ಹೊಗೆಯಿಡುತ
ಗುಡಿಸಲಿಗೆ ಬಂದಿದ್ದ ನಿಟ್ಟುಸಿರು ಬಿಡುತ
ಸದ್ದಿರದೆ ಸುಳಿವಿರದೆ, ನೋವುಗಳ ಮೌನ
ಬಿದ್ದಿರುವ ಹಾಲ್ಬೆಳಕು ಹನಿಗಳಲಿ ಲೀನ

ಒಳಗೆ ಯಾರೂ ಇಲ್ಲ, ಮನೆಯೆಲ್ಲ ಶೂನ್ಯ.
ತಾಯಿ ಹೆಂಡತಿ ತಾಳಲಾರದೆಯೆ ದೈನ್ಯ
ಎಲ್ಲಿಗೊ ತೆರಳಿದರು, ಹಿಡಿ ಅನ್ನ ಹುಡುಕಿ
ಸಂಸಾರವನು ಮುರಿದ ಕವಷನಿಗೆ ಮಿಡುಕಿ
ಮೂಲೆಯಲಿ ಮಡಗಿರುವ ಚಾಪೆಯನು ಬಿಡಿಸಿ
ಕವಷ ಮೈಯಿಕ್ಕಿದನು, ನಿದ್ರೆಯೊತ್ತರಿಸಿ.

೫

ಋತದ ರಥ ಚಕ್ರಗಳ ನುರುಳಿಸುತ ಬಂದ
ಸೂರ್ಯದೇವನು ನೀಡಿ ಸೃಷ್ಟಿಗಾನಂದ.
ಮುಗಿಲಿನಲಿ ಹಾರಿರುವ ಹಂಸಗಳ ಕಂಡು
ಹಾಲು ಧ್ವನಿಯೆತ್ತಿದವು ಗೋವುಗಳ ಹಿಂಡು
ಕೊರಳ ಹಗ್ಗವ ಬಿಚ್ಚಿದಂಥ ಕರುವಾಗಿ
ಗಾಳಿ ನೆಗೆದಾಡಿತ್ತು ಎಲ್ಲ ಕಡೆ ಓಡಿ
ಬಾಡಿದವು ನಕ್ಷತ್ರ, ಹೂ ಬಿಸಿಲು ಸುರಿದು
ಹಕ್ಕಿಗಳು ಮೇಳವಿಸಿ ಬಾನಿನೊಳಗಲೆದು
ಪ್ರಿಯವಾದ ಸವಿಯಾದ ಉಲುಹುಗಳು ಸುಳಿದು
ಬೆಳ್ಳಕ್ಕಿಗಳ ಹಾಗೆ ಕೊಳದಂಚಿಗಿಳಿದು,
ಕಣ್ಣು ತೆರೆದನು ಕವಷ, ಕುಕ್ಕಿರಲು ಬೆಳಗು.
ಗುಡಿಸಲವ ಸುತ್ತಿದವು ದಾಳ ಹೊರ ಒಳಗು.
ಅಂಕುಶಗಳಂತಿರುವ ದಾಳಗಳು ತಿವಿದು
ಇಕ್ಕಳಗಳಂತೆ ಕತ್ತರಿಸಿದವು ಹಿಡಿದು
ಕೆಂಡಗಳನೆಸೆದಂತೆ ಎಸೆಯಲು ದ್ಯುಲೋಕ
ದಾಳಗಳ ತೆಳಸಿಕ್ಕು ಬೆಂದವರ ಶೋಕ
ಕೈಗಳೆ ಇಲ್ಲದೆಯೆ ಹಾಕಿರುವ ಪೆಟ್ಟು
ಕಟ್ಟಿಗೆಗಳಿಲ್ಲದೆಯೆ ಹೃದಯಗಳ ಸುಟ್ಟು
ಉಧ್ವಸ್ತಗೊಳಿಸಿರಲು, ಕವಷ ಕೈ ಮುಗಿದು
ಗುಡಿಸಲಿಗೆ, ಹೊರಬಿದ್ದ ದಾರಿಯನು ಹಿಡಿದು.

೬

ಜೂಜು ಕಟ್ಟೆ ಸರ್ವಸ್ವ ತನ್ನದೆಂದು
ದಾಳದಾಟದಲಿ ಎಲ್ಲ ಕಳೆದುಕೊಂಡು
ಬಾಡಿ ಹೋದ ತಾವರೆಯ ಹಾಗೆ ಕವಷ
ಕೊಳದ ಅಲೆಗಳಂತಡಗಿ ಹೋದ ಹರುಷ
ಶುಭಸ್ವಪ್ನದ ರಸಕುಂಭವೊಡೆದು ಸೋರಿ
ಕೊಸರಿ ಹೋದ ಕೈ ಬೆರಳ ತುದಿಗೆ ಜಾರಿ
ತಪ್ಪಿಹೋದ ವಾತ್ಸಲ್ಯವಿತ್ತ ನೆಲೆಯು
ಒತ್ತದಿರುವ ವಿಶ್ವಾಸವಿತ್ತ ಸೆಲೆಯು
ಸಂತೆಗಿಳಿದ ಮುದಿ ಕುದುರೆಯಂತೆ ಅಲೆದು
ಸುಡುವ ಪಾಪಗಳ ಯಜ್ಞಕುಂಡಕಿಳಿದು
ಸುತ್ತ ನೋಡಿದನು ಶೂನ್ಯ ದೃಷ್ಟಿ ತಳೆದು
ದೈನ್ಯ ಕಡೆದ ಪುತ್ಥಳಿಯ ಹಾಗೆ ಕುಳಿತು
ಜನರ ಸದ್ದು ಸುಳಿವಿರದ ಜಗುಲಿಗೊರಗಿ
ಕಳೆದುಕೊಂಡ ವ್ಯಾತ್ಸಲ್ಯದೆಳೆಗೆ ಮರುಗಿ
ಕವಷನಲೆದ ನಿರ್ಗತಿಕನಂತೆ ನೊಂದು
ಒಮ್ಮೆ ಕುಳಿತು ಮತ್ತೊಮ್ಮೆ ಎದ್ದು ನಿಂತು
ಸ್ನೇಹವೃಕ್ಷಗಳ ಮುರಿದ ಗೂಡು ನೆನೆಸಿ
ತೆರೆದ ಗರಿಯ ನೆಮ್ಮದಿಯ ನೆಲೆಯ ಬಯಸಿ
ಕಳೆದುಕೊಂಡು ಸಂಪತ್ತು ಪ್ರೀತಿ ಹರುಷ
ಉದುರಿ ಬಿದ್ದ ಎಲೆಯಂತೆ ಆದ ಕವಷ

೭

ಬೆಳಕಿಗಂಜಿ ಕತ್ತಲೆಯ ನಾಡನಲೆದು
ಮನದ ಮೌನ ಭಯ ನೆರಳು ನಂಜು ಕವಿದು
ಕಂಡ ಕಂಡ ಮನೆಯಲ್ಲಿ ಜಗುಲಿಗೊರಗಿ
ಬೆನ್ನು ಬಿಡದ ಋಣಭಾರದಡಿಗೆ ಸೊರಗಿ
ಅಟ್ಟುತಿರಲು ದುರ್ದೈವ ಬಾಯಿ ತೆರೆದು

ದಾರಿ ತಪ್ಪಿ ಚಡಪಡಿಸಿ ದೂರ ಸರಿದು
ಅಲ್ಲಿ ನಿಂತು, ತುಸು ಇಲ್ಲಿ ಕೂತು ಕವಷ
ಕಾಡಿನಲಿ ಕಾಲಿಟ್ಟನೊಂದು ನಿಮಿಷ
ಪಾಪ ವೃಕ್ಷಗಳು ಬೆಳೆದು ನಿಂತ ಕಾಡು
ಆಗ ಈಗ ಮರೆಯಾಗುತಿರುವ ಹಾಡು
'ಅರಣ್ಯಾನಿಯೆ ಹಾದಿ ತಪ್ಪಿತೆಮಗೆ
ದಾರಿ ತಪ್ಪಿತೆ ನನ್ನ ಹಾಗೆ ನಿನಗೆ?
ಊರದಾರಿ ಇನ್ನಾವುದೆಂದು ನೀನು
ಹೇಳಬಾರದೆ? ನಿನಗೂ ಭಯವೊ ಏನು?
ಹಸುಗಳಿಲ್ಲಿ ಮೇಯುತಿಹ ಸದ್ದು, ಅಲ್ಲಿ
ಮನೆಯ ಹಾಗೆ ಕಂಡಿಹುದು ಮಬ್ಬಿನಲ್ಲಿ
ಬಂಡಿಯಂತೆ ಕಿರುಗುಡುತ ಕಾಡಿನಲ್ಲಿ
ಕೇಳಿಹುದು ಸದ್ದು. ಒಬ್ಬೊಬ್ಬಗೊಂದು ಇಲ್ಲಿ
ಓ, ಅರಣ್ಯಾನಿ, ಮೃಗಗಳಿಗೆ ತಾಯಿ ಶರಣು
ಗೂಡು ಹಕ್ಕಿಯನು ಸಲಹುವಂತೆ ಸಲುಹು.'

೮

ಕಾಡಿನಲಿ ಚಳಿ ಮೌನದಲಿ ಕವಷ ನಡುಗಿ
ದಾಳಗಳು ತಂದಿರುವ ದುರ್ದೆಸೆಗೆ ಮರುಗಿ
ಮರದಡಿಗೆ ಹೊತ್ತಿಸಿದ ಉರಿಗೆ ಮೈ ಕಾಸಿ
ನೆನಪುಗಳ ಒಲುಮೆಗಳ ದುಪ್ಪಟಿಯ ಹಾಸಿ
'ಅಗ್ನಿಯೆ ನನ್ನೊಡನೆ ಸಪ್ತಪದಿ ನಡೆದು
ಸಹನೆಯಲಿ ಬಾಳಿದಳು ನನ್ನ ಕೈವಿಡಿದು
ದ್ಯೂತದಲಿ ಸಾಲದಲಿ ಮುಳುಗಿಸಿದೆ, ಮುಳುಗಿ
ಆದರೂ ಮುನಿಯದಲೆ ಪ್ರೀತಿಯಲಿ ಕೊರಗಿ
ಮಿತ್ರರಲಿ ನನ್ನಲ್ಲಿ ತೋರಿದಳು ಸಹನೆ,
ನಿತ್ಯವೂ ಸೋಲುಗಳ ಹಸಿವುಗಳ ಛಲನೆ
ಅಳುವವಳ ಹೊರದೂಡಿ ಎಲ್ಲೆಲ್ಲೊ ಅಲೆದ

ಬೇರಿರದ ಬದುಕಿನಲಿ ಕಷ್ಟಗಳ ಗಾಳಿ
ಬೀಸಿದರೂ ಅಸಹಾಯ ದೈನ್ಯದಲಿ ಬಾಳಿ
ಮೊಲೆ ಹಾಲನುಂಡವನ ಆಗಾಗ ನೆನೆದು
ಹರಿಯುವವು ತಾಯೊಡಲ ಕಂಬನಿಗಳಿಳಿದು
ದಾಳಗಳು ನುಂಗಿದವು ನನ್ನ ಧನ ಧಾನ್ಯ
ಪಗಡೆಗಳ ಪಟ್ಟದಲಿ ನನ್ನ ಮನೆ ಶೂನ್ಯ.
ದಾಳಗಳೆ ಇನ್ನೆಂದು ಹಾಕದಿರಿ ನೆರಳು
ನಮ್ಮನ್ನು ಬಿಟ್ಟುಬಿಡಿ ನಿಮಗಿದೊ ಶರಣು'
ಕಾಡಿನಲಿ ಕೂಗಿದನು ಕವಷ ಕೈಮುಗಿದು.

೯

ವೃಕ್ಷಗಳ ಜಡಮೌನ ಹೊದಿಕೆಯನು ತೆರೆದು
ಪಕ್ಷಿಗಳ ಕೊರಳಿನಲಿ ಕಾರಂಜಿ ಸುರಿದು
ಸತ್ಯದಲಿ ಧರ್ಮದಲಿ ಋತದ ರಥ ನಡೆಸಿ
ಪರಿಮಳದ ಕಣ್ಣುಗಳನಲ್ಲಲ್ಲಿ ತೆರೆಸಿ
ಬಂದನು ಸವಿತೃ. ಬೆಳಕಾಗಿ ಜಗದೀಶ
ಆಲಿಸುವ ಕಿವಿಗಳಿಗೆ ನೀಡಿ ಉಪದೇಶ
'ಓ, ಜೂಜುಗಾರನೆ ಆಡದಿರು ದ್ಯೂತ
ದಾಳಗಳು ಕುಣಿಯುವಲ್ಲಿಹದಧಃಪಾತ,
ನೇಗಿಲವ ಹಿಡಿದು ಓಲೈಸು, ಕೃಷಿ ಮಾಡು
ಮಣ್ಣಿನಲಿ ಹಾಲುತೆನೆ ಬಂಗಾರ ನೀಡು
ಸುಖವನೆ ಹಿಂಡುವವು ಗೋವುಗಳು ನಿನಗೆ
ಶುಭಗಳೆ ಸಿಂಗರಿಸಿ ನುಗ್ಗುವವು ಮನೆಗೆ
ಎಂದಿಗೂ ಜೂಜಾಡದವನ ಮನೆಯನರಸಿ
ಹರ್ಷಗಳು, ಸೊಬಗುಗಳು ಬರುವವು ನೆಲೆಸಿ
ಅಲ್ಲಿಹುದು ಸಂಸಾರ ಸುಖವು, ಸಂಪದವು.
ಅಲ್ಲಿಹುದು ಇಹಪರವು, ಅಲ್ಲಿ ಮಂಗಳವು.
ದಾಳಗಳು ದೂರಪರೆ, ಹತ್ತಿರಕೆ ಬಂದು
ಒಡನಾಡಿ ನಲಿಯುವರು ದೇವತೆಗಳೆಂದು

ಸವಿತೃವೆ ಹೇಳಿದನು ಕಿವಿಮಾತನೊಂದು
ಸೋಮ ಸತ್ರಕೆ ತೆರಳು ಓ, ಕವಷ' ಎಂದು.

೧೦

ಬಂದವಳ ಬೆಂದವರ ಕಷ್ಟಗಳ ಕಳೆದು
ನೊಂದವರ ಮಿಂದವರ ಮೈ ಮನವ ತೊಳೆದು
ಅಲೆಗಳಲಿ ಅಮೃತರ ಸ್ನೇಹವನು ನೀಡಿ
ರಸತಮೆ ಸರಸ್ವತಿಯ ತೀರದಲಿ ಕೂಡಿ
ಭೃಗ್ವಾಂಗಿರಸ ಗೃತ್ಸಮದ ಭರದ್ವಾಜ
ವಶಿಷ್ಠ ವಿಶ್ವಾಮಿತ್ರ ಅತ್ರಿ ಋಷಿಯೋಜ
ವಾಮದೇವಾದಿ ಮಾಧ್ಯಮ ವೃಂದ ಕುಳಿತು
ಸೋಮ ಸತ್ರದ ದಿವ್ಯ ದೀಕ್ಷೆಯನು ತಳೆದು
ಇಂದ್ರನನು ಮಿತ್ರನನು ವರುಣನನು ಕರೆದು
ಬ್ರಹ್ಮಣಸ್ಪತಿ ಅಗ್ನಿಪೂಷನ್‌ರ ಕರೆದು
ಸವಿತೃವನು ವಿಷ್ಣುವನು ಸೂರ್ಯನನು ಕರೆದು
ಅಶ್ವಿನಿಗಳನು ಮರುದ್ಗಣಗಳನು ಕರೆದು
ದಧಿ ಮಿಶ್ರ ಸೋಮಗಳ ಅಗ್ನಿಯಲಿ ಸುರಿದು
ಋತ್ವಿಜರು ಹಾಡಿದರು ಅನಿಮಿಷರ ಕರೆದು
ಸ್ವರ್ಣರಥದಲಿ ಕುಳಿತು ಸೋಮಗಳ ಕುಡಿದು
ಫಣಿಗಳನು ಸಂಹರಿಸಿ ಗೋವುಗಳ ಪಡೆದು
ಗಿರಿಯ ಗರಿ ಕತ್ತರಿಸಿ ಅಹಿಯ ಸಂಹರಿಸಿ
ಹರಿವ ಜಲ ಬಿಗಿದಿರುವ ಬಂಧನವ ಬಿಡಿಸಿ
ಸುರಿವ ಜಲ ಬಿಗಿದಿರುವ ಬಂಧನವ ಬಿಡಿಸಿ
ನೆಲಮುಗಿಲು ನಡುಗಿಸಿದ ಇಂದ್ರನಿಗೆ ಸ್ವಾಹಾ

೧೧

ಹಾಡುಗಳ ಹವಿಯಿಡಲು ಸುರರೊಡನೆ ಬಂದು
ಮುದವೀವ ಶುಭವೀವ ಧನವೀವನೆಂದು

ಕೈ ಹಿಡಿದು ದಾಟಿಸಿ ಅಪಾರ ಭವ ಸಿಂಧು
ತಾಯಿಯೊಲು ತಂದೆಯೊಲು ಸಲಹುವವನೆಂದು
ಬಲವೀವ ಓ, ಬ್ರಾಹ್ಮಣ ಸ್ಪತಿಯೆ ಸ್ವಾಹಾ.
ಮಿಂಚಿನಲಿ ಹುಟ್ಟಿದವ, ನೀರಿನಲಿ ಹುದುಗಿ
ಮಾತರಿಶ್ವನಿಗೊಲಿದು ಮನೆ ಮನವ ಬೆಳಗಿ
ಹವ್ಯ ವಾಹನ ಅಗ್ನಿದೇವನಿಗೆ ಸ್ವಾಹಾ.
ಋತದ ಕುಂಭವ ಹಿಡಿದು ಹೊಳೆಗಳನು ಹರಿಸಿ
ಅಂತರಿಕ್ಷವ ಹಾಸಿ ನಕ್ಷತ್ರ ಸುರಿಸಿ
ಶುಭ ಕರ್ಮ ಪ್ರೇರಿಸುವ ವರುಣನಿಗೆ ಸ್ವಾಹಾ.
ಎಲ್ಲೆಲ್ಲಿಯೂ ನಿಂತು ಎವೆ ತೆರೆದು ನೋಡಿ
ಹೃದಯ ಪುಷ್ಪಗಳಲ್ಲಿ ಸ್ನೇಹ ರಸ ನೀಡಿ
ಅಗ್ನಿರಥದಲ್ಲಿ ಕುಳಿತು, ವರುಣನೊಡಗೂಡಿ
ನೆರವೀವ ಸುಖವೀವ ಮಿತ್ರನಿಗೆ ಸ್ವಾಹಾ.
ಇರುಳಿನಲಿ ಕಣ್ಣೆವೆಯ ಕದಗಳನು ಮುಚ್ಚಿ
ಬೆಳಗಿನಲಿ ಪರಿಮಳದ ಗಂಟುಗಳ ಬಿಚ್ಚಿ
ದಿಕ್ಕುಗಳ ಬೆಳೆಗಿಸುತ, ತಾರೆಗಳ ತವರಿ
ಋತ್ವಿಜರು ಬೀಸಿರಲು ಹಾಡುಗಳ ಚವರಿ
ಬಂಗಾರ ಕೂದಲಿನ ಸೂರ್ಯನಿಗೆ ಸ್ವಾಹಾ.

೧೨

ಉಷೆಯ ಗರ್ಭದಿ ಬಂದು ಜನರನೆಚ್ಚರಿಸಿ
ಪಯಣಿಗರ ಪೊರೆದು, ಜಿಪುಣರನು ಕಂಗೆಡಿಸಿ
ಧನವೀವ ಸುಖವೀವ ಪೂಷನ್‌ಗೆ ಸ್ವಾಹಾ.
ಅಮೃತದ ನೆಲೆ ಸುಖದ ಸೆಲೆಯಾಗಿ ಸುಳಿದು
ಬ್ರಹ್ಮಾಂಡವನೆ ಮೂರು ಹೆಜ್ಜೆಯೊಳಗಳೆದು
ಅದ್ಭುತವೆ ಮೈತಳೆದ ವಿಷ್ಣುವಿಗೆ ಸ್ವಾಹಾ.
ಹಕ್ಕಿಗಳ ಚಿಕ್ಕೆಗಳ ಸುಳಿದಾಟಿ ನಿಂದು
ಯಾರಿಗೂ ಕಾಣದೆಯೆ ಎಲ್ಲರನು ಕಂಡು

ಬೆಳೆದಿರುವ ಇಂದ್ರಸಖ ವಿಷ್ಣುವಿಗೆ ಸ್ವಾಹಾ.
ಹೊಂದೇರಿನಲಿ ಕುಳಿತು ನಭದಿ ಸಂಚರಿಸಿ
ಎಲ್ಲನರು ಎಬ್ಬಿಸುತ ಹೊಂಬಿಸಿಲು ತೊಡಿಸಿ
ಹೊಂಬೆಳಗಿನಮೃತವ ಜೀವರಿಗೆ ಉಣಿಸಿ
ಋತದ ಕಣ್ಣಾಗಿಹ ಸವಿತೃವಿಗೆ ಸ್ವಾಹಾ.
ಕಂದು ಬಣ್ಣದ ಶಹಲು ಸಂಜೆಯಲಿ ಹೊದೆದು
ಧೂಳಿಯಿಲ್ಲದ ಹೊಳೆಯ ದಾರಿಯಲಿ ಇಳಿದು
ತಾರೆಗಳ ತಿರುಗಿಸುವ ಸವಿತೃವಿಗೆ ಸ್ವಾಹಾ.
ಹಂಸಗಳ ತೇರಿನಲಿ ಹಗಲಿರುಳು ಚರಿಸಿ
ಬಿದ್ದವರನುದ್ಧರಿಸಿ ಕಂಬನಿಗಳೊರಸಿ
ಕರೆದವರ ಕಷ್ಟಗಳ ಮುಪ್ಪುಗಳ ಬಿಡಿಸಿ
ಮಧುಮಂತ ಅಶ್ವಿನೀ ಕುವರರಿಗೆ ಸ್ವಾಹಾ.

೧೩.

ಬೆಟ್ಟಗಳ ತಿರುಗಿಸುತ ಕಡಲುಗಳ ಕಡೆದು
ಬಣ್ಣಗಳ ಧೂಳಿಗಳನೆರಚಿ ಮುನ್ನಡೆದು
ಮಿಂಚುಗಳ ಕುಣಿಸುವ ಮರುತರಿಗೆ ಸ್ವಾಹಾ.
ತಡೆ ಹಿಡದ ವೃಕ್ಷಗಳ ಬುಡಮೇಲುಗೊಳಿಸಿ
ಮೋಡಗಳ ಗಂಭೀರ ಮದ್ದಳೆಯ ನುಡಿಸಿ
ವೃಷ್ಟಿಗಳ ಕರುಣಿಸುವ ಮರುತರಿಗೆ ಸ್ವಾಹಾ.
ಸತ್ಕರ್ಮ ಪಥದಲ್ಲಿ ಸತ್ಯರಥ ನಡೆಸಿ
ಜ್ಞಾನಬಲ ತಪದ ಬಲ ಮಂತ್ರಬಲ ಗಳಿಸಿ
ಋಜುಭಕ್ತ ರಥಕಾರ ಋಜುಗಳಿಗೆ ಸ್ವಾಹಾ.
ಎಲ್ಲ ಕಡೆಗಲೆಯುವನು ಎಲ್ಲಿವನ ಇರವು?
ಕೇಳುತಿದೆ ಕಾಣಿಸದು ದೇವತೆಗಳುಸಿರು.
ಬಲಪೂರ್ಣ ಪವಮಾನ ದೇವನಿಗೆ ಸ್ವಾಹಾ.
ಸುಂದರ ಸುಗಂಧಿ ಶಿವ, ರುಜಿನಗಳ ಕಳೆದು
ಪುಷ್ಟಿಗಳ ನೀಡುವ ತ್ರಿಶೂಲವನು ಪಿಡಿದು

ಕರುಣಾಳು ಶಂಭು ತ್ರಿಯಂಬಕಗೆ ಸ್ವಾಹಾ.
ಋತ್ವಿಜರು ಹೋಮಾಗ್ನಿಯಲಿ ಸೋಮ ಸುರಿದು
ಹವಿಯೆತ್ತಿ, ಕೊರಳೆತ್ತಿ ಹಾಡಿದರು ಕರೆದು
ನರುಗಂಪು ವ್ಯಾಪಿಸಲು ಎಲ್ಲ ಕಡೆ ಸುಳಿದು
ಯಜ್ಞಶಾಲೆಗೆ ಬಂದ ಮೆ...ಲ್ಲ...ನೆ... ನುಸುಳಿ
ಕವಷ ಐಲೂಷ... ಹ...ಸಿ...ವೆ...ಯ...ಲಿ, ಬ.ಳ.ಲಿ.

೧೪

ಒಳನಟ್ಟ ಕಣ್ಣುಗಳು ತಗ್ಗಿಸಿದ ತಲೆಯು
ಹಸಿವೆಗಳು ಬಳಲಿಕೆಯು, ಒಳಗೊಂದು ಒಲೆಯು
ಇಲ್ಲಿರುವದೆಲ್ಲವೂ ನಡೆದಿಹುದು ಮೇಲೆ
ಋಚೆಗಳು, ಬೆಂಕಿಗಳು, ಈ ಧೂಮಮಾಲೆ
ತನ್ನೊಬ್ಬನನು ಬಿಟ್ಟು; ತಾನೊಬ್ಬ ಕೆಳಗೆ
ಗಿಳಿವಿಂಡು ಹಾರಿರಲು ಹಣ್ಣುಗಳ ಹುಡುಕಿ
ಗಿಡುಗ ಸುತ್ತಾಡಿತ್ತು ಆಗಾಗ ಧುಮುಕಿ
ಬಿರಿಯುತಿಹ ಬಂಡೆಗಳ, ಬೆಟ್ಟಗಳ ಸದ್ದು
ದಾಳಗಳು ನೆರಳಿನಲಿ ಕುಣಿದಿರುವವೆದ್ದು
ಬಂಗಾರದುರಿಯಡಗಿ, ಕೆಂಪು ಹಸಿರಡಗಿ
ಕುಣಿಯುತಿವೆ ಹೋಮಾಗ್ನಿ ನೀಲಿಮೆಗೆ ತಿರುಗಿ
ಅಂಜಿಕೆಯ ಕಡಲಂಚು ಅಲೆದಾಡಿ ಬಂದು
ಹೊಂಬಿಸಿಲು ಕಾಸುತಿದೆ ಬೆಳ್ಳಕ್ಕಿಯೊಂದು
ಪುಣ್ಯಗಳ ಗಾಳಿಯಲಿ ನಡೆದ ತರಗೆಲೆಯು
ಪಾಪಗಳ ಪದರದಲಿ ಪುಟಿದೆದ್ದ ಸೆಲೆಯು
ಕಣ್ಮರೆಸಿ ನೋಡಿದನು ದಿವ್ಯಾಗ್ನಿಯುರಿಯ
ಕೇಳದಲೆ ಕೇಳಿದನು ಮಂತ್ರಗಳ ಕರೆಯ
ಸೋಮಗಳು ಕೂಗಿದವು, 'ಏಳಯ್ಯ ಕವಷ'
ಹೋಮಾಗ್ನಿ ಕೂಗಿದವು, 'ಏಳಯ್ಯ ಕವಷ'
ಋತ್ವಿಜರು ಕೂಗಿದರು, 'ಏಳಯ್ಯ ಕವಷ'

೧೫

ಸೋಮಪತ್ರ ನಡೆದಲ್ಲಿ ನುಸುಳಿಸಿಕೊಂಡು
ಕುಳಿತ ಕವಷ ಐಲೂಷನನ್ನು ಕಂಡು
ನುಗ್ಗಿ ಬಂದು ಋತ್ವಿಜರು, ಕೋಪಗೊಂಡು
ಹುಲಿಯ ಚರ್ಮಗಳ ತೊಟ್ಟು ಸುತ್ತವರಿದು
ನುಡಿಯ ಕೊಳ್ಳಿಗಳ ಬೀಸಿ ಕೆಂಡ ಸುರಿದು
ಕೂಗಿ ಹೇಳಿದರು, ''ಕವಷ ತೊಲಗು ಬೇಗ
ಜೂಜು ಕಟ್ಟೆಯೇನಯ್ಯಾ ಸೋಮಯಾಗ?
ಓ ಶೂದ್ರ ಕವಷ, ಇಲ್ಲಿಂದ ಬೇಗ ತೊಲಗು
ಓ ದಾಸಿ ಪುತ್ರ ಇಲ್ಲಿಂದ ಬೇಗ ತೊಲಗು
ಓ ಜೂಜುಗಾರ ಇಲ್ಲಿಂದ ಬೇಗ ತೆರಳು
ಬೀಳದಿರಲಿ ಇಲ್ಲೆಲ್ಲೂ ನಿನ್ನ ನೆರಳು.''
ಕ್ರುದ್ಧರಾದ ಋತ್ವಿಜರು ನುಗ್ಗಿ ಬಂದು
''ಎದ್ದು ಹೋಗು. ಏಳಯ್ಯ ಕವಷ'' ಎಂದು
ಕೂಗುತಿರಲು ಕಂಗೆಟ್ಟು ನಿಂತುಕೊಂಡು
ಹಸವಿನೊಂದು ಉರಿ, ಹಾಡಿನೊಂದು ಉರಿಗೆ
ದೈನ್ಯದೊಂದು ಉರಿ, ಸಹನೆಯೊಂದು ಉರಿಗೆ
ಅನ್ನ ನೀರು ಕಂಡಿರದ ಒಡಲಿನೊಳಗೆ
ಗಂಟಲಾರಿ ಹೌಹಾರಿ ಕವಷ ನೊಂದು
ಬೇಡಿಕೊಂಡ ಕೈ ಮುಗಿದು ಮುಂದೆ ಬಂದು,
''ನೀರು ಕೊಡಿರಿ ಒಂದಿಷ್ಟು ನೀರು'' ಎಂದು.

೧೬

ಎಣ್ಣೆ ನೀರು ಕಂಡಿರದ ಕೂದಲಿಳಿದು
ಹೆಗಲ ಬಳಿಗೆ ಜೋತಾಡುತಿರಲು ಸುಳಿದು
ಮಾಸಿದಂಥ ಮೈ ಮಾಸಿದಂಥ ಉಡುಗೆ
ಬಾಡಿಹೋದ ಮುಖ, ದಾಹತಪ್ತನ ಒಳಗೆ
ಕಡಿದು ಹೋದ ಬಾಂದವ್ಯದೆಳೆಗೆ ತೂಗಿ

ಶುಭದ ಹೊಳೆಯ ಹುಡುಕಿರುವ ಮೀನವಾಗಿ
"ನೀರು ಕೊಡಿರಿ ಒಂದಿಷ್ಟು ನೀರು" ಎಂದು
ಬತ್ತಿಹೋದ ಕನಿಕರದ ತೊರೆಗೆ ಬಂದು
ಕೇಳುತಿರಲು, ಋತ್ವಿಜರು ನುಡಿದರವಗೆ,
"ಇಲ್ಲಿ ಸಿಗದು ಹನಿ ನೀರು ಕೂಡ ನಿನಗೆ."
ನುಡಿಯ ಕೇಳಿ ಕೈ ಮುಗಿದು ನಿಂತುಕೊಂಡು
ಕರಗದಂಥ ಬಿರುಬಂಡೆಗಲ್ಲು ಕಂಡು
ಯಜ್ಞವಾಟಿಯನು ದಾಟಿ ಹೊರಗೆ ಬಂದು
ಹೊಳೆಗೆ ಬಂದ, ರಸತಮೆಗೆ ಬಂದ ಕವಷ
ದಿವ್ಯ ಆಪಗಳ ಹೊಳೆಗೆ ಬಂದ ಕವಷ
ಮಧುಮಂತ ಆಪಗಳ ಹೊಳೆಗೆ ಬಂದ ಕವಷ,
ಘೃತದ ಆಪಗಳ ಹೊಳೆಗೆ ಬಂದ ಕವಷ
ಋತದ ಆಪಗಳ ಹೊಳೆಗೆ ಬಂದ ಕವಷ
ಅಮೃತ ಆಪಗಳ ಹೊಳೆಗೆ ಬಂದ ಕವಷ
ಋಷಿಗಳೆಲ್ಲ ಗುಡುಗಿದರು, ನಿಲ್ಲು ಕವಷ

೧೭

ರಸತಮೆ ಸರಸ್ವತಿಯ ಬಳಿಗೆ ನಡೆದುಕೊಂಡು
ಹೊರಟ ಕವಷ ಐಲೂಷನನ್ನು ಕಂಡು
ನುಗ್ಗಿ ಬಂದು ಋತ್ವಿಜರು ಕೋಪಗೊಂಡು
ಹುಲಿಯ ಚರ್ಮಗಳ ತೊಟ್ಟು ಸುತ್ತುವರಿದು
ನುಡಿಯ ಕೊಳ್ಳಿಗಳ ಬೀಸಿ ಕೆಂಡ ಸುರಿದು
ಕೂಗಿ ಹೇಳಿದರು, "ಕವಷ ಮುಟ್ಟಬೇಡ.
ಸರಸ್ವತಿಯ ಹನಿ ನೀರು ಮುಟ್ಟಬೇಡ.
ದಿವ್ಯ ಆಪಗಳ ಹನಿಯ ಮುಟ್ಟಬೇಡ.
ಮಧುಮಂತ ಆಪಗಳ ಹನಿಯ ಮುಟ್ಟಬೇಡ.
ಘೃತದ ಆಪಗಳ ಹನಿಯ ಮುಟ್ಟಬೇಡ.
ಋತದ ಆಪಗಳ ಹನಿಯ ಮುಟ್ಟಬೇಡ.

ಅಮೃತದ ಆಪಗಳ ಹನಿಯ ಮುಟ್ಟಬೇಡ.
ಇಲ್ಲಿ ನಿನಗೆ ಹನಿ ನೀರು ಕೂಡ ಸಿಗದು
ಲೋಕ ಪಾವನೆಗೆ ಸೋಕದಿರಲಿ ನೆರಳು.
ಪುಣ್ಯ ನದಿಯ ನೀ ತೊರೆದು ದೂರ ತೆರಳು.''
ನುಡಿಯ ಕೇಳಿ ಕೈ ಮುಗಿದು ನಿಂತುಕೊಂಡು
ಗಂಟಲೊಣಗಿ ಕಣ್ತುಂಬ ನೀರು ತಂದು
ನೆಟ್ಟ ನೋಟದಲಿ ನದಿಯ ನೀರು ಕಂಡು
ದಿವ್ಯವಾಹಿನಿಗೆ 'ನಮೋ' ಎಂದುಕೊಂಡು
ದಾಹತಪ್ತ ಕೊರಳೆತ್ತಿ ಕರೆದನಂದು.

೧೮

ಯಾವ ಸೂರ್ಯ ಸುಡುವನೊಳಗೆ
ಯಾವ ಬೆಂಕಿ ಉರಿದಿದೆ?
ತಾರೆಗಳನು ಸೂರೆ ಮಾಡಿ
ಸತ್ರಯಾಗ ಮೆರೆದಿದೆ?
ವಿಶ್ವಗಳನು ಸೃಷ್ಟಿಸುತ್ತ
ಕಲ್ಪ ಕಲ್ಪ ತಿರುಗಿಸಿ
ಬ್ರಹ್ಮಾಂಡಗಳನ್ನು ಲಯದ
ಕುಳಿಗಳಲ್ಲಿ ಕರಗಿಸಿ,
ಸಪ್ತ ಋಷಿಗಳಲ್ಲಿ ಸೇರಿ
ಯಾವ ಹವಿಯನೀವರು?
ಯಾವ ಋಚೆಗಳನ್ನು ಹಾಡಿ
ನಮ್ಮನೆಲ್ಲ ಕಾವರು?
ಯಾವ ಬೆಂಕಿಯಿಂದ ಸಿಡಿದವಿಲ್ಲಿ
ಬೆಳಕು ಸಾಸಿವೆ.
ಜ್ಯೋತಿರ್ಮಯ ದ್ಯೂತಕಾಗಿ
ನೀಲಪಟವ ಹಾಸಿವೆ?
ತಣಿಸುವಂಥ ತವಕದಲ್ಲಿ

ಹಗಲಿರುಳನು ಬಾಚಿವೆ?
ತಣಿಸುವಂಥ ದಾಹದಲ್ಲಿ
ದಿಙ್ಮಾಲಿಗೆ ಚಾಚಿವೆ.

೧೯

ಓ ಸೂರ್ಯದೇವನೆ ಋತದರಸವೆರೆದು
ಸಲುಹಿರುವೆ ಜೀವ ಕುಲ ನೆಲಮುಗಿಲನಳೆದು
ಸೂರ್ಯಚಂದ್ರಮರ ತಾರೆಗಳ ನೆಲೆ ಮುಗಿಲು
ಹೊಳೆ ಬೆಟ್ಟ ಕೊಳ್ಳ ಕಡಲುಗಳ ನೆಲೆ ನೆಲವು
ನಕ್ಷತ್ರಗಳ ಮುಗಿಲ ನೆಲೆಯಹುದು ಋತವು
ಋತದುಸಿರ ನೆಲೆಯಹುದು ಮಧುಮಂತ ಋಚೆಯು
ಓ ನೆಲವೆ, ಓ ಮುಗಿಲೆ ಆಲಿಸಿರಿ ಮೊರೆಯ
ನೀರಡಿಸಿ ಕರೆಯುತಿಹ ಕವಷನೀ ಕರೆಯ
ಮೋಡಗಳೆ ಆಪಗಳೆ ಆಲಿಸಿರಿ ಮೊರೆಯ
ನೀರಡಿಸಿ ಕರೆಯುತಿಹ ಕವಷನೀ ಕರೆಯ
ಓ ಋತವೆ ಹರಿಸಿ ಬಿಡು ಕರುಣೆಯ ಹೊಳೆಯ
ಓ ಋಚೆಯೆ ಸುರಿಸಿ ಬಿಡು ಅಮೃತದ ನುಡಿಯ
ಮೈಗೊಂದು ನೆರಳಿಹುದು ಮನಕೊಂದು ಪಾಪ
ನೀರಡಿಸಿ ಬಂದವರಿಗೆಲ್ಲ ಕೊಡು ಆಪ
ಇರುಳು ಇದ್ದಲ್ಲೆಲ್ಲ ಇಡು ಒಂದು ದೀಪ
ಓ ಹೊಳೆಯ ತಣಿಸಿ ಬಿಡು ಕವಷನೊಳತಾಪ
ಗದ್ಗದಿತ ಕಂಠದಲಿ ಹಾಡಿದನು, "ಹೊಳೆಯೆ
ನೀರು ಕೊಡು, ನೀರು ಕೊಡು, ಓ ಸರಸ್ವತಿಯೆ !"

೨೦

ನೀರಡಿಸಿ ಬಂದಿರುವೆ ಓ ಸರಸ್ವತಿಯೆ
ನೀರು ಕೊಡು ಕವಷನಿಗೆ, ನೀರು ಕೊಡು ಹೊಳೆಯೆ
ಬೆಂಕಿಯುಳ್ಳವರ ಬಳಿ ನೀರಿಹುದು ತಾಯಿ

ನಮಗು ತುಸು ಬೆಂಕಿಯಿದೆ, ನಮಗು ಇದೆ ಬಾಯಿ
ಇವರಂತೆ ನಮಗು ಇದೆ ಆಸೆಗಳ ದೇಹ
ಇವರಂತೆ ನಮಗು ಇದೆ ದಿವ್ಯಗಳ ದಾಹ.
ಕರುಣಾಳು ಓ ಹೊಳೆಯೆ ದಾಹಗಳ ತಣಿಸು
ಓ ಸರಸ್ವತಿಯೆ ಬಾ, ಕವಷನನು ನಲಿಸು,
ಮೀನುಗಳು ಪಡೆದಿಹವು ರಸತಮೆಯ ಆಪ.
ಹಕ್ಕಿಗಳು ಕುಡಿದಿಹವು ರಸತಮೆಯ ಆಪ.
ಗೋವುಗಳು ಕುಡಿದಿಹವು ರಸತಮೆಯ ಆಪ.
ಸಸ್ಯಗಳು ಕುಡಿದಿಹವು ರಸತಮೆಯ ಆಪ.
ನನಗಿಲ್ಲವೇ ತಾಯಿ ಅಮೃತದ ಆಪ?
ತೊಳೆದು ಬಿಡು ಓ ತಾಯಿ ಈ ಮೈಯ ಪಾಪ
ಕಡಲನೆ ಕುಡಿದವರು ಹೊಳೆಗಿಳಿಯಲಿಲ್ಲ,
ಹೊಳೆಗಳನು ಹಿಡಿದವರು, ಅಲೆ ತಿಳಿಯಲಿಲ್ಲ,
ಋಚೆಗಳನು ಕಂಡವರು ಋತವರಿಯಲಿಲ್ಲ,
ಕರುಣಾಳು ಓ ಹೊಳೆಯೆ, ದಾಹಗಳ ತಣಿಸು.
ಓ ಸರಸ್ವತಿಯೆ ಬಾ, ಕವಷನನು ನಲಿಸು
ಹೊಳೆಗೊಂದು ಹೃದಯವಿದೆ ಎಂಬುದನು ತಿಳಿಸು.

## ೨೧

ಗಂಟಲೊಣಗಿ ಕಣ್ತುಂಬ ನೀರು ತಂದು
ನೆಟ್ಟ ನೋಟದಲಿ ನದಿಯ ನೀರು ಕಂಡು
ದಿವ್ಯ ವಾಹಿನಿಗೆ 'ನಮೋ' ಎಂದುಕೊಂಡು
''ಓ ತಾಯೆ ನಿನ್ನ ಅಲೆವಾಲು ಕವಷಗುಣಿಸು
ಬೆಂದ ಕವಷನಿಗೆ ಬಿಂದು ಆಪ ಕುಡಿಸು
ತಂಪು ತೊಟ್ಟಿಲಿನ ಹೊಳೆಯೆ, ಹರಿದು ಬಂದು
ಬೆಂದ ಕವಷನಿಗೆ ನೀರು ನೀಡು'' ಎಂದು
''ದೇವ ನದಿಯೆ ದಯೆದೋರು'' ಎಂದು ಬೇಡಿ
ಅಂಗಲಾಚುತಿರೆ ಕವಷ ಹೊಳೆಯ ನೋಡಿ

ಹಾಲು ರೆಕ್ಕೆಗಳ ಬಿಡಿಸಿ ಮೆಲ್ಲನೇರಿ
ಸಾಲು ಸಾಲು ಬೆಳ್ಳಕ್ಕಿ ಮುಗಿಲ ಸೇರಿ
ಹಾಡಿದಂತೆ, ನಲಿದಾಡಿದಂತೆ, ಹರುಷ
ಬಂದು ತಟ್ಟುತಿರೆ ಎದೆಯ ಕದವ, ಕವಷ
ಮಂತ್ರ ಪಕ್ಷಿಗಳು ನುಡಿಯ ರೆಕ್ಕೆ ಬಿಡಿಸಿ
ಹಾರಿಬರಲು, ಸಾಲಿಡಿದು ಗೂಡನರಸಿ
ದಾಹಗೀಹಗಳನೆಲ್ಲ ದೂರವಿರಿಸಿ
ಹರ್ಷ ಪುಲಕದಲಿ ಹೊಳೆಯನೊಮ್ಮೆ ನೋಡಿ
ಕೊರಳೆತ್ತಿ ಕೈಯೆತ್ತಿ ಮುಗಿಲ ನೋಡಿ
ಅರಿವಿನಲ್ಲಿ ಮೈ ಮರೆತು ನಿಂತ ಹಾಡಿ

೨೨

ಸುತ್ತಿಗೊಂಡು ಮನದಂತೆ ವೇಗದಲಿ ಬಂದು
ಸೋಮಗಳು ಹರಿದಿರಲಿ ಜಲಗಳೊಳಗಿಂದು
ಇಂದ್ರನಿಗೆ ಮಿತ್ರನಿಗೆ ವರುಣನಿಗೆ ನೀಡು
ದೋಷಿಗಳ ನೆರಳಿರದ ಹೊಗಳಿಕೆಯ ಹಾಡು.
ಅಧ್ವರ್ಯುಗಳೆ ಹವಿಸ್ಸುಗಳಿಹವು ಬಳಿಗೆ
ಸೋಮಗಳ ಹಿಂಡುವ ಬಯಕೆ ಮನದೊಳಗೆ
ಓ ಸುಹಸ್ತಗಳೆ, ಅಧ್ವರ್ಯುಗಳೆ ಬೇಗ
ಸೋಮರಸ ಮೇಘಜಲದಲಿ ಬೆರೆಸಿರೀಗ
ಅಧ್ವರ್ಯುಗಳೆ, ನೀವು ಉದಕಗಳ ತರಲು
ತೆರಳಿರೈ ಕಾದಿಹುದು ನಿಮಗಲ್ಲಿ ಕಡಲು
ಅರ್ಚಿಸಿರಿ ದೇವಗೆ ಹವಿಸ್ಸುಗಳ ಸುರಿದು
ಅರ್ಚಿಸಿರಿ ಮಧುಮಂತ ಸೋಮಗಳ ಸುರಿದು
ಅಪಾಮ್‌ನಪಾತ್ ದೇವನೆ, ಉದಕಗಳ ನಡುವೆ
ಪ್ರಜ್ವಲಿಸಿ ಬೆಳಗುತಿಹೆ ಕಟ್ಟಿಗೆಗಳಿರದೆ
ಮೇಧಾವಿ ಋತ್ವಿಜರು, ಹಾಡು ಹವಿಯಿಡಲು
ಇಂದ್ರನಿಗೆ ಪುಷ್ಟಿಯನು ತುಷ್ಟಿಯನು ಕೊಡಲು

ಹಿಂಡುತಿಹ ಸೋಮದಲಿ, ಸೇರಿಸಲು ಒಡವೆ
ಮಧುಮಂತ ಉದಕಗಳ ನೀಡಯ್ಯ ನಮಗೆ.
ಅಪಾಮ್‌ನಪಾತ್ ದೇವನನು ಒಲಿಸಿರಲು ಅವನು,
ಮೋಡಗಳ ಸೆರೆಯೊಡೆದು ಜಲವ ಸುರಿಸುವನು.

೨೩.

ರೂಪವತಿ ಯುವತಿಯರ ಜೊತೆ ಬಾಳಿ, ಜನರು
ನಲಿವಂತೆ, ಹರ್ಷಿಸುವ ಉದಕಗಳ ತರಲು
ಕಡಲಬಳಿ ತೆರಳಿರೈ, ಸೋಮರಸ ಬೆರೆಸಿ
ಉದಕಗಳ ಸೋಮಗಳನೊಂದಾಗಿ ಇರಿಸಿ
ಮೇಘಗಳ ಬಿಡಿಸಿದನು, ಸೆರೆಯಿಂದ ಇಂದ್ರ
ಧಾರೆಗಳ ಸುರಿದಾರಿ, ತೆರೆಸಿದನು ಇಂದ್ರ
ಮಧುಮಂತ ಧಾರೆಗಳ ಇಂದ್ರನಿಗೆ ಸುರಿಸಿ
ಅನಿಮಿಷರು ಹರ್ಷಿಸುವ ಸವಿಧಾರೆ ಬೆರೆಸಿ
ವಾಹಿನಿಗಳಾಗಿರುವ ಉದಕಗಳೆ ನಿಮಗೆ,
ಗರ್ಭದೊಲು, ಬುಗ್ಗೆಯೊಲು ಇಹನಿಂದ್ರನವಗೆ
ನೀಡಿರೈ ಆಜ್ಯಗಳ ಲೇಪಿಸಿದ ಜಲವ
ಧನವಂತ ಉದಕಗಳೆ ಆಲಿಸಿರಿ ಮೊರೆಯ
ವಾಹಿನಿಗಳಾಗಿರುವ ಉದಕಗಳ ಸುರಿಸಿ
ಮುದವೀವ ಮದವೀವ ನಿಮ್ಮ ಜಲರಾಶಿ
ಸೋಮನಲಿ ಸಂಗಮದ ಬಯಸಿರುವ ಜಲವ
ಇಂದ್ರನನು ತಣಿಸಲುದ್ಭವಿಸಿರುವ ಜಲವ
ವಾಹಿನಿಗಳಾಗಿರುವ ಉದಕಗಳ ಸುರಿಸಿ
ಮುದವೀವ ಮದವೀವ ನಿಮ್ಮ ಜಲರಾಶಿ.
ತ್ರಿಭುವನವನೆಲ್ಲಕಡೆ ಹಿಗ್ಗಿಸುವ ಜಲವ
ಸೆಲೆಯಾಗಿ ಯಜ್ಞದಲಿ ನೆಲೆಗೊಂಡ ಜಲವ.

೨೪

ಓ ಋಷಿಯೆ, ವಾಹಿನಿಗಳುಳ್ಳವರ ನಮಿಸು
ಆಗಾಗ ಹಿಂತಿರುಗಿ ಬರುವವರ ನಮಿಸು.
ಲೋಕಗಳ ಸೃಷ್ಟಿಸುವ ಉದಕಗಳ ನಮಿಸು
ಫಣಿಗಳಲಿ ಹೋರಾಡಿ ಗೋವುಗಳ ಪಡೆದು
ಮರಳಿರುವ ಇಂದ್ರನೊಲು, ಕ್ಷಿಪ್ರದಲಿ ನಮಿಸು.
ಅನಿಮಿಷರ ಮುದಕಾಗಿ, ಯಜ್ಞಗಳ ಮಾಡು
ಧನಲಾಭಕ್ಕಾಗಿ ನುಡಿಪುಷ್ಪಗಳ ನೀಡು
ಕ್ಷೀರಗಳ ಸುರಿಸಿರೈ, ಕೆಚ್ಚಲನು ಬಿಡಿಸಿ
ಉದಕಗಳೆ ನಮಗೆಲ್ಲ ಮುದಧಾರೆ ಸುರಿಸಿ.
ಧನವಂತರಾಗಿರುವ ಅಬ್ದೇವತೆಗಳೆ,
ಧನಕೆಲ್ಲ ಪ್ರಭುಗಳಾಗಿರುವವರು ನೀವೆ
ಮಂಗಳದ ಕರ್ಮಗಳ, ಅಮೃತತ್ವ ಧರಿಸಿ
ಮಧುಮಂತ ರಸತಮೆ, ಸರಸ್ವತಿಯ ಸ್ತುತಿಸಿ
ನಲಿಯುತಿಹ ನನಗವಳು ಅನ್ನವನು ಕೊಡಲಿ.
ಮಧುಮಂತ ರಸಗಳನು, ಘೃತಗಳನು ಧರಿಸಿ
ಇಂದ್ರಿನಿಗೆ ಸೋಮಗಳ ಉದಕಗಳ ವಹಿಸಿ
ಅಬ್ದೇವತೆಗಳು ಬಂದಿಹರಿಲ್ಲಿ, ನಮಿಸಿ,
ಸಖರೆ, ಅಧ್ವರ್ಯುಗಳೆ, ಆಸನವ ನೀಡಿ
ಕುಳ್ಳಿರಿಸಿವರನ್ನು ಮಾತುಕತೆಯಾಡಿ.

೨೫

ಜೀವಿಗಳ ಪಾಲಿಸುವ ಧನವಂತರಿವರು
ಅಬ್ದೇವತೆಗಳಿಲ್ಲಿ ಒಲಿದು ಬಂದಿಹರು
ದರ್ಭಾಸನವನಿತ್ತು ಕುಳ್ಳಿರಿಸಿರವರ
ಅಪಾಮ್‌ಅಪಾತ್ ದೇವನೊಂದಿಗೆ ಯಜ್ಞಸಖರೆ,
ಸೋಮಗಳ ಹಿಂಡಿರೈ ನೀವವರಿಗಾಗಿ
ಒದಗಿಹುದು ದೇವ ಪೂಜೆಯು ಸುಲಭವಾಗಿ

೨೬

ಅಬ್ದೇವತೆಗಳ ಕಂಡುಕ್ಕಿರಲು ಹರುಷ
ಪುಲಕದಲಿ ಮೈ ಮರೆತು ಹಾಡಿದನು ಕವಷ
ನೀರು ಕೊಡು ಕವಷನಿಗೆ ನೀರು ಕೊಡು ಹೊಳೆಯೆ
ನೀರಡಿಸಿ ಬಂದಿರುವೆ ಓ ಸರಸ್ವತಿಯೆ.
ಸುಡುತಿಹವು ದೇಹಗಳ ದಾಹಗಳ ಚಿಂತೆ
ಬರು ಭಯದಿ ನಡುಗಿಸಿವೆ ತಕ್ಕನ್‌ನಂತೆ
ದಾಹಗಳ ತಣಿಸಿಬಾ, ಇಹಪರದ ದಾಹ
ತೊಳೆದು ಬಿಡು ಓ ತಾಯಿ, ಪಾಪಗಳ ಮೋಹ
ಜಲಗಳಿವು ಜಗಕೆಲ್ಲ ತಾಯದಿರಹಾಗೆ
ಜಲಗಳಿವು ಜಗಕೆಲ್ಲ ಭಗಿನಿಯರಹಾಗೆ
ಸೋಮಗಳು ಕ್ಷೀರಗಳು ಜಲಗಳಲಿ ಸೇರಿ
ತೆರೆದಿರಲು ಮರ್ತ್ಯರಿಗೆ ಅಮೃತದ ಧಾರಿ.
ಜಲಗಳಲಿ ಸೂರ್ಯನಿಹ, ಸೂರ್ಯನಲಿ ಜಲವು
ಯಜ್ಞಧಿ ಹವಿಸ್ಸುಗಳ ಹೊಂದಿಹವು ಜಲವು
ಗೋವುಗಳು ಹರ್ಷಿಸಿವೆ, ಜಲಗಳನು ಕುಡಿದು
ಮರ್ತ್ಯರಿಗೆ ಅಮೃತದ ದಾರಿಯನು ತೆರೆದು
ಅಮೃತವ ಗರ್ಭದಲಿ ಪಡೆದಿಹವು ಜಲವು
ಒಡಲಿನಲಿ ಓಷದಿಯ ಪಿಡಿದಿಹವು ಜಲವು.
ಬೆಂಕಿಗಳ ಮಿಂಚುಗಳ ಧರಿಸಿಹವು ಜಲವು
ಅಮೃತದ ಕಣ್ಣೆವೆಯ ತೆರೆದಿಹವು ಜಲವು.

೨೭

ತೀರಗಳ ತೋಳಸೆರೆ ದಾಟಿರಲಿ ಜಲವು
ಅಭವ ಜಲಧಾರೆಗಳ ನೀಡಿರಲಿ ಜಲವು
ಇಹ ಪರದ ದಾಹಗಳ ತಣಿಸಲಿ ಜಲವು
ನೀರಲ್ಲವೆ ಚರಾಚರವ ಓಲೈಸಿದೆ ಇಲ್ಲಿ.
ನೀರಲ್ಲವೆ ಜೀವನವ ಹಾರೈಸಿದೆ ಇಲ್ಲಿ

ಭೂಮಿ ಬಂಡೆ ಬೆಟ್ಟಗಳನು ತನ್ನೆದೆಯಲ್ಲವಚಿ
ಸಲುಹಿವೆ ಜಲಗಳು ಅಮೃತ ಧಾರೆಯ ಕುಡಿಸಿ
ನೀರಲ್ಲವೆ ಮಣ್ಣಲ್ಲಿಹ ಮುಗಿಲಿನ ಬೆರಳೆತ್ತಿ
ಬೀಜದ ಬುದ್ಬುದದಾಸೆಗೆ ಹಸಿರೆಳೆಯನು ಸುತ್ತಿ
ಎಲ್ಲೆಲ್ಲೂ ನಿಲ್ಲಿಸಿದೆ ಈ ವಿಶ್ವದ ವ್ಯೂಹ
ಹೊಳೆಯಾಗಿದೆ, ಮಳೆಯಾಗಿದೆ, ಬೆಳೆಯಾಗಿದೆ ದಾಹ

೨೮

ಜೀವ ಜಡವ ಹೆಣೆಯುವವೀ ಜಲಧಾರೆಯ ದಾರ
ಬ್ರಹ್ಮಾಂಡಗಳನು ಕರಗಿಸಿ ಕುಡಿದಿರುವ ಅಪಾರ
ನೀರಲ್ಲವೆ ನೀಡುವದು ಮಣ್ಣಿನ ಮೈಗುಸಿರು
ನೀರಲ್ಲವೆ ತಣಿಸುವದು ಜ್ವಾಲಾಮುಖಿಯಸರು.
ಮಳೆಬಿಲ್ಲನು ನಿಲ್ಲಿಸುವದು ಸೆಳೆಮಿಂಚನು ಎಳೆದು
ಸೌಗಂಧಿಕ. ಸಿಂಗಾರದ ದಲದಲದೊಳಗಿಳಿದು
ನೀರಾಗಿದೆ ಸಾಗರದಲಿ ಭಗವಂತನ ಕರುಣೆ.
ತೇರಾಗಿದೆ ಆಕಾಶದಿ ಸಾಗರಗಳ ಸ್ಮರಣೆ.
ಸೆಲೆಯೊಡೆದಿಹ ವಾತ್ಸಲ್ಯವೆ ತಾಯೆ, ನೀರುಣಿಸು
ಓ ಕರುಣೆಯ ಕಾರಂಜಿಯೆ ಈ ಕವಷನ ತಣಿಸು
ಅಭಯವನು ಶಾಂತಿಯನು ಪರಿಸಲೀಜಲವು
ನೀರಡಿಸಿ ಬಂದಿರುವೆ ಓ ಸರಸ್ವತಿಯೆ
ನೀರು ಕೊಡು ಕವಷನಿಗೆ ಹರ್ಷಗಳ ಹೊಳೆಯೆ

೨೯

ಅಲೆಗಳಲಿ ಸೆಲೆಗಳಲಿ ಆಲಿಸಿತು ಹೊಳೆಯು
ಸುಳಿಗಳಲಿ ಮೆಳೆಗಳಲಿ ಆಲಿಸಿತು ಹೊಳೆಯು
ಕರೆಗಳನು ಮೊರೆಗಳನು ಆಲಿಸಿತು ಹೊಳೆಯು
ಪುಲಕಗಳ ಮೇಳದಲಿ ಲಾಲಿಸಿತು ಹೊಳೆಯು
ರಸದ ನುಡಿ ನಾವೆಗಳ ತೇಲಿಸಿತು ಹೊಳೆಯು.

ಹೊಳೆಯೆಲ್ಲ ಒಮ್ಮೆಲೆ, ಒಮ್ಮೆಲೆ ಸ್ತಬ್ಧ
ಅಲೆಗಳಲಿ ಸೆಲೆಗಳಲಿ ಎಲ್ಲ ನಿಶ್ಯಬ್ದ
ಮೆಳೆಗಳಲಿ ಸುಳಿಗಳಲಿ ಮತ್ತೆ ನಿಶ್ಯಬ್ದ
ಹಂಸಗಳು ನಿಬ್ಬೆರಗಿನಲಿ ನಿಂತು ದೂರ
ವರ್ತುಲಿಸುತಿರುವ ಬೆಳ್ಳಕ್ಕಿಗಳು ದೂರ
ನಿಶ್ಚಲದಿ ನಿಟ್ಟಿಸಲು ಕವಷನನು ನೋಡಿ
ಅಲೆಯೆದ್ದು, ಸೆಲೆಯೆದ್ದು, ಸುಳಿಯೆದ್ದು ಮೂಡಿ
ಹೊಳೆ ಬಂತು; ಒಮ್ಮೆಲೆ ಬಂತು ಹರಿದೋಡಿ
ಹಸುವ ಹಿಂಬಾಲಿಸುತ್ತ ಬಂದಂತೆ ಕರುವು
ಕವಷ ಐಲೂಷನೆಡೆ ಬಂದಿತ್ತು ಹೊಳೆಯು.
ವಾತ್ಸಲ್ಯ ಆಲ್ಪರಿದು ಬಂದಂತೆ ಹೊಳೆಯು
ಕರುಣೆಯೆ ಕೈ ನೀಡಿ ಬಂದಂತೆ ಹೊಳೆಯು
ಕರುಣೆಯೆ ಕೈ ನೀಡಿ ಬಂದಂತೆ ಹೊಳೆಯು
ಪಾಪಗಳ ಕೊಳೆ ತೊಳೆದು ಹರಿದಿತ್ತು ಹೊಳೆಯು
ತಾಪಗಳ ಹಿಂಗಿಸುತ ಹರಿದಿತ್ತು ಹೊಳೆಯು
ನೋವುಗಳ ನೊಂದವರ ಮೈತೊಳೆವೆನೆಂದು
ಭವಗಳಲಿ ಬೆಂದವರ ಉರಿ ಕಳೆವೆನೆಂದು
ಕವಷನೆಡೆ ಹರಿದೋಡಿ ಕಾಲ್ಬಳಿಗೆ ಸರಿದು
ಮಕ್ಕಳೊಲು ಮುನ್ನುಗ್ಗಿ ಹೊಳೆ ಬಂತು ಹರಿದು.

## ೩೦

ನಿರಡಿಸಿ ಬಂದಿರುವ ಕವಷನನು ಜರಿದು
ಋತ್ವಿಜರು ತಳ್ಳಿರಲು ಬರದಂತೆ ತಡೆದು
ನೀರಿರದ ನೆರಳಿರದ ಬೆಂಗಾಡ ಬಳಿಗೆ
ಕವಷನನು ಓಡಿಸಲು, ಬರದಂತೆ ಹೊಳೆಗೆ
ಹೊಳೆಗೊಂದು ಹೃದಯವಿದೆ ಓ ಕವಷ ಎಂದು
ಕವಷನನು ಓಲೈಸಿ ಹರಿದೋಡಿ ಬಂದು
"ನೀರಡಿಸಿ ಬಂದಿರುವ ನೀರು ಕುಡಿ, ಕವಷ

ಋತದ ಈ ಆಪಗಳ ಬೊಗಸೆ ಹಿಡಿ ಕವಷ
ಘೃತದ ಈ ಆಪಗಳ ಬೊಗಸೆ ಹಿಡಿ ಕವಷ
ಅಮೃತದ ಈ ಆಪಗಳ ಬೊಗಸೆ ಹಿಡಿ ಕವಷ
ಮಧುಮಂತ ಆಪಗಳ ಬೊಗಸೆ ಹಿಡಿ ಕವಷ
ಈ ದಿವ್ಯ ಜಲಧಾರೆಗಳ ಬೊಗಸೆ ಕುಡಿ ಕವಷ
ದೇಹಿಗಳ ದಾಹಗಳ ತಣಿಸು ಓ ಕವಷ'
ಎಂದುಲಿಯ ಹರಿದಾಡಿ ಕವಷನೆಡೆ ನಿಂತು
ನಡೆದಲ್ಲಿ ನಡೆದು ಹೊಳೆ ಬೆಂಬತ್ತಿ ಬಂತು.
ಆಪಗಳ ಋಚೆ ಕೇಳಿ ರಸತಮೆಯು ಬಂದು
ನಿಂತಲ್ಲಿ ನಿಂತು ಹೊಳೆ, ನಡೆದಲ್ಲಿ ನಡೆದು
ಓಲೈಸಿ ಬಂದಿರಲು ಕವಷನೆಡೆ ಹರಿದು
ಬೆಳ್ಳಕ್ಕಿ ಸುಳಿ ತಿರುಗಿ ಸುತ್ತಿಹವು ಕೂಗಿ
ಹಂಸಗಳು ಹಾರಿದವು ಸಾಲು ಸಾಲಾಗಿ.

೩೧

ತಾಯ ಮೊಳಕಾಲ್ಬಳಿ ಬಿಗಿಯವಚಿಕೊಂಡು
ಮಗುವು ನಿಂತಂತೆ ನಿಂತಿರುವ ಹೊಳೆ ಕಂಡು
ಗದ್ಗದಿತ ಕಂಠದಲಿ 'ಅಂಬ' ಎಂದುಲಿದು
ಹರ್ಷಗಳ ಪುಲಕದಲಿ ಕವಷ ಕೈಮುಗಿದು
ನಿಂತಿರಲು ಕೌತುಕುವ ಕಂಡು, ಬೆರಗಾಗಿ
ಋತ್ವಿಜರು ಹೇಳಿದರು ಕವಷನಿಗೆ ಕೂಗಿ
"ಓ ಮಹಾತ್ಮ ಕ್ಷಮಿಸು, ನಮಿಸುವೆವು ನಿನಗೆ
ಓ ಮಹಾ ಮಹಿಮ ನಮಿಸುವೆವು ನಿನಗೆ
ಬ್ರಹ್ಮರ್ಷಿ ಕವಷ ಐಲೂಷನಿಗೆ ಶರಣು
ರಸತಮೆಯನೊಲಿಸಿರುವ ರಸಋಷಿಗೆ ಶರಣು
ಓ ಮಹಾತ್ಮನೆ ಮಾಡಿದಪರಾಧ ಕ್ಷಮಿಸು.
ಓ ಮಹಿಮನೆ ಮಾಡಿದಪಚಾರ ಕ್ಷಮಿಸು.
ಜ್ಞಾನಿ ನೀನಹುದು ಅಜ್ಞಾನಿಗಳು ನಾವು.

ಲೇಹಿಗಳು ನಾವಯ್ಯಾ, ದಾಹಿಗಳು ನಾವು.
ಕರುಣೆಯ ಆಪಗಳ ನಮಗಿಷ್ಟು ಕುಡಿಸು
ಕ್ಷಮೆಯ ಹೊಳೆಯನು ನಮ್ಮ ಬಳಿಗಿಷ್ಟು ಹರಿಸು
ಮರಳಿ ಬಾ ಓ ಕವಷ, ಋತ್ವಿಜರ ತಣಿಸು
ಋಚೆಗಳ ಹೊಳೆ ಹರಿಸು ಅಮೃತರ ತಣಿಸು''
ಋತ್ವಿಜರ ನುಡಿ ಕೇಳಿ ಕರಗಿದನು ಕವಷ
ಯಜ್ಞದೀಕ್ಷಿತನಾಗಿ ಮರಳಿದನು ಕವಷ

೩.೨

ಅಬ್ದೇವತೆಗಳ ಕಂಡುಕ್ಕಿರಲು ಹರುಷ
ಯಜ್ಞದೀಕ್ಷಿತನಾಗಿ ಹಾಡಿದನು ಕವಷ
ಆಪಗಳು ಹರಿಯುವವು ಪಾಪಗಳ ತೊಳೆದು
ಆಪಗಳ ಸ್ತುತಿಸಿರೈ ಋತ್ವಿಜರೆ ನಲಿದು
ಆಪಗಳು ಹರಿಯುವವು ಅಮೃತವ ಸುರಿದು
ಆಪಗಳ ಸುತ್ತಿಸಿರೈ ಋತ್ವಿಜರೆ ನಲಿದು.
ಆಪಗಳು ಹೊಳೆಯಾಗಿ ಹರಿದಿಹವು ನಡೆದು
ಆಪಗಳು ಕರುಣಿಸಿವೆ ತಾಯಿಯೊಲು ಪೊರೆದು
ಆಪಗಳು ಬೆಳಗಿರಲು ರಸಧಾರೆಯೆರೆದು
ನಾಮಗಳು ರೂಪಗಳು ಹೊಳೆಯಾಗಿ ಹರಿದು
ಕರ್ಮಗಳು ಜ್ಞಾನಗಳು ಹೊಳೆಯಾಗಿ ನಡೆದು
ಪಾರದಲಿ ಹರಿದಿವೆ, ಅಪಾರವನೆ ನೆನೆದು
ಕವಷ ಐಲೂಷ ನುಡಿದಿರಲು ಕೈ ಮುಗಿದು
ಋತ್ವಿಜರು ಹೇಳಿದರು ಮುದದಿ ಮೈಮರೆದು
''ಹೊಳೆಯ ಬಂಧುವೆ ನಮ್ಮ ಬಂಧುವಾಗಿರಲು
ಕೈಗೆಟಕದಿರುವದೆ - ಅಮೃತದ ಕಡಲು.''

## ೫೩. ಅರಣ್ಯಾನಿ

೧

ಮೌನವನು ಮೈತುಂಬ ಹೊದ್ದಿರುವ ಕಾಡು,
ಈ ಮರಗಳು ನಿಂತಲ್ಲಿ, ಏನೊ ಸದ್ದು,
ಅರಣ್ಯಾನಿ, ನಿನಗೂ ದಾರಿ ತಪ್ಪಿತೆ?
ಎಲ್ಲಿಂಯೊ ಎಲೆಟೊಂಗೆ ಉದುರಿಬಿದ್ದು

೨

ಎಲ್ಲೆಲ್ಲಿಯೂ ಬೆಳೆದ ಹುಲ್ಲಿನಲಿ ಮರೆಗೊಂಡು
ದಾರಿಕಾಣಿಸದೆ, ಕಂಗೆಟ್ಟು ನಿಂದು,
ಅರಣ್ಯಾನಿ, ಯಾಕೆ ಕೇಳುವದಿಲ್ಲ?
ಗ್ರಾಮಕ್ಕೆ ದಾರಿಯು ಯಾವುದೆಂದು?

೩

ಪೊಗದೆಯಾಚೆ ಮಿಡತೆ, ಇಲ್ಲೆಲ್ಲಿಯೊ ಸಡಗರ
ಕತ್ತಲಿನ ಕಾಮೋದ ಕಂಠ ಬಿಚ್ಚಿ
ಗುಮ್ಮೆನಲು ಗೂಬೆ, ಓ ಅರಣ್ಯಾನಿಯೆ,
ಅಲುಗದೆ ನಿಂತೆಯ ನೀನು ಬೆಚ್ಚಿ

೪

ಬಳಿಯಲ್ಲೆ ಮೇದಿವೆ ಹಸುಗಳು. ಆಗಾ
ಗ, ಕಿಣಿಕಿಣಿಸುತಿವೆ ಕೊರಳಲ್ಲಿ ಗಂಟೆ,
ಅರಣ್ಯಾನಿ, ಸವಿದನಿಯು ಕೇಳಿಸಿತೆ?
ಈಗಲೂ ನಿನ್ನಲ್ಲಿ ಭಯವು ಉಂಟೆ?

೫

ಮರಗಳಾಚೆಗೆ, ಹುಲ್ಲುಗಾವಲಿನ ಆಚೆಗೆ
ಬೆಟ್ಟದಡಿಯಲ್ಲಿರುವ ಕೆರೆಯ ಬಳಿಗೆ,
ಮಬ್ಬಿನಲ್ಲೊಂದು ಮನೆ, ಇದ್ದಂತೆ ಕಾಣುವದು.
ಅರಣ್ಯಾನಿ, ಯಾರಿಹರು ಅಲ್ಲಿ ಒಳಗೆ?

೬

ಈಗ ಸಂಧ್ಯಾಕಾಲವಿರಬೇಕು. ಇಲ್ಲೊಂದು
ಹಕ್ಕಿ ಮರಳಿದೆ ಗೂಡಿಗೀಗ ತಾನೆ,
ಗಾಲಿಗಳು ಕಿರುಗುಟ್ಟಿ ಬಂಡಿ ಹೊರಟಿದೆ,
ಅರಣ್ಯಾನಿ, ಆ ಸಪ್ಪಳವು ನಿನ್ನದೇನೆ?

೭

ಇದ್ದಕ್ಕಿದ್ದಂತೆ ದನಿ, 'ನಂದಿನಿ, ನಂದಿನಿ,'
ಇಲ್ಲೊಬ್ಬ ಕರೆದಿಹನು ಹಸುವ ಕೂಗಿ,
ಕಣಿವೆಯಲಿ ಸಂಜೆ ಕರಗುವ ಮುನ್ನ ಅರಣ್ಯಾನಿ,
ಸೇರಬೇಕಲ್ಲವೆ ಮನೆಗೆ ಹೋಗಿ.

೮

ಕಾಡಿನಲ್ಲಿದ್ದ ಒಬ್ಬೊಬ್ಬನೂ ಅನ್ನುವನು.
ಈಗ ಏನೊ ಸದ್ದು ಕೇಳಿತಿಲ್ಲಿ
ಅಂದುಕೊಳ್ಳುತ್ತಲೆ, ಇಲ್ಲೆಲ್ಲೊ ಅರಣ್ಯಾನಿ,
ಹಾದು ಹೋಗುತ್ತಾಳೆ ಸನಿಹದಲ್ಲಿ.

೯

ಅವಳ ಬಳಿ, ತೀರ ಹತ್ತಿರ ಹೋಗದಿದ್ದರೆ,
ಯಾರಿಗೂ ಏನೂ ಮಾಡುವವಳಲ್ಲ,
ಸಿಂಹಗಳ ತಾಯಿ, ಮೃಗಗಳ ತಾಯಿ,
ಇವಳೇ; ಜಿಂಕೆಗಳಿಗೂ ತಾಯಿ ಇವಳೆ ಅಲ್ಲ!

೧೦

ಇವಳನ್ನು ಸ್ತುತಿಸುವೆನು, ಇವಳ ನಿಶ್ಶಬ್ದಕ್ಕೆ,
ಇವಳಡವಚಿಕೊಂಡಿದ್ದ ಸದ್ದುಗಳಿಗೆ,
ತನ್ನ ಒಲವಿನ ಸೆರಗಿನಲ್ಲಿಟ್ಟು ಸಲುಹಿದ್ದ
ಬೆಡಗುಗಳಿಗೂ, ಈಗ, – ಒಂದು ಗಳಿಗೆ.

(ಋಗ್ವೇದದಿಂದ)

ವಿಶ್ವ ಕನ್ನಡ ಸಮ್ಮೇಳನ-೨೦೧೧
ಬೆಳಗಾವಿ

# ಕಥನ ಕವನ

ಸು.ರಂ. ಎಕ್ಕುಂಡಿ

ವಿಶ್ವಕನ್ನಡ
ಸಮ್ಮೇಳನ
ಸಾಹಿತ್ಯಮಾಲೆ

# ಕಥನ ಕವನಗಳು

ಸು.ರಂ. ಎಕ್ಕುಂಡಿ

ಕರ್ನಾಟಕ ಸರ್ಕಾರ

**ಕನ್ನಡ ಮತ್ತು ಸಂಸ್ಕೃತಿ ಇಲಾಖೆ**
ಕನ್ನಡ ಭವನ, ಜೆ.ಸಿ.ರಸ್ತೆ
ಬೆಂಗಳೂರು – ೫೬೦ ೦೦೨

**KATHANA KAVANAGALU** : A Collection of poems by **S.R. Yekkundi**
Published by **Manu Baligar**, Director, Department of Kannada and Culture, Kannada Bhavana, J.C.Road, Bengaluru - 560 002.

ಈ ಆವೃತ್ತಿಯ ಹಕ್ಕು : ಕರ್ನಾಟಕ ಸರ್ಕಾರ

ಮುದ್ರಿತ ವರ್ಷ : ೨೦೧೧
ಪ್ರತಿಗಳು : ೧೦೦೦
ಪುಟಗಳು : XIV + ೨೦೩
ಬೆಲೆ : ರೂ. ೫೦/-

ರಕ್ಷಾಪುಟ ವಿನ್ಯಾಸ : **ಕೆ. ಚಂದ್ರನಾಥ ಆಚಾರ್ಯ**

ಮುದ್ರಕರು :
**ಮೆ॥ ಮಯೂರ ಪ್ರಿಂಟ್ ಆ್ಯಡ್ಸ್**
ನಂ. ೬೯, ಸುಬೇದಾರ್ ಛತ್ರಂ ರೋಡ್
ಬೆಂಗಳೂರು – ೫೬೦ ೦೨೦ ದೂ : ೨೩೩೪೨೭೨೪

ಬಿ.ಎಸ್. ಯಡಿಯೂರಪ್ಪ
ಮುಖ್ಯಮಂತ್ರಿಗಳು

ಕರ್ನಾಟಕ ಸರ್ಕಾರ

ವಿಧಾನಸೌಧ
ಬೆಂಗಳೂರು ೫೬೦ ೦೦೧

ಸಿಎಂ/ಪಿಎಸ್/೨೬/೧೧

# ಶುಭ ಸಂದೇಶ

ವಿಶ್ವ ಕನ್ನಡ ಸಮ್ಮೇಳನದ ಸಂಭ್ರಮಾಚರಣೆಯ ಸಂದರ್ಭದಲ್ಲಿ ಕನ್ನಡ ನಾಡು ಏಕೀಕರಣಗೊಂಡು ೫೫ನೇ ವರ್ಷಕ್ಕೆ ಹೆಜ್ಜೆಯನ್ನಿಟ್ಟಿದೆ. ಈ ಸಂದರ್ಭವನ್ನು ರಚನಾತ್ಮಕವಾಗಿ ದಾಖಲಿಸಿ ಸ್ಮರಣೀಯಗೊಳಿಸಬೇಕೆಂಬುದು ಸರ್ಕಾರದ ಮಹದಾಶಯ. ಅದಕ್ಕಾಗಿ ಬೆಳಗಾವಿಯಲ್ಲಿ **"ವಿಶ್ವ ಕನ್ನಡ ಸಮ್ಮೇಳನ"** ವನ್ನು ಇದೇ ಮಾರ್ಚ್ ತಿಂಗಳಿನಲ್ಲಿ ಆಯೋಜಿಸಲಾಗಿದೆ. ಇದನ್ನು ಅತ್ಯಂತ ಅರ್ಥಪೂರ್ಣವಾಗಿ ಆಚರಿಸುವುದು ಕರ್ನಾಟಕ ಸರ್ಕಾರದ ಆಶಯವಾಗಿದೆ. ಇದರ ಅಂಗವಾಗಿ ನಾಡಿನ ವಿವಿಧ ಕ್ಷೇತ್ರಗಳಲ್ಲಾಗಿರುವ ಪ್ರಗತಿಯ ಆತ್ಮಾವಲೋಕನದ ಜೊತೆಗೆ ಕನ್ನಡ ಸಾಹಿತ್ಯದ ಸೃಜನಶೀಲ ಮತ್ತು ಸೃಜನೇತರ ಪ್ರಕಾರಗಳ ೧೦೦ ಕೃತಿಗಳನ್ನು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಪ್ರಕಟಿಸಲಾಗುತ್ತಿದೆ. ಕನ್ನಡದ ಖ್ಯಾತ ಲೇಖಕರ ಮಹತ್ವದ ಕೃತಿಗಳನ್ನು ಪ್ರಕಟಿಸಿ, ಸುಲಭ ಬೆಲೆಯಲ್ಲಿ ಸಾಹಿತ್ಯಾಸಕ್ತರಿಗೆ ಒದಗಿಸುವ ಹಂಬಲ ನಮ್ಮದು.

ಈ ಸಾಹಿತ್ಯ ಮಾಲಿಕೆಯಲ್ಲಿನ ಕೃತಿರತ್ನಗಳನ್ನು ಕನ್ನಡಿಗರು ಸಹೃದಯತೆಯಿಂದ ಸ್ವಾಗತಿಸುವ ಮೂಲಕ ಇವುಗಳ ಪ್ರಯೋಜನವನ್ನು ಪಡೆದುಕೊಂಡರೆ ಸರ್ಕಾರದ ಈ ಯೋಜನೆ ಸಾರ್ಥಕವಾಗುತ್ತದೆ ಎಂದು ಭಾವಿಸುತ್ತೇನೆ.

ದಿನಾಂಕ ೨೪.೦೧.೨೦೧೧

(ಬಿ.ಎಸ್. ಯಡಿಯೂರಪ್ಪ)

ಕರ್ನಾಟಕ ಸರ್ಕಾರ

**ಗೋವಿಂದ ಎಂ. ಕಾರಜೋಳ**
ಕನ್ನಡ ಮತ್ತು ಸಂಸ್ಕೃತಿ,
ಸಣ್ಣ ನೀರಾವರಿ ಹಾಗೂ ಜವಳಿ ಸಚಿವರು

ವಿಧಾನಸೌಧ
ಬೆಂಗಳೂರು – ೦೧

# ಚೆನ್ನುಡಿ

ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ವಿಶ್ವ ಕನ್ನಡ ಸಮ್ಮೇಳನದ ಅಂಗವಾಗಿ ಸುಮಾರು ೧೦೦ ಕನ್ನಡದ ಮೇರುಕೃತಿಗಳನ್ನು ಮರುಮುದ್ರಿಸಲು ಉದ್ದೇಶಿಸಿರುತ್ತದೆ.

ಈ ಯೋಜನೆಯಡಿ ಕನ್ನಡ ಸಾಹಿತ್ಯದ ಬೇರೆ ಬೇರೆ ಕಾಲಘಟ್ಟಗಳಲ್ಲಿ ರಚನೆಗೊಂಡ ಕಥೆ, ಕಾದಂಬರಿ, ವಿಚಾರ ಸಾಹಿತ್ಯ, ಪ್ರಬಂಧ, ವಿಮರ್ಶೆ, ನಾಟಕ, ಕವನ ಸಂಕಲನ– ಹೀಗೆ ಸಾಹಿತ್ಯದ ವಿವಿಧ ಪ್ರಕಾರಗಳ ಕೆಲವು ಪ್ರಾತಿನಿಧಿಕ ಕೃತಿಗಳನ್ನು ಪ್ರಕಟಿಸಲಾಗುತ್ತಿದೆ. ಈ ಪ್ರಾತಿನಿಧಿಕ ಕೃತಿಗಳನ್ನು ಸರ್ಕಾರದಿಂದ ರಚಿತವಾದ ಆಯ್ಕೆ ಸಮಿತಿಯು ಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಕೃತಿಗಳನ್ನು ಮುದ್ರಣಕ್ಕೆ ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಎಲ್ಲಾ ವಿದ್ವಾಂಸರಿಗೂ ನನ್ನ ಧನ್ಯವಾದಗಳು. ಈ ಮಹತ್ವದ ಕೃತಿಗಳನ್ನು ಸಹೃದಯ ಕನ್ನಡಿಗರಿಗೆ ಸುಲಭ ಬೆಲೆಯಲ್ಲಿ ತಲುಪಿಸಬೇಕೆಂಬುದು ನಮ್ಮ ಹೆಗ್ಗುರಿಯಾಗಿರುತ್ತದೆ. ಕನ್ನಡ ಸಾಹಿತ್ಯದ ಮೈಲಿಗಲ್ಲುಗಳಾಗಿರುವ ಈ ಪುಸ್ತಕಗಳು ಭಾವಿ ಪೀಳಿಗೆಯವರಿಗೆ ದಾರಿದೀಪಗಳಾಗಿವೆ. ಈ ಕೃತಿಗಳ ಪ್ರಯೋಜನವನ್ನು ಕನ್ನಡ ಜನತೆ ಹಾಗೂ ವಿದ್ಯಾರ್ಥಿಗಳು ಪಡೆದರೆ ನಮ್ಮ ಶ್ರಮ ಸಾರ್ಥಕವೆಂದು ಭಾವಿಸುತ್ತೇನೆ.

ದಿನಾಂಕ ೧೮.೦೧.೨೦೧೧

(ಗೋವಿಂದ ಎಂ. ಕಾರಜೋಳ)

# ಎರಡು ನುಡಿ

ಕರ್ನಾಟಕ ಸರ್ಕಾರವು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿರುವ ಸಾಹಿತಿಗಳ ಮಹತ್ವದ ಕೃತಿಗಳನ್ನು ಓದುಗರಿಗೆ ಒದಗಿಸಬೇಕೆಂಬ ಸದಾಶಯ ಹೊಂದಿರುತ್ತದೆ. ಈ ಯೋಜನೆಯಡಿ ಸುಮಾರು ೧೦೦ ಕೃತಿಗಳನ್ನು ಪ್ರಕಟಿಸಲು ಉದ್ದೇಶಿಸಿದೆ.

ಈ ಕೃತಿಗಳನ್ನು ಆಯ್ಕೆಮಾಡಲು ಖ್ಯಾತ ವಿದ್ವಾಂಸರಾದ ಪ್ರೊ. ಎಲ್.ಎಸ್. ಶೇಷಗಿರಿರಾವ್‌ರವರ ಅಧ್ಯಕ್ಷತೆಯಲ್ಲಿ ನಾಡಿನ ಹೆಸರಾಂತ ಸಾಹಿತಿ / ವಿದ್ವಾಂಸರುಗಳನ್ನೊಳಗೊಂಡ ಆಯ್ಕೆ ಸಮಿತಿಯನ್ನು ರಚಿಸಿದೆ. ಈ ಆಯ್ಕೆ ಸಮಿತಿಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಗೆ ಕನ್ನಡ ಸಾಹಿತ್ಯದ ವಿವಿಧ ಕಾಲಘಟ್ಟಗಳಲ್ಲಿ ಬಂದ ಪ್ರಾತಿನಿಧಿಕ ಕೃತಿಗಳನ್ನು ಆಯ್ಕೆ ಮಾಡಿರುತ್ತದೆ. ಆಯ್ಕೆ ಸಮಿತಿಯ ಅಧ್ಯಕ್ಷರು ಹಾಗೂ ಸದಸ್ಯರಿಗೆ ಸರ್ಕಾರದ ಪರವಾಗಿ ವಂದನೆಗಳು ಸಲ್ಲುತ್ತವೆ. ಈ ಪುಸ್ತಕಗಳನ್ನು ಹೊರತರಲು ಅನುಮತಿ ನೀಡಿ ಸಹಕರಿಸಿದ ಎಲ್ಲಾ ಲೇಖಕರು ಹಾಗೂ ಹಕ್ಕುದಾರರುಗಳಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಕನ್ನಡದ ಮೇರುಕೃತಿ ಸಾಹಿತ್ಯ ಮಾಲಿಕೆಯನ್ನು ಓದುಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ದಿನಾಂಕ ೧೭.೦೧.೨೦೧೧

(ರಮೇಶ್ ಬಿ.ಝಳಕಿ)
ಸರ್ಕಾರದ ಕಾರ್ಯದರ್ಶಿಗಳು
ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ

# ಅಧ್ಯಕ್ಷರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳನ್ನು ಪುನರ್‌ಮುದ್ರಣ ಮಾಡಲು ಒಂದು ಯೋಜನೆಯನ್ನು ಕೈಗೊಂಡಿತು. ಕೃತಿಗಳ ಆಯ್ಕೆಗಾಗಿ ಸರ್ಕಾರವು ಒಂದು ಸಮಿತಿಯನ್ನು ರಚಿಸಿತು. ಈ ಮಹತ್ವದ ಯೋಜನೆಯ ಸಮಿತಿಯ ಅಧ್ಯಕ್ಷನಾಗಿ ಕಾರ್ಯನಿರ್ವಹಿಸುವ ಸುಯೋಗ ನನ್ನದಾಯಿತು.

ಈ ಯೋಜನೆಯ ಮಹತ್ವವನ್ನು ನಾನು ವಿವರಿಸುವ ಅಗತ್ಯವಿಲ್ಲ. ಕನ್ನಡದ ಶ್ರೇಷ್ಠ ಕೃತಿಗಳನ್ನು ಸುಲಭ ಬೆಲೆಗೆ ಕನ್ನಡಿಗರ ಕೈಗಳಲ್ಲಿರಿಸಲು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಹಲವು ಯೋಜನೆಗಳನ್ನು ಕೈಗೊಂಡಿರುವುದಕ್ಕಾಗಿ ಸರ್ಕಾರವನ್ನೂ ಇಲಾಖೆಯನ್ನೂ ಹೃತ್ಪೂರ್ವಕವಾಗಿ ಅಭಿನಂದಿಸುತ್ತೇನೆ. ಕನ್ನಡ ಸಂಸ್ಕೃತಿಗೆ ಈ ಯೋಜನೆಗಳು ಮಹತ್ವದ ಕೊಡುಗೆಯನ್ನು ನೀಡುತ್ತವೆ.

ಕನ್ನಡದ ಮೇರುಕೃತಿಗಳನ್ನು ಆರಿಸುವುದು ಸುಲಭದ ಕೆಲಸವಲ್ಲ. ಇಂತಹ ಆಯ್ಕೆಯಲ್ಲಿ ಬೇರೆ ಬೇರೆ ಅಭಿಪ್ರಾಯಗಳಿಗೆ ಸಾಧಾರವಾಗಿಯೇ ಅವಕಾಶವಿರುತ್ತದೆ. ಕನ್ನಡ ನಾಡಿನ ಶ್ರೇಷ್ಠ ಸಾಹಿತಿಗಳು ಈ ಸಮಿತಿಯ ಸದಸ್ಯರಾಗಿದ್ದದ್ದು ಸುದೈವದ ಸಂಗತಿ. ಕೃತಿಗಳನ್ನು ಚರ್ಚಿಸಿ ಮಹತ್ವದ ನಿರ್ಧಾರಕ್ಕೆ ಬಂದ ಸಮಿತಿಯು ಸಾಧ್ಯವಾದ ಕಾರ್ಯವನ್ನು ಸಾಧಿಸಿದೆ. ಇದಕ್ಕಾಗಿ ನಾನು ಸಮಿತಿಯ ಎಲ್ಲ ಸದಸ್ಯರಿಗೂ ಕೃತಜ್ಞನಾಗಿದ್ದೇನೆ.

ಈ ಕಾರ್ಯದ ನಿರ್ವಹಣೆಯಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕರಾದ ಶ್ರೀ ಮನು ಬಳಿಗಾರ್ ಅವರು ನೆರವಾಗಿದ್ದಾರೆ. ಅವರ ಮತ್ತು ಅವರ ಸಿಬ್ಬಂದಿಯವರ ಅಮೂಲ್ಯ ಸಹಕಾರಕ್ಕೆ ನಾನು ಕೃತಜ್ಞ.

ಕನ್ನಡ ನಾಡಿನ ಮನೆಮನೆಗಳಲ್ಲಿ ಸಾಹಿತ್ಯದ ಮಂಗಳ ದೀಪದ ಬೆಳಕನ್ನು ಹರಡುವ ಈ ಯೋಜನೆಯ ಪೂರ್ಣಪ್ರಯೋಜನವನ್ನು ಕನ್ನಡಿಗರು ಪಡೆದುಕೊಳ್ಳಲಿ ಎಂದು ಹಾರೈಸುತ್ತೇನೆ.

ಸಿರಿಗನ್ನಡಂ ಗೆಲ್ಗೆ!

**ಎಲ್.ಎಸ್. ಶೇಷಗಿರಿ ರಾವ್**

ಅಧ್ಯಕ್ಷ

ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

ದಿನಾಂಕ ೧೬.೧೨.೨೦೧೦

# ಪ್ರಕಾಶಕರ ಮಾತು

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯು ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ 'ವಿಶ್ವಕನ್ನಡ ಸಮ್ಮೇಳನ'ದ ಅಂಗವಾಗಿ ಸುಮಾರು ನೂರು ಪುಸ್ತಕಗಳನ್ನು ಪ್ರಕಟಿಸಲು ಉದ್ದೇಶಿಸಿರುತ್ತದೆ. ಈ ಯೋಜನೆಯಡಿ ಹಳಗನ್ನಡ, ನಡುಗನ್ನಡ ಮತ್ತು ಹೊಸಗನ್ನಡ ಈ ಮೂರೂ ಕಾಲಘಟ್ಟಗಳಲ್ಲಿ ರಚನೆಗೊಂಡ, ಕನ್ನಡದಲ್ಲಿ ಮಹತ್ವದ ಕೃತಿಗಳೆಂದು ಪರಿಗಣಿತವಾಗಿರುವ ಪುಸ್ತಕಗಳನ್ನು ಸರ್ಕಾರವು ನೇಮಿಸಿರುವ ಆಯ್ಕೆ ಸಮಿತಿಯು ಮರುಮುದ್ರಣಕ್ಕೆ ಆಯ್ಕೆ ಮಾಡಿರುತ್ತದೆ. ಈ ಸಾಹಿತ್ಯ ಮಾಲೆಯಲ್ಲಿ ಈಗಾಗಲೇ ಇಲಾಖೆಯು ಸಮಗ್ರ ಸಾಹಿತ್ಯ ಪ್ರಕಟಣೆಯಡಿ ಪ್ರಕಟಿಸಿರುವ ಲೇಖಕರ ಕೃತಿಗಳನ್ನು ಪರಿಗಣಿಸಿರುವುದಿಲ್ಲ.

ಕನ್ನಡದ ಮೇರುಕೃತಿಗಳ ಮರುಮುದ್ರಣಕ್ಕೆ ಪುಸ್ತಕಗಳನ್ನು ಆಯ್ಕೆ ಮಾಡಿದ ಆಯ್ಕೆ ಸಮಿತಿಯ ಅಧ್ಯಕ್ಷರಾದ ಪ್ರೊ: ಎಲ್.ಎಸ್. ಶೇಷಗಿರಿ ರಾವ್‌ರವರಿಗೆ ಹಾಗೂ ಸಮಿತಿಯ ಸದಸ್ಯರುಗಳಾದ ಡಾ. ಚಂದ್ರಶೇಖರ ಕಂಬಾರ, ಡಾ. ಹಂಪ ನಾಗರಾಜಯ್ಯ, ಡಾ. ಎಂ.ಎಂ.ಕಲಬುರ್ಗಿ, ಡಾ. ದೊಡ್ಡರಂಗೇಗೌಡ, ಡಾ. ಎಚ್.ಜೆ. ಲಕ್ಕಪ್ಪಗೌಡ, ಡಾ. ಅರವಿಂದ ಮಾಲಗತ್ತಿ, ಡಾ. ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ, ಡಾ. ಪಿ.ಎಸ್. ಶಂಕರ್, ಶ್ರೀಮತಿ ಸಾರಾ ಅಬೂಬಕರ್, ಡಾ. ಪ್ರಧಾನ್ ಗುರುದತ್ತ ಇವರುಗಳಿಗೆ ನನ್ನ ಕೃತಜ್ಞತೆಗಳು. ಈ ಯೋಜನೆಯಡಿ ಮರುಮುದ್ರಣಕ್ಕೆ ಆಯ್ಕೆಯಾಗಿರುವ ಪುಸ್ತಕಗಳ ಮುದ್ರಣಕ್ಕೆ ಅನುಮತಿ ನೀಡಿದ ಎಲ್ಲ ಲೇಖಕರಿಗೂ, ಹಕ್ಕುದಾರರಿಗೂ ಮತ್ತು ಕರಡಚ್ಚು ತಿದ್ದಿದವರಿಗೂ ನನ್ನ ವಂದನೆಗಳು.

ಸದರಿ ಪ್ರಕಟಣಾ ಯೋಜನೆಯ ಪುಸ್ತಕಗಳನ್ನು ಹೊರತರಲು ಸಹಕರಿಸಿದ ಶ್ರೀ ಎಚ್. ಶಂಕರಪ್ಪ, ಜಂಟಿ ನಿರ್ದೇಶಕರು, (ಸು.ಕ.), ಶ್ರೀಮತಿ ವೈ.ಎಸ್.ವಿಜಯಲಕ್ಷ್ಮಿ, ಸಹಾಯಕ ನಿರ್ದೇಶಕರು ಹಾಗೂ ಪ್ರಕಟಣಾ ಶಾಖೆಯ ಸಿಬ್ಬಂದಿಗೆ ನನ್ನ ನೆನಕೆಗಳು. ವಿಶ್ವಕನ್ನಡ ಸಮ್ಮೇಳನದ ಲಾಂಛನವನ್ನು ಸಿದ್ಧಪಡಿಸಿಕೊಟ್ಟ ಹಿರಿಯಕಲಾವಿದರಾದ ಶ್ರೀ ಸಿ. ಚಂದ್ರಶೇಖರ ಅವರಿಗೂ ನನ್ನ ನೆನಕೆಗಳು ಹಾಗೂ ಈ ಪುಸ್ತಕಗಳನ್ನು ಸುಂದರವಾಗಿ ಮುದ್ರಿಸಿಕೊಟ್ಟಿರುವ ಮಯೂರ ಪ್ರಿಂಟ್ ಆ್ಯಡ್ಸ್‌ನ ಮಾಲೀಕರಾದ

ಶ್ರೀ ಬಿ.ಎಲ್. ಶ್ರೀನಿವಾಸ್ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ನೆನಕೆಗಳು.

ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಕನ್ನಡ ಓದುಗರಿಗೆ ಹಲವಾರು ವರ್ಷಗಳಿಂದ ದೊರಕದೇ ಇದ್ದ ಎಷ್ಟೋ ಪುಸ್ತಕಗಳು ಲಭ್ಯವಾಗುತ್ತಿರುವುದು ಹೆಮ್ಮೆಯ ಸಂಗತಿ. ಕನ್ನಡದ ಮೇರುಕೃತಿಗಳ ಮರುಮುದ್ರಣ ಯೋಜನೆಯಡಿ ಸಾಹಿತ್ಯಾಭಿಮಾನಿಗಳಿಗೆ ಅಕ್ಷರದಾಸೋಹ ನಡೆಸುವ ಆಶಯು ನಮ್ಮದು. ಈ ಕೃತಿಗಳನ್ನು ಕನ್ನಡಿಗರು ಸ್ವಾಗತಿಸುತ್ತಾರೆಂದು ನಂಬಿದ್ದೇನೆ.

ಮನು ಬಳಿಗಾರ್

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

ದಿನಾಂಕ ೧೧.೦೧.೨೦೧೧

## ಕನ್ನಡದ ಮೇರುಕೃತಿಗಳ ಆಯ್ಕೆ ಸಮಿತಿ

**ಅಧ್ಯಕ್ಷರು**

ಪ್ರೊ. ಎಲ್.ಎಸ್. ಶೇಷಗಿರಿರಾವ್

**ಸದಸ್ಯರು**

ಡಾ॥ ಚಂದ್ರಶೇಖರ ಕಂಬಾರ

ಡಾ॥ ಎಂ.ಎಂ. ಕಲಬುರ್ಗಿ

ಡಾ॥ ದೊಡ್ಡರಂಗೇಗೌಡ

ಡಾ॥ ಅರವಿಂದ ಮಾಲಗತ್ತಿ

ಡಾ॥ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟ

ಡಾ॥ ಪ್ರಧಾನ್ ಗುರುದತ್ತ

ಡಾ॥ ಹಂಪ ನಾಗರಾಜಯ್ಯ

ಡಾ॥ ಎಚ್.ಜೆ. ಲಕ್ಕಪ್ಪಗೌಡ

ಶ್ರೀಮತಿ ಸಾರಾ ಅಬೂಬಕರ್

ಡಾ॥ ಪಿ.ಎಸ್. ಶಂಕರ್

**ಸದಸ್ಯ ಕಾರ್ಯದರ್ಶಿ**

ಶ್ರೀ ಮನು ಬಳಿಗಾರ್, ಕ.ಆ.ಸೇ.

ನಿರ್ದೇಶಕರು

ಕನ್ನಡ ಮತ್ತು ಸಂಸ್ಕೃತಿ ಇಲಾಖೆ

# ಪರಿವಿಡಿ


| | |
|---|---|
| ಶುಭ ಸಂದೇಶ | iii |
| ಚೆನ್ನುಡಿ | iv |
| ಎರಡು ನುಡಿ | v |
| ಅಧ್ಯಕ್ಷರ ಮಾತು | vi |
| ಪ್ರಕಾಶಕರ ಮಾತು | vii |
| ಆಯ್ಕೆ ಸಮಿತಿ | ix |
| ೧. ಅವಧೂತ | ೧ |
| ೨. ಮತ್ಸ್ಯಗಂಧಿ ಸತ್ಯವತಿ | ೪ |
| ೩. ಗುರುಹಸಾದವಿದು ಸಮೀರ | ೧೯ |
| ೪. ಸಂಪಾತಿ | ೨೧ |
| ೫. ಊರ್ವಶೀ | ೨೮ |
| ೬. ಮಿಸುನಿಜಿಂಕೆ | ೩೧ |
| ೭. ಮಿಥಿಲೆ | ೩೮ |
| ೮. ಮಹಾಶ್ವೇತೆ | ೪೦ |
| ೯. ಭಗವಂತನು ನೀರೆರೆದನು | ೫೮ |
| ೧೦. ಕುಬ್ಜಾಂಗನಾ | ೬೦ |
| ೧೧. ಕಂಡಿರೇನು ಕಂದನ | ೬೪ |
| ೧೨. ಬುದ್ಧದೇವ | ೬೬ |
| ೧೩. ದೂರು | ೭೪ |
| ೧೪. ಪಯಣ | ೭೭ |
| ೧೫. ಶ್ವೇತಕೇತು ದೇವರ್ಷಿ | ೭೯ |
| ೧೬. ಸಂತಾನ | ೮೧ |
| ೧೭. ಕಾಲಿಯಾ ಮರ್ದನ | ೮೨ |
| ೧೮. ಉಭಯ ಸರಸ್ವತಿ | ೮೪ |
| ೧೯. ಶಬರಿ | ೯೪ |

೨೦. ವಸ್ತ್ರಾಪಹರಣ ೯೮
೨೧. ಬುಟ್ಟಿ ಮತ್ತು ಬೀಗದ ಕೈ ೧೦೦
೨೨. ಕುಚೇಲೋಪಾಖ್ಯಾನ ೧೦೩
೨೩. ಪರಿಗ್ರಹಿಸಿರೀಪಾರಿಜಾತ ೧೦೮
೨೪. ಗಜೇಂದ್ರ ಮೋಕ್ಷ ೧೧೦
೨೫. ಅತಿಥಿ ೧೧೨
೨೬. ಹಾವಾಡಿಗರ ಹುಡುಗ ೧೧೪
೨೭. ಪಾರಿವಾಳಗಳು ೧೧೬
೨೮. ಬಲಿದಾನ ೧೧೭
೨೯. ಬಂಡೆ, ಹುಡುಗ ಮತ್ತು ಬೆಸ್ತ ೧೨೦
೩೦. ನನ್ನ ಹಾಗೆಯೆ... ೧೨೩
೩೧. ದಡ ಸೇರಬೇಕಲ್ಲ ೧೨೫
೩೨. ಹಿಟ್ಟು ಮತ್ತು ಮಲ್ಲಿಗೆ ೧೨೮
೩೩. ಕೊಡ ಮತ್ತು ಹಾವು ೧೩೧
೩೪. ಏಣಿ ಮತ್ತು ದೀಪ ೧೩೩
೩೫. ಹುಂಜ ಮತ್ತು ಕಮಂಡಲು ೧೩೫
೩೬. ಕಲ್ಲು ಮತ್ತು ನಕ್ಷತ್ರಗಳು ೧೩೭
೩೭. ಕಿಡಕಿ ಮತ್ತು ಗಾಳಿಗಳು ೧೩೯
೩೮. ಗಿರವಿ ಅಂಗಡಿಯಲ್ಲಿ ೧೪೨
೩೯. ರೊಟ್ಟಿ ಮತ್ತು ಕೋವಿ ೧೪೫
೪೦. ಚಿನ್ನಮ್ಮನ ಕಂದ ೧೪೭
೪೧. ಕಣಗಿಲು ಗಿಡದಲ್ಲಿ ಹುಡುಗ ೧೪೯
೪೨. ನಾಗಿಯ ಕಥೆ ೧೫೧
೪೩. ಹುಡುಗಿಯ ಕಥೆ ೧೫೫
೪೪. ಮಂಜುಗೌಡನ ಕಥೆ ೧೫೭
೪೫. ಯೋಧ ಮತ್ತು ಹೆಂಗಸು ೧೬೦
೪೬. ಪವಾಡ ೧೬೨
೪೭. ಕಳ್ಳರು ಮತ್ತು ಸಂತ ೧೬೪
೪೮. ದಾಸಿಮಯ್ಯ ಮತ್ತು ಬೆಕ್ಕು ೧೬೭
೪೯. ಕದವ ತಟ್ಟಿದರು ೧೭೦
೫೦. ಅಂಡರ್ಸನ್ ಬೀದಿ ಲಂಡನ್ನಿನಲ್ಲಿ ೧೭೨
೫೧. ಹುಳ ಮತ್ತು ಕಿರೀಟ ೧೭೫
೫೨. ಕವಷ ಐಲೂಷ ೧೭೭
೫೩. ಅರಣ್ಯಾನಿ ೨೦೨

# ಕಥನ ಕವನಗಳು

# ೧. ಅವಧೂತ

ದೇವಕನ್ನಿಕೆಯರೇಳು ಮಂದಿ ಬಂದಾರ ಮೀಯಲೆಂದು
ವೇಷಭೂಷ ಕಳೆದಿಟ್ಟುಬಿಟ್ಟರೋ ಮರದ ಮರೆಗೆ ನಿಂದು
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ದಂಡೆಗೋಡಿ ಬಂದು ೧

ಹಾಲುಕಲ್ಲ ಸೋಪಾನವಿಳಿದು ಬಂದಾರ ನೀರಿಗೋಡಿ
ಕೊಳದ ತಂಪು ತಿಳಿನೀರ ಸೇರಿದರೋ ನೂರು ತೆರೆಯ ಮಾಡಿ
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ಜಲಕ್ರೀಡೆಯಾಡಿ ೨

ಕೊಳದ ಸುತ್ತಲೂ ಕಮಲ ನಿಂತವೋ ಬಳ್ಳಿಗೋಡೆ ಕಟ್ಟಿ
''ದೇಹಿ ನಿಮ್ಮ ಮಕರಂದ'' ಎಂದವೋ ತುಂಬಿ ಸಾಲುಗಟ್ಟಿ
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ಕೈಗೆ ಕೈಯ ತಟ್ಟಿ ೩

ನವಿಲು ಕಂಡ ಕನಸನ್ನು ಕಾಣಿಸುವೆನೆಂದು ಪಣವನಿಟ್ಟು
ನೀರು ಚಿಮ್ಮಿ ಚಲ್ಲೆಂದು ಕುಣಿಯಿತೋ ಇಂದ್ರಚಾಪ ತೊಟ್ಟು
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ತುಂಬ ಹರುಷಪಟ್ಟು ೪

''ಯಾವ ತಪ್ಪಿಗೋ ಬಿಳಿಯ ಮೋಡ ಪಡೆದಂತೆ ಚಂದ್ರಶಾಪ
ಇಲ್ಲಿ ಕಾಣಿರೇ ಶ್ವೇತಮುಗ್ಧವೀ ರಾಜಹಂಸರೂಪ''
ಹಕ್ಕಿಯಂತೆ ಕಿಲಕಿಲಿಸಿ ನಕ್ಕು ನುಡಿದಾರ ''ಅಯ್ಯೊ ಪಾಪ'' ೫

ಸರಸ್ತೀರದಲಿ ಸಾಲು ನಿಂತವೋ ಪಾರಿಜಾತ ಹೂತು
ಐದು ಬಣ್ಣದರಗಿಳಿಯು ಗಳುಹಿತೋ ತೊಂಗಲಲ್ಲಿ ಕೂತು
ಹಕ್ಕಿಯಂತೆ ಕಿಲಕಿಲಿಸಿ ನಕ್ಕು ಕೇಳಿದರು ಅದರ ಮಾತು ೬

ಬನಕೆ ಬಂದನವಧೂತ ಬಾಲಮುನಿ ಶುಕಾಚಾರ್ಯ ಸಾರಿ
ಮಿಸುನಿಬಣ್ಣ ಮೈ ಹಸಿರು ರೆಕ್ಕೆಗಳ ಬಾಲಬ್ರಹ್ಮಚಾರಿ
ಬ್ರಹ್ಮಸಚ್ಚಿದಾನಂದ ಮಗ್ನ ಮನ, ನಗ್ನ ದೇಹಧಾರಿ
ಬಾಲ್ಯದಮಿತ ಸ್ವಚ್ಛಂದಯೋಗದಲಿ ಬಂದ ಬನವಿಹಾರಿ
ಎಲ್ಲೊ ಏನೊ ನಡೆದಿದ್ದನವನು ನಡೆದದ್ದೆ ಕಾಲುದಾರಿ ೭

''ಅಲ್ಲಿ ಹೋದನವಧೂತ ಕಾಣಿರೇ, ನಗ್ನದೇಹ ತಾಳಿ''
ದೇವಕನ್ನಿಕೆಯರವನ ನೋಡಿದರು ನಮೋ ಎಂದು ಹೇಳಿ
ಹಕ್ಕಿಯಂತೆ ಕಿಲಕಿಲಿಸಿ ನಕ್ಕು ನಲಿದಾರ ನೀರಕೇಳಿ ೮

ಬನಕೆ ಬಂದು ಹಂಬಲಿಸಿ ಮಗನ ಬೆಂಬಲಿಸಿ ವ್ಯಾಸಯೋಗಿ
ಜಟಾಜೂಟ ಕರಪದ್ಮ ಕೃಷ್ಣ ಮೃಗಚರ್ಮಧಾರಿಯಾಗಿ
ಕರುಳ ವಿರಹ ಕಾತರಿಸಿ ಕರೆದನೋ 'ಮಗನೆ' ಎಂದು ಕೂಗಿ
ಬಾಲಮುನಿಯ ತನ್ಮಯತೆ ತುಂಬಿರಲು ಬನದ ಹೃದಯವಾಗಿ
ಕರೆಯ ಕೇಳಿ 'ಓ ತಂದೆ' ಎಂದವೋ ಪಾರಿಜಾತ ಬಾಗಿ ೯

ವ್ಯಾಸಯೋಗಿ ನಡೆದಿರಲು ಕೂಗಿ ಕೇಳಿದರು ಲಕ್ಷ್ಯವಿಟ್ಟು
ದೇವಕನ್ನಿಕೆಯರೇಳು ಮಂದಿ ಮನದಲ್ಲಿ ಲಜ್ಜೆಪಟ್ಟು
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ಜಲಕ್ರೀಡೆ ಬಿಟ್ಟು ೧೦

ಹಾಲು ರೆಕ್ಕೆಗಳ ಚಾಚಿ ನೀರನಿಕ್ಕೆಲದಿ ಬಾಚಿ ಹಾರಿ
ರಾಜಹಂಸ ಬಂದಿಳಿಯುವಂತೆ ಕನ್ನಿಕೆಯರೆಲ್ಲ ಸೇರಿ
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ಕೊಳದ ಮೆಟ್ಟಲೇರಿ ೧೧

ದೇವಕನ್ನಿಕೆಯರೇಳು ಮಂದಿ ಬಂದಾರ ಕೊಳವ ಬಿಟ್ಟು
ಪಾರಿಜಾತಗಳ ಮರೆಗೆ ನಿಂತರೋ ಮನದಿ ಲಜ್ಜೆಪಟ್ಟು
ಹಕ್ಕಿಯಂತೆ ಕಿಲಕಿಲಿಸಿ ನಕ್ಕರೋ ವೇಷಭೂಷ ತೊಟ್ಟು ೧೨

ತಾವು ಬಂದುದನು ನೋಡಿ ನಾಚಿದರೆ ಜಲಕ್ರೀಡೆ ನೀಗಿ
ವೇಷಭೂಷಣಗಳ ತೊಟ್ಟು ನಿಂತಿರಲು ದಂಡೆಗೋಡಿಹೋಗಿ
ದೇವಕನ್ನಿಕೆಯರೇಳು ಮಂದಿ ಬಳಿಸಾರಿ ವ್ಯಾಸಯೋಗಿ
ಜಟಾಜೂಟ ಕರಪದ್ಮ ಕೃಷ್ಣ ಮೃಗಚರ್ಮಧಾರಿಯಾಗಿ
ಪಾರಿಜಾತವನದಲ್ಲಿ ನುಡಿದರಾಶ್ಚರ್ಯಚಕಿತರಾಗಿ ೧೩

''ಇದು ವಿಚಿತ್ರವಲ, ಮುದ್ದು ಮಕ್ಕಳೇ, ನಾನು ಬಂದೆನೆಂದು
ಲಜ್ಜೆ ಪಟ್ಟು ನೀರಾಟ ಬಿಟ್ಟಿರೇ ದಂಡೆಗೋಡಿಬಂದು
ನಾಚಲಿಲ್ಲ ಮರೆಮಾಚಲಿಲ್ಲ ಶುಕ ನಗ್ನದೇಹಿಯೆಂದು

ವಯಸು ಆದವರು ವಸ್ತ್ರವುಟ್ಟರೂ ನಾನು ಬಂದುದೆಂದು
ನಾಚಿ ನೀರ ಬಿಟ್ಟೋಡಿ ಬಂದಿರೇ ದಂಡೆಯಲ್ಲಿ ನಿಂದು?'' ೧೪

ದೇವಕನ್ನಿಕೆಯರಾಗ ನುಡಿದರೊಕ್ಕೊರಲಿನಲ್ಲಿ ಬಾಗಿ
''ಪವನದಂತೆಯೇ ನಿರ್ಲಿಪ್ತ ಶುಕನು ಬಯಲದೇಹಿಯಾಗಿ
ನಿಮ್ಮ ಚಿತ್ತ ತನುರಾಗಲಿಪ್ತ ದೃಷ್ಟಾರ ವ್ಯಾಸಯೋಗಿ''
ಹಕ್ಕಿಯಂತೆ ಕಿಲಕಿಲನೆ ನಕ್ಕು ಮರಳಿದರು ಮಾಯವಾಗಿ
ಅವರು ನಕ್ಕ ನಗೆ ಮುಗಿಲು ತುಂಬಿತೋ ಮೇಘಮಾಲೆಯಾಗಿ ೧೫

# ೨. ಮತ್ಸ್ಯಗಂಧಿ ಸತ್ಯವತಿ

೧

ಬ್ರಾಹ್ಮೀಮುಹೂರ್ತ ರಸಮಂತ್ರಗಾನದಲ್ಲಿ
ನಿರ್ವಿಕಾರ ನಿರ್ಲಿಪ್ತ ತಾನದಲ್ಲಿ
ಕಾಲಪುರುಷ ಕುಳಿತಂತೆ ಧ್ಯಾನದಲ್ಲಿ
ಸ್ಥಿತಪ್ರಜ್ಞ ಮನದಂತೆ ಬಾನಿನಲ್ಲಿ
ನೀಲಶುಕ್ರ ನಕ್ಷತ್ರ ಹೊಳೆಯುತಿತ್ತು
ದೇವಜೀವನದ ತೇಜವಿಳಿಯುತಿತ್ತು
ಸೃಷ್ಟಿ ಕರ್ತನೆಡೆ ಸೃಷ್ಟಿ ಸುಳಿಯುತಿತ್ತು
ಬಂಗಾರರಥವ ಬಿಳಿಗುದುರೆ ಎಳೆಯುವಂತೆ
ದೇವಪಯಣಪಥ ಜೀವ ತುಳಿಯುವಂತೆ
ಬೆಳಕು ಬಂತು ಬ್ರಾಹ್ಮೀಮುಹೂರ್ತದಲ್ಲಿ
ಮುಗಿಲ ಕಮಲವರಳಿತ್ತು ದಲವ ತೆರೆದು
ಪರಬ್ರಹ್ಮ ಪರಮಾತ್ಮಜ್ಯೋತಿಯೆರೆದು
ದೇವಚೇತನದ ಸ್ವರ್ಣಕುಂಭ ಸುರಿದು
ಸವಿತೃಮಂಡಲದ ತೇರನೇರಿಬರಲು
ಕಾಲುಪುರುಷ ಕಣ್ಣೆವೆಯ ತೆರೆಯುತಿರಲು
ಸೃಷ್ಟಿಗಮೃತದ ಕುಂಭ ಸುರಿಯುತಿರಲು
ಪರಂಜ್ಯೋತಿ ಆನಂದವೆರೆಯುತಿರಲು
ನಿರಂಜನತೆ ನೆಲಮುಗಿಲು ಬೆರೆಯುತಿರಲು
ಬ್ರಹ್ಮಶಿಲ್ಪ ಹೊಸರೂಪ ಕೊರೆಯುತಿರಲು
ಪ್ರಣವರೂಪ ರಸವೇದ ಒರೆಯುತಿರಲು
ಬೆಳಕ ಮುಗಿಲನಿಳಿದಿತ್ತು ಧಾರೆಯಾಗಿ
ಸೃಷ್ಟಿ ಸಚ್ಚಿದಾನಂದಲೀನವಾಗಿ
ಗಾಳಿ ನುಡಿದು ಬರುತಿತ್ತು ಪ್ರಣವಮಾತ್ರೆ

ನೆಲದ ಲಂಪು ಬಂದಂತೆ ಚೈತ್ರಯಾತ್ರೆ
ನೆಲದ ಕಂಪು ಹಿಡಿದಂತೆ ಹೂವುಪಾತ್ರೆ
ಗಾಳಿಗುಸುರುತಿದೆ ಮರದ ಮೂಕ ಮನಸು
ಹೂವಿನಕ್ಷಿಯಲಿ ನೆಲವು ಕಂಡ ಕನಸು
ಹೂವೆಲ್ಲ ಹಾಕಿಕೊಂಡಿರಲು ಮಂಜುಮಾಲೆ
ಸಂಪಿಗೆಯು ಸುಪ್ತಸೌಗಂಧ ಗಂಧಲೋಲೆ
ಮಲ್ಲಿಗೆಯು ಸುಪ್ತಸೌಗಂಧ ಗಂಧಲೋಲೆ
ಕೇದಗೆಯು ಸುಪ್ತಸೌಗಂಧ ಗಂಧಲೋಲೆ
ನವಪಾರಿಜಾತ ಸೌಗಂಧ ಗಂಧಲೋಲೆ
ರಸಸೃಷ್ಟಿ ರಸರಂಗ ರಾಸಲೀಲೆ
ಮರಿದುಂಬಿಯಾಡಿಬಂದಿರಲು ನಾದಲೀಲೆ
ಯಕ್ಷಲೋಕವರಳಿತ್ತು ಟೊಂಗೆಯಲ್ಲಿ
ಆನಂದ ಹೂತು ಬಂದಿತ್ತು ತೊಂಗಲಲ್ಲಿ
ಅಂತರಿಕ್ಷದಲಿ ಪಕ್ಷಿ ಹಾರುತಿರಲು
ಸೌಂದರ್ಯಸೂಕ್ತ ಹಾಡಿತ್ತು ಸಣ್ಣ ಕೊರಲು
ರಾಜಹಂಸ ಮಾನಸವ ಸೇರುತಿತ್ತು
ಮರಿದುಂಬಿ ಕಮಲದಲಿ ಪೀಠವೇರುತಿತ್ತು
ಮೋಡ ನೀಲಪರ್ವತವನೇರುತಿತ್ತು
ಉಧೊ ! ಮಾಯಿ ಚೈತನ್ಯದಾಯಿ ಬೆಳಕೆ !
ಉಧೊ ! ಭಾವರತ್ನಪ್ರದೀಪ ಬೆಳಕೆ !
ಉಧೊ ! ದೇವಚೈತನ್ಯದೀಪ ಬೆಳಕೆ !
ಉಧೊ ! ಬ್ರಹ್ಮಚೈತ್ಯಾಕ್ಷಿರೂಪ ಬೆಳಕೆ !
ಉಧೊ ! ಚಿದ್ಘನಾನಂದರೂಪ ಬೆಳಕೆ !
ಮುತ್ತುರತ್ನಗಳ ದಾನಕೊಟ್ಟ ಬೆಳಕೆ !
ನೆಲಕೆ ರತ್ನಗಂಬಳಿಯನಿಟ್ಟ ಬೆಳಕೆ !
ಉಧೊ ! ಕಲ್ಪಗಳ ಕುಣಿಸಿ ಬಂದ ಬೆಳಕೆ !
ಇಂದ್ರಚಾಪಗಳ ಮಣಿಸಿ ತುಂಬಿ ತುಳುಕೆ !

## ೨

ಉಷೆ ಬರೆಯಲು ಬನಕರಿಷಿಣಕುಂಕುಮ
ಪರ್ವತಲೋಕದ ಪರಮಹಂಸಹಿಮ
ಪರ್ವತ ನಸುಕಿನ ನಾರುಡೆಯುಟ್ಟು
ಸುವರ್ಣವರ್ಣದ ಮೇಲುದ ತೊಟ್ಟು
ಮಧುಗಂಧದ ರಸಲೇಪನವಿಟ್ಟು
ಕುಳಿತಿರೆ ಧ್ಯಾನಸಮಾಗೆ ವನಸುಮ
ತಂಬೆಲರಿಗೆ ತಲೆದೂಗಿತು ಮೆಚ್ಚಿ
ಪರಿಮಳ ರಾಗಪರಾಗವ ಮೆಚ್ಚಿ
ಎಲೆಗಳ ಗೊಂಚಲು ಮರೆಮರೆಯಲ್ಲಿ
ಗಿಡಗಂಟಿಯ ಹಸಿರನ ತೆರೆಯಲ್ಲಿ
ನೆಳಲಿನ ಬೆಳಕಿನ ಸರಗೆರೆಯಲ್ಲಿ
ಆಟವನಾಡಿತು ಗಾಳಿಯ ಕೂಡ
ದಿಟ್ಟಿಸಿನೋಡಿತು ನೇರಿಲಮೋಡ
ರೆಕ್ಕೆಯ ಚಾರಣಗೀತೆಯ ಮಂಗಲ
ನೆಲಮುಗಿಲೊಳು ಮೊಳಗಿತು ಸ್ವರಮಂಜುಲ
ಪಚ್ಚೆಯ ಪಯರಿನ ರಸರಂಗದ ನೆಲ
ಕನವರಿಸುತ ಮುನ್ನಡೆಯಿತು ವನಜಲ
ಬನದಲಿ ಬೀಸಲು ಸಮೀರ ಶೀತಲ
ಚೆಲುವಿನ ನವಚೈತನ್ಯದ ಉಸಿರು
ಬೆಟ್ಟದ ತಪ್ಪಲು ಬಯಲಿನ ಹಸಿರು
ಮರಡಿಯನಿಳಿಯಿತು ನೃತ್ಯಮಯೂರ
ಮೆಚ್ಚಿತು ಮುಗಿಲಿನ ರಸಸಿಂಧೂರ
ಮಧುವನ ವನದಲಿ ಹೂವಿನ ಹಾರ
ಹೆಣೆಯುವ ವನದೇವತೆಯ ವಿಹಾರ
ಬಣ್ಣದ ಮೋಡಗಳಲೆದವು ಮೇಲೆ
ನೀಲವ್ಯೋಮದ ಲಂಪಿನ ಲೀಲೆ
ಋಷ್ಯಶೃಂಗನ ಸೋದರರೋಡಿ

ಜಿಂಕೆಗಳೆದ್ದವು ದಿಬ್ಬಣಗೂಡಿ
ಹಾರೀತವು ಗುಟಕರಿಸಿತು ಹಾಡಿ
ಹುಲ್ಲಿನ ಗರಿಕೆಯ ತುಟಿಯೊಳಗಿರಿಸಿ
ಬಿದಿರಿನ ಮಳೆಗಳ ದಾರಿಯನರಸಿ
ಕೃಷ್ಣ ಮೃಗ ನದಿಯಂಚಿಗೆ ಬಂದು
ಪಡಿನೆಳಲನ್ನೆ ದಿಟ್ಟಿಸಿನಿಂದು
ನೀರವ ಬನದಲಿ ನೋಡಿತು ಸುತ್ತು
ಸಾರಂಗವು ಮೆಲುಕಾಡಿಸುತಿತ್ತು
ಇಲ್ಲಿಯ ಬೆಟ್ಟದ ತಪ್ಪಲು ಕೆಳಗೆ
ಮರಗಳ ತೋಪಿನ ತಣ್ಣೆಳಲೊಳಗೆ
ಬಾಳೆಯ ಗಾಳಿಯ ಲಲ್ಲೆಯ ಸುಳಿಗೆ
ವ್ಯಾಸಪೀಠದಲಿ ಗ್ರಂಥವನಿಟ್ಟು
ಪಾಟಲ ವಲ್ಕಲ ವಸನವನುಟ್ಟು
ಕೆಂಜೆಡೆಗಳ ಶಿರಬಂಧವ ತೊಟ್ಟು
ದಂಡಕಮಂಡಲು ಕೈಯೊಳಗಿಟ್ಟು
ಸವಿತೃಮಂಡಲ ದೀತಿ ಮಿಂದು
ಜಾತವೇದಮುನಿರೂಪವಿದೆಂದು
ಪರ್ಣಕುಟಿಯ ಹೆಬ್ಬಾಗಿಲ ಬಿಟ್ಟು
ಶಕ್ತಿಕುಮಾರ ಪರಾಶರ ಬಂದು
ವೇದಪುರಾಣವ ನೀಡುವೆನೆಂದು
ಪುಲಸ್ತ್ಯಬ್ರಹ್ಮನ ಹರಕೆಯಿದೆಂದು
ಸಮಿತ್‌ಪಾಣಿ ಮೈತ್ರೇಯನ ಕರೆದು
ಹೊರಟರು ''ಹೋಗಿ ಬರುವೆ''ನೆಂದೊರೆದು

೩

ಇಲ್ಲಿ ಧವಲಜಾಹ್ನವಿಯ ದಂಡೆಯಲ್ಲಿ
ದೇವಗಂಗೆ ಬೆಳ್ನೊರೆಯ ಚೆಲುವಿನಲ್ಲಿ
ಧ್ರುವಶಿರಸ್ಸಿನಲಿ ಧುಮಕಿಬಂದ ಗಂಗೆ

ಸಪ್ತರ್ಷಿಮಂಡಲದ ಮಂತ್ರಪೂತ ಗಂಗೆ
ಮೇರುಪರ್ವತದೊಳಿಳಿದು ಅಲಕನಂದೆ
ಚಂದ್ರಚೂಡನೆಡೆಯಲ್ಲಿ ಹರಿದು ಬಂದೆ
ಶಿವನ ಜಡೆಯಲುಳಿಮಸಗಿ ಹರಿಯುತಿತ್ತು
ಹರಿಚರಣರಜದ ಪಾವನತೆ ಹರಿಯುತಿತ್ತು
ತಪದ ಪುಣ್ಯ ಹರಿದಂತೆ ದೇವಗಂಗೆ
ಸಗರಕುಲದ ಸಂಜೀವಿನೀತರಂಗೆ
ಕೋಟಿಕುಲವನುದ್ಧರಿಸಿಬಂದ ನೀರೆ
ಮುಗಿಲನಿಳಿದು ನೆಲದಲ್ಲಿ ಸುಳಿದ ನೀರೆ
ಚಿರಂತನವೆ ತೆರೆಯೊಡೆದು ಹರಿಯುವಂತೆ
ಪದ್ಮಪೀಠ ಚೈತ್ಯಾಕ್ಷಿ ತೆರೆಯುವಂತೆ
ದೇವಕರುಣೆ ಜಲಧಾರೆಯೆರೆಯುವಂತೆ
ಗಂಗೆ ಹರಿದು ನಡೆದಿರಲು ಬಯಲಿನಲ್ಲಿ
ನಿಂತು ನೋಡಿದರು ದಂಡೆಮಳಲಿನಲ್ಲಿ
ಪರಾಶರರು ಹಾರೈಸಿ ದೋಣಿಗಾಗಿ
ಸುತ್ತಮುತ್ತ ನೋಡಿರಲು ಮೌನವಾಗಿ
ಒಮ್ಮೆಲೆ ಬೀಸಿಬಂದಿತ್ತು ಗಾಳಿ ತಂಪು
ಮತ್ಸ್ಯಗಂಧ ಹರಡಿತ್ತು ತನ್ನ ಕಂಪು
ವಿಸ್ಮಯದ ಲಹರಿ ಮಸಗಿತ್ತು ಚಿತ್ತದಲ್ಲಿ
ಪರಾಶರರ ಹೃದಯಾಬ್ಜಪೀಠದಲ್ಲಿ
ಬ್ರಹ್ಮತೇಜಲುಳಿಮಸಗಿ ಮಿರುಗುತಿತ್ತು
ಜೀವಪತನಕನುಕಂಪ ಕರಗುತಿತ್ತು
ಗುರುಕರುಣೆ ಹಿಡಿದು ಬಂದಿತ್ತು ವೇದಛತ್ರ
ಜಗದ ಮಂಗಲದ ಜಯಕೆ ಜ್ಞಾನಸತ್ರ
ಪುರುಷಸೂಕ್ತಕರಳಿತ್ತು ಪದ್ಮಪತ್ರ
''ಹೃದಯಕಮಲ ಮಕರಂದರೂಪ ಹರಿಯೆ !
ಬ್ರಹ್ಮಸಚ್ಚಿದಾನಂದರೂಪ ಹರಿಯೆ !
ಪರಂಜ್ಯೋತಿ ಪ್ರಣವಸ್ವರೂಪ ಹರಿಯೇ !

ಅಣರೇಣುಕಾಷ್ಠತೃಣಪರ್ಣಪೂರ್ಣಕಲ್ಪ
ಅಖಿಲಾಂಡಕೋಟಿಬ್ರಹ್ಮಾಂಡಬ್ರಹ್ಮಕಲ್ಪ
ಸರ್ವಾಂತರಾತ್ಮ ಜೀವಾತ್ಮ ನಿಮ್ಮ ತಲ್ಪ
ನಯನಕಮಲಸಂಜಾತ ಸೂರ್ಯದೇವ
ಪ್ರಾಣಕಮಲಸಂಜಾತ ವಾಯುದೇವ
ಚಿತ್ರಕಮಲಸಂಜಾತ ಚಂದ್ರದೇವ
ವದನಕಮಲಸಂಜಾತರಗ್ನಿದೇವ
ನಾಭಿಕಮಲಸಂಜಾತ ವ್ಯೋಮದೇವ
ಶಿರಸ್ಥಾನಸಂಜಾತ ಸ್ವರ್ಗಲೋಕ
ಚರಣಕಮಲಸಂಜಾತ ಮರ್ತ್ಯಲೋಕ
ನಿಮ್ಮ ಕರ್ಣಸಂಜಾತ ದಿಗ್ದಿಗಂತ
ಪ್ರಲಯಜಲ ನೆಲವನ್ನೆ ನುಂಗುತಿರಲು
ಮನುಮಹರ್ಷಿ ಸಪ್ತರ್ಷಿ ಧ್ಯಾನಿಸಿರಲು
ಮೀನಾವತಾರಿ ದೀನಾವತಾರಿ ಬರಲು
ಓಂ ನಮೋ ! ಚೇತನಾಚೇತನಸ್ವರೂಪ
ಓಂ ನಮೋ ! ಸರ್ವಯಜ್ಞೇಶ ಯಜ್ಞರೂಪ
ವೇದೈಕವೇದ್ಯ ವೇದೇಶ ಶೇಷಶಾಯಿ
ಪಾದ್ಮಕಲ್ಪಬ್ರಹ್ಮಾಂಡತಲ್ಪಶಾಯಿ
ಓಂ ನಮೋ ! ವೇದ ರಕ್ಷಿಸಿದ ಮತ್ಸ್ಯರೂಪ''

೪

ಅಲ್ಪಾಯುಷಲೋಕಕೆ ಮನನೊಂದು
ನಿಗಮಾಗಮಗಳ ನೀಡುವೆನೆಂದು
ಪುಲಸ್ತ್ಯಬ್ರಹ್ಮನ ಹರಕೆಯಿದೆಂದು
ಗಂಗಾತಟಕೆ ಪರಾಶರ ಬಂದು
ಪುರುಷಸೂಕ್ತ ರಸಮಂತವನೆಂದು
ಬಂಗಾರದ ಹುಡಿಮಳಲಲಿ ನಿಂದು
ಹಾರೈಸಿರೆ ನದಿ ದಾಟುವೆನೆಂದು

ಮಂದಾಕಿನಿಜಲ ಜಲಜದೊಳೀಸಿ
ಬಂದಿತು ಮಂದಾನಿಲ ನೆಲ ಬೀಸಿ
ಮತ್ಸ್ಯಗಂಧ ಸುಳಿದಾಡಿತು ಸೂಸಿ
ಹರಿಯವತಾರದ ಸೌರಭದಲೆಯಿದು
ವೇದತರಂಗತರಂಗಿಣಿ ನೆಲೆಯಿದು
ಅಕ್ಷರಬ್ರಹ್ಮನಾದಿಯ ಸೆಲೆಯಿದು
ವಿಸ್ಮಿತರಾಗಿ ಪರಾಶರ ನಿಂದಿರೆ
''ನಾವೆಗೆ ಬನ್ನಿರಿ ಭಗವನ್'' ಎಂದಿರೆ
ಮಧುರಸ್ವರದೌತಣವಿದು ಬಂದಿರೆ
ಮತ್ಸ್ಯಗಂಧೆ ಅಂಬಿಗಕನ್ನೆಯ ಕರೆ
ಕೇಳಿ ಪರಾಶರರೀಚೆಗೆ ನೋಡೆ
ಗಂಗಾತಟದೊಳಗೊರಗಿತು ಓಡೆ
ನದಿಯಲೆಯೊಳಗುಯ್ಯಾಲೆಯ ನಾಡೆ
ಓಡೆಯ ತುದಿಯಲಿ ಕಂಡಿತು ಕಣ್ಣು
ನಾವೆಯ ನಡೆಸುವ ಅಂಬಿಗವೆಣ್ಣು
ಅಂಬಿಗರಾಜನ ಮತ್ಸ್ಯಕುಮಾರಿ
ಮಂದಾಕಿನಿಯ ತರಂಗವಿಹಾರಿ
ಜಡೆಗಟ್ಟಿದ ಮುಡಿ ಕುಂತಲವೇಣಿ
ಮಧುವನಮಾಮರ ಕೋಕಿಲವಾಣಿ
ಚೆಲುವಿನ ಹೊಂದಾವರೆ ಮುಖಮಂಡಲ
ಮುತ್ತಿನ ಮಾಲೆಯ ರತ್ನದ ಕುಂಡಲ
ನಾವೆಯ ಜಲದೇವತೆ ಮೀನಾಕ್ಷಿ
ಚೆಲುವಿನ ವನದೇವತೆ ದೀನಾಕ್ಷಿ
ಹಸಿರಿನ ಬಣ್ಣದ ವಸನವನುಟ್ಟು
ನೇರಿಲ ಬಣ್ಣದ ಮೇಲುದ ತೊಟ್ಟು
ಸಿಂಪಿನ ಸರಗಳ ಕೊರಳೊಳಗಿಟ್ಟು
ಹದಿನಾರರ ಹರೆಯದ ವಿನ್ಯಾಸ
ಕೋಮಲಚೆಲುವಿನ ರೂಪವಿಲಾಸ

ತುಟಿ ಪಲ್ಲವಿಸಲು ಮಂದಸುಹಾಸ
ಮತ್ಸ್ಯಗಂ ಹರಿಗೋಲನು ಹಿಡಿದು
ಋಷಿ ರೂಪಕೆ ತಲೆವಾಗಲು ನುಡಿದು
''ನಾವೆಗೆ ಬನ್ನಿರಿ ಭಗವನ್'' ಎಂದಿರೆ
ನಿಗಮಾಗಮ ಜಗದಂಬೆಯು ನಿಂದಿರೆ
''ಜಲಕಲ್ಯಾಣಿ ತಥಾಸ್ತು'' ಎಂದುಲಿದು
ಓಡೆಗೆ ಬರಲು ಪರಾಶರರೊಲಿದು
ಸತ್ಯವತಿಯು ಮನದೊಳಗತಿನಲಿದು
ನುಡಿದಳು ''ಭಗವನ್ ಹುಟ್ಟನು ಬಲ್ಲೆವು
ಗಂಗಾಮಾತೆಯ ಗುಟ್ಟನು ಬಲ್ಲೆವು
ಸುರಗಂಗೆಯ ಜಲದಂತರಗಂಗೆಯ
ಮಂದಾಕಿನಿಜಲ ಜಲಜತರಂಗೆಯ
ಜಲಪರ್ಯಂಕಕೆ ಪರಿಚಿತರಾವು''
ಮಂಗಲ ಕೋರಿ ಸಮೀರಣ ಬಂತು
''ಶುಭಾಸ್ತೇ ಪಂಥಾನಃ ಸಂತು''

೫

ಪರಬ್ರಹ್ಮ ಪರಮಾತ್ಮ ಚಿತ್ತರಾಗಿ
ಹರಿಚರಣಕಮಲಧ್ಯಾನಸ್ಥಚಿತ್ತರಾಗಿ
ಪರಾಶರರು ಪದ್ಮಾಸನಸ್ಥರಾಗಿ
ನಾವೆಯಲ್ಲಿ ಕುಳಿತಿರಲು, ಮತ್ಸ್ಯಗಂಧಿ
ಹರಿಗೋಲು ಹಿಡಿದಳಾ ದಾಶರಾಜನಂದೆ
ಕೋಲನಿಳಿಸಿ ನದಿಯಲ್ಲಿ ಹುಟ್ಟುಹಾಕಿ
ಓಡಿಯಾಡಿಸಿದಳಂದು ನೌಕೆ ನೂಕಿ
ಹಂಸನೌಕೆಯೊಳಗಿರಿಸಿ ಹಂಸಹೆಜ್ಜೆ
ಹಂಸಗಮನೆ ಘಿಲುಕಿಸುತ ಮಂದಗೆಜ್ಜೆ
ಆಚೆಯೀಚೆ ನಡೆದಾಡೆ ನಾವೆ ತೇಲಿ
ಬಿಟ್ಟು ಮುಂದುವರಿದಿತ್ತು ಗಂಗೆಬೇಲಿ

ಹಾಯಿಗಂಬದಲಿ ಹರಡಿ ಹಾಯಿಕಟ್ಟು
ಚುಕ್ಕಾಣಿಯೀಚೆ ಕುಳಿತಿರಲು ಹಾಕಿ ಹುಟ್ಟು
ಗಾಳಿಯೋಡಿಬಂದಿತ್ತು ನಾವೆಯಲ್ಲಿ
ಹಂಸನೌಕೆ ತೇಲಿತ್ತು ಗಂಗೆಯಲ್ಲಿ
ಸತ್ಯವತಿಯು ಕುಳಿತಿದ್ದಳೋಡೆಯಾಡಿ
ಧವಲನೊರೆಯ ತೆರೆ ಮರೆಯ ಲಂಪುಗೂಡಿ
ಜಲತರಂಗದುಯ್ಯಾಲೆಯಾಟವಾಡಿ
ಸ್ವರತರಂಗದಾನಂದಲಹರಿ ಮೂಡಿ
ಅಂತರಂಗದುನ್ಮಾದ ಬರಲು ಹಾಡಿ

## ದೋಣಿಯ ಹಾಡು

ಓ ಬೇಲಿಲೇಸೊ ಓ ಬೇಲಿಲೇಸೊ !
ಓ ಮಾಲೀಸೊ ಓ ಮಾಲಿಲೇಸೊ !
ನೀರಾಟವಾಡಿವೆ ಬಣ್ಣದ ಮೀನ
ಉಪಚರವಸುವಿನ ಜಲಸಂತಾನ

ಮುಗಿಲಾಟವಾಡಿವೆ ಬಣ್ಣದ ಹಕ್ಕಿ
ಗಾಳಿಯು ಬೀಸಿದೆ ಬೆಳ್ಳಿಯ ರೆಕ್ಕೆ ॥೧॥

ಮುಟ್ಟಾಟವಾಡಿವೆ ಬಣ್ಣದ ಮೋಡ
ಮೀನು ಮಾತಾಡಿವೆ ಮೀನಿನ ಕೂಡ
ಹಾಡಿ ಹಾರಾಡಿವೆ ಜೋಡುಬೆಳ್ಳಕ್ಕಿ
ಹರಸಲಿ ಮುಗಿಲಿನ ಅರುಂಧತಿ ಚಿಕ್ಕಿ ॥೨॥

ಚೆನ್ನಾಟವಾಡಿವೆ ಹಂಸವೆಲ್ಲಲ್ಲೂ
ತೆರೆನೊರೆ ಮೂಡಿಸಿ ಕಾಮನಬಿಲ್ಲು
ಕಣ್ಣು ಮುಚ್ಚಾಟವಾಡುವ ಕಮಲವ ಕಂಡು
ಮಕರಂದ ಕುಡಿದಿವೆ ಮರಿದುಂಬಿವಿಂಡು ॥೩॥

ಸ್ವಾತಿಯ ಹನಿ ಮುತ್ತು ಹವಳವ ಕಂಡು
ಕಮಲದೊಳರಿಷಿಣಕುಂಕುಮ ಕೊಂಡು

ಮೀನುಗಳೆತ್ತಿವೆ ದೋಣಿಪಲ್ಲಕ್ಕಿ
ಗಾಳಿಯು ಬೀಸಿದೆ ಬೆಳ್ಳಿಯ ರೆಕ್ಕಿ ॥೪॥

ನದಿಯಲ್ಲಿ ನಿಂತಿರುವೀ ಚಕ್ರವಾಕ
ಹನಿಯಲ್ಲಿ ಕಂಡಿದೆ ಜಲಯಕ್ಷಲೋಕ
ಮೇಘದ ಚವರಿಯ ಬೆಟ್ಟಕೆ ಬೀಸಿ
ಗಾಳಿಯು ಬರುತಿದೆ ಗಂಗೆಯೊಳೀಸಿ ॥೫॥

ಜಲಜಗಳಾರತಿಯೆತ್ತಲು ಕೂಡಿ
ಜಲಗಂಧರ್ವರು ಜಲಗೀತ ಹಾಡಿ
ಮೀನುಗಳೆತ್ತಿವೆ ದೋಣಿಪಲ್ಲಕ್ಕಿ
ಗಾಳಿಯು ಬೀಸಿದೆ ಬೆಳ್ಳಿಯ ರೆಕ್ಕಿ ॥೬॥

ಸಂತಾನಸಂಭ್ರಮದಾನಂದವುಕ್ಕಿ
ಹಾಡಿ ಹಾರಾಡಿವೆ ಜೋಡುಬೆಳ್ಳಕ್ಕಿ
ಹುಟ್ಟನು ಬಲ್ಲೆವು ಕಾಪಾಡು ತಾಯಿ
ತೊಟ್ಟಿಲ ತೂಗಾಡಿ ಬಾ ಗಂಗಾಮಾಯಿ ॥೭॥

೬

ಗಂಗಾ ನದಿಯೊಳು ನಾವೆಯನಾಡಿ
ಸತ್ಯವತಿಯು ಜಲಗೀತವ ಹಾಡಿ
ಜಡೆಗಟ್ಟಿದ ಮುಡಿ ಕುಂತಲವೇಣಿ
ಮಧುವನ ಮಾಮರ ಕೋಕಿಲವಾಣಿ
ಚೆಲುವಿನ ಹೊಂದಾವರೆ ಮುಖಮಂಡಲ
ಮುತ್ತಿನ ಮಾಲೆಯ ರತ್ನದ ಕುಂಡಲ
ನಾವೆಯ ಜಲದೇವತೆ ಮೀನಾಕ್ಷಿ
ಚೆಲುವಿನ ವನದೇವತೆ ದೀನಾಕ್ಷಿ
ಹಸಿರಿನ ಬಣ್ಣದ ವಸನವನುಟ್ಟು
ನೇರಿಲು ಬಣ್ಣದ ಮೇಲುದ ತೊಟ್ಟು
ಸಿಂಪಿನ ಸರಗಳ ಕೊರಳೊಳಗಿಟ್ಟು

ಹದಿನಾರರ ಹರೆಯದ ವಿನ್ಯಾಸ
ಕೋಮಲಚೆಲುವಿನ ರೂಪವಿಲಾಸ
ತುಟಿ ಪಲ್ಲವಿಸಲು ಮಂದಸುಹಾಸ
ಅಂಬಿಗರಾಜನ ಮತ್ಸ್ಯಕುಮಾರಿ
ಮಂದಾಕಿನಿಯ ತರಂಗವಿಹಾರಿ
ಸತ್ಯವತಿಯು ಹಿಡಿದಳು ಚುಕ್ಕಾಣಿ
ಲಹರಿಯ ಲಲ್ಲೆಯೊಳಾಡಿತು ದೋಣಿ
ಸತ್ಯವತಿಯ ಮಧುರಸ್ವರಕೊಲಿದು
ನಿಗಮಾಗಮಜಲ ಜಲಯೊಳಲೆದು
ಪಾಟಲ ವಲ್ಕಲ ವಸನವನುಟ್ಟು
ಕೆಂಜೆಡೆಗಳ ಶಿರಬಂಧವ ತೊಟ್ಟು
ದಂಡಕಮಂಡಲು ನಾವೆಯೊಳಿಟ್ಟು
ಜಾತವೇದ ಋಷಿ ರೂಪವಿದೆಂದು
ಸವಿತೃಮಂಡಲ ದೀತಿ ಮಿಂದು
ಯೋಗದ ಭೋಗದ ಮಂಡಲ ತೆರೆದು
ತೇಜಃಪುಂಜದ ದೃಷ್ಟಿಯ ನೆರೆದು
ಕುಳಿತು ಪರಾಶರ ನಾವೆಯೊಳಂದು
ನುಡಿದರು ಸತ್ಯವತಿಗೆ ಇಂತೆಂದು
''ಗ್ರಹಮಂಡಲದಲಿ ಬಂದಿಹುದೀಗ
ಹರಿಜನ್ಮೋತ್ಸವದಮೃತಯೋಗ
ಹೇ ದೀನಾಕ್ಷಿ ಇದಮೃತಯೋಗ
ಕೊಡಬಲ್ಲೆಯಾ ನಿನ್ನಯ ಭೋಗ?''
ಋಷಿತಾರುಣ್ಯದ ಚೆಲುವಿನ ರೂಪಕೆ
ಭೋಗದ ನುಡಿಗಳ ಚಂದನ ಧೂಪಕೆ
ಹದಿನಾರರ ಹರೆಯದ ವಿನ್ಯಾಸದಿ
ಕೋಮಲ ಚೆಲುವಿನ ರೂಪವಿಲಾಸದಿ
ಲಜ್ಜೆಯು ಕೆನ್ನೆಯೊಳೋಕುಳಿಯಾಡಿತು
ಕಾಮನಬಿಲ್ಲು ಕೋಲ್ಮಿಂಚನು ಹೂಡಿತು

ಗಂಗಾಲಹರಿಗೆ ಮನ ಹೊಯ್ದಾಡಿತು
ಮತ್ಸ್ಯಗಂ ಮೈ ಪುಳಕಿತಳಾಗಿ
ಸತ್ಯವತಿಯು ನುಡಿದಳು ತಲೆವಾಗಿ
''ಭಗವದನುಗ್ರಹ ಭಗವನ್ ಲಾಲಿಸಿ
ಹೆಣ್ಣನು ಭಯಸಂಕಟದೊಳು ಪಾಲಿಸಿ
ಕನ್ನಿಕೆ ಕೌಮಾರಿಕೆ ಕಳಕೊಂಡರೆ
ವಧುವಾಗದೆ ತಾಯ್ತನ ಸುಖವುಂಡರೆ
ಗತಿ ದುರ್ಗತಿ'' ಎನ್ನಲು ದೀನಾಕ್ಷಿ
''ಅಭಯವಿಕೋ ದೇವತೆಗಳು ಸಾಕ್ಷಿ
ನಿಮಿತ್ತಮಾತ್ರಂ ಭವ ದೀನಾಕ್ಷಿ''

೭

ಪರಾಶರರು ಕೈಯೆತ್ತಿ ನುಡಿದರಂದು
''ಹೇ ಸತ್ಯವತಿಯೆ ನಿನಗಭಯ ಕೊಡುವೆವೆಂದು
ದೇವಜನ್ಮದುತ್ಸವಕೆ ಪಾತ್ರಳಾಗು
ಹೇ ಮತ್ಸ್ಯಗಂಯೆ ನಿಮಿತ್ತಮಾತ್ರಳಾಗು
ಹೆತ್ತು ಮತ್ತೆ ಕೌಮಾರಪ್ರಾಪ್ತಳಾಗು
ದೇವಿ ಭೋಗಸಂಯೋಗ ದೇವಯೋಗ
ದೇವಿ ದೇವಜನ್ಮಕ್ಕೆ ದೇವಭೋಗ
ಜಗವನುದ್ಧರಿಸು ದೇವಮಾತೆಯಾಗಿ
ಪುಣ್ಯಗಂಗೆಯುದ್ಧಾರಧಾರೆಯಾಗಿ''
ಪರಾಶರರು ನುಡಿದಿರಲು ನುಡಿಯ ಕೇಳಿ
ಮತ್ಸ್ಯಗಂ ಸತ್ಯವತಿ ಲಜ್ಜೆತಾಳಿ
''ಭಗವತ್ಪ್ರಸಾದ''ವೆಂದುಸುರಿ ಮತ್ಸ್ಯಗಂಧೆ
ಲಜ್ಜೆಲಹರಿ ಮುಸುಗಿರಲು ದಾಶನಂದೆ
ಆಚೆಯೀಚೆ ದಡದಲ್ಲಿ ಜನರ ಕಂಡು
ನಾಲ್ಕು ನಿಟ್ಟುಗಳ ನೋಡೆ ಕುಳಿತುಕೊಂಡು
ಪರಾಶರರು ಕೈಬೊಗಸೆಯರ್ಘ್ಯವಿಡಿದು

ನವದ್ವೀಪ ನೀಹಾರ ಮಂತ್ರ ನುಡಿದು
''ನಾಭಿಕಮಲ ಕಮಲಾಕ್ಷ ಸಾಕ್ಷಿ''ಯೆಂದು
ಸುತ್ತುಮುತ್ತು ಸಿಂಪಡಿಸಲರ್ಘ್ಯದಲ್ಲಿ
ನಾವೆ ನಿಂತುಬಿಟ್ಟಿತ್ತು ಮಧ್ಯದಲ್ಲಿ
ವರುಣಕುಂಜ ಬಿಳಿಮಂಜು ಹಿಂಜುತಿತ್ತು
ಇಳಿಮಂಜು ಮೋಡ ಬಿಳಿಮಂಜು ಕಟ್ಟಿ ಸುತ್ತು
ಹನಿಮಂಜು ಹೆಪ್ಪುಗಟ್ಟಿತ್ತು ಮುಗಿಲನಿಳಿದು
ಇಬ್ಬನಿ ಸುತ್ತುವರಿದಿತ್ತು ಮಂಜು ಬಳಿದು
ಕಣ್ಣ ಪರೆಗೆ ಬಿಳಿಮಂಜು ತೆರೆಯನೆಳೆದು
ನಾವೆ ನೀರು ನದಿ ನೌಕೆ ಕಾಣದಂತೆ
ನದಿಯ ನಡುವೆ ನೆರೆದಿತ್ತು ಮಂಜುಸಂತೆ
ನವದ್ವೀಪವೆದ್ದಿತ್ತು ನೀರ ಮೇಲೆ
ಹಂಸನೌಕೆಯೆಡೆ ಹೊಸ ಸೃಷ್ಟಿ ತೇಲೆ
ಬಕುಲ ಬದರಿ ಕೇದಾರ ವನದ ಕಂಪು
ತೀಡಿಬರಲು ತಂಬೆಲರು ಬನದ ಲಂಪು
ಹಸಿರು ರತ್ನಗಂಬಳಿಯ ದ್ವೀಪಕಲ್ಪ
ಪಾರಿಜಾತದಡಿಯಲ್ಲಿ ಹಂಸತಲ್ಪ
ಮತ್ಸ್ಯಗಂ ಮೀನಾಕ್ಷಿ ಲಜ್ಜೆತಳೆದು
ದಾಶಕನ್ನೆ ದೀನಾಕ್ಷಿ ದೋಣಿಯಿಳಿದು
ಹಂಸತಲ್ಪದೆಡೆ ಹಂಸಗಮನೆ ಬರಲು
ಹಂಸಚಿತ್ತ ಹರಿದೆದ್ದು ಮೋಹಿಸಿರಲು
ಹಸಿರುಗಂಬಳಿಯ ದ್ವೀಪಕಲ್ಪದಲ್ಲಿ
ಪಾರಿಜಾತದಡಿಯಲ್ಲಿ ಹಂಸತಲ್ಪದಲ್ಲಿ
ಪರಾಶರರು ಪಾಮರಿಯ ಭೋಗಿಸಿರಲು
ಮುಗಿಲು ಮಂಗಲದ ಭೇರಿ ಮೊಳಗುತಿರಲು
ಕೃತ್ತಿಕೆಯ ಕುಂಜ ಕಾರ್ತೀಕ ಬೆಳಗುತಿರಲು
ಚೈತನ್ಯಪುಂಜ ನೆಲಮುಗಿಲ ತೊಳಗುತಿರಲು
ಬ್ರಹ್ಮಕಲ್ಪ ರಸತಲ್ಪ ಕೊಡುತಿರಲು

ರಸಋಷಿವೃಂದಕಾನಂದ ಮೂಡುತಿರಲು
ಚಾರಣರು ದೇವಗಾಂಧಾರ ಹಾಡುತಿರಲು
ಜಟಾಜೂಟಮೃಗಚರ್ಮಧಾರಿಯಾಗಿ
ವಾಸಿಷ್ಠ ಕೃಷ್ಣ ಕಾನೀನ ವ್ಯಾಸಯೋಗಿ
ಪರಮಹಂಸ ವಧುಗರ್ಭವಿಳಿದು ಬಂದು
ಭಗವಂತ ನಮಿಸಿದನು ತಾಯಿತಂದೆಗೆಂದು

೮

ಹರಿತೋಪಲ ದೀತಿಯವತರಿಸಿ
ಜಟಾಜೂಟಕೃಷ್ಣಮೃಗ ಧರಿಸಿ
ನಿಗಮಾಗಮಗಳ ಬಗಲೊಳಗಿರಿಸಿ
ನಿಂದಿರೆ ಕಾನೀನ ನಮಸ್ಕರಿಸಿ
ಪರಬ್ರಹ್ಮಪರಮಾತ್ಮನ ಕಂಡು
ಹರಿಯವತಾರದ ಹರುಷವನುಂಡು
ಸತ್ಯವತಿಯು ಭಗವಂತನ ಸ್ಮರಿಸಿ
''ಚಿರಂಜೀವಿಯಾಗೆಂ''ದಳು ಹರಸಿ
''ಸ್ಮರಿಸಿದ ಮಾತ್ರಕ್ಕೆ ಬರುವೆನು ಬಳಿಗೆ
ನೆನೆಸಿದ ಮಾತ್ರಕೆ ನೀವರಗಳಿಗೆ
ಜನನಿಯ ಬಳಿ ಸಾರುವೆ ಕ್ಷಣದೊಳಗೆ
ಬದರಿಕಾಶ್ರಮದಿ ನೆಲೆಸುವೆ''ನೆಂದು
ಸತ್ಯವತಿಗೆ ವಂದಿಸುತ್ತೆತಂದು
ಪರಾಶರಋಷಿವರಚರಣಕೆ ನಮಿಸಿ
ನಿಗಮಾಗಮಗಳ ಹರಕೆಯ ಸ್ಮರಿಸಿ
ಪಿತೃವಾತ್ಸಲ್ಯದ ವರ ಸ್ವೀಕರಿಸಿ
ಕೃಷ್ಣದ್ವೈಪಾಯನ ಕಾನೀನ
ಕ್ಷಣದೊಳಗಾಗಲು ಅಂತರ್ಧಾನ
ಒಮ್ಮಿಂದೊಮ್ಮೆಲೆ ಮಂಜಿನ ವ್ಯೂಹ
ಮರೆಯಾಯಿತು ಮಂಜಿನ ಸಮ್ಮೋಹ

ಪರಮಾತ್ಮನ ಸಂಕಲ್ಪದ ಹೂಟ
ಋಷಿಮಂತ್ರೋತ್ಸವ ಗಾರುಡಿಯಾಟ
ಬಯಲಾಯಿತು ಬಿಳಿಮಂಜಿನ ಮಾಟ
ಪರಾಶರ ನುಡಿದರು ''ಹೇ ಮೀನಾಕ್ಷಿ
ಅಭಯವಿಕೊ ದೇವತೆಗಳ ಸಾಕ್ಷಿ
ದೇವಿ ಮತ್ತೆ ಕೌಮಾರಪ್ರಾಪ್ತಳಾಗು''
ಪರಾಶರರು ನುಡಿದಿರಲು ನುಡಿಯ ಕೇಳಿ
ದೇವಮಾತೆ ಸತ್ಯವತಿ ಲಜ್ಜೆತಾಳಿ
ಹಸಿರುಗಂಬಳಿಯ ದ್ವೀಪಕಲ್ಪದಲ್ಲಿ
ಪಾರಿಜಾತದಡಿ ಹಂಸತಲ್ಪದಲ್ಲಿ
ಪಾಮರಿಯು ಪರಮಹಂಸರಿಗೆ ಭೋಗವಿತ್ತು
ವೇದಸ್ವರೂಪ ಶ್ರೀಕೃಷ್ಣನನ್ನು ಹೆತ್ತು
ಬಕುಲ ಬದರಿ ಕೇದಾರ ವನದ ಕಂಪು
ಬಾದರಾಯಣರ ಹೆತ್ತ ಮನದ ಲಂಪು
ಆಶೀರ್ವದಿಸೆ ಪರಾಶರ ಬಂದು
ಪುನಃ ಕೌಮಾರವ ಪಡೆಯೆಂದು
ಸತ್ಯವತಿಯು ದೋಣಿಯೊಳ್ಳೆತಂದು
ಜಾಹ್ನವಿಯಿೀಚೆಯ ದಂಡೆಗೆ ಬಂದು
ದಂಡೆಯೊಳಿಳಿಸಿ ಪರಾಶರ ಮುನಿಗೆ
ನಾವೆಯನಾಡಿಸಿ ನಡೆದಳು ಮನೆಗೆ
ಗಂಗಾಲಹರಿಯ ಲಲ್ಲೆಯೊಳುರುಳಿ
ನಾವೆಯು ನಡೆಯಿತು ನಡೆದಳು ಮರಳಿ
ಮಂದಾಕಿನಿಯ ತರಂಗವಿಹಾರಿ
ಮರಳಿದಳಂಬಿಗ ರಾಜಕುಮಾರಿ
ಪರಮಹಂಸವಧು ದೇವಮಾತೆಯಾಗಿ
ದಂಡೆಗಿಳಿದಿರಲು ದಾಶಕನ್ನೆಯಾಗಿ
ಮಗಳ ಕಂಡು ನುಡಿದಿದ್ದ ತಂದೆ ಕೂಗಿ
''ಇದೇನಾಟವಿದು ಮತ್ಸ್ಯಗಂ ಹೋಗಿ
ಮರಳಿ ಬಂದೆ ಯೋಜನುಸುಗಂಯಾಗಿ!''

## ೩. ಗುರುಹಸಾದವಿದು ಸಮೀರ

೧

ತುಳುಕುತಿರುವ ಕಣ್ವತೀರ್ಥದಾಚೆಗೊಂದು ಗುಡಿ
ಅಲ್ಲಿ ಹಸಿರು ಬಯಲ ನಡುವೆ ಬೆಳೆದುನಿಂತ ದ್ರುಮ
ಕೆಳಗೆ ಕುಳಿತರೊಬ್ಬ ಗುರು ಸನತ್ಕುಮಾರಸಮ
ಸುತ್ತ ಕುಳಿತ ಶಿಷ್ಯವೃಂದ ಕೇಳಿತವರ ನುಡಿ
ಕಡಲ ತೆರೆಗಳೋಡಿ ಬಂದವೀಚೆ ಮಳಲತಡಿ

೨

''ಶ್ರವಣ ಮನನ ನಿಧ್ಯಾಸ ಮೂರೆ ಜ್ಞಾನಪಥ
ಇದುವೆ ತಿಳಿದ ದಾರ್ಶನಿಕರ ಬ್ರಹ್ಮವಿದರ ಮತ
ಋಷಿಯ ಮಾತು ಜೇನುಹುಟ್ಟು ವಿದ್ಯೆ ಮಧುವ್ರತ
ದೇವಕರುಣೆ ನಡೆಸುತಿರಲಿ ನಿಮ್ಮ ಬಾಳ ರಥ

೩

ಮೊದಲು ಬಾಳಬಟ್ಟೆ ನಡೆದ ಹೆಜ್ಜೆ ಪಯಣ ಬಲ
ನನ್ನಿ ನಿಮ್ಮ ಜೀವ ವೇದ ಉಸಿರೆ ಮಂತ್ರವಲ!
ಒಲವು ತುಂಬಿ ತುಳುಕುತಿರಲಿ ಎದೆಯ ಕಡಲ ಜಲ
ದೇವಕರುಣೆ ಬೆಳೆಸುತಿರಲಿ ನಿತ್ಯಸತ್ಯ ಫಲ

೪

ತಾಳದಂತರಾಳವರಿತು ನಾಟ್ಯವಾಡುವಿಳೆ
ಸ್ವರತರಂಗದಂತರಂಗವರಿತು ಹರಿವ ಹೊಳೆ
ಆತ್ಮವಿದ್ಯೆಯದರ ಹೆಜ್ಜೆ ಜ್ಞಾನ ಬಿತ್ತಿ ಬೆಳೆ
ದೇವಕರುಣೆ ಕರೆಯುತಿರಲಿ ಮುಗಿಲ ಜೇನುಮಳೆ

೫

ಸರಸ ರಾಸಲೀಲೆಯಾಡಿ ತಿರುಗುತಿರುವ ತಿರೆ
ನೆಲದ ಕನಸ ನೂಲುತಿರುವ ಮುಗಿಲನಾಡ ದೊರೆ
ಇರುಳು ಕೂಡ ಬಿಚ್ಚುತ್ತಿತ್ತು ತನ್ನ ತಿಮಿರ ಪರೆ
ದೇವಕರುಣೆ ಹರಸುತಿರಲಿ ಕೇಳಿ ನಿಮ್ಮ ಮೊರೆ

೬

ಜಗದ ಮಿಸುನಿ ಗರ್ಭಗುಡಿಯಲಿರುವ ಹೈಮವತಿ
ಪ್ರಣವವೀಣೆ ನುಡಿಸುತಿರುವಳಿಲ್ಲಿ ಬ್ರಹ್ಮಸತಿ
ಧ್ಯಾನಪೀಠದಲ್ಲಿ ಜೀವದುಸಿರು ಹಿಡಿದ ಶ್ರುತಿ
ದೇವಕರುಣೆ ಹರಸುತಿರಲಿ ಸ್ಥಿತಪ್ರಜ್ಞಮತಿ''

೭

ಹೀಗೆ ಸಮಿತ್-ಪಾಣಿಗಳಿಗೆ ಕಲಿಸುತಿರಲು ಗುರು
ಹಸಿರೆಲೆ ಹುಯಿಲೆಬ್ಬಿಸಿರಲು ಗಾಳಿ ತಬ್ಬಿ ಮರ
ಗುರು ನುಡಿದರು ಕೈಯನೆತ್ತಿ 'ಸಾವಧಾನ' ಸ್ವರ
ಗಾಳಿಗೆ ಕಿವಿಮಾತನುಸುರಿ ಸುಮ್ಮನಿತ್ತು ತರು
''ಗುರುಹಸಾದವಿದು ಸಮೀರ! ಸನಿಹ ಸುಳಿಯದಿರು!''

# ೪. ಸಂಪಾತಿ

ಕಣ್ಣು ತೆರೆಯಿತು ಮುಗಿಲು ಬಂಗಾರ ಬಳಿದು
ಮಾಹೇಂದ್ರಪರ್ವತದ ಗಿಡಮರದೊಳಿಳಿದು
ಕುಂಕುಮದ ಹುಡಿಯೆರಚಿ ಹೊಳೆವಗ್ನಿಪಿಂಡ
ಮೂಡಿರಲು ಬೆಳಗಿತು ಸಮಸ್ತಬ್ರಹ್ಮಾಂಡ
ಹೂ ಹೂವಿನಂಗಳದಿ ಹರುಷದಿಂದಲೆದು
ಸೌಗಂಕದ ರಂಗವಲ್ಲಿಯನು ಬರೆದು
ಬೀಸತೊಡಗಿತು ಗಾಳಿ ಮಾಹೇಂದ್ರಗಿರಿಗೆ
ಹಕ್ಕಿ ಗರಿಬಿಚ್ಚಿದವು ಮೋಡಗಳ ಕರೆಗೆ
ಚಿಲಿಪಿಲಿಸಿ ಹಾರಿದವು ದಿಕ್ಕುಗಳನಳೆದು
ಹಣ್ಣೆಲೆಗಳುದುರಿದವು ಹಸಿರು ದಿನ ನೆನೆದು
ಹನಿಮಂಜು ತಂಪಿನಲಿ ಗಿರಿಯ ನೆಲ ತೊಯಿದು
ಪಕ್ಷಿ ಸೂಕ್ತವ ಕೇಳಿದೊಡನೆ ಕಣ್ತೆರೆದು
ಸೂರ್ಯಸಾರಥಿಯರುಣಪುತ್ರ ಸಂಪಾತಿ
ಸುಟ್ಟುಸೀಕರಿಗೊಂಡ ರೆಕ್ಕೆಗಳ ಚಾಚಿ
ಒಡಲನಡೆ ನಿತ್ರಾಣ ಕಾಲುಗಳ ನೀಡಿ
ಬಿದ್ದಲ್ಲೆ ಬಿದ್ದಿರಲು ಸುತ್ತಲೂ ನೋಡಿ
ಕಣ್ಣು ಹನಿದುಂಬಿದವು ಮೇಲಿತ್ತು ಮುಗಿಲು
ಕೆಳಗೆ ಮೈಚಾಚಿತ್ತು ನೊರೆನಗೆಯ ಕಡಲು
ಪರಿಮಳದ ಬೀಸಣಿಗೆ ಹಿಡಿದಿರುವ ಗಾಳಿ
ಕರೆಯತೊಡಗಿವೆ ದಿಕ್ಕು ಹೊಸ ಹಿಗ್ಗು ತಾಳಿ
ಉಕ್ಕಿಬಂದಿತು ದುಃಖ ''ಓ ನೀಲ ಮುಗಿಲೆ
ನೊರೆನಗೆಯ ರತ್ನಗರ್ಭದ ನೀಲಕಡಲೆ
ಪರಿಮಳದ ಹರಿಕಾರ ಓ ವಾಯುದೇವ
ಬೆಳಗಿ ಬೆಳೆಸುವ ಬಿಂಬ ಓ ಸೂರ್ಯದೇವ
ಮತ್ತೊಂದು ಬೆಳಗಾಯ್ತು. ಮತ್ತೊಂದು ಇರುಳು
ನನ್ನ ಪಾಲಿಗೆ ಮಾತ್ರ ಎಲ್ಲ ನೆರಳು''

೨

ಬೆಂದ ರೆಕ್ಕೆಯ ನೀಡಿ ಕನವರಿಸಿ ನುಡಿದು
ದಿಕ್ಕುಗಳ ಮೋಡಗಳ ದಾರಿಗಳ ನೆನೆದು
ಹುಲ್ಲುನೆಲದಲಿ ಮತ್ತೆ ಕೊರಳಿರಿಸಿಕೊಂಡು
ಮಲಗಿರಲು ಕಣ್ತೆರೆದು ಸುತ್ತಲೂ ಕಂಡು
ಚಿಕ್ಕಂದು ನೋಡಿರುವ ಬೆಳಕುಗಳ ನೆನಪು
ಮರಳಿ ಬರತೊಡಗಿತ್ತು ತಾಯನುಡಿ ನೆನಪು
ಒಂದು ದಿನ ಮುಂಜಾವು ಮುಗಿಲೆಲ್ಲ ಕೆಂಪು
ಬೆಳಕು ಚಿನ್ನದ ನೀರು ಗಾಳಿ ಬಲು ತಂಪು
ಮನೆಯ ಕಿಡಕಿಯ ತೆರೆದು ದೂರ ಕೈ ಮಾಡಿ
ತಾಯಿ ನುಡಿದಳು ತನಗೆ, ''ಅಲ್ಲಿಹನು ನೋಡಿ
ಎಲ್ಲ ಬ್ರಹ್ಮಾಂಡಗಳ ಬೆಳಗುತಿಹ ಸೂರ್ಯ
ಇವನ ರಥ ನಡೆಸುವದೆ ತಂದೆಗಿಹ ಸೂರ್ಯ
ಇವನ ಬಿಂಬವೆ ಸಕಲಚೈತನ್ಯಮೂಲ
ಬ್ರಹ್ಮಾಂಡಗಳ ಬದುಕು ಈ ಸೂರ್ಯಗೋಲ
ನೆನಪಿಡಿರಿ ಮಕ್ಕಳೆ ಎತ್ತರಕೆ ನಡೆದು
ತೇಜಸ್ವಿಯಾಗಿರಿ, ಸೂರ್ಯನನು ನೆನೆದು''
ಸಂಪಾತಿ ಸೋದರ ಜಟಾಯುವನು ಕೂಡಿ
ಹರ್ಷಪಟ್ಟರು ಸೂರ್ಯಬಿಂಬವನು ನೋಡಿ

೩

ಮಲಗಿದೆಡೆ ಮರಳಿತ್ತು ಬಾಲ್ಯಗಳ ನೆನಪು
ತಾಯ, ತಮ್ಮಂದಿರ ವಾತ್ಸಲ್ಯಗಳ ನೆನಪು
ಒಂದು ದಿನ ಸಂಪಾತಿ ಜಟಾಯುವನು ಕೂಡಿ
ಸೂರ್ಯನನು ಮುಟ್ಟಿ ಬರುವಂಥ ಪಣಹೂಡಿ
ಹಾರಿ ನಡೆದರು ಮೇಲೆ ತಾಯ ನುಡಿ ನೆನೆದು
ಸುತ್ತಲೂ ಪವಡಿಸಿದ ಹೊಂಬಿಸಿಲಿಗೊಲಿದು
ಗಾಳಿಗಳ ಬಾಚಿದವು ಸೋದರರ ರೆಕ್ಕೆ

ಮೋಡಗಳ ದಾಟಿದವು ಮತ್ತೆ ಮೇಲಕ್ಕೆ
ಹಾರಿಯೇ ಹಾರಿದರು ಅಣ್ಣ ತಮ್ಮದಿರು
ಬೆಳಕಿನಲಿ ನಡೆದಷ್ಟು ಬಿಸುಪಾಯ್ತು ಕದಿರು
ಸೂರ್ಯ ನೆತ್ತಿಗೆ ಬಂದ ಬಿಸಿಲು ಸುಡುತಿತ್ತು
ಮೋಡಗಳೆ ಇರಲಿಲ್ಲ ಗಾಳಿಯಡಗಿತ್ತು
ಆದರೂ ಸೋದರರು ಹಾರಿದರು ಮೇಲೆ
ರೆಕ್ಕೆ ಚುರುಗುಟ್ಟಿದವು. ಬೆಳಕಿತ್ತು ಜ್ವಾಲೆ
ಜಟಾಯು ಹೇಳಿದ ''ಅಣ್ಣ ಸುಡುತಿಹವು ರೆಕ್ಕೆ
ಆದರೂ ಹೋಗೋಣ ಮತ್ತೆ ಮೇಲಕ್ಕೆ''
ಸೋದರರು ರೆಕ್ಕೆಗಳ ಬೀಸಿಯೆ ಬೀಸಿ
ಮತ್ತೆ ನಡೆದರು ಮೇಲೆ ಉರಿಬೆಳಕನೀಸಿ
ಬಳಲಿದ ಜಟಾಯುವಿನ ದುರ್ದೆಸೆಯ ಕಂಡು
ರೆಕ್ಕೆಗಳ ತಂಪಿನೊಳಗನವನಿರಿಸಿಕೊಂಡು
ಸಂಪಾತಿ ಹಾರಿರಲು ಇನ್ನಷ್ಟು ಮೇಲೆ
ಸುಟ್ಟುಬಿಟ್ಟಿತು ರೆಕ್ಕೆಗಳ ಸೂರ್ಯಜ್ವಾಲೆ
ಕುಸಿದುಬಿದ್ದನು ಆಗ ಸಂಪಾತಿ ಕೆಳಗೆ
ಆದರೂ ತಮ್ಮಗವಚಿದ್ದ ಗರಿಯೊಳಗೆ

೪

ಎದೆಗವಚಿಸಲುಹಿರುವ ತಮ್ಮನನು ನೆನೆದು
ಸುಟ್ಟುಕೊಂಡಿರುವಂಥ ರೆಕ್ಕೆಗಳ ನೆನೆದು
ಮಲಗಿರಲು ಕೇಳಿಸಿತು ಸಂಪಾತಿಗಂದು
ಗಿರಿಯಡಿಯೊಳಿಂಪಾದ ಜಯಘೋಷವೊಂದು
''ರಘುಪತಿ ರಾಘವ ರಾಜಾರಾಮ
ಪತಿತಪಾವನ ಸೀತಾರಾಮ''
ಕಿವಿಗಿಳಿಯಿತಮೃತವು ಎಚ್ಚರವು ಬಂದು
ಮೈಗಿಳಿಯಿತಮೃತವು ಮೈ ಪುಲಕಗೊಂಡು
ಮೆಲ್ಲಮೆಲ್ಲನೆ ತನ್ನ ಕೊರಳೆತ್ತಿಕೊಂಡು

ನೋಡಿರಲು ಕಾಣಿಸಿತು ಕಪಿಸೈನ್ಯವೊಂದು
ಶ್ರೀರಾಮಸೇವೆಯಲಿ ದೀಕ್ಷೆಯನು ತಳೆದು
ಜಾನಕಿಯ ಶೋಸುತ ಎಲ್ಲ ಕಡೆಗಲೆದು
ಎಲ್ಲಿಯೂ ಕಾಣದೆ ನಿರಾಶೆಯಲಿ ನೊಂದು
ಹನುಮಂತನೊಡನೆ ಕಪಿಸಂಕುಲವು ಬಂದು
ಅನ್ನನೀರನು ತೊರೆದು ದೀಕ್ಷೆಯಲಿ ಕುಳಿತು
ಹಾಡಿದವು ಮಂಗಗಳು ಗಿರಿಯಡಿಗೆ ಕಲೆತು
''ರಘುಪತಿ ನ ರಾಘವ ರಾಜಾರಾಮ
ಪತಿತಪಾವನ ಸೀತಾರಾಮ''
ಹಾಡು ಕೇಳಿಯೆ ಶಕ್ತಿಸೆಲೆ ಮೂಡುತಿತ್ತು
ಬೆಂದವಗೆ ರಾಮಕಥೆ ಬಲ ನೀಡುತಿತ್ತು

೫

ಮೈಯೆಲ್ಲ ಕಿವಿಯಾಗಿ ಕೇಳಿ ಸಂಪಾತಿ
ಎದ್ದು ಕುಳಿತನು ಸಾವಕಾಶ ಕಾಲೂರಿ

''ದಶರಥನಂದನ ಶ್ರೀರಾಮ
ಪ್ರಜೆಗಳ ಹೃದಯದ ಚಂದ್ರಾಮ ॥೧॥

ವಿಶ್ವಾಮಿತ್ರನ ಜೊತೆಗುಳಿದು
ಯಜ್ಞವ ಪೊರೆದನು ಬಿಲ್ಹಿಡಿದು ॥೨॥

ಋಷಿಸಂಕುಲವನು ಸಲುಹಿದನು
ಅಸುರರ ಶಿರಗಳನಿಳುಹಿದನು ॥೩॥

ಕಲ್ಲಿಗೆ ಕರುಣೆಯ ನೀಡಿದನು
ಅಹಲ್ಯೋದ್ಧಾರವ ಮಾಡಿದನು ॥೪॥

ಈಶ್ವರಧನುವನು ನೆಗಹಿದನು
ಸೀತೆಯ ಮಾಲೆಯ ಧರಿಸಿದನು ॥೫॥

ತಂದೆಯ ಮಾತನು ನಡೆಸಿದನು
ದೂರದ ಕಾಡಿಗೆ ತೆರಳಿದನು ॥೬॥

ಗುಹನಲಿ ಸ್ನೇಹವ ಮಾಡಿದನು
ಭರತಗೆ ಪಾದುಕೆ ನೀಡಿದನು ॥೭॥

ಚಿನ್ನದ ಜಿಂಕೆಯ ನೋಡಿದನು
ಅಸುರಗೆ ಬಾಣವ ಹೂಡಿದನು ॥೮॥

ಸೀತಾದೇವಿಯ ಹುಡುಕಿದನು
ಕಪಿಗಳ ಗೆಳೆತನ ಬೆಳೆಸಿದನು'' ॥೯॥

೬

ರಾಮಕಥೆಯೊಂದೊಂದು ಪಲ್ಲವಿಯ ಕೇಳಿ
ಬೆಂದ ಕಡೆಗೊಂದೊಂದು ಹೊಸರೆಕ್ಕೆ ತಾಳಿ
ಸಂಪಾತಿ ಆನಂದಬಾಷ್ಪಗಳ ಸುರಿಸಿ
ತಲೆದೂಗಿ ಆಲಿಸಿದ ರಾಮಕಥೆ ಸ್ಮರಿಸಿ
''ವೀರಜಟಾಯುವ ನೋಡಿದನು
ಅಮೃತಲೋಕವ ನೀಡಿದನು''
ಕಿವಿನಿಮಿರಿ ಕೇಳಿ ಹರ್ಷೋದ್ರೇಕಗೊಂಡು
ಕೂಗಿದನು ಸಂಪಾತಿ ''ಓ ತಮ್ಮ'' ಎಂದು
ಹೊಸರೆಕ್ಕೆಗಳ ತೆರೆದು ಹೊಸ ಆಸೆ ಮೂಡಿ
ಹಾರಿಬಂದನು ಬೇಗ ಕಪಿಯ ಬಳಿಗೋಡಿ
ವಿಸ್ತಾರವಾಗಿರುವ ರೆಕ್ಕೆಗಳ ನೆರಳು
ಹಾಡುತಿಹ ಮಂಗಗಳ ಸನಿಹದಲಿ ಬರಲು
ಬಳಿಗೆ ಬಂದಿರುವ ಹಿರಿಹಕ್ಕಿಯನು ಕಂಡು
ಮಂಗಗಳು ಕೇಳಿದವು ಆಶ್ಚರ್ಯಗೊಂಡು
''ಪಕ್ಷಿಯೇ ನೀನಾರು? ಇಲ್ಲಿಗೇಕಿಂದು
ಈ ಗಿರಿಯ ತಪ್ಪಲಿಗೆ ಬಂದಿರುವೆ?'' ಎಂದು
ಸಂಪಾತಿ ಹೇಳಿದನು ಹರ್ಷವನು ತಾಳಿ
''ರಾಮಕಥೆಯೊಂದೊಂದು ಪಲ್ಲವಿಯ ಕೇಳಿ
ಬೆಂದ ಬದಿಗೊಂದೊಂದು ಹೊಸರೆಕ್ಕೆ ಮೂಡಿ
ರಾಮಕಥೆ ಹಾಡುತಿಹ ಬಾಳುವೆಯು ಧನ್ಯ

ರಾಮಕಥೆಯ ಕೇಳಿಯೆ ನಾನಾದೆ ಧನ್ಯ
ಅರುಣಪುತ್ರನು ನಾನು ಹೆಸರು ಸಂಪಾತಿ
ನನ್ನ ತಮ್ಮ ಜಟಾಯು ನನಗೆ ಬಲುಪ್ರೀತಿ
ಎಲ್ಲಿಯಾದರು ಅವನ ಕಂಡಿರುವಿರೇನು?
ಹೆಸರುದೆಸೆ ಗುರುತುಗಳು ನಿಮಗಿರುವವೇನು?''

೭

ಸಂಪಾತಿಯಾಡಿರುವ ಮಾತುಗಳ ಕೇಳಿ
ಒಮ್ಮೆಲೆ ಮಂಗಗಳು ಮೌನವನು ತಾಳಿ
ಸುಮ್ಮನಾಗಲು ನುಡಿದ ಕಪಿ ಜಾಂಬುವಂತ
''ಏರಜೀವ ಜಟಾಯು ಬಲುಪುಣ್ಯವಂತ
ಸೀತೆಯನು ದಶಕಂಠ ಕದ್ದೊಯ್ಯುತಿರಲು
ಅದನು ಕಂಡ ಜಟಾಯು ಅವನೆದುರು ಬರಲು
ಜಾನಕಿಯ ರಕ್ಷಣೆಗೆ ಹೋರಾಟ ಹೂಡಿ
ರಾಮಕಾರ್ಯಕೆ ತನ್ನ ಪ್ರಾಣವನೆ ನೀಡಿ
ಧನ್ಯನಾದನು'' ಎಂಬ ಮಾತುಗಳ ಕೇಳಿ
''ಹಾ ತಮ್ಮ!'' ಎಂದಿದ್ದ ದುಃಖ ಎದೆ ಸೀಳಿ
ಕುಸಿಯತೊಡಗಿತು ಮತ್ತೆ ಮೈಯೊಳಿಹ ತ್ರಾಣ
ಕುತ್ತಿಗೆಗೆ ಬಂದಿತ್ತು ಶೋಕದಲಿ ಪ್ರಾಣ
ಒಂದೊಂದೆ ನೆನಪಾಗೆ ಸೋದರನ ಕುರಿತು
ಎಡೆಬಿಡದೆ ಸಂಪಾತಿ ಅಳುತಿರಲು ಕುಳಿತು
ಹನುಮಂತ ಹೇಳಿದನು ಅವನ ಬಳಿ ಬಂದು
''ಸಂಪಾತಿ ಅಳಬೇಡ ಸಹಿಸಿಕೊ'' ಎಂದು
''ರಾಮಕಾರ್ಯಕೆ ಪ್ರಾಣವಿತ್ತವನು ಧನ್ಯ!
ರಾಮಕಾರ್ಯಕ್ಕೆಂದೆ ಕೇಳುವೆನು ನಿನ್ನ
ಕಳ್ಳರಾಕ್ಷಸನೂರು ಕಂಡಿರುವೆಯೇನು?
ಅಲ್ಲಿ ತಲಪುವ ದಾರಿ ನೀ ಬಲ್ಲೆಯೇನು?''
ಉಕ್ಕಿಬರುತಿರುವಂಥ ದುಃಖವನು ತಡೆದು

ಹಿತವಚನಮೃತದ ಹನಿಗಳನು ಕುಡಿದು
ತಮ್ಮನಿಗೆ ಕರುಣಿಸಿದ ಸದ್ಗತಿಯ ನೆನೆದು
ಸಂಪಾತಿ ಹೇಳಿದನು ''ಈ ಕಡಲಿನಾಚೆ
ಲಂಕೆಯಿದೆ. ಅಲ್ಲಿಹುದು ರಾವಣನ ರಾಜ್ಯ
ಕಡಲಸೇತುವೆ ಕಟ್ಟಿ ಲಗ್ಗೆಯನು ಇಟ್ಟು
ಕೆಂಡಕದ್ದಿರುವವನ ಕುಲವೆಲ್ಲ ಸುಟ್ಟು
ತುಂಬಿತುಳುಕಿರುವಾಗ ರಾಕ್ಷಸನ ಕೊಡವು
ರಾಮಬಾಣವ ಹೂಡಲಿನ್ನೇಕೆ ತಡವು?
ಭೂಭಾರವಿಳಿಸಿ ಸಲುಹಯ್ಯ ಶ್ರೀರಾಮ
ಭಕ್ತವತ್ಸಲ ರಾಮ ನೀನಮೃತಧಾಮ''
ಸಂಪಾತಿ ಗದ್ಗರಿಸಿ ಕಣ್ಣೀರು ಸುರಿಸಿ
ಕರುಣಾಸಮುದ್ರ ಶ್ರೀರಾಮನನು ಸ್ಮರಿಸಿ
ಕಪಿಗಳಿಗೆ ಹೇಳಿದನು ''ಧನ್ಯರೈ ನೀವು
ರಾಮಚರಿತಾಮೃತವನೀಂಟಿದೆವು ನಾವು
ಬದುಕಿನಲಿ ಸಲುಹಿರಲು ಶ್ರೀರಾಮಹಸ್ತ
ಇನ್ನಾರ ಭಯವುಂಟು – ಈ ಜೀವ ಮುಕ್ತ!''

# ೫. ಊರ್ವಶೀ

೧

ಹೊಂಬೆಳಗಿನ ರಸಲೇಪದಚೆಲುವಿಗೆ ನೆಲಮುಗಿಲಿನ ಸೌಂದರ್ಯಸಿರಿ
ಹಸಿರು ತಪೋವನ ಧೂಮಸ್ತಂಭವ ದಿಟ್ಟಿಸಿ ನೋಡಿತು ನೀಲಗಿರಿ
ಗಾಳಿಯು ವಾನಪ್ರಸ್ಥಕೆ ತೆರಳಿತು ಕಾವಣ ಕಟ್ಟಿತು ಪರ್ಣಕುಟಿ
ಜಡೆಗಟ್ಟಿದ ಹೆಮ್ಮರಗಳು ಕುಳಿತವು ಕೊನರಿದ ಬಳ್ಳಿಯ ಬದ್ಧಕಟಿ
ಹಸಿರಿನ ಸುಂದರ ವನಗಿರಿ ಕಂದರ ಮಧುರನಿನಾದದಿ ಮೊಳಗಿದವು
ರೆಕ್ಕೆಯ ಋಷಿಗಳ ರಸಗಾಯತ್ರಿಗೆ ಕಂಪಿನ ಬಟ್ಟಲು ಬೆಳಗಿದವು
ಕಡಲಿನ ಪಾರವ ಹಾರೈಸುತ ನದಿ ರಮ್ಯ ನಿರಂತರ ನಡೆದಿತ್ತು
ಭಗವಂತನ ನಗೆ ಗರಿಗೆದರಲು ನೆಲ ಮುಗಿಲಿನನಂತತೆ ಪಡೆದಿತ್ತು
ನರನಾರಾಯಣ ಯಮಳರು ಕುಳಿತರು ಅಶ್ವತ್ಥದ ಮರದಡಿಯಲ್ಲಿ
ನರಕುಲ ನಾರಾಯಣಕುಲವಾಗಲಿ ಹಿರಣ್ಯಗರ್ಭದ ಗುಡಿಯಲ್ಲಿ

೨

ತೊಂಗಲು ಚಾಮರ ಬೀಸಿದ ಹಕ್ಕಿಗೆ ನೀಲದಿಗಂತವು ಕರೆದಿತ್ತು
ಪೀತಪತಂಗದ ಪಾಟಿಲ ರೆಕ್ಕೆಗೆ ಮೊಗ್ಗೆಯು ಬಾಯನೆ ತೆರೆದಿತ್ತು
ಪರ್ವತಕನ್ನೆಯ ನೀರಿನ ಹೊಳಲಿಗೆ ನೊರೆ ನಗೆಮಲ್ಲಿಗೆ ಮುಡಿಸಿತ್ತು
ಚೆಲುವಿನ ತೇಜಃಪುಂಜವಿಲಾಸಕೆ ಕಾನನ ಮುರಲಿಯ ನುಡಿಸಿತ್ತು
ಹೂವಿನ ಗುರುಕುಲಪೀಠದಿ ಕುಳಿತವು ಮಧುವನ ವಿಹರಿಸಿ ಮರಿದುಂಬಿ
ಮಾಮರದಳಿರಿನ ಕೋಕಿಲ ಹಾಡಿತು ಪಂಚಮದಿಂಚರ ಮಧು ತುಂಬಿ
ಮನದನುರಾಗದ ಹೃದಯಪರಾಗದ ನೀಲಿಮವರ್ಣದ ಕ್ರೌಂಚವಧು
ಕಾದಲನಿಗೆ ಕನವರಿಸಿತು ಬನದಲಿ ಮನದಲಿ ಕುಡಿಯುತ ಸ್ವಪ್ನಮಧು
ನರನಾರಾಯಣ ಯಮಳರು ಕುಳಿತರು ಅಶ್ವತ್ಥದ ಮರದಡಿಯಲ್ಲಿ
ನರಕುಲ ನಾರಾಯಣಕುಲವಾಗಲಿ ಹಿರಣ್ಯಗರ್ಭದ ಗುಡಿಯಲ್ಲಿ

೩

ಮುಗಿಲ ದಿಗಂತದ ಧ್ಯಾನಸಮಾಗೆ ತೇಲುವ ಮೋಡಗಳೋಡಿದವು
ಮನುಕುಲ ಮಾನಸಹಂಸಗಳೆಲ್ಲ ಚಿರಂತನ ಸರಸಿಯ ನೋಡಿದವು
ತಾಮಸರೆಲ್ಲರು ತಾಪಸರಾದರು ಅಂಧಂತಮನ ನಿರಾಕರಿಸಿ
ಭಗವಂತನ ಕರುಣೆಯ ಮಂದಾಕಿನಿಯಿಳಿದಳು ಜೀವರನುದ್ಧರಿಸಿ
ತಾಪಸ ಯಮಳರ ತಪಸಂಜೀವಿನಿ ಮರ್ತ್ಯರಿಗಮೃತವುಣಿಸಿತ್ತು
ಸಗುಣಬ್ರಹ್ಮಸಮಾಯ ಲೀಲೆಗೆ ಜ್ಯೋತಿರ್ಮಯ ತಿರೆ ಬೆಳಗಿತ್ತು
ಮೃತ್ಯುಂಜಯ ಕುಲ ವಿಜಯವಿಲಾಸವು ಇಂದ್ರನ ಲೋಕಕೆ ಮೊಳಗಿತ್ತು
ನರನಾರಾಯಣ ಯಮಳರು ಕುಳಿತರು ಅಶ್ವತ್ಥದ ಮರದಡಿಯಲ್ಲಿ
ನರಕುಲ ನಾರಾಯಣಕುಲವಾಗಲಿ ಹಿರಣ್ಯಗರ್ಭದ ಗುಡಿಯಲ್ಲಿ

೪

ತಾಪಸ ಯಮಳರ ತೇಜಃಸ್ತೂಪವ ನೋಡಿದ ಮುಗಿಲಿಗೆ ದಿಗಿಲಾಯ್ತು
ಅಮರಾವತಿಯಲಿ ದೇವೇಂದ್ರನ ಮನ ಮತ್ಸರ ಮಾಯೆಯ ಭುಗಿಲಾಯ್ತು
ಮನ್ಮಥದೇವನ ಕರೆಸುತ ನುಡಿದನು ಸುರಪತಿ ಮಿತ್ರಾಲಾಪದಲಿ
''ತಾಪಸ ಯಮಳರ ತಪವನು ಭಂಗಿಸು ಸುರಸುಂದರಿಯರ ರೂಪದಲಿ''
ನವಯೌವನದಪ್ಸರಸುಂದರಿಯರ ಸಮೂಹ ಬಂದಿತು ಮುಗಿಲಿಳಿದು
ನೂಪುರ ಪೈಜಣ ಘಿಲುಕಲು ಕಲಕಲ ತುಳುಕಿತು ನಗೆಯಲಿ ಬನ ಸುಳಿದು
ಮದನಕುಮಾರನ ದಿಬ್ಬಣ ಬಂದಿತು ತಾಪಸ ಯಮಳರ ಬನದೊಳಗೆ
ಕಾಮನಬಿಲ್ಲಿಗೆ ಹೂಡಿದ ಮಲ್ಲಿಗೆ ವೀಣೆ ಮೃದಂಗ ಸ್ವರ ಮೊಳಗೆ
ನರನಾರಾಯಣ ಯಮಳರು ಕುಳಿತರು ಅಶ್ವತ್ಥದ ಮರದಡಿಯಲ್ಲಿ
ನರಕುಲ ನಾರಾಯಣಕುಲವಾಗಲಿ ಹಿರಣ್ಯಗರ್ಭದ ಗುಡಿಯಲ್ಲಿ

೫

ಹೆಜ್ಜೆಯ ಮಂಜುಳ ಗೆಜ್ಜೆಯ ನಿಸ್ವರ ಕಲ ಮಧುರ ಸ್ವರ ತುಳುಕಿಸಿತು
ಲಾಸ್ಯವಿಲಾಸಕೆ ಪಲ್ಲವ ಹಾಸ್ಯಕೆ ಅಪ್ಸರಲತೆಯರಬಳುಕಿಸಿತು
ಕಾಮತರಂಗಿಣಿ ನವಮದರಂಗಿಣಿ ನೃತ್ಯಾಪ್ಸರೆಯರ ನೋಟದಲಿ
ಭೋಗಸಮಾಧಿಯ ತಡಸಲು ಧುಮುಕಿತು ತಾಪಸ ಯಮಳ ತೋಟದಲಿ

ಹೂಡಿದ ಹೂವಿನ ಬಾಣವ ಹೊಡೆದನು ಪಂಚಶರಾಸನ ಚಾಪದಲಿ
ನಿತ್ಯನಿಲಿಂಪರು ಕಣ್ದೆರೆದರು ನಸುನಕ್ಕರು ಮನುದನುತಾಪದಲಿ
ನೃತ್ಯಾಪ್ಸರೆಯರ ನೋಡುತ ನುಡಿದರು ಮದನಕುಮಾರನ ಕನಿಕರಿಸಿ
''ನಂದನವನದೀ ಚೆಲುವಿನ ಮೊಗ್ಗೆಗಳೇತಕೆ ಬಂದಿಹವನುಕರಿಸಿ''
ನರನಾರಾಯಣ ಯಮಳರು ಕುಳಿತರು ಅಶ್ವತ್ಥದ ಮರದಡಿಯಲ್ಲಿ
ನರಕುಲ ನಾರಾಯಣಕುಲವಾಗಲಿ ಹಿರಣ್ಯಗರ್ಭದ ಗುಡಿಯಲ್ಲಿ

೬

''ಅಮರಾವತಿಯೊಳಪ್ಸರ ಚೆಲುವಿನ ಮೊಗ್ಗೆಗಳಿನ್ನೂ ಅರಳಿಲ್ಲ
ತಪಸೌಂದರ್ಯದ ಹೂವಿನ ರಾಯಸ ನಂದನವನದೆಡೆ ತೆರಳಿಲ್ಲ''
ನರ ನಸುನಕ್ಕನು ನಾರಾಯಣ ತೊಡೆ ಹೂವನು ಮಂತ್ರಿಸಿ ಹಾರಿಸಲು
ನವಯೌವನ ರತ್ನಪ್ರಭೆ ಊರ್ವಶಿ ರೂಪವಿಲಾಸದ ತೋರಿಸಲು
ತೇಜಃಪುಂಜದ ಕೆಂದಾವರೆ ಮುಖಮಂಡಲ ಗೋಲಕ ಹರಿಣಾಕ್ಷಿ
ಕುಂತಲವೇಣಿಯ ವೀಣಾವಾಣಿಯ ಕುಂಡಲಲೋಕ ನಳಿನಾಕ್ಷಿ
ನೀಲಿಯ ವಸನದ ಹಸಿರಿನ ಮೇಲುದ ಊರ್ವಶಿ ನಿಂತಳು ತಲೆವಾಗಿ
ಕಾಮನು ಸೋತನು ಕಾಮಾಕ್ಷಿಗೆ ಮನಸೋತನು ಸುರಪತಿ ತಲೆದೂಗಿ
ತಪಸೌಂದರ್ಯದ ಕನ್ನೆಯ ಕೊಟ್ಟರು ದೇವೇಂದ್ರನಿಗುಡುಗೊರೆಯಾಗಿ
ಕಾಮಾಕ್ಷಿಯ ಕಡೆಗಣ್ಣಿನ ಬೆಂಕಿಗೆ ಹಣೆಗಟ್ಟಿನ ಕಿಡಿ ಬೇಡಿದರು
ಮರ್ತ್ಯಸೃಷ್ಟಿಯ ತಪಸೌಂದರ್ಯದ ದೇವಸೃಷ್ಟಿಗೆ ನೀಡಿದರು

## ೬. ಮಿಸುನಿಜಿಂಕೆ

೧

ಹಸಿರುಮಲೆತ ಮಲೆಗಂಧಮಾದನಿಯ ಬಯಲ ತಪ್ಪಲೋಡಿ
ಮಿಸುನಿಜಿಂಕೆ ಬಲು ಮುಂದೆ ಮುಂದೆ ನೆಗೆದಿತ್ತು ಹಿಂದೆ ನೋಡಿ
ತೊಳಗುತಿತ್ತು ಥಳಥಳಿಸುತಿತ್ತು ಮೈಬಣ್ಣ ಕಣ್ಣು ಕುಕ್ಕಿ
ನಯನವಲಯಗಳ ನಡುವೆ ಹಸಿರು ಹೊಳೆದಿದ್ದವೆರಡು ಚಿಕ್ಕಿ
ನೀಲಶೃಂಗ ಸಿಂಗಾರ ಮೈಯ ಬಂಗಾರ ಮಿಂಚನಿಟ್ಟು
ಒಪ್ಪುತಿರಲು ನೆಗೆದಿತ್ತು ಮುಗಿಲ ನಕ್ಷತ್ರಮಾಲೆ ತೊಟ್ಟು
ಕಾಲ ಕೆಳಗೆ ನೆಲ ಓಡುತಿತ್ತು ನಭ ನೋಡುತಿತ್ತು ಮೇಲೆ
ಬಯಲ ನುಂಗಿ ಬೆಳಗಿತ್ತು ಹೇಮಹರಿಣದ ಸುವರ್ಣಲೀಲೆ
ಬಯಲು ದಿನ್ನೆ ಗಿರಿದರಿಯ ನೆಗೆದು ನಡೆದಿಂದ್ರಮಂಡಲಕ್ಕೆ
ಮಿಸುನಿಜಿಂಕೆ ನೀರಡಸಿ ಬಂದಿತಮರಾವತಿಯ ಪುರಕ್ಕೆ

೨

ಚೆಲುವು ಚಿಗಿತು ಬಯಲಾಗಿ ಬಯಲು ಬನವಾಗಿ ಮೆರೆಯುತಿತ್ತು
ನವನಮೇರು ಮಂದಾರವೃಕ್ಷಗಳು ನಿಂತು ಸುತ್ತುಮುತ್ತು
ಚೆಲುವು ಹಸಿರು ಪಲ್ಲವಿಸಿದಂತೆ ಮರಮರಕೆ ಬಳ್ಳಿ ಹಬ್ಬಿ
ಅಲ್ಲಿ ಹೂತು ಬನಸಿರಿಗೆ ಸೋತು ಬಂದಿತ್ತು ಗಾಳಿ ತಬ್ಬಿ
ಸಾಲುಸಾಲು ನಿಂತಂಥ ಗಿಡದ ಬುಡದಲ್ಲಿ ಬಳ್ಳಿವರಿದು
ಮರದ ಕಂಪು ಕನವರಿಸಿ ತಂಪು ತೊರೆ ನಡೆದವೆಷ್ಟೊ ಹರಿದು
ಬಣ್ಣ ಬಣ್ಣಗಳ ಹಕ್ಕಿ ಹೂವು ಮರಿದುಂಬಿ ಚಿಟ್ಟೆ ಬಂದು
ಬನವ ಬಳಿಸಿದವು ರೆಕ್ಕೆವಡೆದ ಸೌಂದರ್ಯರೂಪವೆಂದು
ನೆಳಲ ತಂಪು ಹೂಗಂಪು ಹಕ್ಕಿಯುಲಿಯಿಂಪು ತುಂಬಿತೀಚೆ
ಮಿಸುನಿಜಿಂಕೆ ಕುಡಿದಿತ್ತು ನೀರು ಸುರನದಿಯ ದಂಡೆಯಾಚೆ

೩

ಇಂಥ ದಿವ್ಯನಂದನವನಕ್ಕೆ ಬಂದಿದ್ದಳೆಂದು ಸಾರಿ
ಸಖಿಯರೊಡನೆ ದೇವೇಂದ್ರಕನ್ನಿಕಾ ಜಯಂತೀಕುಮಾರಿ
ಚೆಲುವು ದುಂಡುಮುಖ ಹೊಳೆವ ಚಿಗರೆಗಣ್ ನೀಳನಾಗವೇಣಿ
ನೀಲಕಮಲಕರ್ಣಾವತಂಸಗಳನಿಟ್ಟು ಪದ್ಮಪಾಣಿ
ಉಟ್ಟ ಹೊಸತು ಕೇಸರದುಕೂಲ ಮೇಖಲೆಯ ಟೊಂಕಕಿಟ್ಟು
ನವಿಲ ಹೆಜ್ಜೆ ನಡೆದಿರೆ ಜಯಂತಿ ನೂಪುರದ ನಾದಗೊಟ್ಟು
ನೀರು ಕುಡಿಯುತಿರೆ ಮಿಸುನಿಜಿಂಕೆಯನು ದೂರದಿಂದೆ ಕಂಡು
ನಲಿದು ಬಯಸಿ ಸಖಿಯರಿಗೆ ಹೇಳಿದಳು ತುಂಬ ಬೆರಗುಗೊಂಡು
''ಅಲ್ಲಿ ಕಾಣೆರೆ ಮಿಸುನಿಜಿಂಕೆ ಕಂಡವರ ಪುಣ್ಯವಿಂದು
ನನ್ನ ಜೀವ ಹಾರೈಸುತಿಹುದೆ ಸಖಿ ಅದೇ ಜಿಂಕೆಗೆಂದು''

೪

ಮನೆಗೆ ಮರಳಿ ಬಂದಳು ಜಯಂತಿ ಗೆಳೆಯರ ಕೂಡಿಕೊಂಡು
ಅಮರಸಭೆಯ ಮಂಟಪದಿ ಕುಳಿತ ದೇವೇಂದ್ರನನ್ನು ಕಂಡು
ನುಡಿದಳಾತನಿಗೆ ''ತಾತ ಕೇಳು ಕಂಡವರ ಪುಣ್ಯವಿಂದು
ನನ್ನ ಜೀವ ಹಾರೈಸುತಿರುವುದಾ ಮಿಸುನಿಜಿಂಕೆಗೆಂದು''
ನುಡಿಯ ಕೇಳಿ ದೇವೇಂದ್ರನಿಳಿದ ಹರಿಪೀಠದಿಂದ ಕೆಳಗೆ
ಉತ್ತರೀಯ ಸಾವರಿಸಿಕೊಂಡು ಬಂದಿದ್ದ ಮಗಳ ಬಳಿಗೆ
''ಯಾವ ಮಿಸುನಿಯದು? ಯಾವ ಜಿಂಕೆ ಬಯಸಿರುವೆ ಮುದ್ದು ಕುವರಿ?''
ಎಂದು ತಂದೆ ಕೇಳಿರಲು ಮಗಳ ಮುಂಗುರುಳ ತಿದ್ದಿ ಸವರಿ
ಮಗಳು ನುಡಿಯೆ ವಿಸ್ತರಿಸಿ ಕೇಳಿ ಸಂತೈಸಿ ನುಡಿದನಂದು
''ಹೋಗಿ ಕಳಿಸು ನಿಮ್ಮಣ್ಣನನ್ನು ನಾ ತಿರಿಸಿ ಕೊಡುವೆ''ನೆಂದು

೫

ಬೆಟ್ಟದಂಥ ಬಿಳಿಗುದುರೆಯೇರಿ ನಡೆದಿದ್ದ ಇಂದ್ರಪುತ್ರ
ಥಡಿಯ ಮೇಲೆ ನಿಂತಿತ್ತು ತಂಪುನೆಳಲಿತ್ತು ನೀಲಛತ್ರ
ಹೆಗಲಿಗಿರಿಸಿ ಬತ್ತಳಿಕೆಬಿಲ್ಲು ಕಡಿವಾಣ ಕೈಯ ಜಗ್ಗಿ

ಕುದುರೆಯೇರಿ ಬಂದನು ಜಯಂತ ನಂದನವನಕ್ಕೆ ನುಗ್ಗಿ
ನೀರು ಕುಡಿದು ನಿಂತಿದ್ದ ಮಿಸುನಿಜಿಂಕೆಯನು ದೂರ ಕಂಡು
ತಂದ ಮೂರು ಬಲೆಸೂತ್ರಗಳನು ಕೈಬೆರಳಿಗಿಟ್ಟುಕೊಂಡು
ವಾಯುವೇಗದಲಿ ಬರಲು ಜಿಂಕೆ ನೆಗೆದಿತ್ತು ಮುಂದಕೋಡಿ
ಬಯಲು ದಿನ್ನೆ ಗಿರಿದರಿಯ ದಾಟಿ ಜಿಗಿದಿತ್ತು ಹಿಂದೆ ನೋಡಿ
ಯುಗದ ಹೆಜ್ಜೆಗಳನಿಟ್ಟು ಜಿಂಕೆ ನೆಗೆದಿತ್ತು ನಡೆದು ಮುಂದೆ
ಇಂದ್ರಪುತ್ರ ಬೆನ್ನಟ್ಟಬಂದ ಬಲೆ ಪಿಡಿದು ಹಿಂದಿನಿಂದೆ

೬

ಬಕುಲವೃಕ್ಷದಡಿಯಲ್ಲಿ ನಿಂತಿತೊ ಮಿಸುನಿಜಿಂಕೆ ಬಂದು
ಇಂದ್ರಪುತ್ರ ಬೆನ್ನಟ್ಟಿ ಬಂದನೀ ಜಿಂಕೆ ಸಿಕ್ಕಿತೆಂದು
ಅರಸಿಬಂದ ಗುರಿ ಸಿಕ್ಕಿತೆಂದು ಮನದಲ್ಲಿ ಹರುಷಪಟ್ಟು
ಮೊದಲು ಮಿಸುನಿಬಲೆಸೂತ್ರಗಳನು ಬಲಗೈಯ ಬೆರಳಿಗಿಟ್ಟು
ಕಡಲ ಬೆನ್ನ ಚಪ್ಪರಿಸಿ ನೀರನಪ್ಪಳಿಸಿ ಬಂದ ಗಾಳಿ
ಜಲಗಭೀರ ಝುಂಝೂಸಮೀರ ಹಿಡಿದೂದಿದಂತೆ ಕಾಳಿ
ಭಾದ್ರಪದದ ಕೋಲ್ಮಿಂಚು ಗುಡುಗಿ ಕುಣಿದಂತೆ ಬಾನ ಸೂಸಿ
ಇಂದ್ರಪುತ್ರ ತಂದಿದ್ದ ಬಲೆಯ ಹೊಯ್ದಿದ್ದ ಗುರಿಗೆ ಬೀಸಿ
ಕಾಲ ಕೆಳಗೆ ನೆಲ ಓಡುತಿತ್ತು ನಭ ನೋಡುತ್ತಿತ್ತು ಮೇಲೆ
ಹೊಯ್ದ ಮಿಸುನಿಬಲೆ ಮಿಸುನಿಜಿಂಕೆಗಾಗಿತ್ತು ಕೊರಳ ಮಾಲೆ

೭

ಪಾರಿಜಾತದಡಿಯಲ್ಲಿ ನಿಂತಿತೊ ಮಿಸುನಿಜಿಂಕೆ ಬಂದು
ಇಂದ್ರಪುತ್ರ ಬೆನ್ನಟ್ಟಿಬಂದನೀ ಜಿಂಕೆ ಸಿಕ್ಕಿತೆಂದು
ಅರಸಿಬಂದ ಗುರಿ ಸಿಕ್ಕಿತೆಂದು ಮನದಲ್ಲಿ ಹರುಷಪಟ್ಟು
ತಂದ ನಾದಬಲೆಸೂತ್ರಗಳನು ಬಲಗೈಯ ಬೆರಳಿಗಿಟ್ಟು
ಗೋಲಗೋಲಗಳ ತಾಲಕಿಳಿದುಬಂದಂತೆ ನಾದಗಂಗೆ
ಕೊಳಲಗಾನ ವೀಣಾವಿತಾನಕಿಳಿದಂತೆ ಸ್ವರತರಂಗೆ
ಚೈತ್ರನಭದ ನಕ್ಷತ್ರಕನ್ನೆಯರ ಗಾನದಂತೆ ಸೂಸಿ

ಇಂದ್ರಪುತ್ರ ತಂದಿದ್ದ ಬಲೆಯ ಹೊಯ್ದಿದ್ದ ಗುರಿಗೆ ಬೀಸಿ
ಕಾಲ ಕೆಳಗೆ ನೆಲ ಓಡುತಿತ್ತು ನಭ ನೋಡುತ್ತಿತ್ತು ಮೇಲೆ
ಹೊಯ್ದ ನಾದಬಲೆ ಮಿಸುನಿಜಿಂಕೆಗಾಗಿತ್ತು ಶೃಂಗಮಾಲೆ

೮

ಕದಂಬವೃಕ್ಷದಡಿಯಲ್ಲಿ ನಿಂತಿತೊ ಮಿಸುನಿಜಿಂಕೆ ಬಂದು
ಇಂದ್ರಪುತ್ರ ಬೆನ್ನಟ್ಟಿಬಂದನೀ ಜಿಂಕಿ ಸಿಕ್ಕಿತೆಂದು
ಅರಸಿಬಂದ ಗುರಿ ಸಿಕ್ಕಿತೆಂದು ಮನದಲ್ಲಿ ಹರುಷಪಟ್ಟು
ತಂದ ಶಬ್ದಬಲೆಸೂತ್ರಗಳನು ಬಲಗೈಯ ಬೆರಳಿಗಿಟ್ಟು
ನಾಲ್ಕು ವೇದ ಹದಿನೆಂಟು ಗ್ರಂಥಗಳ ಸೂತ್ರಮಾಲೆ ಬಳುಕಿ
ಯೋಗ ತರ್ಕ ಮೀಮಾಂಸೆ ಮಾತುಗಡಲನ್ನೆ ತುಂಬಿ ತುಳುಕಿ
ಮಾತಿನರ್ಥ ಮಾತಾಡಿದಂತೆ ಮರೆ ಮಾತಿನಾಚೆ ಸೂಸಿ
ಇಂದ್ರಪುತ್ರ ತಂದಿದ್ದ ಬಲೆಯ ಹೊಯ್ದಿದ್ದ ಗುರಿಗೆ ಬೀಸಿ
ಕಾಲ ಕೆಳಗೆ ನೆಲ ಓಡುತಿತ್ತು ನಭ ನೋಡುತಿತ್ತು ಮೇಲೆ
ಹೊಯ್ದ ಶಬ್ದಬಲೆ ಮಿಸುನಿಜಿಂಕೆಗಾಗಿತ್ತು ಚಿತ್ತಮಾಲೆ

೯

ಯುಗದ ಹೆಜ್ಜೆಗಳನಿಟ್ಟು ಜಿಂಕೆ ನಡೆದಿತ್ತು ನೆಗೆದು ಮುಂದೆ
ಇಂದ್ರಪುತ್ರ ಬೆನ್ನಟ್ಟಿ ಹಗುರು ಬರುತಿದ್ದ ಹಿಂದಿನಿಂದೆ
ಉಸಿರು ಬಂತು ನಿಟ್ಟುಸಿರನೂದಿ ಒಳದುಗುಡದೇಕತಾರಿ
ಬಂದ ಸೋಲಿಗತಿನೊಂದ ಚಿತ್ತ ಮಿಡಿದಿತ್ತು ಕಣ್ಣ ಸೇರಿ
ಅತಿನಿರಾಸೆ ಹರಿದಾಡಿ ಬಂತು ಮೈಮೂಡಿ ಬಂತು ನುಗ್ಗಿ
ಇಂದ್ರಪುತ್ರ ಬೆನ್ನಟ್ಟಿ ಹಗುರು ಬರುತಿದ್ದ ಚಿತ್ತ ಕುಗ್ಗಿ
ಕಣ್ಣ ಗುರಿಯ ಬೆನ್ನಟ್ಟಿ ಚಿತ್ತ ನಿರ್ವಿಣ್ಣವಾಗಿ ಸೋತು
ಸೋಲಿನೊಡಲನುಡಿಯಾಗಿ ಗೆಲುವು ಗುಡುಗಿತ್ತು ಮಿಂಚುಮಾತು
ಇಂದ್ರಪುತ್ರ ಬೆನ್ನಟ್ಟಿ ಹಗುರು ನಡೆದಿದ್ದ ಚಿತ್ತ ನೊಂದು
ಕೈಗೆ ಸಿಕ್ಕ ಗುರಿ ಕೈಯ ಬಲೆಗೆ ಸಿಗಲಿಲ್ಲವಲ್ಲವೆಂದು

೧೦

ಬೆಟ್ಟದಂಥ ಬಿಳಿಗುದುರೆಯೇರಿ ನಡೆದಿದ್ದನಿಂದ್ರಪುತ್ರ
ಥಡಿಯ ಮೇಲೆ ನಿಂತಿತ್ತು ತಂಪು ನೆಳಲಿತ್ತು ನೀಲಛತ್ರ
ಮನದಿ ನೊಂದು ನಡೆದಿರಲು ನೋಡಿದನು ಬಯಲ ಮಧ್ಯದಲ್ಲಿ
ಹಸಿರು ತಳಿತಮರ ಸುತ್ತುಮುತ್ತು ತಣ್ಣೆಳಲ ಹೂವ ಚೆಲ್ಲಿ
ಅಲ್ಲಿ ಮರದ ನೆರಳಲ್ಲಿ ಕುಳಿತನಾ ಮುನಿಕುಮಾರ ಕುತ್ಸ
ತಪೋಮಿಥುನ ಆರ್ಜುನಿಸ್ವಿತ್ರೆ ದಂಪತಿಯು ಮುದ್ದು ವತ್ಸ
ಬ್ರಹ್ಮತೇಜ ಹಿಡಿದಂತೆ ತನ್ನ ಮುಂಗೈಯೊಳಿಂದ್ರದೀಪ
ಸೂರ್ಯಬಿಂಬ ಶೈಶವವ ತಳೆದು ಕುಳಿತಂತೆ ಕುತ್ಸರೂಪ
ನೋಡಿ ಕುದುರೆಯಿಳಿದಿಂದ್ರಪುತ್ರ ಬಂದಿದ್ದ ಕಾಲಿಗೆರಗಿ
''ಶರಣು ಎಂದೆ ಮುನಿಕುವರ ಕುತ್ಸ''ನೆಂದಿದ್ದ ಚಿತ್ತ ಮರುಗಿ

೧೧

ಮಣಿದ ಮುಕುಟ ತೊಳಗಿತ್ತು ಪಾದ ತೊಳೆದಿತ್ತು ಬೆಳಕಿನಿಂದ
ಇಂದ್ರಪುತ್ರ ನಮಿಸಿರಲು ಗಲ್ಲ ಪಿಡಿದೆತ್ತಿ ಕುತ್ಸನಂದ
''ಏನು ಬಂದಿರೈ ನಿಮ್ಮ ಚಿತ್ತ ದುಮ್ಮಾನ ತುಂಬಿತೇಕೆ?
ಯಾವ ಕಡಲ ಬಿರುಗಾಳಿ ಸುಯ್ಯಲಾಡಿಹುದು ಚಿತ್ತನೌಕೆ?''
ಇಂದ್ರಪುತ್ರ ನುಡಿದಿದ್ದ ಮಣಿದು ''ಭಗವಾನಕುಮಾರ ಕುತ್ಸ
ತಪೋಮಿಥುನ ಆರ್ಜುನಿಸ್ವಿತ್ರೆದಂಪತಿಯ ಮುದ್ದುವತ್ಸ
ಅರಸುಗುರಿಯನೊಂದರಸಿಬಂದ ಚಿತ್ತಕ್ಕೆ ಸೋಲು ಬಂತು
ಸೋಲು ತಂದ ಬಿರುಗಾಳಿಗುಯ್ಯಲಾಡಿಹುದು ಚಿತ್ತವಿಂತು''
ನುಡಿಯ ಕೇಳಿ ನುಡಿದಿದ್ದನಾಗ ಮುನಿಕುವರ ಕುತ್ಸನಂದು

೧೨

''ಸೋಲುಗೆಲುವುಗಳ ಮೀರಿದರಸುಗುರಿ ನಿಮ್ಮದಾವುದೆಂದು?''
ಇಂದ್ರಪುತ್ರ ನುಡಿದಿದ್ದ ''ಕೇಳಿ ಭಗವಾನಕುಮಾರ ಗುರುವೆ
ನುಡಿವೆನರಸಿಬಂದರಸುಗುರಿಯ ಕಾರುಣ್ಯಕಲ್ಪತರುವೆ
ಒಂದು ದಿವಸ ಸೋದರಿ ಜಯಂತಿ ನಂದನವನಕ್ಕೆ ಸಾರಿ

ಸಖಿಯರೊಡನೆ ನಲಿದಾಡುತಿರಲು ಮಂದಾರವನವಿಹಾರಿ
ಮಿಸುನಿಜಿಂಕೆಯೊಂದನ್ನು ಕಂಡು ಕಂಡವರ ಪುಣ್ಯವೆಂದು
ಮೊರೆದಳಿದನು ಹಾರೈಸಿ ತಾತನೆಡೆ ಮನೆಗೆ ಮರಳಿ ಬಂದು
ತಾತನಪ್ಪಣೆಯ ಪಡೆದು ಬಂದು ಬೆನ್ನಟ್ಟಿ ಜಿಂಕೆಗರಸಿ
ದೇವಲೋಕ ಕೊಟ್ಟಿತ್ತು ಮಿಸುನಿಬಲೆಯರಸುಗುರಿಯ ಹರಸಿ
ನಾದಬಲೆಯ ಗಂಧರ್ವಲೋಕ ಕೊಟ್ಟಿತ್ತು ಬ್ರಹ್ಮಲೋಕ
ಶಬ್ದಬಲೆಯ ಕೊಟ್ಟಿತ್ತು ಮೂರನೂ ಮೀರಿಬಂತು ಶೋಕ

೧೩

ಕಾಲ ಕೆಳಗೆ ನೆಲ ಓಡುತಿತ್ತು ನಭ ನೋಡುತಿತ್ತು ಮೇಲೆ
ಹೊಯ್ದ ಮಿಸುನಿಬಲೆ ಮಿಸುನಿಜಿಂಕೆಗಾಗಿತ್ತು ಕೊರಳಮಾಲೆ
ಹೊಯ್ದ ನಾದಬಲೆ ಮಿಸುನಿಜಿಂಕೆಗಾಗಿತ್ತು ಶೃಂಗಮಾಲೆ
ಹೊಯ್ದ ಶಬ್ದಬಲೆ ಮಿಸುನಿಜಿಂಕೆಗಾಗಿತ್ತು ಚಿತ್ತಮಾಲೆ
ಮೂರು ಬಲೆಗಳನು ಮೀರಿಸಿತ್ತು ಹೌಹಾರಿಸಿತ್ತು ಸೋಲೆ
ಮೂರು ಜಾಲಗಳ ಮಾಲೆಯಾಗಿಸಿತ್ತಿಂದು ವಿಯ ಲೀಲೆ''
ಅರಸುಗುರಿಯನರಸಿರುವ ಚಿತ್ತದುಮ್ಮಾನ ಮೌನತಾಳಿ
ಇಂದ್ರಪುತ್ರ ನುಡಿದಂಥ ಮಾತ ಮುನಿಕುವರ ಕುತ್ಸ ಕೇಳಿ
ನುಡಿದ ''ಸೋಲುಗೆಲುವನ್ನು ಮೀರೆ ಗುರಿ ಬಳಸುತಿರಲಿ ಚಿತ್ತ''
ನುಡಿದ ಕುತ್ಸ ಬಳಿಗಿರುವ ಸಾರಬಲೆಯಿಂದ್ರಪುತ್ರಗಿತ್ತ

೧೪

ದೇವದಾರುಮರದಡಿಗೆ ನಿಂತಿತಾ ಮಿಸುನಿಜಿಂಕೆ ಬಂದು
ಇಂದ್ರಪುತ್ರ ಬೆನ್ನಟ್ಟಿಬಂದನೀ ಜಿಂಕೆ ಸಿಕ್ಕಿತೆಂದು
ಅರಸಿಬಂದ ಗುರಿ ಸಿಕ್ಕಿತೆಂದು ಮನದಲ್ಲಿ ಹರುಷಪಟ್ಟು
ತಂದ ಸಾರಬಲೆಸೂತ್ರಗಳನು ಬಲಗೈಯ ಬೆರಳಿಗಿಟ್ಟು
ಸಪ್ತ ಲೋಕಗಳ ಸುಪ್ತಚಿತ್ತ ಬೆಳಗಿ ಬಂದು
ಭೂಮಿವ್ಯೋಮಗಳ ಹೆಣೆಯುವಂತೆ ರವಿಕಿರಣವೊಂದೆ ಒಂದು
ಮುಗಿಲ ಕಣ್ಣು ತೆರೆದಂತೆ ತಿಮಿರ ಹರಿದಂತೆ ಬಾನ ಸೂಸಿ

ಇಂದ್ರಪುತ್ರ ತಂದಿದ್ದ ಬಲೆಯ ಹೊಯ್ದಿದ್ದ ಗುರಿಗೆ ಬೀಸಿ
ತಪದ ಸಾರ ಬಲೆಯಲ್ಲಿ ಸಿಕ್ಕಿತು ಮಿಸುನಿಜಿಂಕೆಯಂದು
ಮನದಲಂಪಿನೊಳಗಿಂದ್ರಪುತ್ರ ಮರಳಿದನು ಮನೆಗೆ ತಂದು

೧೫

ತಂದ ಜಿಂಕೆಯನು ನೋಡಿ ನಲಿದಳೋಲಾಡಿ ಹರುಷಪಟ್ಟು
ಹೊಳೆವ ಹೊಸತು ಬಂಗಾರ ಸರಪಳಿಯ ಕಟ್ಟಿ ಕೊರಳ ಕಟ್ಟು
ಚಂದ್ರವದನೆ ದೇವೇಂದ್ರಕನ್ನಿಕಾ ನೀಳನಾಗವೇಣಿ
ನೀಲಕಮಲಕರ್ಣಾವತಂಸಗಳನಿಟ್ಟು ಪದ್ಮಪಾಣಿ
ಚಾಚಿ ತನ್ನ ನಿಡಿದೋಳು ತೆಕ್ಕೆಯೊಳು ಜಿಂಕೆಗಪ್ಪಿಕೊಂಡು
ಮುದ್ದುಗರೆದು ತುಟಿಗಿಟ್ಟು ತುಟಿಯ ಕಣ್ಣಲ್ಲಿ ಕಣ್ಣ ಕಂಡು
ನಲಿದು ಕಣ್ಣ ಮುಚ್ಚಿರಲು ಜಿಂಕೆ ಕರಗಿತ್ತು ಮಾಯವಾಗಿ
ಅವಳಿಗೊಲಿದು ಕುಳಿತಿದ್ದನೆದುರಿಗಾಚಾರ್ಯ ಶುಕ್ರಯೋಗಿ
ಕಣ್ಣು ತೆರೆದು ಕೆಂಪೇರಿ ಬೆಚ್ಚಿ ನಾಚಿರೆ ಜಯಂತಿ ನಿಂದು
ಗಲ್ಲವಿಡಿದು ಬಳಿಗಪ್ಪಿ ನುಡಿದನಾಚಾರ್ಯನವಳಿಗಂದು
''ನನ್ನ ಜೀವ ಹಾರೈಸಿ ಬಂತೆ ಸಖಿ ಇದೇ ಜಿಂಕೆಗಾಗಿ''

## ೭. ಮಿಥಿಲೆ

ಎಂದಾದರೊಂದು ದಿನ ನಾನು ಮಿಥಿಲೆಗೆ ಹೋಗಿ
ಬೀದಿ ಬೀದಿಯನಲೆದು ನೋಡಬೇಕು
ಅಲ್ಲಿ ಎಲ್ಲಾದರೂ ಮರದ ನೆರಳಿಗೆ ಕುಳಿತು
ರಾಮಭದ್ರನ ಮಹಿಮೆ ಹಾಡಬೇಕು ೧

ಅಲ್ಲಿಹವು ಎತ್ತರದ ಮನೆಗಳು ಮಂದಿರವು
ಅಲ್ಲಿ ಬೇಕಾದಷ್ಟು ತುಳಸಿ ಹೂವು
ಹೆಜ್ಜೆಹೆಜ್ಜೆಗೆ ಅಲ್ಲಿ ಸಂಪಿಗೆಯ ಮರಗಳಿವೆ
ಗಿಳಿಗಳಿವೆ. ಇಲ್ಲ ಪಂಜರದ ನೋವು ೨

ಅಲ್ಲಿ ಪುಷ್ಕರಿಣಿಗಳ ತುಂಬ ತಾವರೆಯಿಹವು
ಅಲ್ಲಿ ಬೀಸುವ ಗಾಳಿ ಚೈತ್ರಗಂಧ
ಅಲ್ಲಿ ಹಾರುವ ಹಂಸ, ಮೈಥಿಲೆಯ ಕನಸಿನೊಲು
ಬೆಡಗಿನಲಿ, ಗರಿಯೊಡೆದ ಹಿಗ್ಗಿನಿಂದ ೩

ಅಲ್ಲಿ ವಿಶ್ವಾಮಿತ್ರ ಕುಳಿತಂಥ ಕಲ್ಲು ಇದೆ
ರಾಮಭದ್ರನು ನಿಂತ ಮರದ ನೆರಳು
ಇಂದಿಗೂ ನೆನೆಸುತಿದೆ ಮಣ್ಣು ಕಣಕಣ ಕೂಡ
ಶಿವನ ಬಿಲ್ಲಿನ ಹಗ್ಗವೆಳೆದ ಬೆರಳು ೪

ಅಲ್ಲಿ ಮಣ್ಣೇ ಹಾಗೆ ಎಲ್ಲೆತ್ತಿಕೊಂಡರೂ
ರಾಮಭದ್ರನ ಕರುಣೆ ಸ್ಪಂದಿಸುವುದು
ಎಲ್ಲಿ ಹೊಲ ಉತ್ತರೂ ದೊರೆಯುವುದು ಹೆಣ್ಣು ಮಗು
ಜನಕರಾಜನ ಭಾಗ್ಯನಿಯ ತೆರೆದು ೫

ಬಿಲ್ಲನೆತ್ತುವ ದಿವಸ ದೇಶವೇ ನೆರೆದಿತ್ತು
ರಾಮಭದ್ರನು ತಮ್ಮನೊಡನೆ ಬರಲು
ದಾರಿಯುದ್ದಕೂ ಹೂವ ಸುರಿಸಿದವು ಹೆಮ್ಮರವು
ದಿವ್ಯಮಂಗಲವಾದ್ಯ ಮೊಳಗುತಿರಲು ೬

ಹೃದಯತಟ್ಟೆಗಳಲ್ಲಿ ಕಣ್ಣಿನಾರತಿ ಎತ್ತಿ
ಮಿಥಿಲೆ ಸಂಭ್ರಮದಿಂದ ಎದುರುಗೊಂಡು
ವೈದೇಹಿಯನು ಬಯಸಿ ಬಂದ ರಾಜರ ಆಸೆ
ಶಿವನ ಬಿಲ್ಲಿನ ಜೊತೆಗೆ ತುಂಡು ತುಂಡು ೭

ಸುರಿದ ಮಂತ್ರಾಕ್ಷತೆಯ ಸುತ್ತ ಜಯಜಯಕಾರ
ರಾಮಭದ್ರಗೆ ಕಮಲಮಾಲೆ ಹಾಕಿ
ಬದಿಗೆ ನಿಂತಳು ಸೀತೆ, ಜನಕರಾಜನ ಭಾಗ್ಯ
ಲೋಕಗಳ ಹರ್ಷವೇ ಹರಿಯಿತುಕ್ಕಿ ೮

ಮಗಳ ಮನೆತುಂಬಿಸುತ ಬೀಳ್ಕೊಡಲು ಜನಕನು
ಹನಿದುಂಬಿದುವು ಮಿಥಿಲೆಯ ಹೃದಯ – ಕಣ್ಣು
''ಮಗಳೆ ಮಂಗಲವಿರಲಿ'' ಎಂದು ಉಡುಗೊರೆಯಿತ್ತ
ಬಂಗಾರ ಕರಡಿಗೆ ತುಂಬ ಹೊಲದ ಮಣ್ಣು ೯

ಎಂದಾದರೊಂದು ದಿನ ನಾನು ಮಿಥಿಲೆಗೆ ಹೋಗಿ
ಬೀದಿಬೀದಿಯನಲೆದು ನೋಡಿ ಬರುವೆ
ರಾಮಭದ್ರನ ಕಥೆಯ ಹಾಡಿ ಕರಡಿಗೆಯಲ್ಲಿ
ಜನಕರಾಜನ ಹೊಲದ ಮಣ್ಣು ತರುವೆ ೧೦

# ೮. ಮಹಾಶ್ವೇತೆ

## ಭಾಗ ೧

ಹೇಮಕೂಟ ಗಂಧರ್ವರಾಜ್ಯದಲಿ ಹಂಸನೆಂಬ ರಾಜ,
ಗೌರಿಯೆಂಬ ಸಿರಿಗೌರಿಯಂಥ ಸತಿವೆರಸಿ ಚಂದ್ರತೇಜ.

ಕಮಲವನ ಶರತ್ಕಾಲ ಕಾಮರತಿ ಬಾಳಿದಂತೆ ಕೂಡಿ,
ಗಂಗೆ ಹಾಲುಗಡಲಪ್ಪಿದಂತೆ ಕಂಗೊಳಿಸಿತವರ ಜೋಡಿ ||೧||

ಮನದಿ ಹಲುಬಿ ಕನವರಿಸುತಿರಲು ಸಂತಾನವಿಲ್ಲವೆಂದು,
ದಿನವ ನೂಕುತಿರೆ ಮೊರೆಯ ಮೆಚ್ಚಿ ಹರಿಸಿತ್ತು ದೈವ ಬಂದು.

ಇಂಥ ದಿವ್ಯ ಗಂಧರ್ವ ಮಿಥುನದೆರಕಕ್ಕೆ ಮೊಗ್ಗೆಯೊಡೆದು,
ಮಹಾಶ್ವೇತೆ ಬೆಳಗಿಸಿದಳವರ ಕುಲದೀಪ ಚಿಂತೆ ತೊಡೆದು ||೨||

ಕುಲದ ಬಳ್ಳಿ ಕುಡಿಯೊಡೆದು ಬರಲು ಹರಿದಾಡಿ ಮನೆಯ ತುಂಬಿ,
ಮನದಲಂಪುಗಡಲುಕ್ಕಿಸಿತ್ತು ಹಸುಗೂಸು ಕಣ್ಣುಗೊಂಬಿ.

ತೊದಲು ವಾಣಿ ಕಲಮಧುರ ವೀಣೆಯಸ್ಪಷ್ಟ ತಾನವಾಗಿ,
ಸೊಗಸಿದಂಥ ಶೈಶವವು ಕಳೆದು ಬಂದಿತ್ತು ಹರಯ ಸಾಗಿ ||೩||

ಮರಿ ದುಂಬಿಯಲ್ಲಿ ಬಂದಂತೆ ನಾದದುನ್ಮಾದ ರೆಕ್ಕೆವಡೆದು,
ತೆರೆದಲರನರಿಸಿ ಬಂದಂತೆ ದುಂಬಿ ಮಕರಂದ ಸೂಕ್ತ ನುಡಿದು.

ಬಣ್ಣವಡೆದು ಬಂದಂತೆ ಬನಕೆ ಮಧುಮಾಸ ಕುಕಿಲನಿಟ್ಟು
ಹರಯ ಬಂತು ಗಂಧರ್ವಕನ್ನೆಗಪ್ಸರೆಯ ರೂಪ ಕೊಟ್ಟು ||೪||

ಧವಲ ದೀತಿಯ ಚೆಲುವು ಬಂತು ಯೌವನೆಯ ರೂಪ ತೊಟ್ಟು
ಚಂದ್ರವದನೆಯೊಪ್ಪಿದಳು ನೊಸಲ ಕಸ್ತೂರಿ ತಿಲಕವಿಟ್ಟು

ತೊಳಗುತಿತ್ತು ಕಟಿರತ್ನ ಮೇಖಲಾ ನೀಲ ರತ್ನಹಾರ,
ಮಹಾಶ್ವೇತೆ ಗಂಧರ್ವಕನ್ನೆಗೊಪ್ಪಿದವು ಕರ್ಣಪೂರ ||೫||

## ಭಾಗ ೨

ತಳಿತ ಮಾವಿನೆಳಹೂವ ಕಂಡು ಮನಕರಳುತಿತ್ತು ಕಾಮ,
ಕೊಳದ ಕಮಲವನದಲ್ಲಿ ಬಂದಿತೋಕುಳಿಯನಾಡಿ ಪ್ರೇಮ,

ತೀಡಿ ಬಂದ ತಂಬೆಲರು ದುಂಬಿ ಝೇಂಕಾರ ವೀಣೆ ನುಡಿಸಿ,
ಚೆಲುವು ಬನಕೆ ಬಂದಿತ್ತು ಬಕುಲ ವನದಲ್ಲಿ ಹೂವ ತೊಡಿಸಿ ॥೬॥

ಬಣ್ಣಬಣ್ಣಗಳ ತುಂಡು ಮೋಡ ನಡೆದಿರಲು ಮುಗಿಲ ದಾರಿ,
ತಳಿತ ಮಾವಿನೆಲೆ ನುಡಿಸುತಿತ್ತು ಮಧುಮಾಸದೇಕತಾರಿ.

ಚೈತ್ರಮಾಸ ತಂಬೆಲರನೂದಿ ನಡೆದಿರಲು ಮೊಗ್ಗೆ ಬಿಡಿಸಿ,
ಚೆಲುವು ಬನಕೆ ಬಂದಿತ್ತು ಶೋಕ ವನದಲ್ಲಿ ಹೂವ ತೊಡಿಸಿ ॥೭॥

ಮರದ ತಪದ ಹೆಸರಾಗಿ ಬನದ ಹಸಿರಾಗಿ ಬಂದ ಚೆಲುವು,
ಗಿಡದ ಗೊಂಚಲಲ್ಲುಯ್ಯಲಾಡಿ ಬಂದಿತ್ತು ನೆಲದ ನಲವು.

ಆರಳಿದಲರ ವೇದಿಕೆಯೊಳೊಯ್ದು ಮರಿದುಂಬಿ ಜೇನ ಕುಡಿಸಿ,
ಚೆಲುವು ಬನಕೆ ಬಂದಿತ್ತು ಬೆಳ್ಳಿ ಮಂಟಪಕೆ ಹೂವ ತೊಡಿಸಿ ॥೮॥

ಹಸಿರು ಮರದಡಿಯಲಿ ನಲಿಯುತಿದ್ದವೊ ನವಿಲು ನಾಟ್ಯವಾಡಿ,
ಗಿಡದ ಬುಡದಿ ಗುಟಕರಿಸುತಿತ್ತು ಹಾರೀತ ಪಕ್ಷಿ ಹಾಡಿ.

ಹೂವಿನೊಡಲ ಮಕರಂದ ಕಣಜಗಳ ರೆಂಬೆರೆಂಬೆಗಿಡಿಸಿ,
ಚೆಲುವು ಬನಕೆ ಬಂದಿತ್ತು ಗಂಧ ವನದಲ್ಲಿ ಹೂವ ತೊಡಿಸಿ ॥೯॥

ಇಂಥ ಚೈತ್ರವನದಲ್ಲಿ ಮೆರೆಯಿತಚ್ಛೋದವೆಂಬ ಸರಿಸಿ,
ಕಮಲವೇದಿಕೆಯನೇರಿ ಕುಳಿತ ಕಲಹಂಸವೃಂದದರಸಿ.

ಬನದ ಹಸಿರು ಬಯಲಲ್ಲಿ ಗಿಡದ ನೆರಳಲ್ಲಿ ಸೀಳು ದಾರಿ,
ಬಳ್ಳಿವರಿದು ಸುತ್ತಾಡಿ ಬಂದವೊ ಸರಸ್ತೀರ ಸೇರಿ ॥೧೦॥

## ಭಾಗ ೩

ಇದೇ ಚೈತ್ರವನದಿದೇ ಕೊಳದ ನೀರ ಮೀಯಲೆಂದು
ಗೆಳತಿಯೊಡನೆ ಗಂಧರ್ವಕನ್ನೆ ಬನಬನವ ಬಳಸಿ ಬಂದು.

ಗಂಧವನದ ನೆರಳಲ್ಲಿ ಬಳ್ಳಿವರಿದಂಥ ಸೀಳು ದಾರಿ,
ನಡೆದು ಬಂದಳಾ ಮಹಾಶ್ವೇತೆ ಗಂಧರ್ವಕನ್ನೆ ಸಾರಿ ||೧೧||

ಧವಲ ದೀತಿಯ ಚೆಲುವು ಬಂತು ಯೌವನೆಯ ರೂಪ ತೊಟ್ಟು,
ಚಂದ್ರವದನೆಯೊಪ್ಪಿದಳು ನೊಸಲ ಕಸ್ತೂರಿ ತಿಲಕವಿಟ್ಟು.
ತೊಳಗುತಿತ್ತು ಕಟಿರತ್ನ ಮೇಖಲಾ ನೀಲರತ್ನ ಹಾರ,
ಗಂಧವನದ ಗಂಧರ್ವಕನ್ನೆಗೊಪ್ಪಿತ್ತು ಕರ್ಣಪೂರ ||೧೨||

ಉಟ್ಟ ಪಾಟಲದ ವಸನ ಹೊದೆದು ನಭನೀಲ ಮೇಲು ಹೊದಿಕೆ,
ಕರ್ಣಕಿರಿಸಿ ಮಣಿಕರ್ಣಪೂರ ನೂಪುರವನಿರಿಸಿ ಪದಕೆ.
ಚಂದ್ರಮಂಡಲದ ಚೆಲುವೆ ನಡೆದು ಕಲಹಂಸಪಾದಳಾಗಿ,
ಗಂಧವನದಿ ಬಂದಿದ್ದಳಂದು ಗಂಧರ್ವಕನ್ನೆ ಸಾಗಿ ||೧೩||

ಬೆರಳಿಗುಯ್ಯಲಾಡಿಸಿದ ಕಮಲಕೆರಗಿತ್ತು ದುಂಬಿವಿಂಡು,
ಪಂಚವರ್ಣದರಗಿಳಿಯ ತನ್ನ ಮುಂಗೈಯೊಳಿರಿಸಿಕೊಂಡು.
ತೊಳಗುತಿರಲು ಮಣಿಕರ್ಣ ಕುಂಡಲಾಭರಣ ಹಾಲು ಕೆನ್ನೆ
ಗಂಧವನದಿ ಬಂದಿದ್ದಳಂದು ಗಂಧರ್ವ ರಾಜಕನ್ನೆ ||೧೪||

ಹೂವನರಸಿ ಬಂದಂತೆ ದುಂಬಿಯಾಕಾಂಕ್ಷೆ ಬರಲು ಹೂತು,
ಮಹಾಶ್ವೇತೆ ನವಪಾರಿಜಾತ ಪರಿಮಳಕೆ ಚಿತ್ತ ಸೋತು.
ಗೆಳತಿಯೊಡನೆ ನಡೆದಿರಲು ನೋಡಿ ಮುನಿ ಪುಂಡರೀಕ ರೂಪ,
ಕಂಡಕಣ್ಣಿಗೊಡಮೂಡಿ ಬಂದಿತನುರಾಗದಿಂದ್ರಚಾಪ ||೧೫||

## ಭಾಗ ೪

ಧವಲ ವರ್ಣ ಕೆಂದುಟಿಯ ದುಂಡು ಮುಖ ನೀಲ ನಯನ ಹೊಳೆದು,
ಮಿಸುನಿ ಜಡೆಯ ಸುಕುಮಾರ ರೂಪವೊಪ್ಪಿತ್ತು ಭಸ್ಮ ತಳೆದು.
ಮುಂಜಮೇಖಲೆಯ ಕಟ್ಟಿ ಬೆರಳ ರುದ್ರಾಕ್ಷಿಮಾಲೆ ಹಿಡಿದು,
ಕಪಿಂಜಲನ ಜತೆಯಲ್ಲಿ ಬಂದ ಮುನಿ ಪುಂಡರೀಕ ನಡೆದು ||೧೬||

ರತಿಯ ಬೆವರು ಹನಿ ಯೆಸಳು ತೆರೆದು ಬಂದಂತೆ ಮೊಗ್ಗೆಯೊಡೆದು,
ಮುಗಿಲ ಕೃತ್ತಿಕಾ ಪುಂಜ ಹೂತ ನವಪಾರಿಜಾತ ಮುಡಿದು
ಹಿಡಿದ ದಂಡ ಕೈಕಮಂಡಲುಗಳೊಪ್ಪಿರಲು ಮುನಿಕುಮಾರ,
ಮಹಾಶ್ವೇತೆ ನಿಂತಲ್ಲೆ ನಿಂತು ನೋಡಿದಳು ಕರ್ಣಪೂರ ॥೧೭॥

ಕಮಲನಯನೆ ಕಣ್ತುಂಬ ನೋಡಿದಳು ಸೋಲಲಿಲ್ಲ ನೋಡಿ,
ನೋಡಿದಷ್ಟು ಮನ ತುಂಬುತಿತ್ತು ಮುನಿರೂಪ ಕಾಮ ಹೂಡಿ.
ಮೊಗ್ಗೆ ನಯನಗಳನರಸಿತ್ತು ಮನ ಕೆರಳಿಸಿತ್ತು ಕಾಮ,
ಕಣ್ಣಿನುಯ್ಯಲೆಯನಾಡುತಿತ್ತು ಗಂಧರ್ವಕನ್ನೆ ಪ್ರೇಮ ॥೧೮॥

ಅವಳ ಚಿತ್ತಚಾತಕವು ಬಯಸಿ ನಿಂತಿತ್ತು ಪ್ರೇಮಮೇಘ,
ಹುಚ್ಚು ಹೊಳೆಯು ಹರಿದಂತೆ ಕೊಚ್ಚಿ ಬಂದಿತ್ತು ಕಾಮದೋಘ.
ಎದುರು ಬಂದು ನಿಂತಿರಲು ನೋಡಿ ಮುನಿ ಪುಂಡರೀಕ ರೂಪ,
ಮಹಾಶ್ವೇತೆಯೊಳಗೊಳಗೆ ಮೂಡಿದವು ಕಾಮದಿಂದ್ರ ಚಾಪ ॥೧೯॥

ಹೃದಯವೀಣೆಯನುರಾಗರಾಗವಡೆದಿತ್ತು ನೂರು ರೀತಿ,
ತೆರೆದ ಕಣ್ಣುಮರೆಯಲ್ಲಿ ಕಣ್ಣು ಚಿವುಟಿತ್ತು ಭೋಗ ಪ್ರೀತಿ.
ಬನದ ಹಸಿರು ಕೊಳದಲ್ಲಿ ಕಮಲ ಮಧುಮಾಸ ದುಂಬಿಯಾಡಿ,
ಮಹಾಶ್ವೇತೆಯನುರಾಗ ಬಣ್ಣವಡೆದಿತ್ತು ಚೆಲುವು ನೋಡಿ ॥೨೦॥

## ಭಾಗ ೫

ಬೆವತು ನಾಚಿ ಕೆಂಪೇರಿ ಕದಪು ನಿಂತಿರಲು ಚಿತ್ತ ಸೋತು,
ಮಹಾಶ್ವೇತೆ ಮುನಿಪುಂಡರೀಕ ಸೌಂದರ್ಯರೂಪಕೋತು,
ಕರ್ಣಕುಂಡಲಗಳುಯ್ಯಲಾಡುತಿರೆ ಮಣಿದಳವನ ಪದಕೆ,
ಎದ್ದುನಿಂತು ಸಾವರಿಸಿಕೊಂಡು ನಭನೀಲ ಮೇಲು ಹೊದಿಕೆ ॥೨೧॥

ಕಪಿಂಜಲನ ಬಳಿಸಾರಿ ನಮಿಸಿ ಕೇಳಿದಳು ಮನದಿ ನಾಚಿ,
ಪುಂಡರೀಕ ದೇವರ್ಷಿಯೆಡೆಗೆ ಲಾವಣ್ಯದೃಷ್ಟಿ ಚಾಚಿ.

''ನಿಮ್ಮ ಗೆಳೆಯರಿವರಾರು? ಧರಿಸಿದಾಹೂವದಾವು''ದೆಂದು,
ಗಂಧವನದಿ ಗಂಧರ್ವ ಕನ್ನೆ ಕೇಳಿದಳು ಪ್ರೀತಿ ಮಿಂದು ॥೨೨॥

ಕಪಿಂಜಲನು ನುಡಿದಿದ್ದ ''ದೇವಿ, ಸಖ ಪುಂಡರೀಕನೀತ,
''ಶ್ವೇತಕೇತು ದೇವರ್ಷಿ ವತ್ಸನಾ ಹೂವೆ ಪಾರಿಜಾತ.''
''ದೇವ ವನದ ವನದೇವಿಯೊಲಿದು ಕೊಟ್ಟಿರುವ ಕರ್ಣಪೂರ''
ನುಡಿಯುತಿರಲು ಬಳಿಸಾರಿ ಬಂದ ದೇವರ್ಷಿ ಮುನಿಕುಮಾರ ॥೨೩॥

ನೀಲನಯನಗಳ ನೆಟ್ಟನೋಟ ವ್ಯಾಕುಲಿತ ಚಿತ್ತಬಿಂಬ,
ಪುಂಡರೀಕನನುರಾಗ ಧುಮುಕಿ ಬಂದಿತ್ತು ಕಣ್ಣತುಂಬ.
ಕರ್ಣದಿಂದ ತೆಗೆದಿರಿಸಿಕೊಂಡು ಬೆರಳಲ್ಲಿ ಕರ್ಣಪೂರ,
ಗಿರಿಯನಿಳಿದು ನದಿಯೋಡುವಂತೆ ಬಂದಿದ್ದ ಮುನಿಕುಮಾರ ॥೨೪॥

ನೀಲನಯನ ಕಣ್ತುಂಬ ನೋಡಿದನು ಸೋಲಲಿಲ್ಲ ನೋಡಿ,
ನೋಡಿದಷ್ಟು ಮನತುಂಬಿ ಬಂದಳಾ ಚಂದ್ರವದನೆ ಮೂಡಿ.
ಪುಂಡರೀಕ ಮೈಮರೆದು ನಿಂತುಕೊಂಡಿದ್ದ ಬಳಿಗೆ ಬಂದು,
ಕಡಲ ಕಡೆದ ಶ್ರಾವಣ ಸಮೀರ ಬಂದಂತೆ ನೀರ ಮಿಂದು ॥೨೫॥

## ಭಾಗ ೬

ಹೃದಯವೀಣೆಯನುರಾಗ ರಾಗವಡೆದಿತ್ತು ನೂರು ರೀತಿ,
ತೆರೆದ ಕಣ್ಣಮರೆಯಲ್ಲಿ ಕಣ್ಣು ಚಿವುಟಿತ್ತು ಭೋಗ ಪ್ರೀತಿ.
ಪುಂಡರೀಕನನುರಾಗ ಮೂಡಿ ಬಂದಿತ್ತು ಕಣ್ಣಸೂಸಿ,
ಧೂಮಕೇತು ನಡೆದಂತೆ ಬಾನ ಬೆಳುದಿಂಗಳಲ್ಲಿ ಬೀಸಿ ॥೨೬॥

ಝೊಂಪಿಸಿತ್ತು ತನು ಕಂಪಿಸಿತ್ತು ಕೈಬೆರಳಿನಕ್ಷಮಾಲೆ,
ಬನವ ತುಂಬಿ ಮುನಿಮನವ ತುಂಬಿ ಕುಣಿದಿತ್ತು ಕಾಮಲೀಲೆ.
ಮದನಯೋಗ ಮನ ತುಂಬಿ ನುಡಿದ ದೇವರ್ಷಿ ಬಳಿಗೆ ಬಂದು,
''ಪರಿಗ್ರಹಿಸಿದೋ ದೇವಿ ಹೂವ ಕರ್ಣಾವತಂಸಕೆಂದು'' ॥೨೭॥

ಪುಂಡರೀಕ ಗಂಧರ್ವಕನ್ನೆಗಿರಿಸಿರಲು ಪಾರಿಜಾತ,
ಕದಪು ಕರತಲ ಸ್ಪರ್ಶ ಸೋಂಕು ನುಡಿದಿತ್ತು ಮಿಂಚು ಮಾತ.
ಬಂಧವಿಲ್ಲದಾನಂದದಲ್ಲಿ ಮೈಮರೆತವೆರಡು ಜೀವ,
ಚಂದ್ರವದನೆ ನಸುನಗಲು ಕದಪಿನಲಿ ತೊಟ್ಟು ಪ್ರೀತಿ ಹೂವ ॥೨೮॥

ಬೆವತು ನಾಚಿ ಕೆಂಪೇರಿ ಕದಪು ನಿಂತಿದ್ದ ಮುನಿಕುಮಾರ,
ರಾಸಲೀಲೆಯಲಿ ಚಿತ್ತ ಬೆರೆತು ಮೈಮರೆತು ಹರ್ಷಪೂರ.
ನಡಗುತಿರಲು ಬೆರಳಕ್ಷಮಾಲೆ ಜಾರಿತ್ತು ಕೈಯ ಕೆಳಗೆ,
ಮಹಾಶ್ವೇತೆಯದನೆತ್ತಿಕೊಂಡಳೋ ಮಿಂಚುವೇಗದೊಳಗೆ ॥೨೯॥

ಚಂದ್ರವದನೆ ನಸುನಗಲು ಕದಪಿನಲಿ ತೊಟ್ಟು ಪ್ರೀತಿ ಹೂವ,
ತಪದ ಚಂದ್ರಶಿಲೆಯೊಸರುತಿತ್ತು ಬಿಸಿಯುಸಿರುತಿತ್ತು ಜೀವ.
ಮುನಿಯ ಬೆರಳ ರುದ್ರಾಕ್ಷಿಮಾಲೆ ಕಾಮಾಕ್ಷಿ ಕೊರಳ ಸುತ್ತು,
ಬಳ್ಳಿವರೆಯಲನುರಾಗ ಯೋಗ ಹನಿ ಮಂಜು ಕರಗುತಿತ್ತು. ॥೩೦॥

## ಭಾಗ ೭

ಪಾರಿಜಾತ ಕರ್ಣಾವತಂಸ ರುದ್ರಾಕ್ಷಿ ಮಾಲೆಯಿಟ್ಟು
ಮಹಾಶ್ವೇತೆ ಗಂಧರ್ವಕನ್ನೆ ನಿಂತಿರಲು ಲಜ್ಜೆಪಟ್ಟು
ಹಗಲುಗನಸು ಹರಿದಾಡುತಿತ್ತು ಹೂಬಿಸಿಲ ಶಯ್ಯೆ ಹಾಸಿ,
ಸ್ವಪ್ನಲೋಕ ತೆರೆದಿತ್ತು ಭೋಗ ಕರೆದಿತ್ತು ಕೈಯ ಬೀಸಿ ॥೩೧॥

ಸನಿಹವೆರಡು ಮಾಮರಕೆ ತಬ್ಬಿನಿಂತಿರಲು ಹೂವತಾಳಿ,
ಮುಗ್ಧ ಮಾಧವೀ ಬಳ್ಳಿ ಗುಯ್ಯಲಾಡಿತ್ತು ಮಂದ ಗಾಳಿ.
ಪುಂಡರೀಕ ದೇವರ್ಷಿ ರೂಪ ಕಣ್ತುಂಬಿ ತುಂಬಿಕೊಂಡು,
ನಿಂತಳಲ್ಲಿ ಗಂಧರ್ವಕನ್ನೆ ಕನವರಿಕೆ ಜೇನನುಂಡು ॥೩೨॥

ಬಣ್ಣ ಬಣ್ಣಗಳ ಚಿಕ್ಕೆ ಮಾಲೆಯುಯ್ಯಾಲೆಯಲ್ಲಿ ತೂಗಿ,
ಪ್ರೀತಿ ನುಡಿಸಿ ಬಂದಿತ್ತು ವೀಣೆ ಬನ ಮನದ ಮೌನವಾಗಿ.

ಗಂಧವನದಿ ಗಂಧರ್ವಕನ್ನೆ ನಿಂತಿರಲು ಲಜ್ಜೆಪಟ್ಟು
ಹೃದಯ ಕಮಲದಲಿ ರಾಜಹಂಸ ಹಾರೈಸಿ ಪೀಠ ಕೊಟ್ಟು ॥೩.೩॥

ಪಂಚವರ್ಣದರಗಿಳಿಯ ತನ್ನ ಮುಂಗೈಯೊಳಿರಿಸಿಕೊಂಡು,
ದೇವಕನ್ನೆ ಸಖಿಯೊಡನೆ ತೆರಳಿರಲು ದೇವಮುನಿಯ ಕಂಡು.
ಕಲ್ಪ ಕಲ್ಪಗಳ ಮುಳುಗಿಸಿತ್ತು ಮೂಡಿಸಿದ ಪ್ರೇಮಸೃಷ್ಟಿ
ಯೋಗಶೈಲಗಳನುರುಳಿಸಿತ್ತು ಕನ್ನಿಕೆಯ ಕಾಮದೃಷ್ಟಿ ॥೩.೪॥

ವಿರಹ ತುಂಬಿ ತುಳುಕಿರಲು ಹೃದಯ ಮುನಿ ಪುಂಡರೀಕ ನೊಂದು,
ನಡೆದ ದಾರಿಯನೆ ನೋಡಿ ನಡೆದ ನಿಟ್ಟುಸುರ ಬಿಟ್ಟು ನಿಂದು.
''ದೇವಿ ಬರಲಿ ಗಿಳಿಜನ್ಮ ಇರಲಿ ಸಾನ್ನಿಧ್ಯ ನಿನ್ನದೊಂದು,
ದೈವ. ನಕ್ಕು ನುಡಿದಿತ್ತು ಮುನಿಯ ನುಡಿ ಸತ್ಯವಾಗಲೆಂದು ॥೩.೫॥

## ಭಾಗ ೮

ಹೆಜ್ಜೆಗೊಮ್ಮೆ ಲಾವಣ್ಯದೃಷ್ಟಿಗಳ ಚಾಚಿ ಹಿಂದೆ ಹಿಂದೆ,
ಮಹಾಶ್ವೇತೆ ತರಳಿಕೆಯ ಜೊತೆಗೆ ನಡೆದಿರಲು ಮುಂದೆ ಮುಂದೆ.
ಪುಂಡರೀಕ ದೇವರ್ಷಿ ನಿಂತುನಿಂತಲ್ಲೆ ಮೈಯ ಮರೆತು,
ತಪೋಮಂಡಲದ ಚಂದ್ರ ಹೊಳೆದ ರೋಹಿಣಿಗೆ ಚಿತ್ತ ಬೆರೆತು ॥೩.೬॥

ಮಂದ ಮಂದ ಘುಲುಕಿರಲು ಹೆಜ್ಜೆಗಳ ಗೆಜ್ಜೆ ನಡೆಗೆ ಸೋತು,
ಪಾರಿಜಾತ ಕರ್ಣಾವತಂಸ ನುಡಿದಿರಲು ನೂರು ಮಾತು.
ಕೊರಳ ಮಾಲೆ ನುಡಿದಿತ್ತು ''ದೇವಿ ನಿಲ್ ಹೆಜ್ಜೆ ಹಿಂದಕಿರಿಸು,
ಪ್ರೀತಿರೂಪ ಸೌಂದರ್ಯ ಯೌವನದ ಬಾಳ ಜೇನನರಸು'' ॥೩.೭॥

ಕಣ್ಣು ತುಂಬಿ ನಿರ್ವಿಣ್ಣ ನೀಲ ಕರೆದಿತ್ತು ಭೋಗಲೀಲೆ,
ಪ್ರೀತಿ ತಳಿರ ಕೆಂದಳಿರಿಗಾಗಿ ಹಂಬಲಿಸಿ ದೇವಬಾಲೆ.
ಬಿಟ್ಟ ಉಸಿರು ನಿಟ್ಟುಸಿರು. ದೃಷ್ಟಿ ನಡೆದಿತ್ತು ಕನ್ನೆಯೆಡೆಗೆ,
ಯೋಗಮಂಡಲದ ಚಿಕ್ಕೆಯುರುಳಿ ನೆಲದಲ್ಲಿ ಬೆಳ್ಳಿ ಹುಡಿಗೆ ॥೩.೮॥

ಮುನಿಯ ಕೊರಳ ರುದ್ರಾಕ್ಷಿಮಾಲೆ ಕಾಮಾಕ್ಷಿ ಕನ್ನೆ ತೊಟ್ಟು,
ಮಹಾಶ್ವೇತೆ ನಡೆದಿರಲು ಬೆರಳ ಸವರುತ್ತ ಮುತ್ತನಿಟ್ಟು,
ಪಂಚವರ್ಣದರಗಿಳಿಯ ತನ್ನ ಮುಂಗೈಯೊಳಿರಿಸಿಕೊಂಡು,
ಕೊರಳ ನೀಲಸರ ಗಿಳಿಗೆ ಕೊಟ್ಟು ದೇವರ್ಷಿಯೆಡೆಗೆ ಕಂಡು ||೩೯||

''ದೇವಮುನಿಗೆ ಕೊಡು ನನ್ನ ನೀಲನವರತ್ನಹಾರ''ವೆಂದು,
ದೇವಕನ್ನೆ ನುಡಿದಿರಲು ರೆಕ್ಕೆಗೆದರಿತ್ತು ಹಾರಿ ಬಂದು.
''ರುದ್ರಾಕ್ಷಿಮಾಲೆ ನನಗಿರಲಿ ಬರಲಿ ವಲ್ಕಲ ವಿಲಾಸ''ವೆಂದು,
ದೇವಿ ನುಡಿಯೆ ನುಡಿದಿತ್ತು ದೈವನುಡಿ ಸತ್ಯವಾಗಲೆಂದು ||೪೦||

## ಭಾಗ ೯

ಪಂಚವರ್ಣದರಗಿಳಿಯು ಚುಂಚಿನೊಳಗಿರಿಸಿ ರತ್ನಮಾಲೆ,
ಪ್ರೀತಿ ರಾಯಸದ ಹಕ್ಕಿ ಬಂತು ಕಳಿಸಿರಲು ದೇವಬಾಲೆ.
ದೇವಮುನಿಯ ಮುಂಗೈಯಿಗಿಳಿದು ತೆರೆದಿತ್ತು ತನ್ನ ರೆಕ್ಕೆ,
ಹೂತ ಮಲ್ಲಿಗೆಯ ಬಳ್ಳಿ ಬಳ್ಳಿವರೆದಂತೆ ಮಾವು ತೆಕ್ಕೆ ||೪೧||

ಐದು ಬಣ್ಣಗಳ ಚೆಲುವು ರೆಕ್ಕೆ ತೆರೆದಿತ್ತು ಹಚ್ಚಹಸಿರು,
ಪ್ರೀತಿ ಪಕ್ಷಿ ಕುಳಿತಿತ್ತು ರೆಕ್ಕೆ ತಳೆದಿತ್ತು ಪ್ರೀತಿಯುಸಿರು.
ಕೆಂಪು ಚುಂಚಿನಲಿ ನೀಲಮಾಲೆಯುಯ್ಯಾಲೆಯಾಡುತಿತ್ತು,
ಹೂವುಗಾಳಿಯೆಡೆ ನೋಡಿದಂತೆ ಕೊರಳೆತ್ತಿ ನೋಡುತಿತ್ತು ||೪೨||

ಪುಂಡರೀಕ ದೇವರ್ಷಿ ಕಂಡು ನಲವೇರಿ ಹಿಗ್ಗು ಹೀಚಿ,
ಕಮಂಡಲುವ ಕೆಳಗಿರಿಸಿ ನೋಡಿದನು ಗಿಳಿಯ ಕಡೆಗೆ ನಾಚಿ.
ತಂದ ನೀಲ ನವರತ್ನಮಾಲೆ ಮುನಿ ಕೊರಳ ಸುತ್ತಿ ತಂದು,
ಪಕ್ಷಿ ತಂದ ಕಾಮಾಕ್ಷಿಮಾಲೆ ರುದ್ರಾಕ್ಷಿಯಾಯಿತೆಂದು. ||೪೩||

ಮೇರು ಪರ್ವತವ ಸೀಳಿ ಬಂತೆ ಹೂ ಬಾಣದಿಂದ್ರಚಾಪ,
ಭೋಗದೇಗುಲದ ಹಣತೆಗಿಳಿದು ಹೊಳೆದಂತೆ ಯೋಗ ದೀಪ.

ಚಂದ್ರವದನೆ ಗಂಧರ್ವಕನ್ನೆ ದೇವರ್ಷಿ ಪುಂಡರೀಕ,
ಕಪಿಂಜಲನು ಮನನೊಂದು ನಿಂತ ನಿಂತಂತೆ ಮೌನ ಶೋಕ ||೪೪||

ಮಹಾಶ್ವೇತೆಯೆಡೆ ಗಿಳಿಯು ಹಾರಿ ಹೊರಟಿತ್ತು ಹಾರ ಕೊಟ್ಟು
ಪುಂಡರೀಕ ದೇವರ್ಷಿ ಕಂಡ ಹಾರೈಸಿ ದೃಷ್ಟಿಯಿಟ್ಟು
''ದೇವಿ ಬರಲಿ ಗಿಳಿ ಜನ್ಮ ಇರಲಿ ಸಾನ್ನಿಧ್ಯ ನಿನ್ನದೊಂದು''
ದೈವ ನಕ್ಕು ನುಡಿದಿತ್ತು ಮುನಿಯ ನುಡಿ ಸತ್ಯವಾಗಲೆಂದು ||೪೫||

## ಭಾಗ ೧೦

ಮಹಾಶ್ವೇತೆ ಮರಳಿದಳು ಮನೆಗೆ ತರಳಿಕೆಯ ಬನದಿ ಬಿಟ್ಟು
ತಾಯಿ ಗೌರಿ ಸಿರಿಗೌರಿಯೊಡನೆ ಮನದಲ್ಲಿ ಲಜ್ಜೆ ಪಟ್ಟು
ಚೈತ್ರವನದ ಸರಸಿಯಲಿ ಮಿಂದು ಯೌವನ ವಿಲಾಸ ಬೆರೆತು,
ದೇವಕನ್ನೆ ದೇವರ್ಷಿಗಾಗಿ ಕನವರಿಸಿ ಮೋಹವರಿತು ||೪೬||

ಮಹಾಶ್ವೇತೆ ಗಂಧರ್ವಕನ್ನೆ ನಡೆದಿರಲು ಬನದ ದಾರಿ,
ತಾಯಿ ಗೌರಿ ಶ್ರೀಗೌರಿಯೊಡನೆ ಮುನಿ ಮನದ ರೂಪ ಕೋರಿ.
ಬಳ್ಳಿ ಮಂಟಪದ ಹಸಿರು ಬನದ ಸೌಂದರ್ಯ ಕಾಣದಂತೆ,
ದೇವಕನ್ನೆ ಕನವರಿಸುತಿರಲು ದೇವರ್ಷಿ ರೂಪ ಚಿಂತೆ ||೪೭||

ಐದು ಬಣ್ಣದರಗಿಳಿಯ ತನ್ನ ಮುಂಗೈಯೊಳಿರಿಸಿಕೊಂಡು,
ಬೆರಳ ಸವರಿ ಕೊರಳಕ್ಷಮಾಲೆ ಮುನಿರೂಪ ಸ್ಮರಿಸಿಕೊಂಡು,
ಪಾರಿಜಾತ ಪರಿಮಳದ ನವಿರು ಸವಿನೆನಪು ನುಡಿಯುತಿತ್ತು,
ದೇವಕನ್ನೆ ದೇವರ್ಷಿಗಾಗಿ ಕನಲಿದಳು ಸುತ್ತುಮುತ್ತು ||೪೮||

ಪುಂಡರೀಕ ವ್ಯಾಕುಲಿತಚಿತ್ತನಾಗಿದ್ದ ಕನ್ನೆಗೊಲಿದು,
ಹೃದಯಸರಸಿಯಲಿ ತೇಲಿಬರಲು ಗಂಧರ್ವಹಂಸಿಯಲೆದು,
ಹಸಿರು ಚೈತ್ರವನದಲ್ಲಿ ಮೆರೆಯಿತಚ್ಛೋದವೆಂಬ ಸರಸಿ,
ಕೊಳದ ತೀರದಲಿ ಕುಳಿತುಕೊಂಡ ದೇವರ್ಷಿ ದೇವಿಗರಸಿ ||೪೯||

ಪಾರಿಜಾತವನು ಕೊಟ್ಟ ದೇವವನದೇವಿ ಬನವನಲೆದು,
ಅಲ್ಲಿ ಮರದ ಮರೆಯಲ್ಲಿ ನಿಂತು ದೇವರ್ಷಿ ರೂಪಕೊಲಿದು.
ಮಹಾಶ್ವೇತೆಗೊಲಿದಿರುವ ದೇವಮುನಿ ಮನದ ವಿರಹ ಕಂಡು,
''ದೇವಗಿತ್ತ ಹೂ ದೇವಿಗರ್ಪಿಸಿದರೆಂದು'' ನೊಂದುಕೊಂಡು. ||೫೦||

## ಭಾಗ ೧೧

ಲಜ್ಜೆಪಟ್ಟು ಮರಳಿದಳು ಮನದಿ ಹಂಬಲಿಸಿ ತುಂಬ ನೊಂದು,
''ಮುಗ್ಧಮಲ್ಲಿಕಾಲತೆಯು ಬರಲು ಮಾಮರನ ತಬ್ಬಲೆಂದು.
ಮಾವು ಕೈಯ ಚಾಚಿತ್ತು ಕರೆದು ಬಳಿಯಲಿ ವಸಂತಶ್ರೀಗೆ,''
ಪ್ರೀತಿ ಬಿತ್ತಿರುವ ಚಿಕ್ಕೆ ಬಂದ ಬೆಳೆ ಧೂಮಕೇತುವಾಗೆ ||೫೧||

ಮಹಾಶ್ವೇತೆ ಮರಳಿದಳು ಮನೆಗೆ ಗಂಧರ್ವ ಚಂದ್ರಶಾಲೆ,
ನೀಲಸ್ತಂಭಗಳ ದಾಟಿ ನಡೆದು ಗಂಧರ್ವರಾಜಬಾಲೆ.
ಹಾಲುಗಲ್ಲಿನರಮನೆಯ ತಂಪಿನಂತಃಪುರಕ್ಕೆ ಬಂದು,
ಕುಳಿತುಕೊಂಡು ಕನವರಿಸತೊಡಗಿದಳು ಮಿಲನವೆಂದಿಗೆಂದು ||೫೨||

ಮುನಿಯ ರೂಪ ಸೌಂದರ್ಯಮೂರ್ತಿ ಒಡಮೂಡಿ ನಿಲ್ಲುತ್ತಿರಲು,
ನೆನಹು ಹೂವು ಮಳೆ ಕರೆದು ಹೃದಯದಂಗಳದಿ ಚೆಲ್ಲುತ್ತಿರಲು.
ಕನ್ನೆವಾಡದಲಿ ಕುಳಿತುಕೊಂಡು ಗಂಧರ್ವಕನ್ನೆಯಂದು,
ಒಲವಿನಲ್ಲಿ ಕನವರಿಸತೊಡಗಿದಳು ಮಿಲನವೆಂದಿಗೆಂದು ||೫೩||

ಕನ್ನೆವಾಡದಲ್ಲಿ ಹಂಸತೂಲಿಕಾತಲ್ಪ ಮಧ್ಯದಲ್ಲಿ,
ಬಣ್ಣಬಣ್ಣಗಳ ಕುಸುರನೆಳೆದ ನವರಂಗ ಶಿಲ್ಪವಲ್ಲಿ,
ಮುತ್ತುಮಾಲೆ ಝುಲ್ಲರಿಯ ತೂಗಿ ತೋರಣವ ಸಾಲು ಸಾಲು,
ನೀಲ ರತ್ನಗಂಬಳಿಯ ಬಳಿಯ ನೆಲ್ಲವೆಲ್ಲ ಕಲ್ಲು ಹಾಲು ||೫೪||

ಹಂಸತೂಲಿಕಾತಲ್ಪದಲ್ಲಿ ಕುಳಿತಿರಲು ದೇವಬಾಲೆ,
ಕೈಯ ಬೆರಳಿನೊಳಗುಯ್ಯಲಾಡಿಸುತ ಮುನಿಯ ಅಕ್ಷಮಾಲೆ.

ನೊಂದಮನಕೆ ಶ್ರೀಗಂಥವಿಡಲು ಬರುತಿತ್ತು ತಂಪುಗಾಳಿ,
ಒಲಿದ ಮನದ ಹೂಶಯ್ಯೆಯಲ್ಲಿ ನಡೆಸಿತ್ತು ರಾಸಕೇಳಿ ॥೫೫॥

## ಭಾಗ ೧೨

ನವಿಲುಗರಿಯ ಬೀಸಣಿಕೆಯಿರಿಸಿ ಬಯಸಿರಲು ನಾದವಾಣಿ,
ಹೊದೆದು ದಿವ್ಯ ರೇಷಿಮೆಯ ಜವನಿಕೆಯ ಹಸ್ತಿದಂತ ವೀಣೆ.
ನೀಲವಲ್ಕಲದ ಸೂತ್ರವೆಳೆದು ತೆಗೆದೆತ್ತಿಕೊಂಡು ಒರಗಿ,
ಮಿಡಿದ ತಂತಿ ನುಡಿದಿತ್ತು ಶ್ರುತಿಯ ಹಿಡಿದಿತ್ತು ಪ್ರೇಮ ಕೊರಗಿ ॥೫೬॥

ರಾಗ ಮೀಟಿತನುರಾಗ ರಾಗಿಣಿಯ ಭೋಗದಾಸೆ ಮಿಡಿದು,
ನಾದಲಹರಿ ಸುಳಿದಿತ್ತು ಪ್ರೇಮದುನ್ಮಾದ ವೀಣೆ ನುಡಿದು.
ಒಲವಿನಿಂದ ಸ್ವಚ್ಛಂದ ಗಾನವೀಣಾವಿತಾನ ಸವಿದು,
ಅಂತರಂಗದಲಿ ನಿಂತು ಪ್ರೀತಿ ರಿಂಗಣಿಸುತಿತ್ತು ಕರೆದು ॥೫೭॥

ಹಸ್ತಿದಂತ ಕಲಮಧುರ ವೀಣೆಯೊರಗಿತ್ತು ಮೌನವಾಗಿ,
ಹಂಸತೊಲಿಕಾತಲ್ಪದಿಂದ ಗಂಧರ್ವಕನ್ನೆ ಸಾಗಿ.
ಹವಳಜಾಲಮಣಿಮಾಲೆ ತೂಗಿರುವ ಕಿಟಕಿಯನ್ನು ತೆರೆದು,
ಮಹಾಶ್ವೇತೆ ಹಾರೈಸಿ ನೋಡಿದಳು ದೂರದೃಷ್ಟಿಯೆರೆದು ॥೫೮॥

ಮಹಾಶ್ವೇತೆ ನಸುನಕ್ಕು ನೋಡುತಿರೆ ಮೇಘವರ್ಣ ಮಾಲೆ,
ಗೆಳತಿ ತರಳಿಕೆಯು ಮರಳಿ ಬಂದು ಗಂಧರ್ವ ರಾಜಬಾಲೆ.
ಸೇರಿ ಸಖಿಯ ಬಳಿಸಾರಿ "ದೇವಿ ಕೈಕೊಳ್ಳಿ ನಿಮ್ಮ ಚಿತ್ತ,
ಹೂವ ಕೊಟ್ಟು ಹೂಮಾಲೆ ಬೇಡಿದರು ಋಷಿಯು ನಮ್ಮ ಸುತ್ತ" ॥೫೯॥

ನುಡಿದು ತೆರೆದು ತಾಂಬೂಲ ಕರಡಿಗೆಯೊಳಿರುವ ಪ್ರೀತಿಯೋಲೆ,
ಗೆಳತಿ ತೆರಳಿಕೆಯು ಕೊಡಲು ಪ್ರೇಮರಾಯಸವ ದೇವಬಾಲೆ.
"ಪುಂಡರೀಕ ದೇವರ್ಷಿ ಕೊಟ್ಟು ಕೇಳಿದರು ನಿಮ್ಮ ಕ್ಷೇಮ,
ಹೂವ ಕೊಟ್ಟು ಹೂಮಾಲೆ ಬಯಸುತಿದೆ ದೇವಮುನಿಯ ಪ್ರೇಮ ॥೬೦॥

## ಭಾಗ ೧೩

ಸಪ್ತವರ್ಣದಭಿಲಾಷೆ ಮೂಡಿರಲು ಮನದಿ ದೇವಕನ್ನೆ,
ಪ್ರೀತಿ ಪಾಟಲದ ಲಜ್ಜೆ ಲಹರಿ ಮಸಗಿರಲು ಹಾಲುಕೆನ್ನೆ.
ಮೋದ ತುಂಬಿದುನ್ಮಾದ ಓದಿದಳು ಮುನಿಯ ಪ್ರೀತಿಯೋಲೆ,
ಪ್ರೇಮನಂದನದಿ ಚೈತ್ರ ಕುಳಿತು ಹೆಣೆದಿತ್ತು ಸ್ವಪ್ನಮಾಲೆ ||೬೧||

ಕಮಲವದನೆ ಕಣ್ತುಂಬ ಓದಿದಳು. ಮನದಲಂಪು ತುಳುಕಿ,
ಗಾಳಿ ಬರಲು ಮೈತಾಳಿ ಸ್ನೇಹಲತೆಯಂತೆ ಹಿಗ್ಗಿ ಬಳುಕಿ.
''ಎಲ್ಲಿ ನಿಂದು ನಿನಗೆಲ್ಲಿ ಬಂದು ಸಲ್ಲಿಸಿದರೋಲೆಯನ್ನು?
ಎಲ್ಲಿ ಸಿಕ್ಕರೊಡನಾಡಿ ಬಂದೆ ನುಡಿ ಗೆಳತಿ ಬೇಗವಿನ್ನು'' ||೬೨||

ನುಡಿದ ಪ್ರೇಮಕಾತುರತೆ ಕನ್ನೆಯಾತುರತೆ ಮಾತ ಕೇಳಿ,
ಗೆಳತಿ ತರಳಿಕೆಯು ಒಲಿದ ಮುನಿಯ ವೃತ್ತಾಂತವನ್ನೆ ಹೇಳಿ.
''ದೇವಿ! ಮರದ ನೆರಳನಲ್ಲಿ ಕುಳಿತು ಹೂಮಾಲೆ ಹೆಣೆಯುತ್ತಿರಲು,
ಕಪಿಂಜಲನ ಕಣ್‌ಮರೆಸಿ ದೇವಮುನಿ ನನ್ನ ಕಡೆಗೆ ಬರಲು ||೬೩||

ಎದ್ದು ನಿಂತು ಸಾವರಿಸಿಕೊಂಡು ಕೈಮುಗಿದೆ. ಕಂಡು ಮೇಲೆ,
ಪುಂಡರೀಕ ದೇವರ್ಷಿ ಕೇಳಿದರು ನನಗೆ ಪ್ರಶ್ನೆ ಮಾಲೆ.
''ನಿನ್ನ ಗೆಳತಿ ಅವಳಾರು? ಎಲ್ಲಿ? ಮೆಚ್ಚಿದಳೆ? ಪಾರಿಜಾತ?
ಅವಳ ಕೈಗೆ ತಲುಪಿಸುವಿಯೇನು ಮನದೊಂದು ಗುಪ್ತಮಾತ?'' ||೬೪||

ಹೊದೆದ ವಲ್ಕಲದ ತುಂಡು ಹರಿದು ಅಂಗೈಯೊಳಿರಿಸಿಕೊಂಡು,
ತಮಾಲವೃಕ್ಷದೆಳಟೊಂಗೆ ಮುರಿದು ಹರಿದಂಥ ರಸವ ಕೊಂಡು,
ಗಂಧಗಜದಮದಹರ್ಷ ತಾಳಿ ಕನವರಿಸಿ ಓಲೆ ಬರೆದು,
ನಿನ್ನ ಗೆಳತಿಗಿದು ಗುಪ್ತ ಪ್ರೇಮಸಂದೇಶವೆಂದು ತೆರೆದು ||೬೫||

## ಭಾಗ ೧೪

ಬರೆದ ಕಾಗದವನೋದಿ ಹೇಳಿದಳು ಗೆಳತಿಯೋಲೆ ಹಿಡಿದು,
ಚೈತ್ರಪಲ್ಲವದ ಚೆಲುವ ತಾಳಿ ಬಂದಿರಲು ಪ್ರೀತಿ ನಡೆದು.

''ದೂರ ಹಾರುತಿರುವಂಥ ಹಂಸವೇ ಕೊಳವು ಕರೆಯುತಿಹುದು,
ಸರಸ್ತೀರದಲಿ ಶರತ್ಕಾಲ ಬಾಗಿಲವ ತೆರೆಯುತಿಹುದು'' ॥೬೬॥

ಹಾಲು ರೆಕ್ಕೆಗಳ ಹಂಸಪಕ್ಷಿ ಬಾ ಕೊಳದ ನೀರಮೇಲೆ,
ಕಮಲಪುಷ್ಪಗಳು ಕಾಯುತಿಹವು ನಿನಗಾಗಿ ಪಕ್ಷಿ ಬಾಲೆ.

ತುಂಬಿ ತುಳುಕಿ ಮಕರಂದವಿಳಿಯುತಿದೆ ಮೃದುಮೃಣಾಲದಲ್ಲಿ,
ಹೂವ ಸುರಿಸಿ ಕಾದಿಹುದು ಪ್ರೇಮ ಬನದೀತಮಾಲದಲ್ಲಿ ॥೬೭॥

ಕೇಳಿ ತರಳಿಕೆಯು ತಂದ ಪ್ರೀತಿ ರಾಯಸದ ಕಂಪನುಂಡು,
ಮಹಾಶ್ವೇತೆ ಗಂಧರ್ವಕನ್ನೆ ಮನಸೋತು ವಿರಹಗೊಂಡು

ಶರತ್ಕಾಲ ಸಂದೇಶ ಕೇಳಿ, ಸಂಚಾರ ಮಾರ್ಗ ತೊರೆದು,
ಹಂಸಪಕ್ಷಿಯಿಳಿದಂತೆ ಮನದಿ ನೆನೆಸಿದಳು ಮುನಿಯ ಕರೆದು ॥೬೮॥

ಸಂಜೆ ಬಂತು ಸಿಂಧೂರ ಬರೆದು ಪಡುವಣದ ಕ್ಷಿತಿಜದಲ್ಲಿ,
ಕೊಳದಿ ನಿಂತ ತಾವರೆಗಳೆಲ್ಲ ಮುದುಡಿದವು ಮೌನದಲ್ಲಿ.

ಚಕ್ರವಾಕಗಳು ಬಂಧವಗಲಿ ಹಲುಬಿದವು ಸುತ್ತುಮುತ್ತು,
ಚಂದ್ರವದನೆ ಗಂಧರ್ವಕನ್ನೆಯೆಡೆ ಬಂದಳೊಬ್ಬ ತೊತ್ತು. ॥೬೯॥

ರಾಜವೂಳಿಗದ ಚೇಟಿ ಬಂದು ಗಂಧರ್ವಕನ್ನೆಯೆಡೆಗೆ,
ಮುನಿಕುಮಾರ ಬಂದಿಹರು ನಿಮ್ಮ ಕಡೆಗೆ.''

''ಹೋಗು ಕರೆದು ತಾ ಬೇಗ''ವೆಂದು ಗಂಧರ್ವಕನ್ನೆ ನುಡಿದು,
ಕಪಿಂಜಲನು ಬಂದುದನು ಕಂಡು ನಮಿಸಿದಳು ಚರಣವಿಡಿದು ॥೭೦॥

## ಭಾಗ ೧೫

ಅರ್ಘ್ಯಪಾದ್ಯಗಳ ಕೊಂಡು ಸ್ವರ್ಣದಾಸನದಿ ಕುಳಿತುಕೊಂಡು,
ಮನದ ೀರ ಗಂಭೀರ ವಾಣಿಯಲಿ ಕನ್ನೆಯನ್ನು ಕಂಡು.

ಕಪಿಂಜಲನು ನುಡಿದಿದ್ದ ''ದೇವಿ ಬಂದಿರುವೆ ಗೆಳೆಯನಾಗಿ,
ಕೈಯ ಜೋಡಿಸುವೆ ಪ್ರಾಣವುಳಿಸು ದೇವರ್ಷಿಯೊಲವಿಗಾಗಿ ॥೭೧॥

ಗಂಧವನದ ಕುಟಿಯಲ್ಲಿ ಮಲಗಿ ಮೈಮರೆತು ನಿನ್ನ ನೆನೆದು,
ಕಾಮವಿರಹದಲಿ ಕೊರಗಿ ಪ್ರಾಣ ನಿತ್ರಾಣವಾಯಿತೊಲಿದು.

ಉಸಿರಿಗೊಮ್ಮೆ ನಿಟ್ಟುಸಿರನೂದಿ ನಿರ್ಜೀವ ಜೀವ ಕೊರಗಿ,
ಮಹಾಶ್ವೇತೆ ನೀನುಳಿಸಬೇಕು ನಿನ್ನವನ ದೆಸೆಗೆ ಮರುಗಿ'' ॥೭೨॥

ಕಪಿಂಜಲನ ಕಣ್ಣೀರ ಕಂಡು ಕರಗಿದಳು ದೇವಕನ್ನೆ,
ಬಾಷ್ಪಬಿಂದು ಧುಮುಕಿದವು ತೊಳೆದು ಗಂಧರ್ವಕನ್ನೆ ಕೆನ್ನೆ.
ಕಪಿಂಜಲನು ಹೊರನಡೆದ ನುಸುಳಿ ಕಂಚುಕಿಯು ಸಾರುತಿರಲು,
ಗೌರಿಯೆಂಬ ಗಂಧರ್ವರಾಣಿಯಂತಃಪುರಕ್ಕೆ ಬರಲು ॥೭೩॥

ಮಗಳ ಕಂಡು ಮಾತಾಡಿ ಮರಳಿದಳು ಏನೊ ಏನೊ ಮಾತು,
ಕರುಣೆ ಕೂಗಿ ಕರೆದಾಗ ಭೋಗ ತೆರೆದಾಗ ಚಿತ್ತಸೋತು.
ಮಿಲನವಿಂದಿನಿರುಳೆಂದು ನುಡಿದು ನಿರ್ಧರಿಸಿ ಗೆಳತಿಯೊಡನೆ,
ಮಹಾಶ್ವೇತೆ ಕನಲಿದಳು ''ಚಂದ್ರಮಾ ಬೇಗ ಮೂಡಿ ಬಿಡನೆ'' ॥೭೪॥

ಶಿವನ ಕೆಂಜೆಡೆಯ ಹರಳು ಮೂಡಿ ಮೂಡಲ ದಿಗಂತದಲ್ಲಿ,
ಚಂದ್ರನುದಯಿಸಲು ಪೂರ್ಣಬಿಂಬ ಬಂಗಾರ ತಳಿಗೆಯಲ್ಲಿ,
ಒಲವು ಮರುಕದುಯ್ಯಾಲೆಯಾಡಿ ಕರಗಿತ್ತು ಕಣ್ಣತುಂಬ,
ಚಂದ್ರಶಾಲೆಯಲಿ ಚಂದ್ರವದನೆ ನೋಡಿದಳು ಚಂದ್ರಬಿಂಬ ॥೭೫॥

## ಭಾಗ ೧೬

ರತ್ನಮುಕುರದೆದುರಲ್ಲಿ ನಿಂತು ಸಿಂಗರಿಸಿಕೊಂಡಳುಡಿಗೆ,
ನೀಲರೇಷಿಮೆಯ ವಸನವುಟ್ಟು ಗಿಳಿಹಸಿರು ಮೇಲು ತೊಡಿಗೆ.
ಕರ್ಣಕಿರಿಸಿ ಮಣಿಕರ್ಣಪೂರ ನೂಪುರವ ಕಾಲಿಗಿರಿಸಿ,
ರತ್ನಮೇಖಲೆಯ ಕಟಿಯೊಳಿಟ್ಟಳಭಿಸಾರಯೋಗ ಸ್ಮರಿಸಿ ॥೭೬॥

ಧವಲದೀತಿಯ ಚೆಲುವು ನಿಂತು ಯೌವನೆಯ ರೂಪ ತೊಟ್ಟು
ಚಂದ್ರವದನೆಯೊಪ್ಪಿದಳು ನೊಸಲ ಕಸ್ತೂರಿ ತಿಲಕವಿಟ್ಟು,
ಅಂಗರಾಗ ಮದರಂಗಿ ಮಕರಿಕಾಪಾತ್ರ ಕದಪಿಗಿರಿಸಿ,
ಚಂದ್ರವದನೆ ಸಿಂಗರಿಸಿಕೊಂಡಳಭಿಸಾರಯೋಗ ಸ್ಮರಿಸಿ ॥೭೭॥

ತೋಳಬಂದಿಗಳನಿರಿಸಿ ಕೊರಳಿನಲಿ ನೀಲರತ್ನಹಾರ,
ಕರ್ಣಕುಂಡಲಗಳುಯ್ಯಲಾಡಿ ಬೆಳಗಿದವು ಕರ್ಣಪೂರ,

ದೇವಮುನಿಯ ಬಳಿಸಾರಿ ನಡೆದಳಭಿಸಾರಿಕಾಕುಮಾರಿ,
ಗಂಧವನದಿ ಗಂಧರ್ವಕನ್ನೆ ಚಂದ್ರಿಕೆಯ ಬನವ ಸೇರಿ ॥೭೮॥

ಹಾಲು ಸುರಿದು ಹೊಳೆದಿತ್ತು ಮುಗಿಲು ಬೆಳುದಿಂಗಳಲ್ಲಿ ಬೆಳಗಿ,
ಝಣಾತ್ಕರಿಸಿ ನೂಪುರದ ನಾದ ಕಲಹಂಸಪಾದ ಮೊಳಗಿ.
ಮಂದ ಘುಲುಕಿದವು ಗೆಜ್ಜೆ ಹೆಜ್ಜೆಯಿಡೆ ಬನದ ಮೌನದಲ್ಲಿ,
ಹಾರುತಿತ್ತು ಬಲಗಣ್ಣು ದೇವಿ ಭಯಭೀತ ಗ್ಲಾನಿಯಲ್ಲಿ ॥೭೯॥

ಇರುಳ ಮೌನವನು ಸೀಳಿ ಬಂತು ''ಹಾ ಪುಂಡರೀಕ!''ವೆಂದು,
''ಅಯ್ಯೋ ಹೂವ ಕೊಯ್ದಿತ್ತು ಮೊಗ್ಗೆಯಿರುವಾಗ ಸಾವು ಬಂದು.''
ಮೌನಸೃಷ್ಟಿ ಮಾರ್ಮೊಳಗುತಿತ್ತು ಸುತ್ತಲೂ ಶೋಕವಾಣಿ,
ಕರುಳು ಕೊರೆಯುವಂತಿತ್ತು ಕೂಗು ಸ್ನೇಹಿತನ ದುಃಖವಾಣಿ ॥೮೦॥

## ಭಾಗ ೧೭

''ವಿಧಿಯ ಸಿಡಿಲು ಹೊಡೆದಿತ್ತು ದುಃಖ ಹಿಡಿದಿತ್ತು ವಜ್ರಮುಷ್ಟಿ
ವಿಷಯಭೋಗ ವಿಷಯೋಗವಾಗಿ ನಿಸ್ತೇಜಬ್ರಹ್ಮದೃಷ್ಟಿ
ತಪದ ಮುಗಿಲಿನಲಿ ಬಂದ ಚಂದ್ರಮಂಡಲಕೆ ಶಾಪ ಕೊಟ್ಟು
ಇರುಳ ಕಡಲಿನಲಿ ಕರಗಿದಂತೆ ನೀ ನಡೆದೆ ನನ್ನ ಬಿಟ್ಟು'' ॥೮೧॥

''ಮೃತ್ಯುಸರ್ಪವನೆ ತುಳಿಯಬಲ್ಲ ವಲ್ಕಲದ ವೈನತೇಯ,
ಕಾಲಕೂಟವನೆ ಕುಡಿಯಬಲ್ಲ ದೇವರ್ಷಿ ನೀನಜೇಯ.
ಹೂವ ಹಿಡಿದ ಕಾಮಾಕ್ಷಿ, ಶಿವಶಿವಾ! ಕಾಮದೃಷ್ಟಿ ಪತನ,
ಮುಗಿಲಿನಿಂದ ಕೆಳಗುರುಳುತಿತ್ತು ನಕ್ಷತ್ರ ನೀಲಮಿಥುನ'' ॥೮೨॥

''ಎಂಥ ಮರಣವಿದು ಗೆಳೆಯ! ಹೂವು ಕಾಮಾಕ್ಷಿ ತಂದ ನಂಜು,
ಚೆಲುವಿಗಾಗಿ ಮನಸೋತ ಜೀವ ಕಂಡಿತ್ತು ಬರಿಯ ಮಂಜು.
ವಜ್ರಕವಚವನು ಸೀಳಿ ಬಂತು ಸೌಂದರ್ಯ ಭೋಗದೃಷ್ಟಿ
ಬರಿಯ ಗಾಳಿಗೋಪುರವೆ ಗೆಳೆಯನೆ ತಪದ ಬ್ರಹ್ಮಸೃಷ್ಟಿ'' ॥೮೩॥

''ಎಂಥ ಮರಣವಿದು ಗೆಳೆಯ! ಹೂವು ಕಾಮಾಕ್ಷಿ ತಂದ ನಂಜು,
ಹಾ ಪುಂಡರೀಕ ! ಹದಿನಾಲ್ಕು ಲೋಕಗಳು ಶೂನ್ಯ ಸುತ್ತುಮುತ್ತು.

ಚಂದ್ರಚೂಡ ಶಿವಪೂಜೆಗಾಗಿ ಬಂದವರು ಮರಳಲಿಲ್ಲ,
ಹಾ ತಪಸ್ವಿ ಸಖ! ಹೃದಯಕಮಲ ಕೈವಲ್ಯ ಕೆರಳಲಿಲ್ಲ ||೮೪||

ಗಾಳಿ ನರಳಿ ನಡೆದಿತ್ತು ಗಂಧವನದಲ್ಲಿ ನೀರವಕ್ಕೆ,
ಕಪಿಂಜಲನು ಜಡೆಗೆದರಿ ಸುರಿಸಿ ಕಣ್ಣೀರು ಶೋಕವುಕ್ಕೆ

''ಎಲ್ಲ ಶೂನ್ಯ ದೇವರ್ಷಿ! ಎಲ್ಲಿ ಬದುಕಿರಲಿ ನಿನ್ನ ಬಿಟ್ಟು?''
ಕಪಿಂಜಲನು ದುಃಖಾರ್ತನಾಗಿ ಕಣ್ಣೀರಧಾರೆಯಿಟ್ಟು ||೮೫||

## ಭಾಗ ೧೮

ಸ್ವರ್ಣಕರಡಿಗೆಯ ಹಿಡಿದುಕೊಂಡು ತರಳಿಕೆಯು ಮುಂದೆ ಮುದೆ,
ಮಹಾಶ್ವೇತೆ ಗಂಧರ್ವಕನ್ನೆ ಬಂದಿರಲು ಹಿಂದಿನಿಂದೆ.

ಮಂದ ಮಂದ ಘುಲುಕಿದವು ಗೆಜ್ಜೆ ನೂಪುರವು ಝಣಿಸುತಿತ್ತು,
ಹಾರುತಿತ್ತು ಬಲಗಣ್ಣು ಚಿತ್ತವೇನೇನೊ ಎಣಿಸುತಿತ್ತು ||೮೬||

ಚಂದ್ರಬಿಂಬ ಹೊಳೆದಿತ್ತು ಮುಗಿಲನಿಳಿದಿತ್ತು ಕುಂಭವಿಡಿದು,
ಗಂಧವನದ ಮರಮರದ ಮರೆಗೆ ನೆರಳಲ್ಲಿ ನಿಂತು ನಡೆದು.

ಬೆಳುದಿಂಗಳಲ್ಲಿ ಬನದಂಗಳದಲಿ ನೂಪುರದ ರಮ್ಯ ಸರಕೆ,
ಹೆಜ್ಜೆಗೊಮ್ಮೆ ಹರಿಣಾಕ್ಷಿ ನೋಡಿದಳು ತೆರೆದು ಮೇಲು ಹೊದಿಕೆ ||೮೭||

ಗಂಧವನದ ಬೆಳುದಿಂಗಳಲ್ಲಿ ಲಾವಣ್ಯದೃಷ್ಟಿ ಚಾಚಿ,
ಋಷಿಯ ಪ್ರೀತಿಯಭಿಸಾರ ಮಿಲನವನು ನೆನೆದು ಹಿಗ್ಗಿಹೀಚಿ.
ಮಹಾಶ್ವೇತೆ ಗಂಧರ್ವಕನ್ನೆ ಕನವರಿಸಿ ನಡೆಯುತಿರಲು,
ಹಾರುತಿತ್ತು ಬಲಗಣ್ಣು ಬನದ ತಂಬೆಲರು ಬೀಸಿ ಬರಲು ||೮೮||

ಇರುಳ ಮೌನವನು ಸೀಳಿ ಬಂತು ''ಹಾ ಪುಂಡರೀಕ''ವೆಂದು,
''ಅಯ್ಯೊ ಹೂವ ಕೊಯ್ದಿತ್ತು ಮೊಗ್ಗೆಯಿರುವಾಗ ಸಾವು ಬಂದು.''

ಮೌನಸೃಷ್ಟಿ ಪಡಿನುಡಿಯುತಿತ್ತು ಸುತ್ತೆಲ್ಲ ಬಿರಿದ ಶೋಕ,
ಕಲ್ಲು ಕೂಡ ಕಣ್ಣೀರ ಬಿಟ್ಟು ನಿಲುವಂತೆ ದುಃಖ ಮೂಕ ||೮೯||

ಗಾಳಿ ನರಳಿ ನಡೆದಿತ್ತು ಗಂಧವನದಲ್ಲಿ ಮಂದ ಬೀಸಿ,
ಶೋಕವಾಣಿ ನಡೆದಿತ್ತು ಗಂಧವನದಂತರಂಗ ಸೂಸಿ.

ಆರ್ತದುಃಖದಾಕ್ರಂದನಕ್ಕೆ ಹೌಹಾರಿ ದೇವಕನ್ನೆ,
ಮೇಲು ಹೊದಿಕೆಯನು ತೆರೆದು ನೋಡಿದಳು ದುಃಖಮೂಲವನ್ನೆ ॥೯೦॥

## ಭಾಗ ೧೯

ಕಪಿಂಜಲನು ಕುಳಿತಿರಲು ದೇವಮುನಿ ಶವದ ಬಳಿಗೆ ನರಳಿ,
ಮಹಾಶ್ವೇತೆಯೆಳಬಾಳೆಯಂತೆ ಯೆರಗಿದರು ಮೂರ್ಛೆಯುರುಳಿ.

ಗೆಳತಿ ತರಳಿಕೆಯು ಮೆಲ್ಲನೆತ್ತಿ ಭಯಭೀತಚಿತ್ತಳಾಗಿ,
ತೊಡೆಯ ಮೇಲೆ ಮಲಗಿಸಿದಳಾಗ ದೇವಿಯ ಚಿಕಿತ್ಸೆಗಾಗಿ ॥೯೧॥

ತಾಲವೃಕ್ಷ ರಸಲೇಪ ತಂದ ಶ್ರೀಗಂಧ ಬಳಿಯುತಿರಲು,
ನವಿಲುಗರಿಯ ಬೀಸಣಿಕೆ ಬೀಸಿ ತಂಗಾಳಿ ಸುಳಿಯುತಿರಲು.

ಮೂರ್ಛೆಯಳಿದು ಕರಗಿತ್ತು, ಮೆಲ್ಲನೆಚ್ಚತ್ತು ಕುಳಿತುಕೊಂಡು
ಸಖಿಯ ಹೆಗಲಿನೊಳಗೊರಗಿ ಹರಿಸಿ ಕಣ್ಣೀರು ಸುತ್ತ ಕಂಡು ॥೯೨॥

''ಹೊನಲ ವಧುವು ಮುಂಬರಿವ ಮುನ್ನ ಬತ್ತಿಹುದು ಬಾಳಕಡಲು,
ಒಲಿದ ಹೃದಯದಭಿಸಾರ ಭೋಗವನದಲ್ಲಿ ಬಿತ್ತು ಸಿಡಿಲು.

ಮಧುವ ಬಯಸಿ ಬಂದಿರುವ ಹೃದಯ ಪಡೆದಿತ್ತು ಕಾಲಕೂಟ,
ಹಂಸಪಕ್ಷಿಯಿಳಿದಂಥ ಕೊಳವನೊಣಗಿಸಿತು ದೈವದಾಟ'' ॥೯೩॥
''ದಿವ್ಯ ರೂಪದನುರಾಗ ಬಯಸಿ ನಾ ನಿಮ್ಮನರಸಿ ಬಂದೆ,
ಧವಲಹಂಸ ಗಂಧರ್ವರೂಪ ಯೌವನವು ನಿಮ್ಮದೆಂದೆ.

ಒಲಿದ ಹೃದಯದಭಿಸಾರ ಮಿಲನ ಹಾರೈಸಿ ಬಂದೆನಿಲ್ಲಿ,
ವಿಯ ಕೊಡಲಿ ಹೊಡೆದಾಗ ಮರವನೀಬಳ್ಳಿಗಾಸರೆಲ್ಲಿ?'' ॥೯೪॥

''ನೀವೆ ನನ್ನ ಸರ್ವಸ್ವವೆಂದು ಹಾರೈಸಿ ಬಂದೆನಿಲ್ಲಿ,
ತಾಯಿ ತಂದೆ ಪರಿವಾರ ತೊರೆದು ಸರ್ವಸ್ವವೆಂದೆನಿಲ್ಲಿ,

ನಿಮ್ಮ ಕಣ್ಣಿನಲ್ಲಿ ಕಣ್ಣನಿಟ್ಟು ಹಾರೈಸಿ ಬಂದೆನೊಲವು,
ಕುಸಿದು ಬಿತ್ತು ಭೂಕಂಪದಲ್ಲಿ ಹಾರೈಕೆ ನಿಂತ ನೆಲವು'' ॥೯೫॥

## ಭಾಗ ೨೦

''ದಿವ್ಯ ಭೋಗವನು ಬಯಸಿ ಬಂದೆ ನಿಮ್ಮಲ್ಲಿ ನುಡಿಯಿರೊಮ್ಮೆ,
ತುಟಿಯ ತುಂಬ ಮಕರಂದ ಕುಂಭ ತಂದಿರುವೆ ಕುಡಿಯಿರೊಮ್ಮೆ.
ಧವಲ ದಿವ್ಯ ಸೌಂದರ್ಯವೀಣೆಯನುರಾಗ ಮಿಡಿಯಿರೊಮ್ಮೆ,
ಬಾಹುಪಾಶದಲಿ ಗಾಳಿ ಹೊಡೆದ ಎಳಬಾಳೆ ಹಿಡಿಯಿರೊಮ್ಮೆ ॥೯೬॥

ಕೈಜೋಡಿಸುವೆನು ಕೈಲಾಸನಾಥ! ಕಾಪಾಡು ದುಃಖದೊಳಗೆ,
ಗಂಧವನದ ವನದೇವಿ! ನೀಡು ನಮ್ಮವರ ನನ್ನ ಬಳಿಗೆ.
ಓ ಪೃಥ್ವಿಮಾತೆ! ಓ ದೈವ! ಶಿವಶಿವಾ!'' ದೈವಭಿಕ್ಷೆ ಬೇಡಿ,
ಮಹಾಶ್ವೇತೆ ಹಲುಬಿದಳು ಕುಳಿತು ಕಣ್ಣೀರು ಸುರಿಸಿ ನೋಡಿ ॥೯೭॥

ಮಹಾಶ್ವೇತೆ ಹಲುಬಿರಲು ಸುರಿಸಿ ಕಣ್ಣೀರನಿನಿಯಗಾಗಿ,
ಕಪಿಂಜಲನು ಬಳಿಸಾರಿ ನಿಂತು ಕನಿಕರಿಸಿ ಕಂಡು ಬಾಗಿ.
ದೇವಿ ದುಃಖ ಸಂತವಿಸು ನಿನ್ನ ದುರ್ದೈವ ನಮ್ಮದಿಂದು,
ಹೂವಿಗಾಗಿ ಹಾರೈಸಿಬಂದವರ ಸಾವು ಕರೆಯಿತಿಂದು ॥೯೮॥

ಮಹಾಶ್ವೇತೆ ದೇವರ್ಷಿಗಾಗಿ ಹಲುಬಿರಲು ಬಳಿಗೆ ಬಂದು
ಚಂದ್ರಮಂಡಲದ ಯಕ್ಷನೊಬ್ಬ ಪ್ರತ್ಯಕ್ಷನಾಗಿ ನಿಂದು,
ದೇವಮುನಿಯ ಶವವೆತ್ತಿಕೊಂಡು ಸಂತೈಸಿ ನುಡಿದು ಹಾರಿ,
ಮಾಯವಾಗಿ ಮರಳಿದನು ''ಮುಂದಕಿದೆ ಮಿಲನ''ವೆಂದು ಸಾರಿ ॥೯೯॥

ಮೆಲ್ಲನೆದ್ದು ಸಾವರಿಸಿಕೊಂಡು ಕಣ್ಣೀರಕೋಡಿಯೊರಿಸಿ,
ಕಮಂಡಲವ ಕೈಗೆತ್ತಿಕೊಂಡು ವಲ್ಕಲದ ಬಟ್ಟೆ ಧರಿಸಿ.
''ಅಕ್ಷಮಾಲೆ ನನಗಿರಲಿ ಬರಲಿ ವಲ್ಕಲದ ಭೋಗ''ವೆಂದು,
ಜನ್ಮ ಜನ್ಮಗಳ ಮಿಲನಕಾಗಿ ಹಾರೈಸಿ ಕುಳಿತಳಂದು ॥೧೦೦॥

# ೯. ಭಗವಂತನು ನೀರೆರೆದನು

ಹಸಿರು ಹಾಸಿದಂಥ ಬಯಲು ನಡುವೆ ನಿಂತ ಗುಡಿಸಲು
ಕನಕದಾಸ ಧ್ಯಾನಲೀನ ಹೃದಯವೀಣೆ ನುಡಿಸಲು
ಮಧುರಗೀತ ವನ ಪುನೀತಗೊಳಿಸಿ ಸುತ್ತ ಮೊಳಗಿತು
ಮಣ್ಣಿನ ಕಿರಿಹಣತೆಯಲ್ಲಿ ಪರಂಜ್ಯೋತಿ ಬೆಳಗಿತು
ಮರಗಳೆಲ್ಲ ಹೂಬಟ್ಟಲು ತೆರೆದು ಕರೆದು ನಿಂದವು
ನಿರಂಜನರ ಮಂದಾನಿಲ ಧ್ಯಾನ ದೇಹಿಯೆಂದವು
ಧ್ಯಾನಲೀನ ಕನಕದಾಸ ನಲಿದಿರೆ ಮನದಲ್ಲಿ
ಭಗವಂತನು ನೀರೆರೆದನು ತುಳಸೀವನದಲ್ಲಿ ೧

ಹೊಳೆಯುತಿರುವ ಸ್ವರ್ಣಮುಕುಟ ನಡುವೆ ನೀಲ ನವಿಲುಗರಿ
ಪೀತಾಂಬರಧಾರಿ ಬರಲು ಶ್ಯಾಮವರ್ಣ ಶ್ರೀಹರಿ
ಶಂಖಚಕ್ರಗದಾಪದ್ಮ ಚಾರುಕರ್ಣ ಕುಂಡಲ
ಮೈತಳೆಯಿತು ಪರಂಜ್ಯೋತಿ ತುಳುಕಿ ಸಪ್ತಮಂಡಲ
ತೆರೆದ ಹೃದಯಕಮಲವರಳಿ ಗಂಧಪೀಠ ಕೊಟ್ಟಿತು
ಧ್ಯಾನಲೀನ ಕನಕದಾಸ ನಲಿದಿರೆ ಮನದಲ್ಲಿ
ಭಗವಂತನು ನೀರೆರೆದನು ತುಳಸೀವನದಲ್ಲಿ ೨

ಹಿಡಿದ ಸುದರ್ಶನವು ತನ್ನ ಸುತ್ತು ತಾನೆ ತಿರುಗಿತು
ಸ್ವರ್ಣ ಗದಾದಂಡ ಹಸಿರು ಹುಲ್ಲು ಶಯ್ಯೆಗೊರಗಿತು
ಸತ್ಯಶ್ವೇತ ಸುಳಿಯ ಹೊಡೆದ ಪಾಂಚಜನ್ಯ ಬೆಳಗಿತು
ನಭಗಂಭೀರ ವನಸಮೀರವಾಣಿಯಾಗಿ ಮೊಳಗಿತು
ದಲವ ತರುವ ಭಕ್ತವನಕೆ ಜಲವ ತರುವ ಪ್ರೀತಿಯು
ಹೂವು ಕೊಂಡು ಹಣ್ಣು ಕೊಡುವೆನೆಂಬ ಪರಂಜ್ಯೋತಿಯು
ಧ್ಯಾನಲೀನ ಕನಕದಾಸ ನಲಿದಿರೆ ಮನದಲ್ಲಿ
ಭಗವಂತನು ನೀರೆರೆದನು ತುಲಸೀವನದಲ್ಲಿ ೩

ಮಠದ ಪೌಳಿಯಲ್ಲಿ ನಿಂತು ವಾದಿರಾಜಯತಿವರ
ನೋಡುತಿರಲು ಕನಕ ವನದಿ ಸುಳಿಯುವ ಪೀತಾಂಬರ
ಹಿಡಿದ ಮಣ್ಣು ಮಡಿಕೆ ಸ್ವರ್ಣಕುಂಭ. ಜಲವ ಸುರಿಯಿತು
ತುಳಸೀವನ ತಳಿರನೊಡೆದು ಚೆಲುವ ಚೆಲ್ಲವರಿಯಿತು
ವಾದಿರಾಜಯತಿಯು ಕನಕನದಾಸರೆಡೆಗೆ ಬಂದರು
''ಗುಡಿಸಲದೊಳಗಿರುವ ಬೆಳಕು ಗುಡಿಯೊಳಿಲ್ಲ''ವೆಂದರು ೬

## ೧೦. ಕುಬ್ಜಾಂಗನಾ

ಭಗವದ್ಭಕ್ತನ ರಥವಿಳಿದು
ಮಧುರೆಯ ಮಂಗಲಪಥಗಳ ತುಳಿದು
ಬಂದಿರುವರು ಬಲರಾಮ ಯಶೋದಾ
ನಂದನ–ನಂದವ್ರಜ ಬೃಂದಾವನ
ಗೋ ಗೋಪಾಲಕ ಗೋಪೀಜನಮನ
ವಿರಹ ವ್ಯಾಕುಲ ವಿಹ್ವಲಗೊಳಿಸಿ
ಕಾಣುವ ಕಣ್ಣಿಗೆ ಕಂಗೊಳಿಸಿ
ಜಾಂಬೂನದ ರಮ್ಯಾಂಬರವುಟ್ಟು
ಸುವರ್ಣ ಮುಕುಟವ ತಲೆಗಿಟ್ಟು
ದಿಟ್ಟಿಸಿ ನಡೆದನು ಬಲರಾಮ
ಕೋಟಿ ಚಂದ್ರಮರ ಕೋಮಲ
ಶೀತಲ ಕಳೆಯಂತೆ
ಚೆಲುವಿನ ಚೆಲುವೇ ಮೈತಳೆದಂತೆ
ಅರಿಷಿಣ ಮಂಗಲ ವಸನವನುಟ್ಟು
ನವಿಲು ತುರಾಯಿ ಕಿರೀಟವನಿಟ್ಟು
ಕಮಲವದನ ಕಮಲಾಕ್ಷ ಶ್ರೀಧರ
ಸಂಕರ್ಷಣ ಶ್ರೀ ಹರಿ ಮುರುಲೀಧರ
ಜೊತೆ ನಡೆದನು ಮೇಘಶ್ಯಾಮ
ಮನೆ ಮಂದಿರ ಮಾಂದಳಿರಿನ ತೋರಣ
ಉಪವನಗಳ ಕಮ್ಮಲರಿನ ಕಾವಣ
ನೋಡುತ ನಗರದಿ ನಡೆದಿರಲು
ಭಗವದ್ರೂಪ ಸುದರ್ಶನ ಮಾತ್ರಕೆ
ಮಧುರೆಯ ಹೃದಯಗಳರಳಿದವು :
ತಲೆ ಬಾಗಿಸಿ ಕೈಜೋಡಿಸಿ
''ಓಂ ನಮೋ ಭಗವತೇ ವಾಸುದೇವಾಯ''
ಎಂದು ನರಳಿದವು

೨

ನುಡಿದನು ಮಾಧವ ಮೇಘಶ್ಯಾಮ
''ಕೇಳಿಸಿತೇ ಬಲರಾಮ
ಮಧುರೆಯ ಮನೆಗಳ ನರಳಿಕೆಯು?
ಕಾಲನೇಮಿಯೀ ಕಂಸನ ದರ್ಪಕೆ
ಆಸುರವಿಷದಕಾರದ ಸರ್ಪಕೆ
ಹೆಡೆ ಜಡೆಗಟ್ಟಿವೆ ಪೂತ್ಕರಿಸಿ.
ಬಾಗಿಲ ತಲೆಗಳ ತೊತ್ತುಳಿದಾಟಕೆ
ತಾಮಸ ಸಿಂಹಾಸನದುರಿದಾಟಕೆ
ದುರ್ಬಲವಾಗಿದೆ ಕೆರಳಿಕೆಯು
ನೆನಪಿದೆಯೆ ಕಾಲಂದಿಯ ಮಡುವು?'' ೨

೩

ಒಮ್ಮಿಂದೊಮ್ಮೆಲೆ ಬೀದಿಯ ನಡುವೆ
ಪಾಟಲ ವರ್ಣದ ವಸನವನುಟ್ಟು
ಗಿಳಿಹಸಿರಿನ ಮೇಲುದವನೆ ತೊಟ್ಟು
ಶ್ರೀಗಂಧದ ಹೊಂಬಟ್ಟಲು ಹಿಡಿದು
ಮೆ... ಲ್ಲ... ಗೆ... ಮೆ... ಲ್ಲ... ಗೆ... ನಡೆದು
ಕಮಲಾನನೆ ಕುಬ್ಜಾಂಗನೆ ಬರಲು
ಮಣಿಸಿದೆ ಜನ್ಮಾಂತರಗಳ ವಿಯ ವಿಕಾರ
ಸ್ವೈರ್ರ್ಯಯ ಕೋಮಲ ಸುಕುಮಾರ
ಬಾಗಿದ, ಬೆನ್ನು, ತ್ರಿವಕ್ರಿಯ ರೂಪ
ಹೊರಲಾರದೆ ಹೊತ್ತಿದೆ ದೈವದ ಶಾಪ
ಪರಮಾನಂದ ಮುಕುಂದನ ಕಂಡು
ದಿಟ್ಟಿಸಿ ನೋಡುತ ನಿಂತಲ್ಲಿಯೆ ನಿಂತಿರಲು
ಪ್ರಕೃತಿಯ ದಿಗ್ಬಂಧನಗಳ ಮರೆಗೆ
ಪಲ್ಲಟಿಸುವ ಸುಖದುಃಖದ ತೆರೆಗೆ

ದೈವದ ದಾರುಣ ಸೆರೆಗೆ
ಕಳವಳಿಸುವ ಮಾನವ ಜೀವನದಾಕ್ರಂದನದಂತೆ
ಮೂಕವೇದನೆಗೆ ಮಹಾಪೂರ ಬಂದಂತೆ
ಕುಬ್ಜೆಯು ದಳದಳದಳ ಕಣ್ಣೀರನು ಸುರಿಸಿರಲು
ಭಗವಂತನ ಮನ ಕರಗಿರಲು
ದೀನಾಕ್ಷಿಯ ಕಣ್ಣೀರುಗಳಿಳಿದು
ಪತಿತೋದ್ಧಾರನ ಚರಣಕಮಲಗಳ ತೊಳೆದು
ಕನಿಕರವಲಯದ ಕಂಬನಿಯುರುಳಿದವು
ಭಗವಂತನ ಚರಣಾರ್ಪಿತವಾಗಿ
ಕಳವಳಿಸುತ ಬಿಡುಗಡೆಗಾಗಿ
''ಓ ನಮೋ ಭಗವತೇ ವಾಸುದೇವಾಯ''
ಎಂದು ನರಳಿದವು ೩

ಕರುಣಾಕರನನು ಕಂಪಿಸಿ ನುಡಿದನು :
''ಹೇ ದೀನಾಕ್ಷಿಯೆ ಚಂದನಕನ್ನೆಯೆ
ನೀನಾರಲ್ಲಿಗೆ ನಡೆದಿರುವೆ?
ಶ್ರೀಗಂಧದ ಹೊಂಬಟ್ಟಲು ಕೈಯಲಿ ನೀ
ನೇತಕೆ ಹಿಡಿದಿರುವೆ?''
ಚಂದ್ರಾನನೆ ಸೈರಂಧ್ರಿಯು ನುಡಿದಳು :
''ಕುಬ್ಜಾಂಗನೆ ನಾ ಕಂಸನ ಚಂದನ
ದೂಳಿಗದೊಳಗಿಹೆನು
ವಿಷವಡವಾಗ್ನಿಯ ದೈತ್ಯಶರೀರಕೆ
ಚಂದನ ಲೇಪನ ಫಲವೇನು?'' ೪

ಭಗವಂತನ ಬಳಿಸಾರುತ ನುಡಿದಳು
''ಪರಿಗ್ರಹಿಸಿರೀ ಶ್ರೀಗಂಧ''
ವೆನ್ನುತ ಹೊಂಬಟ್ಟಲು ಭಗವಂತನ ಕೈಗಿರಿಸಿ
''ಕೇಶವ ನಾರಾಯಣ ಗೋವಿಂದ
ಮಾಧವ ಮೇಘಶ್ಯಾಮ ಮುಕುಂದ

ಮೋಹನ ಪುರುಷೋತ್ತಮ ಅರವಿಂದ
ಗೋ ಗೋಪಾಲಕ ಪರಮಾನಂದ
ಗೋವರ್ಧನ ಗಿರಿಧಾರಿ ಮುರಾರಿ
ವನಮಾಲಾ ಪೀತಾಂಬರಧಾರಿ
ಕಮಲವದನ ಕಮಲಾಕ್ಷ ಶ್ರೀಧರ
ಸಂಕರ್ಷಣ ಶ್ರೀಹರಿ ಮುರಲೀಧರ
ನಾರಾಯಣ ಮಧುಸೂದನ ಮೋಹನ
ವಾಸುದೇವ ಪ್ರದ್ಯುಮ್ನ ಜನಾರ್ದನ
ನಮೋ ನಮೋ ಹೇ ಚಂದ್ರ ಶತಾನನ
ನಮೋ ನಮೋ ನಿಖಿಲಾತ್ಮ ನಿರಂಜನ''
ಧ್ಯಾನಕೆ ಸೋಲುವ ದೇವರ ಸ್ಮರಿಸುತ
ಲೇಪಿಸಿದಳು ಶ್ರೀಗಂಧವನು.
ಆನಂದದ ಬುದ್ಬುದಗಳ ತೆರೆಸಿ
ಹೃಷಿಕೇಶ ನುಡಿದನು ಕನಿಕರಿಸಿ
''ಕಳವಳಿಸದಿರೇ ಕುಬ್ಜಾಂಗನೆ
ನಾ ಬಂದುದೆ ಬಿಡುಗಡೆಗಾಗಿ'' ೫

''ಶ್ರೀಗಂಧಕೆ ಮನಸೋತಿಹೆನೆಂದು
ಪ್ರತಿಫಲವಿದೆಕೋ ಬಿನ್ನಹ'' ಕೆಂದು
ಮುರಲೀಧರನನು ಕಂಪಿಸಿ ನುಡಿದನು
ಆಲಂಗಿಸಿದನು ಕುಬ್ಜಾಂಗನೆಯನು
ಬಿಡುಗಡೆಯಿಂದ ಸಮಾಗಮವುಂಟೆ?
ತ್ರಿವಿಕ್ರಮನ ಕಾರುಣ್ಯದ ಸೋಂಕಿಗೆ
ಅವಳ ತ್ರಿವಕ್ರತೆಯಡಗಿತ್ತು
ಅಪ್ಸರೆಯಾದಳು
ಕುಬ್ಜೆಯು ನುಡಿದಳು :
''ಗೋಪಿಯಾಗಿ ಶ್ರೀಗಂಧವನಿತ್ತನು
ರಾಸಕ್ರೀಡೆಯು ನಮಗೆಂದು?'' ೬

## ೧೧. ಕಂಡಿರೇನು ಕಂದನ

''ಅಮ್ಮ ನಿಮ್ಮ ಮನೆಗಳಲ್ಲಿ
ಕಂಡಿರೇನು ಕಂದನ?''

ಗೋಪಿ ಮ್ಲಾನವದನೆಯಾಗಿ
ನಂದಗೋಕುಲದಲಿ ಕೂಗಿ
ಹುಡುಕಿದಳು ಮುಕುಂದನ.

ಜಾವದಲ್ಲಿ ಹೂವಿನಲ್ಲಿ
ಅಮೃತಬಿಂದು ಮೂಡಿದಾಗ
ಪಾರಿಜಾತ ವಾರಿಜಾತ
ದಲ್ಲಿ ದುಂಬಿ ಹಾಡಿದಾಗ
ತಳಿರ ತೊಂಗಲಲ್ಲಿ ಕೂಗಿ
ಉಷೆಯಲಂಪಿನಲ್ಲಿ ಕೂಗಿ
ಗಾಳಿ ತಂಪು ತೀಡಿದಾಗ
ಹಸುಗಳೆದ್ದು ಹಸಿರ ಬಯಸಿ
ಗುಡ್ಡದತ್ತ ನೋಡಿದಾಗ
ಕೈಯಲಿ ಕಡಗೋಲು ಹಗ್ಗ
ಹಿಡಿದು ಮಾಯವಾದನು
ನನ್ನ ಮುದ್ದು ಕಂದ ಕೃಷ್ಣ
ಎಲ್ಲೊ ಏನೋ ಹೋದನು.

ಹಡಗು ಹತ್ತಿ ಬಂದ ಕೃಷ್ಣ
ಉಡುಪಿಯಲ್ಲೆ ಗೋಕುಲ
ಅಲ್ಲಿ ಮಾತ್ರ ಹುಡುಕಿ ಹುಡುಕಿ
ಮಗುವು ಕಾಣನೆಂದು ಮಿಡುಕಿ

ತಾಯಿ ತುಂಬ ವ್ಯಾಕುಲ.
''ಅಮ್ಮ ನಿಮ್ಮ ಮನೆಗಳಲ್ಲಿ
ಕಂಡಿರೇನು ಕಂದನ?''

ಗೋಪಿ ಮ್ಲಾನ ವದನೆಯಾಗಿ
ನಂದಗೋಕುಲದಲಿ ಕೂಗಿ
ಹುಡುಕಿದಳು ಮುಕುಂದನ.

## ೧೨. ಬುದ್ಧದೇವ

೧

"ಬುದ್ಧಮ್ ಶರಣಮ್ ಗಚ್ಛಾಮಿ;
ಸಂಘಮ್ ಶರಣಮ್ ಗಚ್ಛಾಮಿ;
ಧರ್ಮಮ್ ಶರಣಮ್ ಗಚ್ಛಾಮಿ."
ಬೆಳುದಿಂಗಳಿನಿರುಳಿನಲ್ಲಿ,
ವಿರಹ ವೀಣೆ ಕೆರಳಿದಲ್ಲಿ,
ಸ್ವಪ್ನಮಾಯೆಯರಳಿದಲ್ಲಿ
ಸೃಷ್ಟಿಯೊಡಲ ಭಾರ ಹೊತ್ತು,
ಭೂಮಿ ತನ್ನ ಸುತ್ತುಮುತ್ತು,
ಕಡಲ ವಿರಹ ಮೊರೆಯುತಿತ್ತು.
ಚಂದ್ರಶಿಲೆಗಳೊಸರುವಲ್ಲಿ
ಇಂದ್ರಗೋಪರುಸಿರುವಲ್ಲಿ
ಗಂಧವನದ ಹಸಿರಿನಲ್ಲಿ,
ಹಾಲುಹೊನಲು ಹರಿಯುತಿತ್ತು.
ನದಿಯ ತೆರೆಗಳೊಂದಕೊಂದು,
ಮಳಲದಂಡೆಗೋಡಿಬಂದು,
ಚಂದ್ರಕಿರಣದಮೃತ ಮಿಂದು,
ಪದ್ಮಪಟಲ ಮೆರೆಯುತಿತ್ತು.
ಕೋವಿದಾರ ಮರದ ಸಾಲು,
ಕುಡಿಯುತಿರಲು ಮುಗಿಲ ಹಾಲು,
ತೇನೆಹಕ್ಕಿ ತನ್ನ ಪಾಲು,
ಬೇಡಲು ಹಾಽತೊರೆಯುತಿತ್ತು.
ರಜತಗಿರಿಯನೇರಿ ಹೋಗಿ,
ಮಲಯವಧುವಿನೊಲವಿಗಾಗಿ,
ಚಂದನಗಳ ಚೆಲುವೆಗಾಗಿ,

ಗಾಳಿ ಹಲುಬಿ ಕರೆಯುತಿತ್ತು.
ಇರುಳಿನಲರಪಟಲವರಳಿ,
ಹೃದಯವಿರಹ ಕಂಪು ಕೆರಳಿ,
ಬಳ್ಳಿಶಯ್ಯೆಯಲ್ಲಿ ಹೊರಳಿ,
ಮೊಗ್ಗೆ ಕಣ್ಣು ತೆರೆಯುತಿತ್ತು.
ಯೋಗಮುದ್ರೆ ಮೂಡಿದಲ್ಲಿ
ನೆರೆಯ ದಟ್ಟ ಕಾಡಿನಲ್ಲಿ
ಬೆಳೆದ ಗಿಡದ ಗೂಡಿನಲ್ಲಿ
ತಾಯಿಹಕ್ಕಿ ರೆಕ್ಕೆ ತೆರೆದು,
ಬಳಿಗೆ ತನ್ನ ಮರಿಯ ಕರೆದು,
ಅದಕೆ ಲಾಲಿಯೊರೆಯುತಿತ್ತು.
ಕೇಳಿ ದೂರ ಗಾಳಿಗೊಳಲು,
ಕುಣಿಯುತಿರಲು ಬೆಳಕು ನೆಳಲು,
ಹರಿಣವನದ ಹಸಿರು ಬಯಲು,
ತೊಡೆದು ಚಂದ್ರ-ಚಂದನ,
ತಾಯಿ ಜಿಂಕೆ ಮಮತೆವೆರಸಿ,
ನಾಲಗೆಯಲಿ ಜೇನ ಸುರಿಸಿ,
ಕೊರಳಮೇಲೆ ಕೊರಳನಿರಿಸಿ,
ಮೂಸುತಿತ್ತು ಕಂದನ.
ಕಣ್ಣು ತೆರೆದ ಮುಗಿಲ ಚಿಕ್ಕೆ,
ಕಂಡಿತಿವರ ಕರುಳತೆಕ್ಕೆ,
ತಾಯ ಮಾಯ ಬಂಧನ.
ಜೊನ್ನವೀಣೆ ಮಿಡಿಯುತಿತ್ತು,
ಯಕ್ಷವಾಣಿ ನುಡಿಯುತಿತ್ತು,
ನೆಲಮುಗಿಲಿನ ಸ್ಪಂದನ.

೨

ರೋಹಿಣೀ ತಟಾಕದಲ್ಲಿ
ಬೆಳುದಿಂಗಳವಸನವುಟ್ಟು

ಮಹಾಮೌನ ಮುಕುಟವಿಟ್ಟು
ರೌಪ್ಯಕವಚ ಮೈಗೆ ತೊಟ್ಟು
ಕಪಿಲವಸ್ತು ನಿಂದಿತು.
ಮುಗಿಲ ಹಾಲಿನಂಗಳದಲಿ,
ತುಳುಕಿದ ಬೆಳುದಿಂಗಳಿನಲಿ,
ಗುಡಿಗೋಪುರ ಮಿಂದಿತು.
ನಿದ್ರೆ ಮಾಯೆಗೋಲು ಹಿಡಿದು,
ರಾಜಬೀದಿಗಳನು ನಡೆದು,
ಸ್ವಪ್ನ ಮಧುರವೀಣೆ ಮಿಡಿದು,
ಶಾಕ್ಯನಾಡ ಕಂಗಳಲ್ಲಿ
ಸಮ್ಮೋಹನವೆಂದಿತು.
ಮನೆಮನಗಳ ಕಣ್ಣು ಮುಚ್ಚಿ
ಆಸೆಗೆರಡು ಬಣ್ಣ ಹಚ್ಚಿ
ನವನವೀನ ಪರೆಯ ಬಿಚ್ಚಿ
ನಾಡ ಬಳಸಿ ಬಂದಿತು.
ಹಗಲು ಬಾಳ ಬವರ ಸೋತು,
ಆಸೆ ನಿರಾಸೆಯಲಿ ಹೂತು.
ಜನನ ಮರಣದೆಳೆಗೆ ಜೋತು,
ನಿಂತ ಜೀವ ನೊಂದಿತು.
ಹಾಲು ಬೆಳಕು ತೆರೆಯನೆಳೆದು,
ತುಟಿಗೆ ಸ್ವಪ್ನ ಜೇನು ಬಳೆದು,
ಮಂತ್ರಮುಗ್ಧ ಮನವ ಸೆಳೆದು,
ಜಗತ್‌ಶೂನ್ಯ ಬಾನನಿಳಿದು,
ಬಂಧನವನೆ ತಂದಿತು.
ದುಃಖದ ತಿರುಗಣೆಗೆ ಸುಳಿದು,
ಅಂಧಂತಮದಾಳಕಿಳಿದು,
ಜೀವಕಮಲ ಕಂದಿತು.
ಬೆಳ್ಳಿಯೊಪ್ಪ ತೊಟ್ಟ ಬೀದಿ,
ಹೊಳೆದು ಹರಿದವೆಷ್ಟೊ ಹಾದಿ,

ಸಾಲು ಸಾವಿರಾರು ಮರ.
ಒಂದೊ ಎರಡೊ ಹಕ್ಕಿ ಸ್ವರ,
ತಾಯಿ ಕಪಿಲೆಗಾಗಿ ಕನಲಿ,
'ಅಂಬೆ'ಯೆಂದೊರಲುತಿತ್ತು.
ತಾಯ ನೆನೆದು ಕರೆಯುತಿತ್ತು,
ಕಪಿಲೆಯ ಹಸುವೊಂದು.
ಶಾಕ್ಯನಾಡ ರಾಜಧಾನಿ,
ಇರುಳು ಮಹಾ ಮೌನಧ್ಯಾನಿ-
ಯಂತೆ ನಿಂತು ಮೆರೆಯುತಿತ್ತು,
ಕಪಿಲವಸ್ತುವಂದು.
ಎಲ್ಲೆಲ್ಲೂ ಮರ್ತ್ಯಲೋಕ,
ಬಂಧನದಲಿ ಸಿಲುಕಿ ಮೂಕ-
ವೇದನೆಯಲಿ ನಿತ್ಯಶೋಕ,
ಗಾಢನಿದ್ರೆ ಪಡೆಯಿತು.
ನೆನೆದು ಮುಗಿಲ ಮುಕ್ತಿಹೂವ,
ಬಂಧನದಲಿ ನೊಂದ ಜೀವ,
ನೆಲ ಮುಗಿಲಿಗೆ ನುಡಿಯಿತು :
''ದುಃಖಕೆ ಕೊನೆಯೆಂದು?''

೩

ಬುದ್ಧದೇವ ಸೆರೆಮನೆಯಲಿ,
ಶುದ್ಧೋದನನರಮನೆಯಲಿ !
ಇರುಳ ಮೌನವನ್ನೆ ಸೀಳಿ,
ಸಪ್ತಸ್ವರ ಲೋಕವಾಳಿ,
ದಂಡಿಗೆ ಝೇಂಕರಿಸುತಿರಲು,
ನಾದದ ಹೊಳೆ ಹರಿಸುತಿರಲು,
ವೀಣೆ ಜೇನು ಸುರಿಸುತಿರಲು,
ಸ್ವರತರಂಗದುನ್ಮದ!
ರಾಗ ರಾಸಲೀಲೆಯಾಡಿ,
ಸ್ವರಾಲಾಪ ತಾಳಗೂಡಿ,

ಮೃದುಮೃದಂಗದುದ್ಬುದ
ನಾದನ ನಿಸ್ವನ ಬಲೆ ಹೆಣೆದಿರಲು,
ನೂಪುರ ಪೈಜಣ ಝುಣಝುಣಿಸಿರಲು,
ಸ್ವರಲೋಕದ ತೆರೆ ದುಮುದುಮಿಸಿರಲು,
ಝೇಂಕರಿಸಿತು ಹೂದಂಡಿಗೆ ಕೊರಲು,
ಜೇನಿನ ಹೊಳೆಯನು ಮೀಟಲು ಬೆರಲು.
ವಿಧವಿಧವರ್ಣಗಳುಡಿಗೆಯನುಟ್ಟು
ಕಾಮನಬಿಲ್ಲಿನ ತೊಡಿಗೆಯ ತೊಟ್ಟು
ಹೂವಿನ ಬಾಣಕೆ ಗರಿಗರಿ ಮೂಡಿ,
ಕಣ್ಣಿಗೆ ಭೋಗದ ಕೆಚ್ಚನೆ ಹೂಡಿ,
ಯೋಗದ್ರುಮದಲಿ ಬರಸಿಡಿಲಾಡಿ
ಚಂದ್ರನ ಬಿಂಬದ ಚೆಲುವನೆ ತುಂಬಿದ,
ರಾಗದ ಭೋಗದ ಮದವನೆ ತುಂಬಿದ,
ಕಾಮದ ಕಂಪಿನ ಹೂನಗೆಯರಳಿಸಿ,
ಭೋಗದ ಕುಲುಮೆಯ ಕೆಂಡವನರಳಿಸಿ,
ಬಣ್ಣದ ಕೋಲ್ಮಿಂಚಿನ ಗೆರೆ ಕೊರೆದು,
ಬಗೆಯೊಳಸಂಚಿನ ನಗೆಮಿಂಚೆರೆದು,
ಮೃದುಪದಗತಿಯಲಿ ಮೆಲ್ಲಗೆ ಮೊರೆದು,
ಮದನವಿಹಂಗಮ ರಂಗವ ತೆರೆದು,
ನೂಪುರಚರಣದ ಮಂಜುಳ ನಾದಕೆ,
ಭೋಗದ ಹೂವಿನ ರಾಗೋನ್ಮಾದಕೆ,
ನವಯೌವನೆಯರ ಮಧುರ ಸುಹಾಸ,
ಭೋಗಮಯೂರದ ನೃತ್ಯವಿಲಾಸ,
ಕನ್ನಿಕೆಯರು ಕುಣಿದಾಡಿರು.
ಕಣ್ಣಿಗೆ ಚೆಲುವಿನ ಬಣ್ಣದ ಹೊಳೆಯನೆ,
ಹರಿಸುವ ಲಾಸ್ಯವನಾಡಿದರು.
ಸಿದ್ಧಾರ್ಥನ ಮನ ಹೊರಳಿಸುವಂತೆ,
ಬುದ್ಧದೇವ ಮನ ಕೆರಳಿಸುವಂತೆ,
ತ್ಯಾಗದ ಶಿಖರವನುರುಳಿಸುವಂತೆ,

ಸುತ್ತೆಲ್ಲಾ ಸುಳಿದಾಡಿದರು.
ಕಣ್ಣ ಬಳಸಿ ಬರಲು ನಿದ್ರೆ,
ತಡವರಿಸಲು ಕಲಾಮುದ್ರೆ,
ಲಾಸ್ಯವಾಡಿ ದಣಿದ ಹೆಜ್ಜೆ
ಘುಲುಕುತಿರಲು ಮಂದ ಗೆಜ್ಜೆ
ಮಿಡಿದ ಬೆರಳು ತಡೆದು ಬರಲು,
ನುಡಿದ ಕೊರಲು ಮೌನವಿರಲು,
ಬುದ್ಧದೇವ ಪೀಠವಿಳಿದು,
ಬಂದು ನುಡಿದನವರಿಗಂದು :
''ಲಾಸ್ಯವಾಡಿ ದಣಿದ ಮುದ್ದು
ನವಿಲುಗಳೇ ಮಲಗಿರಿ.''

ೞ

ಸಪ್ತಸ್ವರಗಳ ತರಂಗ,
ನಾದಲೋಕದಂತರಂಗ;
ಸೀಳಿ ಹೊಡೆದು ಸಾರುತಿತ್ತು,
ದುಃಖ ತನ್ನ ಡಂಗುರ.
ಸುಪ್ತಲೋಕದುಸಿರ ತೂಗಿ,
ಇರುಳ ಮರೆಗೆ ನಿಂತು ಕೂಗಿ,
ಬದುಕಿಗೆಲ್ಲ ಸಾರುತಿತ್ತು
ಜೀವಿತ ಕ್ಷಣಭಂಗುರ.
ಇಂದ್ರಶಿಲ್ಪ ಕೊರೆದ ಕನಸು,
ಸ್ತೂಪ ಕಟ್ಟುತಿರಲು ಮನಸು,
ಬುದ್ಧದೇವ ನಡೆದು ಬಂದು,
ಚಂದ್ರಶಾಲೆಯಲ್ಲಿ ನಿಂದು,
ಸುತ್ತಬಳಿಸಿ ನೋಡುತಿರಲು,
ತುಂಡು ಮೋಡ ಓಡುತಿರಲು,
ಭಿಕ್ಕುಗಣ ವಿಹಾರದಂತೆ,
ಬಯಲಿನಾಚೆಯಲ್ಲಿ ನಿಂತ,

ರಜತಗಿರಿಯ ಕಂಡನು.
ನಿರ್ವಾಣದ ಜೇನನರಸಿ,
ಭೋಗದ ಕರೆ ನಿರಾಕರಿಸಿ,
ಮೋಹದ ಮೇಲುದವ ತೆರೆಸಿ,
ಬೆಳಕಿನನ್ನವುಂಡನು.
ಮರ್ತ್ಯವೊಂದಪಾರ ಕಡಲು,
ಜನನ ಮರಣವಿದರ ಮಡಲು,
ಇಲ್ಲಿ ಪಯಣ ನಡೆದ ಜೀವ,
ನೆನೆದುಕೊಂಡು ಮುಕ್ತಿಹೂವ,
ನಡೆಯುತಿರಲು ಮಹಾಯಾತ್ರೆ,
ಪಯಣ ಕೊನೆಯ ಮುಟ್ಟಬಹುದೆ?
ತಡಿಗೆ ಬಂದು ತಟ್ಟಬಹುದೆ?
ಮಹಾಶಾಂತಿ ಹುಟ್ಟಬಹುದೆ?
ನರಳಿ ನಡೆದ ದುಃಖಪಾತ್ರೆ,
ಜೀವ-ಕೇಳಿ ಕೂಗಲು,
ಮಹಾಕರುಣಿ ಬುದ್ಧದೇವ
ಬಂಧದಾಚೆ ಕಾಣಲೆಂದು,
ಸಂಸಾರವ ಮಾಣಲೆಂದು,
ಅಂತಃಪುರದೊಳಗೆ ಬಂದು,
ಕನ್ನೆವಾಡ ನೋಡಲು,
ಲಾಸ್ಯವಾಡಿ ದಣಿದ ಹೆಣ್ಣು
ನಿದ್ರೆ ತೆರೆಯನೆಳೆದ ಕಣ್ಣು
ಮುಚ್ಚಿ ಮಲಗಿಕೊಳ್ಳಲು.
ಮೆಲ್ಲಮೆಲ್ಲನಡಿಯನಿಟ್ಟು
ನಿರ್ವಾಣದ ಪಣವ ತೊಟ್ಟು
ಸಿದ್ಧಾರ್ಥ ಕುಮಾರ ಬಂದು,
ನೋಡೆ ಹೊಸ್ತಿಲಲ್ಲಿ ನಿಂದು,
ರಾಜಸತಿ ಯಶೋಧರೆ-
ಪವಡಿಸಿರಲು ಶಯ್ಯೆಯಲ್ಲಿ,

ರಾಹುಲನೆಡೆ ತೋಳ ಚೆಲ್ಲಿ,
ಕರುಣೆ ಕೈಯನ್ನೆತ್ತಿ ನಿಂದು,
ಅಭಯ ವಾಣಿ ನುಡಿಯಿತಂದು :
''ಬದ್ಧರಾಗಿ ಬಂದವರೇ,
ಬುದ್ಧರಾಗಿ ತೆರಳಿರಿ.''

ೞ

ವೈಶಾಖ ಶುಕ್ಲ ಪೂರ್ಣಿಮಾ.
ನಿರ್ವಾಣದ ಕಮಲವರಳಿ–
ದಂತೆ ಹೊಳೆವ ಚಂದ್ರಮ.
ಶಾಕ್ಯಕುಲದ ಕೀರ್ತಿವಲ್ಲಿ
ಬಳ್ಳಿವರೆದು ಕೊನರುವಲ್ಲಿ
ಬುದ್ಧದೇವ ನಡೆಯುವಲ್ಲಿ
ಮಣ್ಣು ಪುಣ್ಯ ಪಡೆಯುವಲ್ಲಿ
ಚರಣಕೆ ಹುಡಿ ಹೂವ ಚೆಲ್ಲಿ
ಮುಕ್ತಿ ಮುದ್ರೆ ಮೂಡುವಲ್ಲಿ
ರಾಜಬೀದಿ ಚಾಚಿತು.
ಮನದ ಕತ್ತಲೋಡುವಲ್ಲಿ
ಬೆಳಕು ಹಿಗ್ಗಿ ಹೀಚಿತು.
ಚಾರಣರೇ ಹಾಡುವಲ್ಲಿ
ಸಿದ್ಧಪುರುಷರಾಡುವಲ್ಲಿ
ದುಃಖ ಮರೆಯ ಮಾಚಿತು.
ನುಸುಳಿ ನಡೆದ ಮೂರು ನೆರಳು,
ಮುಂದೆ ಮುಂದುವರಿದವು.
ಬೆಳಕಿನ ಹೊಳೆ ಹರಿಯಲೆಂದು,
ತುಂಡು ಮೋಡ ಸರಿದವು.
ಸಿದ್ಧಿ ಪೂರ್ಣವಾಗಲೆಂದು,
ಬುದ್ಧದೇವನೊಡನೆ ಬಂದು,
ರಾಜಕುದುರೆ ಕಂಥಕ!

ಕೊನೆಯ ಸೇವೆ ಸಲ್ಲಲೆಂದು,
ಹಯವ ಹಿಡಿದ ಛಂದಕ!
ನಾಲ್ಕು ಹೆಜ್ಜೆ ನಡೆದು ಬರಲು,
ಅಲ್ಲಿ ದಾರಿ ಕವಲೊಡೆಯಲು,
ಛಂದಕ ಕಂಬನಿ ಮಿಡಿಯಲು,
ನುಡಿದು 'ಸ್ವಸ್ತಿ ವೃದ್ಧ ಜೀವ!'
ಹಯವನೇರಿ ಬುದ್ಧದೇವ,
ಅಭಯ ಮುದ್ರೆ ತಳೆಯಲು,
ಬಂಗಾರದ ರೆಕ್ಕೆ ಮೂಡಿ,
ಕಂಥಕ ನೆಲ ತುಳಿಯಲು :
ಬಯಲು ಕೊಳ್ಳ ಗಿರಿಯ ನೆಗೆದು,
ಹರಿಣ ವನದೊಳಿಳಿಯಲು,
ಸುತ್ತಲು ಸುಕುಮಾರ ರೂಪ,
ಹಿಡಿದು ಕನಿಸಿನಿಂದ್ರದೀಪ.
ಬೆಳಕು ಕಟ್ಟುತಿರಲು ಸ್ತೂಪ,
ಬುದ್ಧದೇವ ಪದ್ಮಪಾಣಿ,
ತಿಳಿವಿನೊಂದು ತೊಟ್ಟಿಲಲ್ಲಿ
ನಿರ್ವಾಣದ ಬಟ್ಟಲಲ್ಲಿ
ಬೋಧಿವೃಕ್ಷದಡಿಗೆ ಕುಳಿತು
ಕರುಣೆಯ ಸುಧೆಯುಂಡನು,
ತ್ಯಾಗ ಪ್ರೀತಿ–ಚಿಗಿತು ನಿಂತ,
ಸತ್ಯವೃಕ್ಷ ಕಂಡನು.
ಮೊಳಗುತಿರಲು ಬುದ್ಧವಾಣಿ,
ಜೀವರೆಕ್ಕೆ ಪಡೆಯುತಿತ್ತು,
'ಊರ್ಧ್ವ'ಗತಿಯ ನಡೆಯುತಿತ್ತು
ಬುದ್ಧಸೃಷ್ಟಿ ನುಡಿಯುತಿತ್ತು:
"ಬುದ್ಧಮ್ ಶರಣಮ್ ಗಚ್ಛಾಮಿ;
ಸಂಘಮ್ ಶರಣಮ್ ಗಚ್ಛಾಮಿ;
ಧರ್ಮಮ್ ಶರಣಮ್ ಗಚ್ಛಾಮಿ."

## ೧೩. ದೂರು

ಗೋಪಿಯರು:
''ಒಳ್ಳೆಯದೇನೆ ಇದು – ಯಶೋದೆ
ಒಳ್ಳೆಯದೇನೆ ಇದು?''

ಯಾರೂ ಇಲ್ಲದ ಹೊತ್ತಿಗೆ ಬರುವನು
ಹಾಲು ಮೊಸರು ಬೆಣ್ಣೆಗೆ
ಹಿಂಡುಹುಡುಗರನೆಲ್ಲ ಕೂಡಿಸಿ
ಕೊಂಡು ಒಬ್ಬರ ಮೇಲೆ ಒಬ್ಬರು
ಪುಂಡತನದಲಿ ಮೊಸರು ಬೆಣ್ಣೆಯ–
ನುಂಡು ಬೆಕ್ಕಿಗೆ ತಿನಿಸಿ ಹೋಗುವ. ೧

ಅಡಕಲಿನೊಳಗೇರಿಸಿ, ಇಟ್ಟಂಥ
ಮಡಕೆಯೊಡೆದು ಸೋರಿಸಿ
ಕೊಟ್ಟಿಗೆಯ ಹಸುಗಳಿಗೆ ಕೊರಳಿನ
ಕಟ್ಟು ಬಿಡಿಸಲು ಗೋವುಗಳಿಗಿರು
ವಷ್ಟು ಹಾಲನು ಕುಡಿಸಿ ನಮಗೊಂ
ದಿಷ್ಟು ಉಳಿಸದೆ ಕೆಡಿಸಿ ಬಿಡುವನು. ೨

ಗೋಪಿಯರ ಕಂಡರೆ ಕೊಡುವನು
ಎಲ್ಲೂ ಇಲ್ಲದ ತೊಂದರೆ
ನೀರಿಗಿಳಿದರೆ ನಾವು ಸ್ನಾನಕೆ
ಸೀರೆಗಳ ಕದ್ದೊಯ್ದು ಮರವನು
ಏರಿ ಕುಳಿತವ ಕೊಳಲನೂದುತ
ಬಾಲೆ ಕೈಮುಗಿಯೆಂದು ಕೇಳುವ. ೩

ಯಶೋದೆ :
''ಸುಮ್ಮನೆ ದೂರುವಿರೆ ಕಂದನ
ಸುಮ್ಮನೆ ದೂರುವಿರೆ
ಇಷ್ಟು ಹೊತ್ತಿನವರೆಗೆ ಹರಿಯನು
ಕಟ್ಟಿಹಾಕಿದೆ ವರಳುಕಲ್ಲಿಗೆ
ಬಿಟ್ಟು ಸರಿದಾಡಿಲ್ಲ ಕಂದನಿ
ಗಿಷ್ಟು ಮಾತುಗಳನ್ನು ಆಡುವ ೪

ಒಳ್ಳೆಯದೇನೆ ಇದು ಗೋಪಿಯರೆ
ಒಳ್ಳೆಯದೇನೆ ಇದು''

## ೧೪. ಪಯಣ

೧

ಬರ್ದಿಲಪಥವಿದ್ದು ಸುವರ್ಣ ರಥವಿದು, ಮುತ್ತಿನ ಮಂಟಪ ಕಂಬಗಳು.
ನೀಲಿಮರತ್ನದ ವಲ್ಲರಿಯಂಚಿಗೆ ಕೆತ್ತಿದ ಚಿನ್ನದ ಗೊಂಬೆಗಳು
ಪಾಟಲವರ್ಣದ ಪೀಠದ ಸುತ್ತಲು ಝುಲ್ಲರಿಸಿದ ಹೂಮಾಲೆಗಳು
ಕಂಡರಿಸಿದ ಗ್ರಹಮಂಡಲದಂಚಿಗೆ ಕಾಂಚನ ತೋರಣದೋಲೆಗಳು
ಉದಯಾದ್ರಿಯ ರವಿಮಂಡಲ ರಾಗದ ಚಕ್ರಗಳೆಸೆದವು ಮಾಟದಲಿ
ಹೊಳೆಯಿತು ಪುಣ್ಯ ಶತಕ್ರತು ಸಿದ್ಧಿಯ ವರ್ತುಲವಿಂದ್ರ ಕಿರೀಟದಲಿ
ಬಿಳಿಗುದುರೆಯ ಕಡಿವಾಣವ ಸಡಿಲಿಸಿ ಮಾತಲಿ ಕುಳಿತನು ಮುಂಬದಿಗೆ
ತಾಮಸ ಗಿರಿಗಳ ಸೀಳುವ ತಾಪಸ ವಜ್ರಾಯುಧವಿರೆ ಹಿಂಬದಿಗೆ
ನರನೊಳಗಿನ ನಾರಾಯಣನುದಯಿಸಿ ನರಕಾಸುರನನು ಮೆಟ್ಟಿರಲಿ
ಆತ್ಮಜ್ಯೋತಿಗಳಾರತಿಯೆತ್ತಲು ಪರಂಜ್ಯೋತಿಪರ ಹುಟ್ಟಿರಲಿ

೨

ಬರ್ದಿಲಪಥವಿದು ಸುವರ್ಣರಥವಿದು ದೇವೇಂದ್ರನ ನವವಾಹನವು
ಕಾಂಚನಗೋಪುರಕೇತನದಡಿಯಲಿ ನಡೆದಿದೆ ಋಷಿಯಾವಾಹನವು
ಇಂದ್ರಿಯದರಮನೆ ಇಂದ್ರನ ಸೆರೆಮನೆ ವಜ್ರಾಯುಧ ಕೈಗಿಳಿದಿರಲಿ
ದಿಗ್ಬಂಧನಗಳ ಸಡಿಲಿಸಿ ಮಂಗಳ ಚೈತ್ಯಪುರುಷನೆಡೆ ಸುಳಿದಿರಲಿ
ಧವಲಗಿರಿಯ ಸುಕುಮಾರ ಸ್ವರೂಪಕೆ ಕೆಂಜೆಡೆಗಳು ಹೊಳೆಹೊಳೆದಂತೆ
ಶರದಾಕಾಶದ ರಾಜಹಂಸವರವಿಂದ ಪರಾಗದೊಳಿಳಿದಂತೆ
ತಾಪಸ ತೇಜೋಬಲದಾವಾಹನ ಮಂತ್ರಕೆ ಮೆಚ್ಚಿದನವತರಿಸಿ
ಇಂದ್ರನ ಸಂಗಡ ರಥದಲಿ ಕುಳಿತನು ಕುತ್ಸಿಕುಮಾರನು ಕನಿಕರಿಸಿ
ನರನೊಳಗಿನ ನಾರಾಯಣನುದಯಿಸಿ ನರಕಾಸುರನನು ಮೆಟ್ಟಿರಲಿ
ಆತ್ಮಜ್ಯೋತಿಗಳಾರತಿಯೆತ್ತಲು ಪರಂಜ್ಯೋತಿಪರ ಹುಟ್ಟಿರಲಿ

೩

ಮಾತಲಿ ಕಡಿವಾಣವೆಳೆದು ಚಮ್ಮಟಿಕೆಯ ಸೆಳೆಯಲು
ದೇವಪಯಣ ಪಥಕೆ ರಥವ ಬಿಳಿಗುದುರೆಗಳೆಳೆಯಲು

ಅಸುರರಾಕೆವಾಳರೆಲ್ಲ ಮೋಹರಿಸಲು ಕವಿದರು
ತಿಮಿರಕಡಲ ತೆರೆಗಳಂತೆ ಹೊಯ್ದು ಹೊಯ್ದು ತಿವಿದರು
ದೇವಪಯಣ ಕತ್ತರಿಸಲು ದೈತ್ಯರಡ್ಡ ಬಂದರು
ದೇವರಥವ ತತ್ತರಿಸಲು ಸಿಡಿಲು ಹೊಡೆದು ನಿಂದರು
ಅಗ್ನಿಮೇಘ ಪರ್ವತಗಳನೆಳೆದುರುಳಿಸಿ ತಂದರು
ಕುದಿವ ಲೋಹರಸವ ಸುರಿದು ಹಗೆಯ ಹೊಯ್ಯಿರೆಂದರು
ಇಂದ್ರನೆಳೆದು ವಜ್ರಾಯುಧ ಸುಡುವ ಸಿಡಿಲ ಹೊಡೆಯಲು
''ತೇಜಸ್ವಿನಾವೇತಮಸ್ತು'' ಕುತ್ಸಿವಾಣಿ ನುಡಿಯಲು

೪

ಕತ್ತಲ ಕತ್ತರಿಸಿತು ವಜ್ರಾಯುಧ ತತ್ತರಿಸಿತು ದಿತಿಸಂತಾನ
ಮಳಲಿನ ಪುತ್ಥಳಿಗಳು ಹುಡಿಯೊಡೆದವು ರಾಕ್ಷಸರಾದರು ಲಯಲೀನ
ಎಲ್ಲೆಲ್ಲೂ ಬೆಳಗಾಯಿತು ಮುಗಿಲಿನ ಬಣ್ಣದ ಮೋಡಗಳೋಡಿರಲು
ಬರ್ದಿಲ ಪಯಣದ ಗೆಲುವಿನ ಬೆಳಕನು ವ್ಯೋಮಕುಮಾರನು ನೋಡಿರಲು
ಊರ್ವಶಿ ರಂಭೆ ತಿಲೋತ್ತಮೆ ಮೇನಕೆ ಅಪ್ಸರ ಗೀತವ ಹಾಡಿರಲು
ನಂದನವನಮಂದಾರದ ಬನದಲಿ ಮಂದಾಕಿನಿ ಸುಳಿದಾಡಿರಲು
ನೆಲೆಯಿಲ್ಲದ ನಭನೀಲ ಪಟಾಂಗಣದಡಿಯಲಿ ಜೋತವು ಮಾಲೆಗಳು
ತಾರಾಮಂಡಲ ಸುವರ್ಣ ಸರಪಳಿಗಿಳಿದವು ದೀಪಜ್ವಾಲೆಗಳು
ಕುತ್ಸಕುಮಾರನ ನಾರುಡೆಜಡೆಗಳು ಮರೆಯಾದವು ಮಟಮಾಯದಲಿ
ರತ್ನ ಕಿರೀಟದ ಕುಂಡಲಹಾರದ ಕೇಯೂರದ ಸುರಛಾಯೆಯಲಿ
ಬರ್ದಿಲಪಥದಲಿ ಸುವರ್ಣರಥದಲಿ ಅಮರಾವತಿಯನು ಮುಟ್ಟಿರಲು
ದೇವೇಂದ್ರನ ಪ್ರತಿರೂಪದ ರೂಪವ ಕುತ್ಸಿಕುಮಾರನು ತೊಟ್ಟಿರಲು
ಸುರಪತಿಯಮಳರ ಕಾಣುತ ವಿಸ್ಮಿತಳಾದಳು ನಾಕದೊಳಿಂದ್ರಾಣಿ
ಸತ್ಯಸ್ವರೂಪವನರಿತಳು ಗುರುತಿಸಿ ಸಸ್ಮಿತಳಾದಳು ಸುರರಾಣಿ
ಬರ್ದಿಲಪಥದಲಿ ಜೀವನರಥದಲಿ ಮುತ್ತಿನ ಮಂಟಪ ಕಂಬಗಳು
ಪಯಣಕೆ ತೆರಳಿದ ಜೀವಗಳೆಲ್ಲಾ ದೇವರವೇ ಪ್ರತಿಬಿಂಬಗಳು
ನರನೊಳಗಿನ ನಾರಾಯಣನುದಯಿಸಿ ನರಕಾಸುರನು ಮೆಟ್ಟಿರಲಿ
ಆತ್ಮಜ್ಯೋತಿಗಳಾರತಿಯೆತ್ತಲು ಪರಂಜ್ಯೋತಿಪರ ಹುಟ್ಟಿರಲಿ.

## ೧೫. ಶ್ವೇತಕೇತು ದೇವರ್ಷಿ

ಉಷಾ ಸೂಕ್ತದೊಡನೆದ್ದು ಬಂದಿತೊ ಬಾನ ಬೆಳ್ಳಿ ಚಿಕ್ಕೆ
ದಿಗ್ದಿಗಂತಕ್ಕೂ ಸಡಿಲುತಿದ್ದಿತೊ ಇರುಳ ತೋಳ ತೆಕ್ಕೆ
ರವಿಯ ಮಿಸುನಿ ರಥವೇರಿ ಬಂದಿತೊ ಮುಗಿಲ ಮೂಡಲಕ್ಕೆ
ರೆಂಬೆರೆಂಬೆಗಳ ಋಷಿಗಳೆಲ್ಲ ಕೆದರಿದರು ತಮ್ಮ ರೆಕ್ಕೆ
ಶ್ವೇತಕೇತು ದೇವರ್ಷಿ ಬಂದ ಮಂದಾಕಿನೀ ತಟಕ್ಕೆ ೧

ದುಂಡುಮಲ್ಲಿಗೆಯ ಗೊಂಚಲಲ್ಲಿ ಕಿವಿಮಾತನೇನೋ ಹೇಳಿ
ಮಂದಗಂಧಗಾಯತ್ರಿ ಹಾಡಿ ಬಂದಿತ್ತು ತಂಪುಗಾಳಿ
ಚಕ್ರವಾಕ ಕಲಹಂಸ ನಲಿದು ನಡೆಸಿದುವು ನೀರ ಕೇಳಿ
ಚೆಲ್ಲುವರಿದು ಬೆಳಕೆಲ್ಲಕಡೆಗೆ ಪಲ್ಲವಿಸಿತಿರುಳು ಹೂಳಿ
ಶ್ವೇತಕೇತು ದೇವರ್ಷಿ ನಿಂತನಂಜುಳಿಯೊಳರ್ಘ್ಯತಾಳಿ ೨

ಬಣ್ಣ ಬಣ್ಣಗಳ ಕುಂಚವಿಡಿದು ನೆಲಮುಗಿಲ ಬಳಸಿ ಸುತ್ತು
ಛಂದ ಬಂಧ ಸ್ವಚ್ಛಂದ ಬ್ರಹ್ಮಲಿಪಿ ಚೆಲುವು ಬರೆಯುತಿತ್ತು
ನೀರ ಕಂಪು ನವಿರೆದ್ದು ನಕ್ಕಿತೋ ನದಿಯ ಸುತ್ತುಮುತ್ತು
ದಿನದ ದಿಬ್ಬಣದ ನಡುವೆ ನಿಂತು ಮರಿಜಿಂಕೆ ನೋಡುತಿತ್ತು
ಶ್ವೇತಕೇತು ದೇವರ್ಷಿ ನಿಂತ ರವಿದೇವಗರ್ಘ್ಯವಿತ್ತು ೩

ನದಿಯ ದಂಡೆ-ಮಳಲಲ್ಲಿ ಬೆಳೆದ ಗಿಡಗಿಡಕೆ ಮಿಳ್ಳಿಯಾಡಿ
ರಂಗವಲ್ಲಿ ಬರೆದಿತ್ತು ನೆರಳು ಹೊಂಬಿಸಿಲು ಬಣ್ಣ ತೀಡಿ
ಚೈತ್ರಮಾಸ ವನವಾಸ ಬರಲು ವೈಶಾಖ ವಧುವ ಕೂಡಿ
ಭಾದ್ರಪದದ ಕಾರ್ಮುಗಿಲು ಮಿಂಚು ನೆನೆಸಿತ್ತು ನವಿಲ ಜೋಡಿ
ಶ್ವೇತಕೇತು ದೇವರ್ಷಿ ನಿಂತನಾನಂದಚಿತ್ತ ಮೂಡಿ ೪

ಮಿಂಚುದೇಹ ನಿಡಿದೋಳು ದುಂಡುಮುಖ ನೊಸಲಗಂಧವಿಟ್ಟು
ಕಾಮರೂಪ ಮೈತುಂಬಿ ಬಂತು ಯಜ್ಞೋಪವೀತ ತೊಟ್ಟು
ನೋಡಿದಶ್ವಿನೀಕುವರರೆಲ್ಲ ಕಚ್ಚಿದರು ತಮ್ಮ ಬೊಟ್ಟು
ತುಂಬಿಬಂದ ಹೊಂಬಿಸಿಲು ಮಿಂದು ನಿಂದಿರಲು ಹರುಷಪಟ್ಟು
ಶ್ವೇತಕೇತು ಮಂದಾರಮರದ ವಲ್ಕಲದ ವಸನವುಟ್ಟು ೫

ಮೂರು ಲೋಕಗಳ ಕಣ್ಣಿಗೀತ ಸೌಂದರ್ಯದಿಂದ್ರದೀಪ
ಕಂಡ ಕಣ್ಣು ಕನವರಿಕೆ ಸುಟ್ಟಿತೆದೆಯಲ್ಲಿ ಕಾಮಧೂಪ
ನೋಡಿ ನಲಿದ ಹರಿಣಾಕ್ಷಿ ಚಿತ್ತ ನುಡಿಸಿತ್ತು ವಿರಹತಾಪ
ರಂಭೆ ಮದನ ಕೈಗೊಂಬೆ ಮೊರೆದಳಭಿಸಾರಿಕಾವಿಲಾಪ
ಶ್ವೇತಕೇತು ದೇವರ್ಷಿ ಚೆಲುವು ನಿಂತಂಥ ನಿಲುವು ರೂಪ ೬

ಸಹಸ್ರಾರ ಬಿಳಿಕಮಲವರಳಿ ತೆರೆದಿರಲು ಪೀಠ ಕೊಟ್ಟು;
ಎಂದಿನಂತೆ ಮಂದಾಕಿನಿಯಲಿ ಹೊಸ ಹಸಿರು ಮಡಿಯುಟ್ಟು;
ಮುಕುಟ ಮಾಲೆ ಮೇಖಲೆ ಸುವರ್ಣ ಮಣಿಕರ್ಣಪೂರ ತೊಟ್ಟು;
ಕಮಲವದನೆ ಕಮಲಾಕ್ಷಿಲಕ್ಷ್ಮಿ ಸಿಂಧೂರ ತಿಲಕವಿಟ್ಟು;
ಕುಳಿತು ನೋಡೆ ಋಷಿರೂಪ ಮೂಡಿತನುರಾಗರಾಗಪಟ್ಟು ೭

ನಯನಗೋಲಗಳ ತುಂಬಿತುಳುಕಿ ತನುರಾಗವೇರಿನಿಂದು
ಕಮಲಪೀಠದಲ್ಲಿ ಕುಳಿತ ಕ್ಷೀರಸಾಗರದ ಕುವರಿಗಂದು.
ಹುದುಗಿದಂಥ ಹೆಂಗರುಳಿನಾಸೆಗೊಡೆದಿರಲು ನಯನ ಬಿಂದು
ಮನದ ಭೋಗದಭಿಲಾಷೆ ನಯನಜಲಭಾಷೆಯಾಡಿ ಬಂದು
ಮದನ ಯೋಗ ಮನ ತುಂಬುತಿತ್ತು ಋಷಿರೂಪ ರೂಪಕೆಂದು ೮

ಚೆಲುವುತೆತ್ತ ಕಡೆಗೋಲು ಚಿತ್ತವನು ಕಾಮರಾಗ ಹಿಡಿದು
ಕಮಲಶಯ್ಯೆಯಲಿ ಕುಳಿತು ದೇವಿಯೊಳಹೃದಯ ಕಡಲ ಕಡೆದು
ಋಷಿಯ ರೂಪದನುರಾಗ ಸತಿಯ ಸಂಯೋಗದಾಸೆ ಮಿಡಿದು
ಬರಿಯ ನೋಟದಲಿ ಸುರತಕೂಟ ಸುಖಚಿತ್ತ ತೃಪ್ತಿ ಪಡೆದು
ಕಮಲವದನೆ ಕಮಲಾಕ್ಷಿ ನಲಿದಳೋಲಾಡಿ ಗಂಡು ಹಡೆದು ೯

ತೋಳ ತೊಟ್ಟಿಲಲಿ ಮಗುವ ತೂಗಿ ಕೇಳಿದಳು ಹರುಷ ಮಿಂದು
''ಏನ ಬಯಸುತಿದೆ ತಮ್ಮ ಚಿತ್ತ ದೇವರ್ಷಿ ನದಿಯಲಿಂದು''
ನುಡಿದನಾಗ ಋಷಿ : ''ದೇವಿ ಬಯಸುತಿದೆ ಪುಂಡರೀಕಕೆಂದು.''
ದೇವಿ ನಾಚಿ ಕೈಕೂಸ ಚಾಚಿ ಹೇಳಿದಳು ''ಹಿಡಿಯಿರೆಂದು''
ಹೂವ ಬಯಸಿದರೆ ಹೆಣ್ಣೊಲುಮೆ ಹಸುಗೂಸನಿತ್ತಿತೆಂದು ೧೦

## ೧೬. ಸಂತಾನ

ಬೆಳದಿಂಗಳಿನುಡಿಗೆಯುಟ್ಟು
ನಕ್ಷತ್ರದ ತೊಡಿಗೆ ತೊಟ್ಟು
ಗ್ರಹಮಂಡಲ ಮಾಲೆಯಿಟ್ಟು
ತೇಜಸ್ವಿನಿ ಬೆಳಕು ಬಂದು
ಸೃಷ್ಟಿಕರ್ತನೆದುರು ನಿಂದು
''ಸಂತಾನವ ಕರುಣಿಸೆಂ''ದು
ದೈನ್ಯವಾಣಿ ಮೊರೆಯಿತು
ದೇವವಾಣಿ ಮೊಳಗಿತು

''ತಥಾಸ್ತು'' ೧

ಅಂಧಕಾರದುಡಿಗೆಯುಟ್ಟು
ಭಯದ ತಿಮಿರ ತೊಡಿಗೆ ತೊಟ್ಟು
ಲಯದ ಬಳ್ಳಿಮಾಲೆಯಿಟ್ಟು
ತಾಮಸಿ ಕತ್ತಲೆಯು ಬಂದು
ಸೃಷ್ಟಿಕರ್ತನೆದುರು ನಿಂದು
''ಸಂತಾನವ ಕರುಣಿಸೆ''ಂದು
ದೈವವಾಣಿ ಮೊರೆಯಿತು
ದೇವವಾಣಿ ಮೊಳಗಿತು

''ತಥಾಸ್ತು''

ಅದಿತಿ ಬೆಳಕು ತೇಜಸ್ವಿನಿ, ಸಂತಾನವೆ ದೇವಕುಲ
ದಿತಿ ತಾಮಸಿ ನಿಶಾಚಾರಿಯು, ಸಂತಾನವೆ ದೈತ್ಯಕುಲ. ೨

## ೧೭. ಕಾಲಿಯಾ ಮರ್ದನ

ವೃಂದಾವನಜನಪರಮಾನಂದ
ಗೋವಿಂದಾ ಹರಿ ಗೋವಿಂದಾ ॥ಪ॥

ಕಾಲಂದಿಯ ಕರ್ಮಡುವನೆ ಸೇರಿ
ಉಲ್ಬಣವಿಷ ಕಿಲ್ಬಷವನೆ ಕಾರಿ
ಕಾಲಿಯನುರಿದಾಡಲು ಮದವೇರಿ
ಗೋಕುಲ ನಡುಗಿತು ಭಯದಿಂದ ೧

ಹಾರುವ ಹಕ್ಕಿಯ ತಾನುರುಳಿಸಿ ಕೆಳಗೆ
ನೀರಡಿಸಿದವರು ಬಂದರೆ ಬಳಿಗೆ
ನೀಗಿದರಸುವನು ವಿಷಜಲದೊಳಗೆ
ಕಾಲಿಯ ಸರ್ಪನ ದೆಸೆಯಿಂದ ೨

ವ್ಯಾಕುಲಿಸಲು ಗೋಕುಲ ಹೌಹಾರಿ
ನೀಲಮನೋಹರ ಬಾಲವಿಹಾರಿ
ಬಂದನು ಮಧುಕೈಟಭಸಂಹಾರಿ
ಯಮುನಾತೀರದ ಬದಿಯಿಂದ ೩

ಹೊಂಬೆಳಗಿನ ಹನಿ ಮುಗಿಲಿಳಿವಂದು
ವಿಷಸಂತಾನವ ತುಳಿಯುವೆನೆಂದು
ಬಾಲಮುಕುಂದನು ಧುಮುಕಿದ ಬಂದು
ಕದಂಬವೃಕ್ಷದ ತುದಿಯಿಂದ ೪

ಕಾಲಂದಿಯ ಪುಲಿನದ ಬಳಿ ಸೇರಿ
ಗೋವಳರೆಲ್ಲರು ಚಿಟ್ಟನೆ ಚೀರಿ
ಸುರಿಸಲು ಕಂಬನಿಗಳ ಹೌಹಾರಿ
ಕಾಳಿಯ ಸರ್ಪನ ಎಳೆತಂದ ೫

ಪೂತ್ಕರಿಸುತ ಹೆಡೆಗಳ ಹಿಡಿದಾಡಿ
ಕಾಲಿಯ ಸರ್ಪನ ತಲೆ ತುಳಿದಾಡಿ

ಬಾಲಮುಕುಂದನು ಕುಣಿಕುಣಿದಾಡಿ
ನಲಿದಾಡಿದ ಹರಿ ಗೋವಿಂದ ೬

ನೀಲಮ ಮೇಘ ಮೃದಂಗವ ಬಡಿದು
ಗಾಳಿಯು ಮಳೆಯಲಿ ಮುರಲಿಯ ನುಡಿದು
ಕಾಲಿಯ ಸರ್ಪನ ಬಾಲವ ಹಿಡಿದು
ನಾಟ್ಯವನಾಡಿದ ಗೋವಿಂದ ೭

ಬ್ರಹ್ಮಾಂಡದ ಪದಭಾರದಿ ತುಳಿದು
ಕುಣಿದಾಡಲು ಕಾಲಿಯು ವಿಷವಳಿದು
ಜರ್ಜರ ಮೂರ್ಛಿತ ಫಣಿಗಳನೆಳೆದು
ವಿಲಿವಿಲಿ ನರಳಿದ ಭಯದಿಂದ ೮

ಕಾಳಿಂಗನ ದುರ್ದೆಸೆಯನು ನೋಡಿ
ಶರಣಾಗತಬಾಂಧವನೆಡೆಗೋಡಿ
ನಾಗಿಣಿಯರು ಹರಿಪೂಜೆಯ ಮಾಡಿ
ಕೈಮುಗಿದರು ಕನಿಕರದಿಂದ ೯

ಕುಣಿದನು ಶ್ರೀಹರಿ ಕ್ಷಮಿಸು ಮುಕುಂದ
ಶರಣಾಗತಬಾಂಧವ ಗೋವಿಂದ
ಕಣ್ಣೀರನು ಸುರಿಸುತ ಸಲಹೆಂದ
ಕಾಲಿಯು ಗದ್ಗದಸ್ವರದಿಂದ ೧೦

ಕಾಳಿಂಗನು ಹರಿಚರಣಕೆ ನಮಿಸಿ
ಶರಣಾಗತನಾಗಲು ಹರಿ ಕ್ಷಮಿಸಿ
ರಮಣಕ ದ್ವೀಪಕೆ ತೆರೆಳಲು ರಮಿಸಿ
ಗೋಕುಲ ಸಲಹಿದ ಗೋವಿಂದ ೧೧

ಕಾಲಂದಿಯ ಕರ್ಮಡುವನೆ ತೊರೆದು
ಕಾಲಿಯ ರಮಣಕ ದ್ವೀಪಕೆ ಹರಿದು
ಗೋಕುಲ ನಲಿಯಿತು ಹೂಮಳೆ ಕರೆದು
ಕಾಲಿಯಮರ್ದನ ಗೋವಿಂದ ೧೨

# ೧೮. ಉಭಯ ಸರಸ್ವತಿ

೧

ಮೂಡಲ ಕಂಪಿನ ಬೆಳಕಿನ ಕೆಂಪಿನ
ಬಂಗಾರದ ಹೂವರಳಿತ್ತು.
ಕೊಳ ಬನಗಳ ಪರಿಮಳ ಸಂಚಯನಕೆ
ಪಡುವಣ ಗಾಳಿಯು ತೆರಳಿತ್ತು.
ಹಿಮ ಕೌಪೀನವ ಧರಿಸಿದ ಶೈಲಕೆ
ಸನ್ಯಾಸದ ಕಳೆಯೇರಿತ್ತು.
ಮಾನಸ ಹಂಸವು ಶೈಲ ಶ್ರೇಣಿಗೆ
ಪರಮಹಂಸ ಪದ ತೋರಿತ್ತು.
ತೇಲುವ ಮೋಡದ ತುಂಡಿನ ತಂಡಕೆ
ಅಪರಂಜಿಯ ಕಳೆ ಬಳೆದಿತ್ತು.
ಗರಿಗೆದರಿದ ಸೌಂದರ್ಯ ಮಯೂರವು
ಹಸಿರಿನ ಮರಡಿಯನಿಳಿದಿತ್ತು.
ಹೊಂಬೆಳಗಿನ ರಸಲೋಕದ ಚೆಲುವಿಗೆ
ವನವಿದ್ಯಾಧರರೋಡಿದರು.
ಮಂಡಲ ತೇಜಃಪುಂಜದ ನಿಲುವಿಗೆ
ಚಾರಣ ಗೀತವ ಹಾಡಿದರು.
ಧುಮುಕಿತು ಮೂಡಲ ಬೆಳಕಿನ ತಡಸಲು
ಪಾತಾಳದ ತಳ ಹುಡಿ ಮಾಡಿ.
ಭಾವ ಸಮಾಯ ಶೈಲಗಳೆದ್ದವು
ಜ್ಞಾನದ ಸಾವಿರ ಹೆಡೆಯಾಡಿ.
ವನಗಳು ದಂಡಕಮಂಡಲು ಹಿಡಿದವು
ಕುಳಿರ್ಗಾಳಿಯು ತ್ತರಿಸಿ.
ಹಿಮಪರ್ವತಗಳ ಮೆಟ್ಟಲು ಕೊರೆದು
ಜ್ಞಾನದ ಹೊಳೆ ಕೆಳಗಿಳಿಯಿತು ಹರಿದು
ರಿಂಗಣ ಗುಣಿಸುತ ತತ್ವಮಸಿ.

## ೨

ಮಾಹಿಷ್ಮತಿಯಲಿ ನಗರ ಸಮೀಪದ
ಹೊಳೆಯಲಿ ಮಿಂದರು ಸನ್ಯಾಸಿ
ಶ್ರೀ ಶಂಕರಾಚಾರ್ಯ ಪ್ರಸ್ಥಾನ ತ್ರಯಗಳ
ದಂಡ ಕಮಂಡಲು ವಿನ್ಯಾಸಿ.
ಬ್ರಹ್ಮ ಸಮಾಯ ಪೀಠದಿ ಮಂಡಿಸಿ
ಕೈವಲ್ಯವೆ ಮನದುಯ್ಯಾಲೆ
ಬಣ್ಣದ ಹಕ್ಕಿಯ ಬನದಲಿ ಹಿಡಿಯಲು
ಹೂವಿನ ಮಂಜಿನ ಮಣಿಮಾಲೆ.
ಕರ್ಮದ ಕುಲಪರ್ವತಗಳ ಹುಡುಕುತ
ವಜ್ರಾಯುಧ ನಭ ಸುಳಿವಂತೆ
ಸಗರ ಕುಮಾರರ ಪುನರುತ್ಥಾನಕೆ
ಮಂದಾಕಿನಿ ಮುಗಿಲಿಳಿವಂತೆ
ಮರದಡಿ ಹಸಿರಿನ ಗದ್ದುಗೆಯಿಳಿದರು
ಕೌಪೀನದ ವಸನವನುಟ್ಟು
ಮನದಲಿ ಸೋಹಂ ಭಾವಾವೇಶಕೆ
ಲುಳಿಮಸಗಲು ಹಣೆ ಹೊಳಪಿಟ್ಟು
ಮೈ ತಳೆಯಿತು ನಿಗಮಾಗಮ ಜ್ಞಾನದ
ತೇಜೋಮಂಡಲ ನಡೆದಂತೆ
ವೇದ ಸನಾತನ ವಾಣೀಶ್ವರಿ ಹೊಳೆ
ಮಿಂಚಿನ ಕಾರ್ಮುಕ ಹಿಡಿದಂತೆ
ಪ್ರಣವ ಜ್ಞಾನ ಸಮೀರಣ ಲೋಕಕೆ
ಶ್ರುತಿಗಳ ಸೌರಭ ಬಿತ್ತರಿಸಿ
ಹಿಮ ಪರ್ವತಗಳ ಮೆಟ್ಟಲು ಕೊರೆದು
ಜ್ಞಾನದ ಹೊಳೆ ಕೆಳಗಿಳಿಯಿತು ಹರಿದು
ರಿಂಗಣ ಗುಣಿಸುತ ತತ್ವಮಸಿ.

೩

ಮಾಹಿಷ್ಮತಿಯಲಿ ನಗರ ದ್ವಾರದ
ಬಳಿಯಲಿ ಬಂದರು ಸನ್ಯಾಸಿ
ಶ್ರೀ ಶಂಕರಾಚಾರ್ಯ ಪ್ರಸ್ಥಾನ ತ್ರಯಗಳ
ದಂಡ ಕಮಂಡಲು ವಿನ್ಯಾಸಿ,
ಅಗ್ನಿಯ ವಸನವ ಧರಿಸಿದ ಚಂದ್ರಮ
ನಗರದ ಬೀದಿಯ ನಡೆದಂತೆ
ಮನೆ ಮಂದಿರಗಳ ನೋಡುತ ಬಂದರು
ಮಾಯಾ ಮರ್ತ್ಯದ ಹುಸಿ ಸಂತೆ.
ಗುಡಿಗೋಪುರಗಳ ತೋರಣ ಕಾರಣೆ
ಶೃಂಗಾರದ ಕುರು ಮಾಡಗಳು.
ಋತ್ವಿಜ ಘೋಷದ ಮಂತ್ರೋಚ್ಚಾರಣೆ
ಹೊಗೆಯಾಡುವ ನೆಲೆ ವೀಡುಗಳು.
ಆಚಾರ್ಯರು ನಸು ನಕ್ಕರು ಕಂಡರು
ಮಕ್ಕಳ ಮರಿಗಳ ನಗೆಯಾಟ
ನೀರಿಗೆ ನಡೆದರು ಬ್ರಾಹ್ಮಣ ಸತಿಯರು
ಕಪಿಲೆಯ ಹಸುಗಳ ನೆಗೆದಾಟ.
ತುಳಸಿ ವೃಂದಾವನಗಳ ಸುತ್ತಲು
ಬಲಗೊಂಬುವ ಮುತ್ತೈದೆಯರು
ಯಜ್ಞದ ಬೆಂಕಿಗೆ ಹವಿಯನೆ ಹೊಯ್ಯುವ
ದರ್ಭೆಯ ಬೆರಳಿನ ವೈದಿಕರು.
ಸನ್ಯಾಸಿಯ ಕೌಪೀನದ ಹೊಳಪಿಗೆ
ಬೆಂಕಿಯು ನಕ್ಕಿತು ಕಳಕಳಿಸಿ
ಕುಲಪರ್ವತಗಳ ಮೆಟ್ಟಲು ಕೊರೆದು
ಬೆಳಕಿನ ಹೊಳೆ ಮುನ್ನಡೆಯಿತು ಹರಿದು
ರಿಂಗಣ ಗುಣಿಸುತ 'ತತ್ವಮಸಿ'.

## ೪

ಶಂಕರ ಭಗವತ್ಪಾದರು ಕಂಡರು
ಹೂವಿನ ಚಾಮರ ಮರಗಳನು.
ಮಾಧುರ್ಯಕೆ ಮನಸೋತರು ಕೇಳುತ
ಬಣ್ಣದ ಹಕ್ಕಿಯ ಸ್ವರಗಳನು.
ಮಾಹಿಷ್ಮತಿಯಲಿ ವಿಪ್ರವೃಂದದ
ಮನೆಗಳ ನೋಡುತ ನಡೆದಿರಲು
ತುಂಬಿದ ನೀರಿನ ಕುಂಭದ ಭಾರದಿ
ಮುಪ್ಪಿನ ಮುತ್ತೈದೆಯು ಬರಲು.
ಶಂಕರ ಭಗವತ್ಪಾದರು ನುಡಿದರು
''ಕ್ಷಮಿಸಿರಿ ತಾಯಿ! ತುಸು ನಿಲ್ಲಿ
ನಾವೀ ನಗರಕೆ ಹೊಸಬರು ಇಲ್ಲಿಯ
ಮಂಡನ ಮಿಶ್ರರ ಮನೆಯೆಲ್ಲಿ?''
ಮುತ್ತೈದೆಯು ಕೇಳುತ ವಿನಯೋಕ್ತಿಯ
ಸನ್ಯಾಸಿಯ ನಸು ನೋಡಿದರು
ಭಯ ಭಕ್ತಿ ಸ್ಮಿತ ಗೌರವ ವಿಸ್ಮಿತ
ಮುತ್ತೈದೆಯು ಮಾತಾಡಿದರು
''ಬಿಲ್ವವೃಕ್ಷಗಳೆರಡಿವೆ ಮಂಡನ
ಮಿಶ್ರಾಚಾರ್ಯರ ಮನೆಯೆದುರು
ಎರಡರಗಿಳಿಗಳು ಪಂಜರ ಪೀಠದಿ
ಮಂಡಿಸಿ ವಾದವಿವಾದಿಸಿವೆ.
ಪರಬ್ರಹ್ಮ ಪರಮಾತ್ಮ ಸ್ವರೂಪದ
ಕರ್ಮಜ್ಞಾನ ನಿವೇದಿಸಿವೆ.''
ಕುಲ ಪರ್ವತಗಳ ಮೆಟ್ಟಲು ಕೊರೆದು
ಬೆಳಕಿನ ಹೊಳೆ ಮುನ್ನಡೆಯಿತು ಹರಿದು
ರಿಂಗಣ ಗುಣಿಸುತ 'ತತ್ವಮಸಿ'.

೫

ಜ್ಞಾನದ ತೇಜೋಮಂಡಲ ನಡೆಯಿತು
ಮಂಡನ ಮಿಶ್ರರ ಮನೆಯರಸಿ
ನಿಗಮಾಗಮಗಳ ಜ್ಞಾನ ಶರಾಸನ
ಪುನರುತ್ಥಾಪನ ಗುರಿಯಿರಿಸಿ
ಮುಂಬರಿಯಿತು ಸನ್ಯಾಸದ ಶರ, ಜನ
ಕಂಡರು ಕೆಚ್ಚಿನ ದೀತಿಯ,
ಮಿಂಚಿನ ಮಲ್ಲಿಗೆ ಗೊಂಚಲು ತೆರೆಗಳ
ಜ್ಞಾನದ ಹೊಳೆಯ ವ್ಯಾಹತಿಯ
ಪ್ರಾಯದ ಸುಕುಮಾರಕೆ ಕೌಪೀನದ
ಕಿಚ್ಚೆದ್ದಿತು ಕವಚದ ಭುಗಿಲು.
ಮುಪ್ಪಿನ ಮುತ್ತೈದೆಯ ಮನ ತುಳುಕಿತು
ಕರುಣಾ ಗೌರವಗಳ ದಿಗಿಲು.
ತುಂಬಿದ ನೀರಿನ ಕುಂಭದ ಭಾರದಿ
ಹೆಂಗಸು ನಡೆದರು ಮನೆಯೆಡೆಗೆ,
ಸನ್ಯಾಸದ ಸಿಡಿಲಿಳಿಯಿತು, ಸಂಸಾರ
ದ ಸುಳಿಬಾಳೆಯ ಬನದೆಡೆಗೆ.
ಶಂಕರ ಭಗವತ್ಪಾದಾಚಾರ್ಯರು
ನಿಂತರು ಬಿಲ್ವವೃಕ್ಷದಡಿ
ಪಂಜರದರಗಿಳಿಗಳು ಮಾತಾಡಲು
ನಿಗಮಾಗಮಗಳ ಮಧುರ ನುಡಿ.
ಪರಬ್ರಹ್ಮ ಪರಮಾತ್ಮ ಸ್ವರೂಪದ
ಕರ್ಮಜ್ಞಾನ ನಿವೇದಿಸುತ
ಜ್ಞಾನದ ಹೊಳೆಯನು ತಡೆಯಿತು ಕುಲಗಿರಿ
ಗುಡುಗಿತು ಸನ್ಯಾಸಿಯ ನುಡಿ ವೈಖರಿ
''ಓಂ ಭವತಿ ಭಿಕ್ಷಾಂ ದೇಹಿ.''

೬

ಎರಡರಗಿಳಿಗಳು ಪಂಜರ ಪೀಠದಿ
ಮಂಡಿಸಿ ವಾದ ವಿವಾದಿಸಲು
ಪರಬ್ರಹ್ಮ ಪರಮಾತ್ಮ ಸ್ವರೂಪದ
ಕರ್ಮಜ್ಞಾನ ನಿವೇದಿಸಲು.
ಶಂಕರ ಭಗವತ್ಪಾದರು ನಿಂತರು
ಕೇಳುತ ಗಿಳಿಗಳ ವಾದವನು
ಗಿಳಿಯೊಂದುಸುರಿತು ಕರ್ಮದ ಯೋಗವ
ಸೃಷ್ಟಿ ಸ್ಥಿತಿಲಯ ಭೇದವನು.
ಇನ್ನೊಂದುಸುರಿತು ಜ್ಞಾನವೆ ದಾರಿಯು
ಮಾಯಾ ಚಕ್ರವ್ಯೂಹದಲಿ
ಮೊದಲಿನದುಸುರಿತು ಜೀವದ ಹಕ್ಕಿಯ
ದೇಹದ ಪಂಜರ ಮೋಹದಲಿ
ಕರ್ಮವೆ ಕೆಡಹಿತು. ಕರ್ಮವೆ ಬಂಧನ
ಕರ್ಮವೆ ಬಿಡುಗಡೆಗಿಹ ದಾರಿ
ಮತ್ತೊಂದುಸುರಿತು ಅವಧೂತರ ಪಥ
ಜ್ಞಾನವೆ ಮೋಕ್ಷದ ರಹದಾರಿ.
ಸನ್ಯಾಸಿಯು ನಸು ನಕ್ಕರು ಕೇಳುತ
ಗಿಳಿಗಳ ವಾದ ವಿವಾದವನು.
ಮಂಡನ ಮಿಶ್ರರ ಮನೆಯಲಿ ದೇವರ
ಪೂಜೆಯ ಘಂಟಾನಾದವನು.
ನಿಗಮಾಗಮಗಳ ಕರ್ಮಜ್ಞಾನದ
ಮಿಂಚಿನ ವಲ್ಕಲ ತೆರೆಗಳಲಿ
ಜ್ಞಾನದ ಹೊಳೆಯನು ತಡೆಯಿತು ಕುಲಗಿರಿ
ಗುಡುಗಿತು ಸನ್ಯಾಸಿಯ ನುಡಿ ವೈಖರಿ
''ಓಂ ಭಗವತಿ ಭಿಕ್ಷಾಂ ದೇಹಿ.''

೭

ಮಂಡನ ಮಿಶ್ರರ ಹೆಂಡತಿ ಬಂದರು
ಬಾಗಿಲ ತೆರೆದರು ನೋಡಿದರು
ಉಭಯ ಸರಸ್ವತಿ ಹಣ್ಣು ಹಸಾದವ
ಜೋಳಿಗೆಗಿರಿಸಲು ನೀಡಿದರು.
ಶಂಕರಭಗವತ್ಪಾದಾಚಾರ್ಯರು
ಮೆಲ್ಲಗೆ ನುಡಿದರು ಸನ್ಯಾಸಿ
ನಿಗಮಾಗಮಗಳ ತೇಜೋಮಂಡಲ
ದಂಡಕಮಂಡಲು ವಿನ್ಯಾಸಿ.
''ಆತ್ಮದ ಹಸಿವನು ಹಿಂಗಿಸ ಬಂದೆವು
ಹಣ್ಣು ಹಸಾದಕೆ ಹಿಂಗೀತೆ?''
ಉಭಯ ಸರಸ್ವತಿ ವಿಸ್ಮಿತರಾದರು
ಭಗವತ್ಪಾದರ ನುಡಿ ಕೇಳಿ
''ಭಗವಾನ್ ಆತ್ಮದ ಹಸಿವಿನ ತುತ್ತಿಗೆ
ಹಣ್ಣು ಹಸಾದವ ನೀವೆ ಹೇಳಿ''
ಉಭಯ ಸರಸ್ವತಿ ಕೇಳಲು ನುಡಿದರು
ತೇಜೋಮಂಡಲ ಸನ್ಯಾಸಿ
ಗಿಳಿಗಳ ಪಂಜರದೆಡೆ ಕೈ ಮಾಡುತ.
ದಂಡ ಕಮಂಡಲು ವಿನ್ಯಾಸಿ
''ವಾದವಿವಾದವು ಹಣ್ಣು ಹಸಾದವು
ಆತ್ಮದ ಹಸಿವನು ಹಿಂಗಿಸಲು,
ವೇದ ಸಮುದ್ರದ ಮಂಥನ ಭಿಕ್ಷೆಯು
ವಾದವಿವಾದವೆ ಕಡೆಗೋಲು''
ನಿಗಮಾಗಮಗಳ ಕಡಲನು ಕಡೆದು
ನುಡಿಯಿತು ಸನ್ಯಾಸದ ಸಿಡಿಲೊಡೆದು
''ಓಂ ಭವತಿ ಭಿಕ್ಷಾಂ ದೇಹಿ.''

## ೮

ಮಂಡನ ಮಿಶ್ರಾಚಾರ್ಯರು ಬಂದು
ವೈರಾಗ್ಯದ ಕಾಯಕಯೋಗಿ
ನೋಡುತ ಭಗವತ್ಪಾದರು ನುಡಿದರು
''ವಾದದ ಭಿಕ್ಷೆಯೆ ನಿಮಗಾಗಿ?
ನಿರಾಕರಿಸಲಾರೆವು ನಾವೆಂದಿಗು
ವೇದದ ವಾದ ವಿವಾದವನು.''
ಉಳಿಮಸಗಿತು ಸನ್ಯಾಸಿಯ ನಸುನಗೆ
ಸೋಹಂ ಭಾವೋನ್ಮಾದವನು.
ಮಂಡನ ಮಿಶ್ರಾಚಾರ್ಯರು ನುಡಿದರು
''ವಾದ ವಿವಾದದ ಪಣವೇನು?
ನಿಗಮಾಗಮಗಳ ತರ್ಕದ್ಯೂತಕೆ
ಒಪ್ಪಿಸ ಬಯಸುವ ಋಣವೇನು?''
ಶಂಕರ ಭಗವತ್ಪಾದರು ನುಡಿದರು
''ಸೋತರೆ ನಾವೀವಾದದಲಿ
ಸನ್ಯಾಸವ ಬಿಡುವೆನು ಧುಮುಕುವೆನೀ
ಮರ್ತ್ಯದ ಹುಸಿ ಸಂಸಾರದಲಿ.''
ಮಂಡನ ಮಿಶ್ರಾಚಾರ್ಯರು ನುಡಿದರು
''ಕೇಳಿರಿ ನಮ್ಮೀ ಪಂಥವನು
ಸೋತರೆ ನಾವೀವಾದದಿ ತೊಡುವೆವು
ಕೌಪೀನದ ಹುಸಿ ಕಂತೆಯನು.''
ಬೆವರೊಡೆಯಿತು ಮುಖ ಕಮಲವು ಉಭಯ
ಸರಸ್ವತಿ ಕಂಪಿಸಿ ಬೆಚ್ಚಿದರು
ಶಂಕರಭಗವತ್ಪಾದರು ನಡೆದರು
ಬ್ರಹ್ಮಾಸ್ಮಿಯ ರಸಮಂತ್ರವ ನುಡಿದರು
ರಿಂಗಣ ಗುಣಿಸುತ 'ತತ್ವಮಸಿ'.

## ೬

ವಿಪ್ರಕುಲೋತ್ತಮರೆಲ್ಲಾ ನೆರೆದರು
ವಾದವಿವಾದದ ರಂಗದಲಿ
ವೇದ ಸಮುದ್ರದ ಮಂಥನ ಕಾಣಲು
ಕೂಡಿದರೀ ರಸರಂಗದಲಿ.
ಉಭಯ ಸರಸ್ವತಿ ತೇಜಸ್ವಿನಿ ಸತಿ
ಕುಳಿತರು ನಿರ್ಣಯ ಪೀಠದಲಿ
ಜ್ಞಾನ ಕಮಲ ಮುಖಿ ಶ್ವೇತಾಂಬರಿ ವಾ
ಣೀಶ್ವರಿಯೆಸೆದರು ಮಾಟದಲಿ
ಉಭಯ ಸರಸ್ವತಿ ನುಡಿದರು ವಿಪ್ರ
ವೃಂದಕೆ ಜ್ಞಾನದ ಸೂಕ್ತಿಯಲಿ
ಸಂಸಾರದ ಸನ್ಯಾಸದ ಪಂಥದ
ವಾದದ ಕತೆ ವಿನಯೋಕ್ತಿಯಲಿ.
ಕರದಲಿ ಹೂವಿನ ಮಾಲೆಗಳೆರಡನು
ತೇಜಸ್ವಿನಿ ಸತಿ ತೋರಿದರು.
ಮಂಡನ ಮಿಶ್ರರ ಭಗವತ್ಪಾದರ
ಕೊರಳಿಗೆ ಹಾಕುತ ಸಾರಿದರು.
''ಮೊದಲಿಗೆ ಬಾಡುವ ಮಾಲೆಯೆ ಕೊರಳಿನ
ನುಡಿಯೇ ಸೋಲಿನ ಸಂಕೇತ.''
ವೇದ ಸಮುದ್ರದ ಮಂಥನ ನಡೆಯಲ್
ಮಿಂಚಿತು ವಾದದ ಸಂಗೀತ.
ಸಂಸಾರದ ವರ್ಣಾಶ್ರಮ ಧರ್ಮದ
ಜೀವದನಾದಿಯ ಬಿತ್ತರಿಸಿ
ಮಂಡನ ಮಿಶ್ರಾಚಾರ್ಯರು ನುಡಿದರು
ವಾದಕೆ ವಾದವನುತ್ತರಿಸಿ
ರಿಂಗಣಗುಣಿಸಿತು 'ತತ್ವಮಸಿ'.

## ೧೦

ಪ್ರಸ್ಥಾನ ತ್ರಯ ಸೃಷ್ಟಿ ಸ್ಥಿತಿಲಯ
ಮಾಯೆಯ ನಾರಿಯು ಗೋಚರಕೆ,
ಕರ್ಮವೆ ಕಲ್ಪಿಸಿ ರೂಪವ ಕೊಡುತಿದೆ
ಲೋಕದೊಳೆಲ್ಲ ಚರಾಚರಕೆ.
ಪರಮಾತ್ಮನ ಮನ ಮಾಯಾ ಸೃಷ್ಟಿಯು
ಜೀವ ಬ್ರಹ್ಮ ಸನಾತನನು.
ಕಾಯಕ ಯೋಗದಿ ಕೈವಲ್ಯವ ಪಡೆ
ಯಜ್ಞಾಗ್ನಿಯಲಿ ಪುನೀತನನು
ಜ್ಞಾನಾದೇವತು ಕೈವಲ್ಯಂ ಸು
ಜ್ಞಾನಾನಂದ ವಿನೂತನನು,
ದಿನಗಳು ಕಳೆದವು, ದಿನಗಳು ಬಂದವು
ವಾದವಿವಾದಕೆ ನಿಲವಿಲ್ಲ.
ಹಣ್ಣಿನ ಮರದಲಿ ಹಕ್ಕಿಗಳೆರಡಿವೆ
ಒಂದಕೆ ತಿನ್ನುವ ಒಲವಿಲ್ಲ,
ತಿನ್ನುವ ಹಕ್ಕಿಯ ನೋಡುತ ಕುಳಿತಿದೆ
ಜ್ಞಾನಿಗೆ ಕರ್ಮದ ಫಲವಿಲ್ಲ.
ಸಂಸಾರಿಗ ಸನ್ಯಾಸಿಯು ಕಡೆದರು
ವೇದ ಸಮುದ್ರದ ವಿಸ್ತಾರ.
ಕರ್ಮವೊ? ಜ್ಞಾನವೊ? ತೀರದ ತೀರವು
ಪರಬ್ರಹ್ಮವಪರಂ ಪಾರ
ಫಕ್ಕನೆ ಮಂಡನ ಮಿಶ್ರರ ಕೊರಳಿನ
ಮಾಲೆಯು ಅರ್ಥಕೆ ಬಾಡಿತ್ತು.
ಉಭಯ ಸರಸ್ವತಿ ತೇಜಸ್ವಿನಿ ಸತಿ
ನುಡಿದರು ವಿಪ್ರರ ಸಭೆಗೆಲ್ಲ.
''ಮಂಡನ ಮಿಶ್ರರ ಸೋಲಾದರು, ಅವ
ರರ್ಧಾಂಗಿಗೆ ಸೋಲ್ಬರಲಿಲ್ಲ.''

## ೧೯. ಶಬರಿ

ಚಿನ್ನದ ಬಿಂದಿಗೆ ಬೆಳಕನು ಸುರಿಯಿತು ಮೂಡಲ ದೆಸೆಯಿಂದ
ಮಂಜಿನ ಹನಿಗಳನೆಸೆಯುತ ಬಂದಿತು ಗಾಳಿ ಬೊಗಸೆಯಿಂದ
ಮೊಗ್ಗೆಯ ಬಾಯನು ಬಿಡಿಸುತ ಬಂದವು ದುಂಬಿಯ ಪರಿವಾರ
ಸೇರಲು ಮೋಡವು ತೊಡಿಸುತ ಇಳಿದವು ಕಣಿವೆಗೆ ಹೂಹಾರ
ಹೂಬಿಸಿಲಿನ ವನಕೋಡುತ ಬಂದವು ಚಿಗರೆಯ ಹಿಂಡುಗಳು
ಮಧುವಿನ ಕೊಡಗಳ ತುಂಬಿಕೊಂಡವು ದುಂಬಿಯ ದಂಡುಗಳು
ಹಕ್ಕಿಗಳೆದ್ದುವು ಮುಗಿಲಿಗೆ ಹಾರುತ, ಚಿಲಿಪಿಲಿ ಹಾಡುಗಳು
ಮೆಲ್ಲಗೆ ಶಬರಿಯ ಕಾಡಿಗೆ ನಡೆದವು ಕುಂಕುಮ ಮೋಡಗಳು
ಗಿಳಿಗಳ ಬಳಗವು ರಾಮನ ಹುಡುಕುತ ಮುಗಿಲೊಳಗೋಡಿದವು
ಗಿಡಮರಗಳ ತಂಬೂರಿಯ ನುಡಿಸುತ ಬನಗಳು ಹಾಡಿದವು
ರಾಮನ ಹಂಬಲು ಹೃದಯವ ತುಂಬಲು ಬುಟ್ಟಿಯ ಹಿಡಕೊಂಡು
ಶಬರಿಯು ಬಂದಳು ಬುಗರಿಯ ಕಾಡಿಗೆ ಮೆಲ್ಲನೆ ನಡಕೊಂಡು
ರಾಮ ರಾಮ ಶ್ರೀರಾಮನ ಕರೆಯುತ ರಾಮನ ನೆನೆಸಿದಳು
ರಾಮ ರಾಮ ಶ್ರೀರಾಮನ ಧ್ಯಾನವ ಕಾಡಿಗೆ ಕಲಿಸಿದಳು
ರಾಮ ರಾಮ ಶ್ರೀರಾಮ ಸ್ಮರಣೆಯಲಿ ಕಾಡನೆ ನಿಲಿಸಿದಳು
ರಾಮ ರಾಮ ಶ್ರೀರಾಮಗೆ ಹಲುಬುತ ಗಿಡಗಿಡ ನಡೆದಿಹಳು
ರಾಮ ರಾಮ ಶ್ರೀರಾಮನ ನೆನೆಯುತ ಬುಟ್ಟಿಯ ಹಿಡಿದಿಹಳು
ಕಾಡಿನ ಗಿಡಗಳ ಎಲೆಕೊಂಬೆಗಳು ರಾಮನ ಸ್ಮರಿಸಿದವು
ರಾಮ ರಾಮ ಶ್ರೀರಾಮನ ನೆನೆಯುತ ಹೂವನುದುರಿಸಿದವು
ರಾಮ ರಾಮ ಶ್ರೀರಾಮನಿಗಾಗಿಯೆ ಹಣ್ಣನು ಸುರಿಸಿದವು
ಹಣ್ಣಿನ ರುಚಿಯನು ನೋಡುತ ನಡೆದಳು ''ರಾಮ ರಾಮ'' ಎಂದು
ಹುಳಿಹುಣ್ಣುಗಳನು ಎಸೆಯುತ ನಡೆದಳು ''ರಾಮ ರಾಮ'' ಎಂದು
ಸವಿ ಸವಿ ಹಣ್ಣನು ಬುಟ್ಟಿಗಿಳಿಸಿದಳು ''ರಾಮ ರಾಮ'' ಎಂದು
ನೆಲಮುಗಿಲಿನ ತುಟಿ ಬಿಡಿಸುತ ನುಡಿದಳು ''ರಾಮ ರಾಮ'' ಎಂದು
ಕಾಡಿಗೆ ಕಾಡೆ ಹರುಷದಿ ಹಾಡಿತು ''ರಾಮ ರಾಮ'' ಎಂದು ೧

ಕಾಡಿಗೆ ಕಾಡೆ 'ರಾಮ' ಎಂದಿರಲು ಲಕ್ಷ್ಮಣ ಬೆರಗಾದ
ಗಿಡ ಮರ ಎಲೆ ಹೂ 'ರಾಮ' ಎಂದಿರಲು ಲಕ್ಷ್ಮಣ ಬೆರಗಾದ
ಗಿಳಿ ಕೋಗಿಲೆಗಳು 'ರಾಮ' ಎಂದಿರಲು ಲಕ್ಷ್ಮಣ ಬೆರಗಾದ
ಬನದ ಹೃದಯವೆ 'ರಾಮ' ಎಂದಿರಲು ಲಕ್ಷ್ಮಣ ಬೆರಗಾದ
ಕಾಡಿನ ಕಣಿವೆಯ ಸೀಳು ದಾರಿಯಲಿ ಬಂದನು ಶ್ರೀರಾಮ
ಶಬರಿಯ ಮೊರೆಯನು ಆಲಿಸಿ ಬಂದನು ಕಾಡಿಗೆ ಶ್ರೀರಾಮ
ನೋಡಿದ ಗಿಳಿಗಳು ಕೂಗಿ ಹೇಳಿದವು ''ಬಂದನು ಶ್ರೀರಾಮ''
ಗೂಡಿನ ಜೇನುಗಳೆಲ್ಲ ಹಾಡಿದವು ''ಬಂದನು ಶ್ರೀರಾಮ''
ಕಾಡಿನ ಗಿಡ ಮರ ಹೂವು ಹಾಡಿದವು ''ಬಂದನು ಶ್ರೀರಾಮ''
ಬೀಸುವ ಗಾಳಿಗಳೆಲ್ಲ ಸಾರಿದವು ''ಬಂದನು ಶ್ರೀರಾಮ''
ಕೂಡಿದ ಚಿಗರೆಯ ಹಿಂಡು ಕೂಗಿದವು ''ಬಂದನು ಶ್ರೀರಾಮ''
ಸೊಂಡಿಲನೆತ್ತಿದ ಆನೆ ಸಾರಿದವು ''ಬಂದನು ಶ್ರೀರಾಮ''
ಸೀಳು ದಾರಿಯಲಿ ಮೆಲ್ಲನೆ ಬೀಸಿತು ಗಾಳಿಯೋಡಿ ಬಂದು
ದಾರಿಯುದ್ದಕೂ ಹೂವಿನ ಮಳೆಯನು ಸುರಿಸಿತು ಬನವಂದು
ಕಾಮನ ಬಿಲ್ಲು ಕಮಾನು ಕಟ್ಟಿದವು ರಾಮ ಬಂದನೆಂದು
ಮೇಘಮಾಲೆ ತೂಗಾಡಿ ಬೆಳಗಿದವು ರಾಮ ಬಂದನೆಂದು
ಬನದ ಹಕ್ಕಿಗಳು ಹಾಡತೊಡಗಿದವು ರಾಮ ಬಂದನೆಂದು
ಬಣ್ಣದ ನವಿಲುಗಳಾಡತೊಡಗಿದವು ರಾಮ ಬಂದನೆಂದು
ಚಿತ್ರವಿಚಿತ್ರ ಪತಂಗ ಹಾರಿದವು ರಾಮ ಬಂದನೆಂದು
ಅಳಿಲು ಟೊಂಗೆಯಲಿ ಕುಳಿತು ಕೈಯಜೋಡಿಸಿತು ಸ್ವಾಮಿಗೆಂದು
ಕಾಡಿನೊಲವ ಕೈಕೊಳ್ಳುತ ಬಂದನು ಕಾಡಿಗೆ ಶ್ರೀರಾಮ
ಶಬರಿಯ ಬಳಗದ ಕರೆಯನು ಲಾಲಿಸಿ ಬಂದನು ಶ್ರೀರಾಮ
ವಿಸ್ಮಿತಗತಿಯಲಿ ಲಕ್ಷ್ಮಣ ನುಡಿದನು, ''ಅದ್ಭುತವೀಪ್ರೇಮ'' ೨

ಶಬರಿಯ ಗುಡಿಸಲಿನಂಗಳದಲಿ ಶ್ರೀರಾಮಚಂದ್ರ ಬಂದ
ಚಂದ್ರಬಿಂಬ ಮುಖ ತುಂಬಿ ಮುಗುಳ ನಗೆ ನೀಲವರ್ಣದಿಂದ
ಕಟ್ಟಿಕೊಂಡ ಜಡೆಯಲ್ಲಿ ಇಟ್ಟ ಮುಡಿಯಲ್ಲಿ ಹೂವನೊಂದ
ತೂಗುತಿತ್ತು ಬತ್ತಳಿಕೆ ಬಿಲ್ಲು ಹೆಗಲಲ್ಲಿ ಠೀವಿಯಿಂದ.
ಉಟ್ಟ ವಲ್ಕಲದ ಬಟ್ಟೆ ಮಿಂಚಿದವು ಚಂದಚಂದದಿಂದ,

ನೀಲವಜ್ರ ವಿಸ್ತಾರ ವಕ್ಷದಲಿ ಹಾರವಿಳಿಯುತಿತ್ತು
ಚಾಚಿದಂಥ ನಿಡಿದೋಳು ತಳಿರು ಕೈಕಮಲ ಹೊಳೆಯುತಿತ್ತು.
ಶಬರಿ ನೋಡಿದಳು ರಾಮರೂಪ ಶ್ರೀರಾಮ ರಾಮ ಎಂದು
ಅರ್ಘ್ಯಪಾದ್ಯ ಸತ್ಕಾರ ನೀಡಿದಳು ರಾಮ ರಾಮ ಎಂದು
ಕುಳ್ಳಿರೆಂದು ಜಗುಲಿಯಲಿ ಹಾಸಿದಳು ಹರಕು ಚಾಪೆ ತಂದು
ಕುಳಿತು ರಾಮಲಕ್ಷ್ಮಣರ ನೋಡಿ ಕಣ್ತುಂಬ ನೀರ ತಂದು
ಹಣ್ಣು ಕೂದಲಿನ ಹಣ್ಣು ಜೀವ ಕೈಮುಗಿದು ನುಡಿದಳಂದು
''ಇಷ್ಟು ದಿವಸವೂ ಕಾದು ಕುಳಿತೆವು ನೀವು ಬರುವಿರೆಂದು''
''ಇಷ್ಟು ದಿವಸ ಹಾರೈಸುತಿದ್ದೆವು ನೀವು ಬರುವಿರೆಂದು''
''ಕಿವಿಯ ತುಂಬಿ ಬಂದವರು ಬಂದಿರೊ ಕಣ್ಣ ತುಂಬಿ ಇಂದು''
''ಮನವ ತುಂಬಿ ಬಂದವರು ಬಂದಿರೊ ವನವ ತುಂಬಿ ಇಂದು''
''ಹೃದಯ ತುಂಬಿ ಬಂದವರು ಬಂದಿರೊ ಎದುರಿನಲ್ಲಿ ಇಂದು''
''ತಿಳಿದ ಕಣ್ಣಿನಲಿ ಹೊಳೆದ ಬೆಳಕು ಮೈತಳೆದು ಬಂದಿರಿಂದು''
''ಋಷಿಯ ಹರುಷರಸ ಮಂತ್ರರೂಪ ಮೈತಳೆದು ಬಂದಿರಿಂದು''
''ನಿಮ್ಮ ಕರುಣೆಗಿಲ್ಲಂತಪಾರಗಳು ಸ್ವಾಮಿ ದೀನಬಂಧು''
''ರಾಮ ರಾಮ ರಘುರಾಮ ರಾಮ ಶ್ರೀರಾಮ ರಾಮ'' ಎಂದು
ಹಾಡಿ ಹೂಗಳ ನೀಡಿದರು ಹಣ್ಣುಗಳ ತಂದು ತಿನ್ನಿರೆಂದು.
ಹಣ್ಣು ಕೂದಲಿನ ಹಣ್ಣು ಜೀವ ಕೈಮುಗಿದು ಹೇಳಿದಂದು
ಭಕ್ತವತ್ಸಲನು ತಿಂದನೆಂಜಲನು ಬುಟ್ಟಿತುಂಬ ಹಣ್ಣು
ನೋಡುತಿತ್ತು ಹನಿಗೂಡುತಿತ್ತು ಲಕ್ಷ್ಮಣನ ಬೆರಗುಗಣ್ಣು
ಉಗಿದ ಬೀಜಗಳನೆತ್ತಿಕೊಂಡವು ಹಕ್ಕಿ ಹಾರಿ ಬಂದು
''ಧನ್ಯ ಧನ್ಯ ಶ್ರೀರಾಮ ಪ್ರಸಾದವು ನಮಗೆ ದೊರಕಿತೆಂದು''
ಶ್ರೀರಾಮಚಂದ್ರ ಕೈತೊಳೆದು ಹೇಳಿದನು ''ಹೋಗಿಬರುವೆನೆಂದು''
''ನೀಡಿದಂಥ ಸವಿಹಣ್ಣು ತಿಂದು ಸಂತೋಷವಾಯಿತೆಂದು''
ವರದ ಹಸ್ತವನು ಚಾಚಿ ಹೇಳಿದನು ಸ್ವಾಮಿ ''ಸ್ವಸ್ತಿ'' ಎಂದು
ಮರಳಿ ನಡೆದ ಲಕ್ಷ್ಮಣನ ಕೂಡ ಶ್ರೀರಾಮ ದೀನಬಂಧು
ಹಣ್ಣು ಕೂದಲಿನ ಹಣ್ಣು ಜೀವ ನೀಡಿರುವ ಹಣ್ಣು ತಿಂದು
ಕಾಡು ಕಣಿವೆಯಲಿ ಸೀಳು ದಾರಿಯಲಿ ಹೋದ ದೂರ ದೂರ
ಭಕ್ತವತ್ಸಲನ ಕರುಣೆ ಪ್ರೀತಿಗಳಿಗಿಲ್ಲವಂತಪಾರ.

ಒಲಿದು ಬಂದನಿವ ತಿಂದನೆಂಜಲವ ಒಲುಮೆಗೆಂಜಲಿಲ್ಲ
ಕರುಣೆದೋರಿ ಕಾಡಿಗೂ ಬಂದನಿವ ಕರುಣೆಗೆಂಜಲಿಲ್ಲ.
ಕಾಡು ಕಣಿವೆಯಲಿ ಸೀಳು ದಾರಿಯಲಿ ಸ್ವಾಮಿ ಮುಂದೆ ಮುಂದೆ
ಬೆರಗುಗೊಂಡು ಬಂದಿದ್ದ ಲಕ್ಷ್ಮಣನು ನೆರಳಿನಂತೆ ಹಿಂದೆ
ಕಾಡು ದೂರದಲಿ ಹಾಡುತಿತ್ತು ಶ್ರೀರಾಮ ರಾಮ ಎಂದು
ಎಲ್ಲ ಜೀವಗಳ ಕಾಯಬಲ್ಲುದೊ ರಾಮನಾಮವೊಂದು

# ೨೦. ವಸ್ತ್ರಾಪಹರಣ

ಹಂಸತೂಲಿಕಾತಲ್ಪದಲ್ಲಿ ಹೇಮಂತ ಕಣ್ಣು ತರೆದು
ಸ್ವರ್ಣಛಾಯೆ ಸಿಂಧೂರ ಲೇಪ ಬಳೆದಂತೆ ಬಣ್ಣವೆರೆದು
ಉಷಾಯಾತ್ರೆಯದ್ಘೋಷದಲ್ಲಿ ಹೂ ಬಿಸಿಲು ಕುಂಭ ಸುರಿದು
ಬೆಳಕು ಬಂತು ದಿಗ್ವಲಯಕಿಂತು ಚಳಿ ಮಂಜಿನಾಟವಾಡಿ
ಕುಳಿಗಾಳಿಯೆಳೆದಿತ್ತು ಬಂದು ಹೊಂಬಿಸಿಲ ತೇರ ನೋಡಿ ೧

ಬಂದು ಗೋಪಿಕಾವೃಂದ ನೀಲ ಕಾಲಿಂದಿಯಂಚಿನಲ್ಲಿ
ಗೋಪಾಲಕೃಷ್ಣ ಪತಿಯಾಗಲೆಂದು ಹಾರೈಸಿ ಹೊಂಚಿನಲ್ಲಿ
ಜಾಜಿ ಬಕುಲ ಸಂಪಿಗೆಯ ಪುಷ್ಪ ಶೃಂಗಾರ ಮಂಚದಲ್ಲಿ
ಪೂಜಿಸಿದರು ಕಾತ್ಯಾಯಿನಿಯನು ಕಾರುಣ್ಯಪೂರ್ಣೆಯೆಂದು
ಉಟ್ಟ ಸೀರೆಗಳ ಬಿಚ್ಚಿ ನುಗ್ಗಿದರು ನದಿಗೆ ಮೀಯಲೆಂದು ೨

ಸ್ವರ್ಣಪುತ್ಥಳಿಗಳಂತೆ ಬೆಳಗಿ ಗೋಪಾಂಗನೆಯರು ನಿಂದು
ಜಲಕ್ರೀಡೆಯಾಡಿದರು ನೀಲಕಾಲಿಂದಿಯಲ್ಲಿ ಬಂದು
ಹೃದಯ ಕಮಲವಿದು ಕಮಲನಾಭ ವನಮಾಲಿ ಕೃಷ್ಣಗೆಂದು
ಹಂಸಗತಿಯೊಳಲೆದಾಡುತಿರಲು ಯಮುನಾವಿಹಾರಿಯಾಗಿ
ನಾದಲೋಲ ಗೋಪಾಲಕೃಷ್ಣ ಬಂದಿದ್ದನಲ್ಲಿ ಸಾಗಿ ೩

ನವಿಲು ಗರಿಯ ಕಿರೀಟ ನವಪುಷ್ಪಮಾಲೆ ಧರಿಸಿ
ಮುಗುಳು ನಕ್ಕು ಕೊಳಲೂದುತಿರಲು ವನದಲ್ಲಿ ಮೋದವೆರಸಿ
ಬಣ್ಣ ಬಣ್ಣಗಳ ಸೀರೆಯೆತ್ತಿ ಮರವೇರಿ ರೆಂಬೆಗಿರಿಸಿ
ಕೊಳಲನೂದಿದನು. ಕೇಳಿ ಗೋಪಿ ದಿಙ್ಮೂಢರಾಗಿ ನಿಂತು
ಕಂಡು ಕೃಷ್ಣನನು ಹರುಷ-ಲಜ್ಜೆ ನಸುಗೆಂಪು ಮೂಡಿ ಬಂತು ೪

ಹಂಸಪಕ್ಷಿಗಳ ಹಿಂಡಿನಂತೆ ನೀರಾಟ ಬಿಟ್ಟು ಬಂದು
ಒಬ್ಬರೊಬ್ಬರು ತಬ್ಬಿಕೊಂಡು ಹೆಮ್ಮರದ ಮರೆಗೆ ನಿಂದು
ಬಣ್ಣಬಣ್ಣಗಳ ಸೀರೆ ತೂಗಿದವು ರೆಂಬೆರೆಂಬೆಗೊಂದು

ಸುಯ್ಯನೆದ್ದ ಚಳಿಗಾಳಿಗೊಡ್ಡಿ ಮೈ ನಡುಗಿ ನಿಂದು ನೋಡಿ
ಅಂಗಲಾಚಿದರು ನಾಚಿ ಗೋಪಿಯರು ಕೃಷ್ಣನನ್ನು ಬೇಡಿ ೫

''ಅಪ್ಪ ಸೀರೆ ಕೊಡು'' ಎಂದು ಬೇಡಿದರು ಹರಿಯು ಮರುಗದಿರಲು
''ಅಣ್ಣ ಸೀರೆ ಕೊಡು'' ಎಂದು ಕೇಳಿದರು ಹರಿಯು ಕರಗಲಿಲ್ಲ
''ನಂದ ಗೋಪನಿಗೆ ಹೇಳಿ ಹೊಡೆಸುವೆವು'' ಇಷ್ಟು ಹೆದರಲಿಲ್ಲ
ಹಂಸಪಕ್ಷಿಗಳ ಹಿಂಡಿನಂತೆ ಮರೆಯಲ್ಲಿ ನಿಂತುಕೊಂಡು
ಅಂಗಲಾಚಿದರು ನಾಚಿ ಗೋಪಿಯರು ಕೃಷ್ಣನನ್ನು ಕಂಡು ೬

ಮುಗುಳು ನಕ್ಕು ಶ್ರೀಕೃಷ್ಣ ನುಡಿದ ಗೋಪಾಂಗನೆಯರ ನೋಡಿ
''ನಗ್ನರಾಗಿ ನದಿಯಲಿ ನುಗ್ಗಿದಿರಿ ಜಲಕ್ರೀಡೆಯಾಡಿ
ಎದುರು ಬಂದು ತಪ್ಪಾಯಿತೆಂದು ಕೈಮುಗಿದು ಕ್ಷಮೆಯ ಬೇಡಿ''
ಎದೆಯ ಮೇಲೆ ಬಲಗೈಯನಿಟ್ಟು ಎಡಗೈಯ ಮುಚ್ಚಿಕೊಂಡು
''ಅಂಗಲಾಚಿದರು ನಾಚಿ ಗೋಪಿಯರು ಕೃಷ್ಣನನ್ನು ಕಂಡು'' ೭

''ಅಪ್ಪ ಸಾಕು ಹುಡುಗಾಟ ಸೀರೆ ಕೊಡು'' ಹರಿಯು ಮರುಗಲಿಲ್ಲ
''ಅಣ್ಣ ಚಳಿಗೆ ನಡುಕಾಟ, ಕೊಟ್ಟುಬಿಡು'' ಹರಿಯು ಕರಗಲಿಲ್ಲ
''ಕೈಗೆ ಸಿಕ್ಕರೊಳಿತಲ್ಲ ಥಳಿಸುವೆವು'' ಇಷ್ಟು ಹೆದರಲಿಲ್ಲ
''ಹಣೆಯ ಮೇಲೆ ಬಲಗೈಯನಿಟ್ಟು ಎಡಗೈಯ ಮುಚ್ಚಿಕೊಂಡು
ಅಂಗಲಾಚಿದರು ನಾಚಿ ಗೋಪಿಯರು ಕೃಷ್ಣನನ್ನು ಕಂಡು'' ೮

ಹಂಸಪಕ್ಷಿಗಳ ಹಿಂಡಿನಂತೆ ಹರಿಯೆದುರು ನಿಂತುಕೊಂಡು
ಅಂಗಲಾಚಿ ಗೋಪಿಯರು ನಾಚಿ ಬೇಡಿರಲು ಕೂಗಿಕೊಂಡು
ಮುಗುಳು ನಕ್ಕು ಶ್ರೀಕೃಷ್ಣ ನುಡಿದನವರಲ್ಲಿ ಮರಕುಗೊಂಡು
''ಎರಡು ಕೈಯಿಗಳನೆತ್ತಿ ಜೋಡಿಸಿರಿ. ನಿಮ್ಮ ಸೀರೆ ನಿಮಗೆ
ಕ್ಷಮಿಸಿ ಬಿಡಲಿ ಕಾಲಿಂದಿಯೆನ್ನುವೆವು. ನಮ್ಮ ದಾರಿ ನಮಗೆ'' ೯

''ನಮ್ಮ ಮಾನ ಮರ್ಯಾದೆ ಎಲ್ಲವೂ ನಿನ್ನ''ದೆಂದುಕೊಂಡು
ಆರ್ತಭಕ್ತಿಯಲ್ಲಿ ಶರಣುಯೆಂದು ಕೈಮುಗಿಯುತಿರಲು ಕಂಡು
ನಿಮ್ಮ ದೇವಿ ಕಾರುಣ್ಯಪೂರ್ಣೆ, ನಿಮ್ಮಿಷ್ಟ ಸಲಿಸಲೆಂದು
ವಸ್ತ್ರವಿತ್ತು ವನಮಾಲಿ ಪಡೆದ ಗೋಪಿಯರ ಪುಷ್ಪಮಾಲೆ
ಅಕ್ಷಯಾಂಬರವನೀವ ಕೈಗೆ ವಸ್ತ್ರಾಪಹರಣ ಲೀಲೆ ೧೦

# ೨೧. ಬುಟ್ಟಿ ಮತ್ತು ಬೀಗದ ಕೈ

ಆದದ್ದೆಲ್ಲ ಒಳಿತೇ ಆಯಿತು ॥ಪ॥ ನಮ್ಮ
ಶ್ರೀಧರನ್ನ ಸೇವೆಗೆ ಸಾಧನ ಸಂಪತ್ತಾಯಿತು ॥ಅ॥
ದಂಡಿಗೆ ಬೆತ್ತ ಹಿಡಿಯುವುದಕ್ಕೆ
ಮಂಡೆ ಮಾಚಿ ನಾಚುತ್ತಿದೆ
ಹೆಂಡತಿ ಸಂತತಿ ಸಾವಿರವಾಗಲಿ
ದಂಡಿಗೆ ಬೆತ್ತ ಹಿಡಿಸಿದಳಯ್ಯ
ಗೋಪಾಲಬುಟ್ಟಿ ಹಿಡಿಯುವುದಕ್ಕೆ
ಭೂಪತಿಯಂತೆ ಗರ್ವಿಸುತ್ತಿದ್ದೆ
ಆ ಪತ್ನಿ ಕುಲ ಸಾವಿರವಾಗಲಿ
ಗೋಪಾಲಬುಟ್ಟಿ ಹಿಡಿಸಿದಳಯ್ಯ

– ಪುರಂದರದಾಸರು

ಇಲ್ಲಿ ಬೆಳಕಿನ ಕಿರಣ ಕಾಲಿಡದು. ಇಲ್ಲಿಯೆ
ಮುತ್ತು ರತ್ನಗಳುಂಟು ಚಿನ್ನವುಂಟು
ರಾಮಟೆಂಕಿಗಳುಂಟು. ಗದ್ಯಾಣ ಪಣ್ಯಗಳು
ಹೊರಲಾರದಷ್ಟು ನಾಣ್ಯಗಳ ಗಂಟು ೧

ಇದು ಸರಾಫರ ಕಟ್ಟೆ. ನಾಯಕರು ಕುಳಿತಲ್ಲಿ
ಸದ್ದಿಲ್ಲ ಸುಳಿವಿಲ್ಲ ಎಲ್ಲ ಮೌನ
ಗುಬ್ಬಿಗಳಿಗೂ ಇಲ್ಲಿ ಚಿಲಿಪಿಲಿಯ ಕೊರಳಿಲ್ಲ
ಇಲ್ಲಿ ನಡೆಯುವುದೊಂದೆ ಧನದ ಧ್ಯಾನ ೨

ತನ್ನ ನೆರಳಿಗೆ ತಾನೆ ಅಂಜಿ ನಡೆಯುವರಿಲ್ಲಿ
ಒಂದು ದಿನ ಬ್ರಾಹ್ಮಣರು, ಒಬ್ಬ ಬಂದು
ನಾಯಕರ ಕೇಳಿದರು. ''ಬೇಡವೆ ನಿಮಗಿವು?
ಬುಟ್ಟಿ ಬೀಗದ ಕೈ ಈಗ'' ಎಂದು ೩

ನಾಯಕರ ಕಣ್ಣಲ್ಲಿ ಬಂಡೆಗಲ್ಲುಗಳು. ಆಗ
ಬ್ರಾಹ್ಮಣರು ಅಂದರು, ಕೈಯ ಮುಗಿದು
ಸಾಮಾನ್ಯವಲ್ಲ ಈ ಬುಟ್ಟಿ ಇದು ಅಕ್ಷಯವು
ದಣಿದು ಹೋಗುವಿರಿಲ್ಲಿ ಧನವ ತೆಗೆದು ೪

ಸಾಮಾನ್ಯವಲ್ಲ ಬೀಗದ ಕೈ, ಇದಕಾಗಿ
ದೇವತೆಗಳೂ ಕೂಡ ಹಗಲು, ಇರುಳು
ದುಂಬಾಲು ಬಿದ್ದರು, ಯಾರಿಗೂ ಕೊಡಲಿಲ್ಲ
ಇಲ್ಲಿಗೆ ಕಳಿಸಿದರು ನಿಮಗೆ ಕೊಡಲು ೫

ನಾಯಕರ ಕಣ್ಣಲ್ಲಿ ಮಿಂಚು, ಕೊರಳಲ್ಲಿತ್ತು
ಗುಡುಗು, ಕೇಳಿದರಾಗ, ''ಏನು ಸ್ವಾಮಿ?
ಯಾರು ನಿಮ್ಮನ್ನಿಲ್ಲಿ ಕಳಿಸಿದರು?'' ''ಇನ್ನಾರು!
ನಿಮ್ಮ ಹೆಂಡತಿ ಸ್ವಾಮಿ, ಧರ್ಮಪತ್ನಿ'' ೬

ಬುಟ್ಟಿ ತುಂಬಿದ ಕಣಜ ಲೋಕದಲ್ಲೆ ಇಲ್ಲ
ಕೀಲಿಕೈ ತೆರೆಯದ ತಿಜೋರಿಯಿಲ್ಲ
ಇವೆರಡ್ಡಿದರೆ ಸಾಕು. ನಿಮ್ಮ ಸಮರ್ಥ್ಯಾರುಂಟು?
''ಹೋಗಿರಯ್ಯ ಆಚೆ.. ಬಲ್ಲೆವೆಲ್ಲ'' ೭

ಬ್ರಾಹ್ಮಣರು ಅಂದರು, ''ಇನ್ನೊಮ್ಮೆ ಯೋಚಿಸಿರಿ.
ಇಷ್ಟು ಹೊತ್ತಿಗೆ ನಾಳೆ ಬರುವೆ ನಾನು''
ನಾಯಕರು ಬಂದೊಡನೆ ಹೆಂಡತಿ ಕೇಳಿದಳು
''ಸಾಮಾನು ಕಳಿಸಿದ್ದೆ ಸಿಕ್ಕವೇನು?'' ೮

ನಾಯಕರು ಮಾತಾಡಲಿಲ್ಲ, ಅಂದೇತಕೊ
ಬೆಳಕಿನಲ್ಲೆ ಅಲೆದರಿಡಿಯ ದಿವಸ
ಆಗೊಮ್ಮೆ ಈಗೊಮ್ಮೆ ಹೂವುಗಳ ಬಳಿ ನಿಂತು,
ಕೇಳಿದರು ''ಎಲ್ಲುಂಟು ನಿಮ್ಮ ಹರುಷ?'' ೯

ಮರುದಿನ ಅಷ್ಟುಹೊತ್ತಿಗೆ ಬಂದ ಬ್ರಾಹ್ಮಣರ
ಕಂಡೊಡನೆ ತಬ್ಬಿದರು ಒಳಗೆ ಕರೆದು
ಒಳಗೆಲ್ಲೊ ಒಂದುಕಡೆ ಹೊತ್ತಿರಲು ಜ್ಯೋತಿಯು
ಹಿಗ್ಗಿದರು ಕೀಲಿ ಕೈ ಬುಟ್ಟಿ ಪಡೆದು ೧೦

ಇಷ್ಟು ದಿನ ಜಡಿದಂಥ ಒಳ ಕದವು ತೆರೆಯಿತು
ಅಕ್ಷಯದ ಅಕ್ಷರದ ನಿಯ ಸುರಿದು
ಬೆರಳುಗಳ ಬುಟ್ಟಿಯನು ತುಂಬಿರಲು, ನಾಯಕರ
ಬಳಿ ಸಾರಿ, ದಂಡಿಗೆ ಬೆತ್ತ ಹಿಡಿದು ೧೧

ಹೆಂಡತಿಯು ಅಂದಳು, ''ಹೋಗೋಣವೆ ಇನ್ನು
ಹಾಡುಗಳ ಮೈ ತೊಳೆವ ಹೊಳೆಯ ದಡಕೆ.''
ನಾಯಕರು ಅಂದರು. ''ಅಲ್ಲವೆ ಮತ್ತೆ
ಹೊಂಬೆಳಗು ಕಾದಿಹವು ನಮ್ಮ ನುಡಿಗೆ.'' ೧೨

# ೨೨. ಕುಚೇಲೋಪಾಖ್ಯಾನ

'ಧೋ' ಎಂದು ಜಡಿಮಳೆಯು ಸುರಿಯುತಿತ್ತು
ಇಳೆಗೆ ಹಸಿರಿನ ಭಾಗ್ಯ ತೆರೆಯುತಿತ್ತು
ಬಡ ಸುದಾಮನ ಜೀರ್ಣ ಪರ್ಣಶಾಲೆಯ ಸೇರಿ
ಮಳೆಯೆಲ್ಲ ತೊಯಿಸಿ ತಪ್ಪಡಿಸುತಿದೆ ಸೋರಿ
ಮೋಡಗಳು ಕೂಡ – ಸುರಿಯುತಿರಲು ಮನೆಯೊಳಗೆ
ಮಡದಿ ಮಕ್ಕಳು ಕೊರಗಿ ನಡುಗಿದರು ಚಳಿಗೆ
ದೇವರೆದುರಿಗೆ ಕುಳಿತು ನೋಡುತಲಿ ವ್ಯೋಮ
ಮುಗುಳು ನಗೆಯಲಿ ನೆನೆದು ನುಡಿದನು ಸುದಾಮ :
''ಇದುಭಾಗ್ಯವಿದುಭಾಗ್ಯವಿದುಭಾಗ್ಯವೆಮಗೆ
ಮುಗಿಲ ಕಪಿಲೆಯು ಕರೆಯುತಿಹುದು ಮನೆಯೊಳಗೆ'' ೧

'ಧೊ' ಎಂದು ಸುರಿಯುತಿರುವೀಮಳೆಯ ನೋಡಿ
ಬರುತಿಹುದು ಹಳೆಯು ಸಂಗತಿ ನೆನಪುಗೂಡಿ
ಸಾಂದೀಪನಿಗಳ ಗುರುಕುಲದೊಳಿರುವಂದು
ಒಮ್ಮೆ ಕಟ್ಟಿಗೆ ತರಲು ಕಾಡಿನಲಿ ಬಂದು
ದ್ವಾರಕೆಯ ದೊರೆ ಕೃಷ್ಣ ವಾಸುದೇವನ ಕೂಡ
ಅಲೆದಾಡುತಿರಲು, ಕಪ್ಪಿಟ್ಟು ಕಾರ್ಮೋಡ
ಕವಿದುಬಿಟ್ಟವು ಮುಗಿಲ, ಮಿಂಚು ಕುಣಿದಾಡಿ
ಸಿಡಿಲು ಜಡಿಮಳೆ ಹೊಡೆದವಿಳೆಯ ತುಳುಕಾಡಿ
ಶ್ರೀಕೃಷ್ಣನೊಂದು ಕಡೆ, ನಾನು ಮತ್ತೊಂದು ಕಡೆ
ಇರುಳೆಲ್ಲ ಹೆದರಿ ಮರವೇರಿ ಕುಳಿತು ಬಿಡೆ
ಹುಲಿ ಸಿಂಹ ಚಿರತೆಗಳು ಕಾಡಿನಲಿ ಕೂಗಿ
ಘೀಳಿಡಲು ವನ್ಯಮೃಗ ದಿಙ್ಮೂಢರಾಗಿ
ಕುಳಿತಲ್ಲೆ ಕುಳಿತು ಚಳಿ– ನಡುಗಿ ಹೌಹಾರಿ
ಮಾರನೆಯ ದಿವಸ ತಲುಪಿದೆವು ಮನೆಸೇರಿ ೨

''ದ್ವಾರಕೆಯ ದೊರೆ - ಸ್ನೇಹವಿರುವಾಗ ನಿಮಗೆ
ದಾರಿದ್ರ್ಯ ದುಃಖಗಳು ಇನ್ನೇಕೆ ನಮಗೆ?
ಹೋಗಿಬನ್ನಿರಿ ನಾಥ ಶ್ರೀಕೃಷ್ಣನೆಡೆಗೆ
ಶರಣು ಶರಣೆನ್ನುವೆವು ಶ್ರೀಕೃಷ್ಣನಡಿಗೆ''
ಮಡದಿ ಮಕ್ಕಳು ನುಡಿಯುತಿರಲು ಬಲು ನೊಂದು
ಕಂಡುಬರುವೆನು ಗೆಳೆಯ ಶ್ರೀಹರಿಯನೆಂದು
ವಿಪ್ರ ನಿರ್ಧರಿಸಿದನು ಹರುಷದೊಳಗಂದು
ದ್ವಾರಕೆಯ ದೊರೆಗೆ ಬಡ ಕಾಣಿಕೆಯನೊಂದು
ಕೊಡಲು ಬಯಸಿ ಕುಚೇಲ ಚಿಂತಿಸಿರಲಂದು
ಬೇಡಿ ತಂದೆರಡು ಹಿಡಿ ಭತ್ತವನು ಕುಟ್ಟಿ
ವಿಪ್ರಪತ್ನಿಯು ಕೊಡಲು ಅವಲಕ್ಕಿ ಕಟ್ಟಿ
ಹರಿಯ ಕಾಣುವೆನೆಂದು ಬಲು ಹರುಷಪಟ್ಟು
ಹರಕು ಚಿಂದಿಯ ಗಂಟು ಕಂಕುಳೊಳಗಿಟ್ಟು
ಮರುದಿನವೆ ಹಿಡಿದಿದ್ದ ದ್ವಾರಕೆಯ ದಾರಿ
ಸೂರ್ಯನಾರಾಯಣನು ಬರಲು ರಥವೇರಿ
ಉದಯರಾಗದಿ ಪಕ್ಷಿ ಮಂಗಲವ ಕೋರಿ
ಬೆಳಗಿದವು ಪಚ್ಚೆ ಪಯರಿನ ಬಣ್ಣ - ಹೂವು
''ವಿಷ್ಣು ಭಕ್ತರ ಕಂಡು ನಲಿಯುವೆವು ನಾವು'' ೩.

ದೂರದಿಂದಲೆ ದ್ವಾರಕಾಪುರವ ಕಂಡು
ಕೃಷ್ಣಭಕ್ತ ಕುಚೇಲ ಕೈಮುಗಿದುಕೊಂಡು
ಹೊಳೆವ ಚಿನ್ನದ ಕಳಸ ಮನೆಮಂದಿರಗಳು
ಪರಿಮಳದ ಗರಿಬಿಚ್ಚಿ ಹೂ ಹಂದರಗಳು
ಕಮಲ ಪುಷ್ಕರಣಿಗಳು ಹುಲ್ಲುಗಾವಲುಗಳು
ಹಾಲು ತೆನೆಗಳು ತುಂಬಿ ತೂಗುತಿಹ ಹೊಲಗಳು
ಮಂಜರಿಗಳಿಂದ ರಂಜಿಸುವ ತುಳಸೀವನ
ಇಂಪಾಗಿ ಧ್ವನಿಗೈವ ಹಕ್ಕಿಗಳ ನಿಸ್ವನ
ಗೋವಳರ ಕೊಳಲು ಸ್ವರ ಕುಣಿವ ಹಸು ಕಂಡು
ಮೇಯುತಿದ್ದವು ಗೋವು ಗೋವುಗಳ ಹಿಂಡು

ಒಡ ಸುದಾಮನು ಕೃಷ್ಣನರಮನೆಗೆ ಬಂದು
ನಿಂದಿರುವ ದ್ವಾರಪಾಲಕರ ಬಳಿಸಂದು
''ನಿಮ್ಮ ದೊರೆಗಳ ನಾವು ಕಾಣಬೇಕೆಂದು''
ನುಡಿದಿರಲು ಕೇಳಿ ಗಹಗಹಿಸಿದರು ನಿಂದು
ನಗುನಗುತ ಕೇಳಿದರು ಹೆಸರು, ದೆಸೆ, ಗುರುತು
ದ್ವಾರಕೆಯ ದೊರೆಯ ಸಹಪಾಠಿಯೆಂದರಿತು
ಜೀರ್ಣವಸ್ತ್ರವನುಟ್ಟ ಬ್ರಾಹ್ಮಣನ ಕಂಡು
ನಂಬಲಾರದೆ ನಕ್ಕರಾಶ್ಚರ್ಯಗೊಂಡು ೪

ಓಡಿ ಬಂದನು ಹರಿಯು ಹೆಬ್ಬಾಗಿಲೆಡೆಗೆ
ಓಡಿ ಬಂದನು ದೊರೆಯು ಹೆಬ್ಬಾಗಿಲೆಡೆಗೆ
ವಜ್ರಾಂಕುಶ ಧ್ವಜದ ಮುದ್ರೆಯಡಿಗಡಿಗೆ
ಬಳಲಿ ಬಂದ ಸುದಾಮ ಕರೆದಾರ್ತನುಡಿಗೆ.
ದಣಿದು ಬಂದ ಕುಚೇಲ ಕರೆದಾರ್ತನುಡಿಗೆ
ಓಡಿಬಂದನು ಸ್ವಾಮಿ ಸ್ನೇಹಿತನ ಕಡೆಗೆ.
ಹೊಳೆವ ರತ್ನಕಿರೀಟ ಕೇಯೂರ ಕುಂಡಲ
ಕೋಟಿ ಚಂದ್ರರ ಕಾಂತಿಯುಳ್ಳ ಮುಖಮಂಡಲ
ಓಡಿಬಂದನು ಕೃಷ್ಣ ಸ್ನೇಹಿತನ ಕಂಡು
ನಿಡುದೋಳುಗಳ ಚಾಚಿ ಕರೆದಪ್ಪಿಕೊಂಡು
ಕಣ್ತುಂಬಿ ನಲಿದು ಸ್ನೇಹಿತನ ನೋಡಿದನು
''ಕ್ಷೇಮವೇ? ಗೆಳೆಯ ಬಾ''ರೆಂದು ಕೈನೀಡಿದನು
ಆನಂದ ಬಾಷ್ಪಗಳ ಕಣ್ತುಂಬ ಸುರಿಸಿ
ಶ್ರೀಹರಿಯ ಕಾರುಣ್ಯ ಸ್ನೇಹಗಳ ಸ್ಮರಿಸಿ
ಶ್ರೀಹರಿಯ ಹೆಗಲಮೇಲಿರಿಸಿ ಕರವನ್ನು
ನಡೆದಿರಲು ಬ್ರಾಹ್ಮಣನು, ಕಂಡು ಬರವನ್ನು
ಸತ್ಯಭಾಮಾದೇವಿ ರುಕ್ಮಿಣೀದೇವಿಯರು
ಮುತ್ತಿನಾರತಿ ಹಿಡಿದು ಸ್ವಾಗತವ ಕೋರಿದರು
ಎದುರುಗೊಂಡರು ಮಂಗಳಾರತಿಯ ಬೆಳಗಿ
ಸತ್ಕರಿಸಿದರು ಕೊಂಬು ಕಹಳೆಗಳ ಮೊಳಗಿ.

ವಾಸುದೇವ ಸುದಾಮ ರತ್ನಮಂಚದಿ ಕುಳಿತು
ಆಡಿದರು ಗುರುಕುಲದ ಸವಿನೆನಪುಗಳ ಕುರಿತು
''ಅತ್ತಿಗೆಯು ಕಳಿಸಿರುವ ಕಾಣಿಕೆಯ ತಾ''ಯೆಂದು
ಹರಕು ಗಂಟನು ಬಿಚ್ಚಿ ಅವಲಕ್ಕಿಯನು ತಿಂದು
ಸತ್ಯಭಾಮಾದೇವಿ ರುಕ್ಮಿಣೀದೇವಿಯರು
ವಿಪ್ರಪತ್ನಿಯು ಕಳುಹಿದವಲಕ್ಕಿ ಬೇಡಿದರು
ಬಡ ಸುದಾಮನು ತಂದ ಅವಲಕ್ಕಿಯನು ಸವಿದು
''ಇದು ಭಾಗ್ಯ''ವೆಂದನುಗ್ರಹಿಸಿದರು ಒಲಿದು ೫

ಹರಿಯೊಡನೆ ಹಲವು ದಿನ ಹರುಷದಿಂದಲಿ ಕಳೆದು
ಮನೆಗೆ ಮರಳುವೆನೆಂದು ಮಡದಿ ಮಕ್ಕಳ ನೆನೆದು
''ಹೋಗಿಬರುವೆನು ಸ್ವಾಮಿ'' ಶ್ರೀಕೃಷ್ಣ ಹರಿಯೆ
''ಹೋಗಿಬರುವೆನು ಸ್ವಾಮಿ'' ದ್ವಾರಕೆಯ ದೊರೆಯೆ
ಸತ್ಯಭಾಮಾದೇವಿ ರುಕ್ಮಿಣಿಯರನು ಕಂಡು
''ಹೋಗಿಬರುವೆನು ತಾಯೆ'' ಎಂದು ಬೀಳ್ಕೊಂಡು
ಹೃತ್ಕಮಲದಲಿ ದಿವ್ಯ ಸ್ಮರಣೆಗಳನಿರಿಸಿ
ಆನಂದ ಬಾಷ್ಪಗಳ ಕಣ್ತುಂಬ ಸುರಿಸಿ
ಕೃಷ್ಣ ಭಕ್ತ ಸುದಾಮ ಮನೆಗೆ ನಡೆದಿದ್ದ
ಹೆಜ್ಜೆ ಹೆಜ್ಜೆಗೆ ಹರಿಯ ನೆನಪು ನುಡಿದಿದ್ದ
ಸೂರ್ಯನಾರಾಯಣನು ಬರಲು ರಥವೇರಿ
ಹಕ್ಕಿಗಳು ಹಾಡಿದವು ಮಂಗಲವ ಕೋರಿ
ಬೆಳಗಿದವು ಪಚ್ಚೆ ಪಯರಿನ ಬಣ್ಣ ಹೂವು
''ವಿಷ್ಣು ಭಕ್ತರ ಕಂಡು ನಲಿಯುವೆವು ನಾವು''
ಹರಿಯ ನೆನೆದು ಸುದಾಮ ಮನೆಗೆ ಬರುತಿರಲು
ಹೆಜ್ಜೆ ಹೆಜ್ಜೆಗೆ ಹರಿಯ ಕರುಣೆ ಸ್ಮರಿಸಿರಲು
ಸ್ವರ್ಣದಾರತಿಯೆತ್ತಿ ತಟ್ಟೆಯೊಳಗಿರಿಸಿ,
ಮುತ್ತು ರತ್ನಾಭರಣ ಮಾಲಿಕೆಯ ಧರಿಸಿ
ರೇಷಿಮೆಯ ವಸ್ತ್ರ ಪೀತಾಂಬರವನುಟ್ಟು
ಮಡದಿ ಮಕ್ಕಳು ಬರಲು ಆಶ್ಚರ್ಯಪಟ್ಟು

ಮುತ್ತಿನಾರತಿ ಬೆಳಗಿ ತಿಲಕ ಹಣೆಗಿಟ್ಟು
ಕರೆದೊಯ್ಯುತಿರಲು ಪರಮಾಶ್ಚರ್ಯಪಟ್ಟು
ನುಡಿದನು ಸುದಾಮ, ಶ್ರೀಕೃಷ್ಣನನು ಸ್ಮರಿಸಿ
ಹೃತ್ಕಮಲದಲಿ ದಿವ್ಯ ನೆನಪುಗಳನಿರಿಸಿ
''ಇದು ಭಾಗ್ಯವಿದುಭಾಗ್ಯ ಶ್ರೀಹರಿಯ ಕರುಣೆ
ಪದುಮನಾಭನ ಪಾದ ಪದುಮಗಳ ಸ್ಮರಣೆ''

## ೨೩. ಪರಿಗ್ರಹಿಸಿರೀ ಪಾರಿಜಾತ

ಹಸಿರು ಚೈತ್ರವನದಲ್ಲಿ ಮೆರೆಯಿತಚ್ಛೋದವೆಂಬ ಸರಸಿ
ಕಮಲವೇದಿಕೆಯನೇರಿ ಕುಳಿತ ಕಲಹಂಸವೃಂದದರಸಿ
ಬನದ ಹಸಿರು ಬಯಲಲ್ಲಿ ಗಿಡದ ನೆರಳಲ್ಲಿ ಸೀಳು ದಾರಿ
ಬಳ್ಳಿವರಿದು ಸುತ್ತಾಡಿ ಬಂದವೋ ಸರಸ್ತೀರ ಸೇರಿ ೧

ಬಕುಲವನದ ನರುಗಂಪು ತುಂಬಿತೊ ಬನದ ಸುತ್ತುಮುತ್ತು
ಮಂದಗಾಳಿ ಮಾಂದಳಿರಿನೊಡನೆ ಬಿನ್ನಾಟವಾಡುತಿತ್ತು
ಬಣ್ಣಬಣ್ಣಗಳ ಕಮಲವರಳಿದಚ್ಛೋದ ತೀರದಲ್ಲಿ
ಮಿಸುನಿಗೋಪುರದ ಶಿವಾಲಯವು ನಿಂತಿತ್ತು ದೂರದಲ್ಲಿ ೨

ಶಿವಾರ್ಚನೆಗೆ ನಡೆದಿದ್ದನೊಮ್ಮೆ ದೇವರ್ಷಿ ಪುಂಡರೀಕ
ಋಷಿಯ ರೂಪ ಸೌಂದರ್ಯ ಕಂಡು ನಲಿದಿತ್ತು ಮೂರು ಲೋಕ
ಅರುಣಗೋಲ ಬಂದಂತೆ ದಿವ್ಯ ಯಜ್ಞೋಪವೀತ ತೊಟ್ಟು
ಋತುವಸಂತ ನಡೆದಂತೆ ತಪಕೆ ವಲ್ಕಲದ ವಸನವುಟ್ಟು ೩

ಧವಲವರ್ಣ ಕೆಂದುಟಿಯ ದುಂಡುಮುಖ ನೀಲನಯನ ಹೊಳೆದು
ಮಿಸುನಿಜಡೆಯ ಸುಕುಮಾರ ರೂಪವೊಪ್ಪಿತ್ತು ಭಸ್ಮ ತಳೆದು
ಮುಂಜುಮೇಖಲೆಯ ಕಟ್ಟಿ ಬೆರಳ ರುದ್ರಾಕ್ಷಿಮಾಲೆ ಹಿಡಿದು
ಕಪಿಂಜಲನ ಜತೆಯಲ್ಲಿ ಬಂದನಾ ಪುಂಡರೀಕ ನಡೆದು ೪

ಹಿಡಿದ ದಂಡ ಕೈಕಮಂಡಲಗಳೊಪ್ಪಿರಲು ಪುಂಡರೀಕ
ಕಪಿಂಜಲನ ಜತೆಯಲ್ಲಿ ನಡೆದು ಬರುತಿದ್ದ ದೇವಲೋಕ
ಋಷಿಯ ರೂಪಸೌಂದರ್ಯ ನೋಡಬಯಸಿದ್ದರಲ್ಲಿ ನಿಂದು
ದೇವವನದ ವನದೇವಿ ಚಾರುಮಧುಮಾಸಲಕ್ಷ್ಮಿ ಬಂದು ೫

ಎದೆಯೊಡ್ಡಿ ನಿಂತ ಸಾಮ್ರಾಟ ಸಾಮಂತ ಪಡೆ
ಎಲ್ಲರನು ಗುಡಿಸಿ ಉರುಳಿರುವವಿಂದು

೧೦

ಹಸಿದವರ ತುತ್ತುಗಳ ಕಸಿದ ಕಪಟಿ
ಗಳು, ಗಾಲಿಗಳ ಬುಡದಲ್ಲಿ ಹುಡಿಯ ಹಾದಿ
ದುಡಿದವರ ಜಾಡುಗಚ್ಚಿದ ಕ್ರೋಧ ಮು
ಷ್ಟಿಯಲಿ, ಹೊಸಯುಗದ ಮಗುವನೆತ್ತುವಳು ದಾದಿ

೧೧

ದುಡಿವ ಜನ ಬರೆವರು ಚರಿತ್ರೆ. ಧಾನ್ಯಗಳ
ತೆನೆಯಲ್ಲಿ, ಕಾಲದ ಕುಲುಮೆಯಲ್ಲಿ
ಹೆಗಲೇರಿ ಕೂತವರ ಕೆಳಗೆಳೆದು ಹಾಕು
ವರು. ಶ್ರಮಜೀವಿಗಳ ಧ್ವಜದ ಗೆಲುವಿನಲ್ಲಿ

೧೨

ದುಡಿವ ಕೈಯುರುಳಿಸುವ ಗಾಲಿಗಳ ವೈ
ಭವಕೆ ಹೆಗಲೊಡ್ಡಬೇಕೆಂಬ ತವಕದೊಳಗೆ
ಹೊಸಯುಗದ ಧೀರ ಮುನ್ನಡೆಯ ಸಂ
ಕಲ್ಪಗಳ ದೃಶ್ಯ ಕಂಡಿದ್ದ ಕಾರ್ಲ, ಕಿಡಕಿಯೊಳಗೆ.

# ೩೮. ಗಿರವಿ ಅಂಗಡಿಯಲ್ಲಿ

೧

ಗಿರವಿ ಅಂಗಡಿಯಲ್ಲಿ ಮುಂಗಟ್ಟುಗಳ ಸಾಲು, ಜನ
ಯಾವ್ಯಾವುದೊ ವಸ್ತುಗಳನು ತಂದು,
ಸಂಸಾರದ ಬವಣೆ ತೋಡಿಕೊಂಡರು.
''ಇಲ್ಲಿ ಬಡ್ಡಿಯಿಲ್ಲವೆ ದಯೆಗೆ ಕೂಡ ಇಂದು''

೨

ಬಡವರಿಗೆ ಕಷ್ಟಗಳು ಬಹಳ. ಒಬ್ಬೊಬ್ಬರೂ
ಕಂಕುಳಲಿ, ಹೆಗಲಲ್ಲಿ ಹೊತ್ತುಕೊಂಡು
ಸಾಹುಕಾರಗೆ ಕೈ ಮುಗಿದು ಅಂದರು : ''ಸ್ವಾ....
ಮಿ,... ತುಸು ಹಣವ ಕೊಡಿ, ಇದನ್ನಿಟ್ಟುಕೊಂಡು.''

೩

ಯಾವಾಗಲೂ ತೇವೆ-ಕಣ್ಣುಗಳಲ್ಲಿ, ಮನೆಯಲ್ಲಿ
ಬಾಣಂತಿ. ಹೊರಗೆ ಅಸಾಧ್ಯ ಚಳಿಯು
ಕಲ್ಲಿದ್ದಲಿಲ್ಲ ಅಗ್ಗಿಷ್ಟಿಕೆಗೆ. ಹಾಗಾಗಿ,
ಗಿರವಿಗೆ ತಂದದ್ದು ಒಂದೇ ಬಳೆಯು.

೪

''ತಾಯಿಗೆ ಒಮ್ಮೆಲೆ ಕಾಯಿಲೆ. ಹುಚ್ಚಂತೆ,
ನೆತ್ತರಿನ ಹನಿಯಿದ್ದ ಲೋಲಾಕಿವು.
ಅವಳೇ ಕಿತ್ತೆಸೆದದ್ದು. ಆಸ್ಪತ್ರೆ ಸೇರಿಸಲು.
ನಮಗಿನ್ನು ಬ್ರೆಡ್ಡು ತರುವವರು ಯಾರು?''

೫

''ಇದು ನಮ್ಮ ಮದುವೆಯುಂಗುರ. ಕಂದನಿಗೆ
ಹುಟ್ಟು ಹಬ್ಬವು ಅವಗೆ ನಾಳೆ ದಿನವೆ.
ಒಲೆಯ ಬಳಿ ಹರಿದು ಕೈ ಸುಟ್ಟುಕೊಂಡಿದೆ
ಗೊಂಬೆಯನು ತರಬೇಕು ಇಂದೆ ಅವಗೆ.''

೬

ಸಾಹುಕಾರನ ಕಿವಿಗೆ ಹರಿದದ್ದು ಕಷ್ಟಗಳೆ...
ಅಷ್ಟೋ ಇಷ್ಟೋ ಹಣವ ಕೈಗೆ ಸುರಿದು,
ತನ್ನ ಪಾಡಿಗೆ ತಾನು ಲೆಕ್ಕ ಬರೆಯುತ್ತಿದ್ದ
ಗಿರಿವಿಯಿಟ್ಟವರಿಗೆ ರಶೀದಿ ಹರಿದು.

೭

ತುಸು ದೂರ ನಿಂತ ರೈತ ಹೆಂಗಸು. ಅವಳ
ಕೈಯಲ್ಲಿ ಇತ್ತೊಂದು ಸಣ್ಣ ಗಂಟು.
ಸಾಹುಕಾರನು ನೋಡಿ ಕರೆದು ಕೇಳಿದನು–
''ಏನಾಗಬೇಕಿತ್ತು? ಏನು ಉಂಟು?''

೮

ಹೆಂಗಸಂದಳು ''ಸ್ವಾಮಿ, ಹಣ ಬೇಕಿತ್ತು
ಗಿರವಿಗೆ ತಂದಿದ್ದೆ ಇದನ್ನಿಂದು
ಗಂಟಿನಲ್ಲಿಟ್ಟಿರುವೆ,'' ಬಟ್ಟೆ ತೋರಿಸಿದಳು
ಅಂಗಿ, ಷರಾಯಿ, ಕೋಟು, ಟಾಯ್ ಒಂದು.

೯

ಹುಬ್ಬೇರಿಸುತ್ತಲೆ ಸಾಹುಕಾರನು ಅಂದ :
''ನಿಮ್ಮವೇನಲ್ಲ, ಇವು ಯಾರ ಬಟ್ಟೆ?''
ಹೆಂಗಸಂದಳು. ''ಒಡೆಯರವು. ಸದ್ಯಕ್ಕೆ
ಅವರ ಸಂಸಾರಕ್ಕೆ ತುಂಬಾ ಕಷ್ಟ''

೧೦

ಹೆಂಡತಿಗೆ ಎದೆ ನೋವು. ಮಗನಿಗೆ ಕಾಯಿಲೆ
ಉಲ್ಬಣ. ಔಷಧಕೆ ಇಲ್ಲ ಕಾಸು.
ಇವನ್ನುಳಿದರೆ, ಬೇರೆ ಬಟ್ಟೆಗಳಿಲ್ಲ.
ಯಾರಿಗೂ ಬರಬಾರದಿಂಥ ತ್ರಾಸು.

೧೧

ಹಾಗೆಂದೆ ಆತ ಖುದ್ದಾಗಿ ಬಂದಿಲ್ಲ.
ಉಪಕಾರವಾದೀತು ಇಂಥ ಸಮಯ.
ಬಟ್ಟೆಯೆತ್ತಿಕೊಳ್ಳುತ್ತ, ಸಾಹುಕಾರ ಕೇಳಿ
ದನು, ಬರೆದುಕೊಳ್ಳುತ್ತ ರಶೀತಿಯ.

೧೨

''ಹೆಸರೇನು ನಿನ್ನದು? ನಿನ್ನ ಆ ಒಡೆಯನದು?''
''ಹೆಲೆನ ಡೆಮ್ಯೂತ – ನನ್ನ ಹೆಸರು.
ಕಾರ್ಲ್‌ಮಾರ್ಕ್ಸ್ – ಒಡೆಯರದು.'' ಆಮೇ
ಲೆ ರಶೀತಿಯೊಂದಿಗೆ ಬಂತು ಸ್ವಲ್ಪ ಹಣವು.

## ೩೯. ರೊಟ್ಟಿ ಮತ್ತು ಕೋವಿ

ತಟ್ಟನೆ ನಿಂತು ನೋಡಿದೆ, ತೊಟ್ಟಿಯಾಚೆಂದ
ಹಸಿದ ಹಾವುಗಳಂತೆ ಇಳಿದು ಒಳಗೆ
ಎರಡು ಕೈಗಳು; ಸಿಕ್ಕ ಎಂಜಲಿನೆಲೆಯನ್ನು
ಹಿರಿದು ತೆಗೆದವು. ಕಸದಿಂದ ಹೊರಗೆ

ತಡಮಾಡಲಿಲ್ಲ. ತಡೆದನುಮಾನಿಸಲಿಲ್ಲ.
ಎಲ್ಲಾದರೂ ಉಂಟೆ ತುಂಡು ರೊಟ್ಟಿ?
ಮತ್ತು ಅನ್ನದ ಅಗಳು? ಎಲೆಯೆಲ್ಲ ಬಳಿದಾಗ
ಏನೋ ಸಿಕ್ಕಿತು; ತಣ್ಣಗಾತು ಹೊಟ್ಟೆ

ಎರಡು ಬ್ರೆಡ್ಡಿನ ತುಂಡು, ಚೆಲ್ಲಿದ ಹುಳಿಯನ್ನ
ಸಿಪ್ಪೆ ಉಪ್ಪಿನ ಕಾಯಿ ಕೂಡಿದುಪ್ಪು
ಎಲ್ಲಿಯೋ ಕಂಡಿದ್ದೆನಲ್ಲ ಈ ಕೈಗಳನು?
ಹೌದಿವೇ ಕೈಗಳು; ಬಲಿಷ್ಠ ಕಪ್ಪು.

ಆಷಾಢ ಮೋಡಗಳು 'ಧೋ'ಗುಟ್ಟಿ ಸುರಿದು
ಹೊಲಗದ್ದೆಗಳು ತೊಯ್ದು ತಪ್ಪಡ್ಯಾಗಿ
ಹೂಡಿದ್ದ ನೇಗಿಲಿನ ಹಾಡು, ರವಕೆಯ ಹಸಿರು
ತೊಡೆಸಿದ್ದವಲ್ಲವೆ ತೆನೆಯು ತೂಗಿ

ಅಂದು ಕೊಂಡೆನು. ಅಲ್ಲ ಇವುಗಳೆ ಅಲ್ಲವೆ
ಗಚ್ಚು ಗಾರೆಯ ಹೊತ್ತು ಹಗಲು ಇರುಳು.
ಉಪ್ಪರಿಗೆ ಬಂಗಲೆಯ ನಿಲ್ಲಿಸಿಲ್ಲವೆ? ಮ
ತ್ತೆ, ಇವುಗಳಿಂದಲ್ಲವೆ ಸುಖದ ನೆರಳು

ಹಸಿದ ಕೈಗಳಿಗೆ ದುಡಿಮೆಯೆಂದರೆ ಪ್ರೀತಿ
ಚೆಲುವೆಂದರೂ ಪ್ರೀತಿ ಕಾಣೊ ಅವಕೆ
ಹಾಗೆಂದೇ ಲಾವಣ್ಯ ವರ್ತುಲಗಳನು ಬರೆ
ವ, ಬೆಳ್ಳಕ್ಕಿಗಳ ಹಿಂಡು ಬೆರೆವ ಬಯಕೆ

ಕಣ್ಣಿಗಷ್ಟೆ ಅಲ್ಲ. ಕಿವಿಗಳೂ ಸಂತಸದ
ಹಕ್ಕಿಗಳ ಗೂಡಾಗಲೆಂದು, ನುಡಿಸಿ
ಯಾವ್ಯಾವುದೊ ವಾದ್ಯ. ಈ ಕೈಗಳಲ್ಲವೆ
ಇಂದೇಕೆ ಇಳಿದಿವೆ? ಎಂಜಲನು ಬಯಸಿ

ಹಸಿದ ಕೈಗಳಿಗೆ ಪ್ರೀತಿಯೆಂದರು ಪ್ರೀತಿ.
ಹಾಗೆಂದೆ ತಟ್ಟಿ ಎದೆ ಎದೆಯ ಕದವ
ಕಾದರೂ. ಹಸಿದವರಿಗವು ತೆರೆಯಲೆ ಇಲ್ಲ!
ಎಷ್ಟೆಂದು ತಡೆದಾರು? ತಮ್ಮ ಹಸಿವೆ?

ಕಸದ ತೊಟ್ಟಿಗೆ ಇನ್ನು ಹಸಿದ ಕೈ ಇಳಿಯವು.
ಅಂದುಕೊಂಡೆನು ಅಂಜಿ ನೊಂದುಕೊಂಡು.
ನೇಣುಗಂಬವ ಕೂಡ ಧಿಕ್ಕರಿಸಿ ನುಗ್ಗುವರು.
ಎತ್ತಿಕೊಳ್ಳಲು ಸಿಕ್ಕ ಕೋವಿ. ಗುಂಡು

ಹಸಿದವರು ಕೂಡ ಬದುಕಬೇಕಲ್ಲವೆ? ಮ
ತ್ತೆ, ಪ್ರೀತಿಯೂ ಬೇಕಲ್ಲ ದುಡಿವ ಜನಕೆ
ಎದೆಯ ಕದಗಳು ಮುಚ್ಚಿದಾಗ. ಮತ್ತಿನ್ನೇನು
ಮುಖ್ಯವಲ್ಲವೆ ಸಾವಿಗಿಂತ ಬಯಕೆ?

## ೪೦. ಚಿನ್ನಮ್ಮನ ಕಂದ

ರಾಜು, ಎಷ್ಟು ಹುಡುಕಿದೆ ಗೊತ್ತೆ? ಅಲ್ಲಿ ನೀನಿದ್ದಿಲ್ಲ
ಬೆಳ್ಳಗಿನ ಮೃದುವಾದ ಹಾಸು ಹೊದಿಕೆ.
ತುಂಬಿರುವ ತೊಟ್ಟಿಲುಗಳಲ್ಲಿ; ಅಲ್ಲೆ ತಾನೆ
ತೊಳಗುವದು ತಾಯ್ತನದ ಕನಸು ಹರಕೆ? ॥೧॥

ಹೆರಿಗೆ ಆಸ್ಪತ್ರೆ ಉದ್ದಗಲವೂ ಹುಡುಕಿದೆ
ಬೆಳ್ಳಕ್ಕಿಯಂತಲೆವ ದಾದಿಗಳನು
ಕೇಳಿದೆನು, ''ಇಲ್ಲಿ ಎಲ್ಲಾದರೂ ಕಂಡಿರಾ?
ಚಿನ್ನಮ್ಮನ ಕಂದ ರಾಜುವನ್ನು?'' ॥೨॥

ಸೋಜಿಗದಿ ಅಂದರು. ''ಚಿನ್ನಮ್ಮ ! ರಾಜುವೆ?
ಯಾರವರು? ಕೇಳಲೇ ಇಲ್ಲ ಹೆಸರು?''
ಅಂದುಕೊಂಡಿದ್ದನು ಇಲ್ಲೆ ಎಲ್ಲಾದರೂ
ಹವಳದ ತುಟಿಯ ಕಂದ ಇರಬಹುದು ॥೩॥

ಬಿಸಿ ನೀರಿನಿಂದೆರೆದು. ಪೌಡರ, ಪಿಯರ್ಸಗಳ
ಪರಿಮಳದ ಹೊದಿಕೆಯಲಿ. ಅಪ್ಪಿಕೊಂಡು
ಬೆಳ್ಳಗಿನ ರೆಕ್ಕೆಗಳ ಈ ದಾದಿ. ನಿನ್ನನ್ನು
ಮಲಗಿಸಿರಬಹುದು. ಎಂದಿದ್ದೆ ತಂದು ॥೪॥

ಹಳದಿ ಹೂಗಳು ಸುರಿದ ಸಾಲುಗಿಡ. ಆಚೀ
ಚೆ - ಪ್ರೀತಿಸುವ ಆತುರದ ಸ್ವರಗಳಲ್ಲಿ
ಬರಹೋಗುವವರು. ಶ್ವೇತೂಭೂಷಣರು. ಹಕ್ಕಿ
ಗಳು ಗಾಯಗಳ ತೊಳೆದಿರುವ ಮರಗಳಲ್ಲಿ ॥೫॥

ಹೊಂಬಿಸಿಲು ಬ್ಯಾಂಡೇಜು ಬಿಚ್ಚಿರುವ ಕಿಟಕಿ
ಬೆಳಕಿನ ನಿಪಲ ಚೀಪಿರುವ ಮಕ್ಕಳೊಡನೆ
ಇಲ್ಲಿಯೇ ಮುನಿಸಿಪಲ್ ಹೆರಿಗೆ ಆಸ್ಪತ್ರೆಯ
ಲಿ. ಹಿಡಿದು ಹಾಲಿನ ಸೀಸೆ ಬೆರಳ ನಡುವೆ ॥೬॥

ಹರ್ಷ ಧ್ವನಿಯ ನುಡಿಸುತ್ತಿರಬಹುದೆಂದಿದ್ದೆ
ಹುಡುಕಿದೆ, ಕೇಳಿದೆ ಎಲ್ಲ ವ್ಯರ್ಥ.
''ಚಿನ್ನಮ್ಮನ ಕಂದ ರಾಜುವನು ಕಂಡಿರ?''
ತಿಳಿಯಲೇ ಇಲ್ಲ ಜನ. ಪ್ರಶ್ನೆಯರ್ಥ? ॥೭॥

ಆಗಲೆ ಒಂದು ದಿನ ತಿಳಿಯಿತು. ನೀನಿಲ್ಲಿ
ಕೆಂಪು ಹುಡಿ ಮೈಗೆಲ್ಲ ಬಳಿದುಕೊಂಡು
ಜಲ್ಲಿ ಕಲ್ಲನು ಹೊತ್ತ ಲಾರಿಗಳ ಗಾಲಿಗಳ
ಸಂದಣಿಯ ಸದ್ದುಗಳ ಅವಚಿಕೊಂಡು ॥೮॥

ಒಮ್ಮೆ ತಿಳಿನೀಲ ಮುಗಿಲಿನ ಹರಿದ ಮೋಡ
ಗಳ, ಇನ್ನೊಮ್ಮೆ ಯಾವುದೊ ಕಂದು ಹಕ್ಕಿ
ಲಕ್ಕವಳ್ಳಿಯ ಅಣೆಕಟ್ಟು ಬಳಿ ಕುಳಿತಾ
ಗ, ಎಸೆದಿರುವ ಪುಟ್ಟ ರೆಕ್ಕೆ ॥೯॥

ನೋಡುತ್ತ; ದಣಿದರೂ ಹಸಿದರೂ ಜುಲು
ಮಿಂದ, ಬತ್ತಿರುವ ತುಟಿಯಲ್ಲಿ ನಗುವ ತಿಕ್ಕಿ
ಬಳಿ ಬಂದು ಚಿನ್ನಮ್ಮ ಕೊಟ್ಟ ಆ ಜೋಲುಮೊ
ಲೆ, ಚೀಪಿರಲು ಮಿನುಗಿತ್ತು ದೂರ ಚಿಕ್ಕಿ ॥೧೦॥

ಆಗಲೆ ತಿಳಿದದ್ದು; ರಾಜುವಿನ ತೊಟ್ಟಿಲು
ಬೀದಿಯಲಿ ಹರಡಿದ್ದ ಸೀರೆ ತುಂಡು
ಮತ್ತೆ ಬೆಳಗಾದಾಗ, ಕೇಳದಂತಳುವದು
ಕೂಲಿಗೆ ತೆರಳುವ ತಾಯ ಕಂಡು ॥೧೧॥

## ೪೧. ಕಣಗಿಲು ಗಿಡದಲ್ಲಿ ಹುಡುಗ

ಬೇಸರದ ಬಿಸಿಲು ಮಧ್ಯಾಹ್ನ ಗೋಪುರದಲ್ಲಿ
ಗಡಿಯಾರ ಬಾರಿಸಿತು, ಗಂಟೆಯೊಂದು
ಶಾಲೆ ತಪ್ಪಿಸಿ ಹುಡುಗ, ಗುಡಿಯ ಹಿಂಬದಿಗಿರುವ
ಕಣಗಿಲದ ಗಿಡದಲ್ಲಿ ಕುಳಿತ ಬಂದು ೧

ಕೆಳಗೆಲ್ಲ ಬರಿದು, ತುದಿಯಲ್ಲಿ ಎಲೆಗಳು ಹೂವು
ಕಾಲು ತೂಗಿಸಿ ಆಡಿಸುತ್ತ ಕಂಡು
'ಪಾಪ ದುರ್ದೈವಿಗಳು' ಎಂದು ಕನಿಕರಿಸಿದನು
ಶಾಲೆಯಲ್ಲಿರುವವರ ನೆನೆಸಿಕೊಂಡು ೨

ಎಷ್ಟೊಂದು ಕಣಗಿಲದ ಹೂವು ಅರಳಿವೆ ಇಲ್ಲಿ
ಉಳುವ ಹೊಲದಲ್ಲಿರುವುದೆಂಥ ನಲಿವು !
ಅಲ್ಲಲ್ಲಿ ತೇಲುತಿವೆ ನೀಲ ಮೋಡದ ತುಂಡು
ಎಷ್ಟೊಂದು ವಿಸ್ತಾರವಿಹುದು ನೆಲವು ! ೩

ಇಲ್ಲಿ ಪಾಠಗಳಿಲ್ಲ, ಇಲ್ಲಿ ಸಂಧಿ ಸಮಾಸ
ಇಲ್ಲ ವನಜೂಲಾದ ರೇವು ರೈಲು
ಇಲ್ಲಿ ಸುಳಿಯವು ಕೋನ ತ್ರಿಜ್ಯಗಳ ಹಾವಳಿಯು
ಇಲ್ಲಿ ತೂಕಡಿಕೆಗಳ ದೊಡ್ಡ ಬೈಲು ೪

ಬಣ್ಣ ಬಣ್ಣದ ನೀರು ಸೀಸೆಯಲಿ ಸುರಿದಂತೆ
ಗಂಟೆ ಹೊಡೆದಾಗೊಂದು ವಿಷಯ ಸುರಿದು
ಒಮ್ಮೆ ಆವಾಟನಾಡಿ, ಇರುಳು ನಿದ್ದೆಯ ಮಾಡಿ
ಬಂದ ಮರುದಿವಸವೇ, ಸೀಸೆ ಬರಿದು ೫

ಪಾಠಗಳು ನಡೆದಲ್ಲಿ ಮೋಡ ತೇಲುವುದಿಲ್ಲ
ಗಾಳಿ ಬೀಸುವದಿಲ್ಲ ಎಲೆಗಳಿಲ್ಲ
ಯಾವ ರಾಸಾಯನಿಕ ಕ್ರಿಯೆಗೆ ಒಳಪಡಿಸಿಯೂ
ಮನದಲ್ಲಿ ಸಂತಸದ ಅಲೆಗಳಿಲ್ಲ ೬

ಪದ್ಯಗಳ ಹಾಡಿಯೂ ಹಕ್ಕಿಗಳ ಹಾಗಲ್ಲ
ಹುಲ್ಲಿನಂತಾದರೂ ಹಸಿರು ಇಲ್ಲ
ಧ್ರುವದಿಂದ ಧ್ರುವಕೆ ನಾವಲೆದರೂ, ನಮಗಿಲ್ಲಿ
ಆಡಿಸಲು ಒಂದಿಷ್ಟು ಉಸಿರು ಇಲ್ಲ ೭

ಮಳೆಯಂತೆ ಸುರಿದರೂ ನೆಲದಂತೆ ತೊಯ್ದಿಲ್ಲ
ಇರದವರಿಗಿಲ್ಲುಂಟು ನೂರು ದುಃಖ
ಸಿಡಿಲೆರಗಿ ಬೆಟ್ಟಗಳ ಸೀಳಿದರು ತಪ್ಪಿಲ್ಲ
ಹೆಗಲೇರಿ ಕುಳಿತವರ ಖೊಟ್ಟಿ ಲೆಖ್ಖ ೮

ಹೂವುಗಳ ನೆರೆಯಲ್ಲಿ ಹಾಡಿಕೊಂಡನು ಹುಡುಗ
ಬಿಡುಗಡೆಯ ಸವಿಯುಂಡ ಕೈದಿಯಂತೆ
ಧ್ವಜದಂತೆ ಮೇಲಿರುವದೆ ಮೇಲು ಮರೆಯಾಗಿ
ಕುಳಿತವರಿಗೆಲ್ಲಿಹುದು ನಿಲುವ ಚಿಂತೆ ೯

ಗಿಡದ ಎತ್ತರವನ್ನೆ ತನ್ನ ಎತ್ತರವೆಂದು
ತಿಳಿದು, ಹುಡುಗನು ಕುಳಿತ ಟೊಂಗೆಯಲ್ಲಿ
ಹೊರೆಗಳನು ಹೊತ್ತವರು, ಉರುಹಾಕಿ ಉಳಿದರು,
ಬೆಳೆಯದೆ, ಮೊದಲಿದ್ದ ವರ್ಗದಲ್ಲಿ ೧೦

ಇಷ್ಟೆಲ್ಲ ಮರೆಮಾಚಿ ಎಷ್ಟು ಮೇಲಿದ್ದರೂ
ಬಾರಿಸಿಯೆ ತೀರುವದು ಮತ್ತೆ ಗಂಟೆ!
ಕಲಿಯುಗದೊಳಿದ್ದವಗೆ, ಕಲಿಯುವುದು ತಪ್ಪೀತೆ?
ಹತ್ತಿದವ ಇಳಿದು ಬರದಿರುವದುಂಟೆ? ೧೧

## ೪೨. ನಾಗಿಯ ಕಥೆ

ಬೆಕ್ಕು ಬರುವುದಿಲ್ಲ ಮಗೂ, ಹಾಲು ಮಡಕೆ ಮುಚ್ಚಿಡು
ಕತ್ತಲಲ್ಲಿ ಎಡವದಂತೆ ದೀಪವೊಂದು ಹಚ್ಚಿಡು ೧

ಬೆಟ್ಟಗಳಿಗೆ ಹಗಲಿರುಳೂ ನೀಲ ನೀಲ ನಿದ್ದೆಯು
ಊರ ಸುತ್ತ ತೆನೆಗಳಿಂದ ತೊನೆವ ಹಸಿರು ಗದ್ದೆಯು
ಸಾಲು ಮರದ ನೆರಳಿನಲ್ಲಿ ಹಾವಿನಂಥ ಹಾದಿಯು
ಇಲ್ಲಿ ಹೆಜ್ಜೆಯಿಡುವ ಹೆಣ್ಣಿಗಿರುವ ಭಯ ಅನಾದಿಯು ೨

ಊರು ಉಡಿಯೊಳಿಟ್ಟುಕೊಂಡು ನಿಂತ ತೆಂಗು ಅಡಿಕೆಯು
ಸಾಲದಲ್ಲಿ ಸೋಲಿನಲ್ಲಿ ಬೇಯುವವರ ಮಡಕೆಯು
ಮುಗಿಲು ಹರಿದ ಹಾಗೆ ಸುರಿದುಬಿದ್ದ ಮಳೆಯ ನೀರಿಗೂ
ನೆಲದ ನೋವು ಎದೆಯ ಕಾವು ಆರಲಿಲ್ಲ ಯಾರಿಗೂ ೩

ಇಲ್ಲೆ ಇದ್ದ ಮಂಜು ಗೌಡ ಕೆರೆಯ ಬಯಲಿನಂಚಿಗೆ
ಹೂವ ಹೊದಿಸುತಿತ್ತು ಬಳ್ಳಿ ಹೆಣೆದ ಮನೆಯ ಹೆಂಚಿಗೆ
ಅವನಿಗಿದ್ದಳೊಬ್ಬ ಮಗಳು, ನಾಗಿ ನಾಗವೇಣಿಯು
ಹಾವಿನಂಥ ಜಡೆಯ ತುಂಬ ಹೂವ ಮುಡಿವ ರಾಣಿಯು ೪

ಬೊಗಸೆಗಣ್ಣು ಗಲ್ಲದಲ್ಲಿ ಮೂಡಿ ನಗೆಯ ಮಲ್ಲಿಗೆ
ಕಂಪು ಸೂಸಿ ಕರೆಯುತಿತ್ತು ಕನಸುಗಳನು ಮೆಲ್ಲಗೆ
ಅವಳ ನುಡಿಯ ಮಿಂಚುಕಿಡಿಯ ಹೊತ್ತಿಸಿತ್ತು ಸುತ್ತಲೂ
ಅವಳ ನಗೆಯ ನೂರು ಬಗೆಯ ನೆನಪು ಬುಗ್ಗೆ ಎತ್ತಲೂ ೫

ಹೊಳೆಯ ಅಲೆಗಳೆತ್ತಿಕೊಂಡು ಸಾಗುವಂತೆ ನಾವೆಗೆ
ಹಾಡು ಹರಿದು ಹೋಗುವಂತೆ ಮಾವಿನಿಂದ ಮಾವಿಗೆ
ಹುಲ್ಲು ಹೊರೆಯ ಹೊತ್ತುಕೊಂಡು ಅವಳು ಬರುವ ಹೊತ್ತಿಗೆ
ಸೂರ್ಯನೇಕೊ ತಣ್ಣಗಾದ ನಿಂತರೂನು ನೆತ್ತಿಗೆ ೬

ಅವಳ ಹಗುರು ಹೆಜ್ಜೆಯಲ್ಲಿ ಚೆಲುವು ಹೆಜ್ಜೆ ಇಟ್ಟಿತು
ಗೇರು ಹೂವಿನಂತೆ ಪ್ರೀತಿ ಎದೆಗೆ ಲಗ್ಗೆ ಇಟ್ಟಿತು
ಅವಳ ಕೈಯ ಕೊಡವ ಕಂಡು, ನೀರು ಬೇಗ ತುಂಬದು
''ನಿಲ್ಲು ನಾಗಿ ನಿಲ್ಲು. ನೋಡಬೇಕು ನಿನ್ನ''ನೆಂಬುದು ೭

ಒಮ್ಮೆ ಊರಿಗೆಲ್ಲ ತೇರನೆಳೆವ ದೊಡ್ಡ ಸಂಭ್ರಮ
ಮುಗಿಲು ತನ್ನ ಹಣೆಯೊಳಿಟ್ಟುಕೊಂಡು ದುಂಡು ಕುಂಕುಮ
ಅಂದು ಬೇಗ ಮಿಂದು ನಾಗಿ ಹಸಿರು ಸೀರೆಯುಟ್ಟಳು
ಇಂದ್ರಧನುವಿನಂತೆ ಹೊಳೆವ ರವಕೆಯನ್ನು ತೊಟ್ಟಳು ೮

ನಾಗಿ ಬಳುಕಿ ಸಾಗಿ ಬರಲು ಕರುವು ಕೂಡ ನಾಚಿತು
ಹಿಗ್ಗು ತುಂಬಿ ಹಸುವು ಎದ್ದು ಕೆಚ್ಚಲನ್ನು ಚಾಚಿತು
ಮಡಕೆ ತುಂಬ ಹಾಲು ಕರೆದು ತಾಯ ಕೈಗೆ ಕೊಟ್ಟಳು
''ತೇರ ನೋಡಿ ಬರುವ ಬಾರೆ'' ಎಂದು ಆಸೆಪಟ್ಟಳು ೯

ತಾಯಿ ಮಗಳು ಮನೆಯ ದಾಟಿ ನಡೆಯುತಿರಲು ತೇರಿಗೆ
ಕೊಕ್ಕರೆಗಳು ಇಳಿಯುತಿದ್ದವಾಗ ಕೆರೆಯ ನೀರಿಗೆ
ಚುಂಚಿನಲ್ಲಿ ಚುಂಚನಿರಿಸಿ, ಹಕ್ಕಿಯೆರಡು ಆಡಿವೆ
ನೆರಳು ದಾರಿಯಾಚೆ ಈಚೆ ಹಸಿದ ಕಣ್ಣು ನೋಡಿವೆ ೧೦

ತಾಯ ಜೊತೆಗೆ ನಡೆದ ನಾಗಿ, ಏಕೋ ನಿಂತುಕೊಂಡಳು
''ಅಮ್ಮ ಎಷ್ಟು ಚೆಂದ ಬೆಕ್ಕು ನೋಡೆ ಇಲ್ಲಿ'' ಅಂದಳು
ಕರುಳು ಕರಗುವಂಥ ಚೆಂದ ಬೆಕ್ಕಿನೊಂದು ಸ್ವರವನು
ತಾಯಿ ಮಗಳು ಆಲಿಸಿದರು 'ಮಿಯಾವ್' ಎಂಬ ಕರೆಯನು ೧೧

ಬದಿಗೆ ನೋಡಿದಾಗ ಇತ್ತು : ಅಲ್ಲೆ ಹಾದಿಯಲ್ಲಿಯೆ
ಎತ್ತಿ ಎದೆಯೊಳವಚಿಕೊಂಡ ನಾಗಿಗೆಂಥ ಲಲ್ಲೆಯೆ!
ಮುದ್ದು ಸುರಿವ ಬಿಳಿಯ ಬೆಕ್ಕು ಮೈಯ ಸುಖದ ತುಪ್ಪಳ
ಹಾಲಿಗಾಗಿ ಹೊಂಚಿಬರುವ ಕಾಲಿಗುಂಟೆ ಸಪ್ಪಳ ೧೨

ಎಲ್ಲಿ ನೋಡಿದಲ್ಲಿ ಜನರ ಗುಂಪು ಗುಂಪು ಗದ್ದಲ
ಹೆರಳು ಕಂಡು ನೆರಳು ಕಂಡು, ಜನರು ನೂಕು ನುಗ್ಗಲ

ಅಲ್ಲಿ ಕುಳಿತು ಕೂಗುತಿದ್ದ ಸೀರೆಯವನು ಸೀರೆಗೆ
'ಸೀರೆ ಬೇಕೆ ಸೀರೆ' ನಿಮಗೆ ಬನ್ನಿರೊಂದು ಬಾರಿಗೆ ೧೩

ಹಸಿರು ಸೀರೆ, ನೀಲ ಸೀರೆ, ಜರಿಯ ಸೆರಗು ಸೀರೆಯು
ಉಟ್ಟು ನೋಡಿ ತೊಟ್ಟು ನೋಡಿ ಹಸೆಯ ಮೆರಗು ಸೀರೆಯು
ತಾಯ ಜೊತೆಗೆ ನಾಗಿ ಅಲ್ಲಿ ಹೋಗಿ ನಿಂತುಕೊಂಡಳು
ಕಣ್ಣು ಸೆಳೆವ ಸೀರೆಯೊಡನೆ, ಸೀರೆಯವನ ಕಂಡಳು ೧೪

ಚಿಗುರು ಮೀಸೆ ಎಳೆಯ ನಗೆಯ ರೂಪವಂತ ಆತನು
ಎದೆಯ ಕದವ ತೆರೆದು ನುಡಿದ ಕಣ್ಣಿನಲ್ಲೆ ಮಾತನು
ಕಣ್ಣು ಕಣ್ಣಿನಲ್ಲಿ ಕೂಡಿ, ಝಳಪಿಸಿತ್ತು ಮಿಂಚನು!
ಪ್ರೀತಿಯೆಂಬ ಸಿಡಿಲು ಹೊಡೆಯುತಿತ್ತು ಹಾಕಿ ಹೊಂಚನು ೧೫

ಮೆತ್ತಗೊರಗಿದಂಥ ಬೆಕ್ಕು ಎದ್ದು ಬಾಲವಾಡಿಸಿ
ನಾಗಿಯೊಡನೆ ನಲಿಯುತಿತ್ತು ಕನಸುಗಳನು ಕಾಡಿಸಿ
ಆಗಿನಿಂದ ನಾಗಿ ಬೇರೆ, ಹಣೆಗೆ ಹವಳ ಮೂಡಲು
ಹಸಿದು ಬಂದ ಹಸಿರು ಕಣ್ಣು ಬಳಸಿ ಬಂದು ನೋಡಲು ೧೬

ಯಾರು ಹಾಕಿಹೋದರವಳ ಎದೆಗೆ ಗಂಧಧೂಪವ?
ಯಾರು ಹೊತ್ತಿಸಿಟ್ಟರೊಳಗೆ ಬಂಗಾರದ ದೀಪವ?
ಯಾವ ಕೆರೆಗೆ ಯಾರ ಕರೆಗೆ ಹಾರುತಿಹವು ಕೊಕ್ಕರೆ?
ಯಾವ ತಾರೆ ಇಲ್ಲಿ ಸೂರೆ ಮಾಡುತಿಹವು ಅಕ್ಕರೆ? ೧೭

ಅಂದಿನಿಂದ ನಾಗಿ ಬೇರೆ, ಬೆಕ್ಕಿನೊಂದಿಗಿರುವಳು
ಅದರ ಕೂಡ ಉಂಡುತಿಂದು ಅದರೊಂದಿಗೆ ನಲಿವಳು
ಹಾಲಿನಂಥ ಬಿಳಿಯ ಬೆಕ್ಕು, ಲಲ್ಲೆ ಯಾಡಿ ಕರೆಯಲು
ಮೆಲ್ಲನೆದ್ದು ಗಲ್ಲ ಮುಟ್ಟಿ ಅಲ್ಲಿ ಇಲ್ಲಿ ಬರುವದು ೧೮

ಹಿಟ್ಟು ಚೆಲ್ಲಿದಂಥ ಬೆಳಕು ಚಂದ್ರನಿಂದ ಸುರಿಯಲು,
ಬೆಟ್ಟದಲ್ಲಿ ದಟ್ಟ ಮಂಜು ಕವಿದು ಮೇಲೆ ಸರಿಯಲು
ಕಣಿವೆಯಲ್ಲಿ ಹಾಲು ಮೌನ ಕಾಡಿಗೆಲ್ಲ ಹಬ್ಬಿತು
'ಸೀರೆ ಬೇಕೆ ಸೀರೆ ನಿಮಗೆ?' ಸೆರಗಿನಂತೆ ತಬ್ಬಿತು ೧೯

ತಾರೆಗಳನು ಸೂರೆ ಮಾಡಿ ಇರುಳು ಬರಲು ಬಾನಿಗೆ,
ತುಂಬಿ ಹರಿವ ತೊರೆಯ ಹಾಡಿಗಾಡುತಿರುವ ಮೀನಿಗೆ
ಪ್ರೀತಿ ಹೊತ್ತಿಸಿಟ್ಟ ದೀಪ, ದಾರಿಯಲ್ಲಿ ಕತ್ತಲು
ದೀಪ ನಿಲ್ಲಬಹುದೆ ಇಲ್ಲಿ ಗಾಳಿ ಬಂದು ಮುತ್ತಲು? ೨೦

ಪ್ರೀತಿಯೊಂದು ನಾಗಸ್ವರ ಅದರ ಕರೆಯನಾಲಿಸಿ,
ಯಾವ ರೇವಿಗೊಯ್ಯುತಿಹುದೊ ನಾಗಿಯನ್ನು ತೇಲಿಸಿ
ಊರ ಜನರಿಗೇನು ಗೊತ್ತು? ಸೀರೆಯವನ ಕೂಗಿಗೆ
ಪ್ರೀತಿ ಪಂಜು ಹೊತ್ತಿಸಿತ್ತು ನಾಗವೇಣಿ ನಾಗಿಗೆ ೨೧

ಸಾಲುಮರದ ನೆರಳಿನಲ್ಲಿ ಹಾವಿನಂಥ ಹಾದಿಗೆ
ಕೈಯೊಳೊಂದು ದೀಪ ಹಿಡಿದು ಸಾಗುತಿರಲು ನಾಗಿಗೆ
ತೆರೆದ ಹಾಲು ಮಡಕೆ ನೋಡಿ, ಬಿಳಿಯ ಬೆಕ್ಕುಹಾರಿತು
ಕತ್ತಲಲ್ಲಿ ಎಡಹುವಂತೆ ಹಿಡಿದ ದೀಪವಾರಿತು ೨೨

ತಾಯಿ ಬಂದು ನಾಗಿ ಎಂದು, ಅಲ್ಲಿ ಇಲ್ಲಿ ಕರೆದಳು
ಮಂಜು ಗೌಡ ಮಗಳ ಹುಡುಕಿ ಊರುಕೇರಿ ಅಲೆದನು
ಪ್ರೀತಿ ಹೆಜ್ಜೆಯಿಡುವ ಹಾದಿ, ಹಿಂದೆ ಬರದ ಹಾದಿಯು
ಇಲ್ಲೆ ಅಲ್ಲವೇನು ಹೆಣ್ಣಿಗಿರುವ ಭಯ ಅನಾದಿಯು ೨೩

# ೪೩. ಹುಡುಗಿಯ ಕಥೆ

ಮುರಿದುಹೋದ ಗುಡಿಸಲೊಂದು ಹರಿದುಹೋದ ಚಾಪೆಯು
ತೊಟ್ಟುಕೊಂಡ ಲಂಗದಲ್ಲಿ ಎಂಟೊ ಹತ್ತೊ ತೇಪೆಯು
ಸೊರಗಿಹೋದ ಕೊರಗಿಹೋದ ಮೈಯ ಕೆಂಡ ಕಂಡವು
ಪುಟ್ಟ ಹುಡುಗಿ ಅವಳ ಕಣ್ಣು ಏನೊ ಏನೊ ಕಂಡವು
ಮೂಲೆಗೊರಗಿದಂಥ ಅಜ್ಜಿ ಕೆಮ್ಮಿ ತೆವಳಿ ಬಂದಳು
''ಹೇಗೆ ಉಂಟು ಮಗೂ?'' ಎಂದು ಮೈಯ ಮುಟ್ಟಿ ಅಂದಳು
''ಬಾ ಅಜ್ಜಿ ಇಲ್ಲಿ ಬಾ ಕಾಫಿ ಹಾಕು ಕಪ್ಪಿಗೆ''
ಕಿವುಡ ಮುದುಕಿ ಅಜ್ಜಿ ಮಾತ್ರ ಕಲ್ಲಿನಂತೆ ತೆಪ್ಪಗೆ
ಚಳಿಗೆ ತುಟಿಗಳೆಲ್ಲ ಒಡೆದು ಕೂದಲೆಲ್ಲ ಕೆದರಿವೆ
ಒಡೆದ ಕಪ್ಪು ಹಿಡಿದ ಹುಡುಗಿ ಕಣ್ಣು ಹೊರಳಿ ಹೆದರಿವೆ
ಮಿಣುಕು ದೀಪದಲ್ಲಿ ನಿಂತ ಮಂಜು ನೆರಳು ಕಂಡಳು
ಸುಡುವ ಮೈಯ ಸುತ್ತಿಕೊಂಡ ಚಳಿಗೆ ನಡುಗಿಕೊಂಡಳು
''ಅಮ್ಮ ಬಂದಳಮ್ಮ ಈಗ. ಎಷ್ಟು ದಿವಸ ಆಯಿತೆ?
ಇಷ್ಟು ದಿವಸ ಎಲ್ಲಿ ಇದ್ದೆ ಈಗ ಹಂಬಲಾಯಿತೆ?
ಬಾ ಅಮ್ಮ ಇಲ್ಲಿ ಬಾ ಕಾಫಿ ಹಾಕು ಕಪ್ಪಿಗೆ''
ಹೋದವರಿಗೆ ಬರುವುದುಂಟೆ ಬದುಕಿದವರು ನೆಪ್ಪಿಗೆ
ಪುಟ್ಟ ಹುಡುಗಿ ಏನೊ ಏನೊ ನೆನೆದುಕೊಂಡು ನೊಂದಳು
ಅಲ್ಲಿ ಇಲ್ಲಿ ಮಗ್ಗುಲಾಗಿ ನೆರಳು ನೋಡಿ ಅಂದಳು
''ಅಪ್ಪ ಕೂಡ ಬಂದನಲ್ಲ ಅಪ್ಪ ಈಗ ಬಂದೆಯಾ?
ಎಲ್ಲಿ ಇದ್ದೆ ಇಷ್ಟು ದಿವಸ ನನ್ನ ಲಂಗ ತಂದೆಯಾ?
ಸಂಜೆಯಾಗಿ ಹೋಯಿತಲ್ಲ ನಿನ್ನ ಸಂತೆ ತೀರಿತೆ?
ಹೂಗಳಿದ್ದ ಕೆಂಪು ಲಂಗ ತರುವ ನೆಪ್ಪು ಹಾರಿತೆ?
ಬಾ ಅಪ್ಪ ಇಲ್ಲಿ ಬಾ ಕಾಫಿ ಹಾಕು ಕಪ್ಪಿಗೆ''
ಉಸಿರು ನಿಂತ ಪ್ರೀತಿಗುಂಟೆ ಕರುಳ ಬಳ್ಳಿ ಅಪ್ಪುಗೆ?
ನೋವಿನಲ್ಲಿ ನರಳಿ ಹುಡುಗಿ ಕಣ್ಮು ಮುಚ್ಚಿ ತೆರೆದಳು

ಕಂಡ ಕಂಡ ನೆರಳಿಗೆಲ್ಲ ಕೈಮಾಡಿ ಕರೆದಳು
ಗಾಳಿಗೊಡ್ಡಿದಂಥ ಮಿಣುಕು ದೀಪ ಕುಣಿಯ ತೊಡಗಿತು
ಬೇವಿನಲ್ಲಿ ಕುಳಿತುಕೊಂಡ ಗುಮ್ಮ ಒಮ್ಮೆ ಗುಡುಗಿತು
ಕಪ್ಪು ಬಂತು ಹಾರಿ ಹಾರಿ ಕಪ್ಪೆಯಂತೆ ಹತ್ತಿರ
ಕಾಗೆ ಬಂತು ಗೂಗೆ ಬಂತು ಬಂತು ಆಳಿನೆತ್ತರ
ದೊಡ್ಡದೊಂದು ಕರಡಿ ಬಂತು ಕೈಯ ಚಾಚಿ ಹತ್ತಿರ
ಹೆದರಿ ಹೆಪ್ಪುಗಟ್ಟುತ್ತಿತ್ತು. ಪಾಪ ಎಳೆಯನೆತ್ತರ
ಕುಣಿಯುತಿರುವ ಗಾಳಿಯೆಲ್ಲೊ ಕತ್ತಲಲ್ಲಿ ಅಡಗಿತು
ದಾಪುಗಾಲನಿಟ್ಟು ಬಂದ ಗುಮ್ಮ ಮತ್ತೆ ಗುಡುಗಿತು
ಉಸಿರಿಗೊಮ್ಮೆ ತೇಕು ಹತ್ತಿ ಅಲ್ಲಿ ಇಲ್ಲಿ ಹೊರಳುತ
ಗುಡ್ಡದಂಥ ಕಪ್ಪು ಕಂಡು ಕಣ್ಣು ಮುಚ್ಚಿ ತೆರೆಯುತ
ನೆನಪಿನೆಲೆಗಳುದುರುತಿರಲು 'ನೀರು ನೀರು' ಅಂದಳು
ಉಸಿರಗಡಿಯ ದಾಟುವಾಗ ಒಮ್ಮೆ ಚೀರಿಕೊಂಡಳು
''ಬಾ ಅಜ್ಜಿ ಇಲ್ಲಿ ಬಾ ಕಾಫಿ ಹಾ...ಕು ಕ...ಪ್ಪಿ...ಗೆ''
ದೀಪದೆಣ್ಣೆ ತೀರಿದಾಗ ಕೇಳಿಸುವುದೆ ಮುಪ್ಪಿಗೆ?
ಪುಟ್ಟದೊಂದು ಜೀವವಂದು ಒರಗಿ ತಣ್ಣಗಾಯಿತು
ಎರಡು ಕಣ್ಣು ಕಳೆದುಕೊಂಡು ಲೋಕ ಸಣ್ಣದಾಯಿತು.

# ೪೪. ಮಂಜುಗೌಡನ ಕಥೆ

ಎಳೆಬಿಸಿಲಿಗೆ ಮೈಯಕಾಸಿ ಮುಗಿಲಿಗೆ ಕೈ ಮುಗಿದು
ಹುಲಿಗೌಡನು ಹೇಳಿದನು, ಮಂಜನನ್ನು ಕರೆದು
''ಕೊಡಲಿ ತಗೊ, ಕಾಡಿಗ್ಹೋಗು, ಸೌದೆ ತರಬೇಕು
ಹೊತ್ತು ಮಾಡಬೇಡ ಮಗ, ಬ್ಯಾಗನೆ ಬರಬೇಕು'' ೧

ಕೋಳಿಗೆರಡು ಕಾಳನೆಸೆಯುವಂತೆ ನುಡಿದ ಮಾತು
ಕೇಳಿ ಮಂಜ ನುಡಿದನವಗೆ, ''ಆಯಿತಪ್ಪ ಆತು''
ಕೈ ಬಾಯನು ತೊಳೆದುಕೊಂಡು ಮಂಜುಗೌಡ ಬೇಗ
ಗಂಜಿ ಉಂಡು, ಕವಳ ಹಾಕಿ, ತಯಾರಾದ ಬೇಗ ೨

ಮರಿಗಳೊಡನೆ ಅಂಗಳದಲಿ ಓಡಾಡಿತು ಕೋಳಿ
ಕಾಳು ಸಿಕ್ಕ ಸಡಗರವನು ಊರಿಗೆಲ್ಲ ಹೇಳಿ
ಒಣಹುಲ್ಲಿನ ಬಣವೆಯೇರಿ ಕೂಗುತ್ತಿತ್ತು ಹುಂಜ
ಸುಗ್ಗಿ ಹಬ್ಬ ಕುಣಿವ ಹಾಗೆ ಮೆಟ್ಟಿಲಿಳಿದ ಮಂಜ ೩

ಹೆಗಲಿಗೊಂದು ಕೊಡಲಿ ಹೊತ್ತು, ಹಗ್ಗಬಲೆ ಹಿಡಿದು
ಕಾಡಿಗೆಂದು ನಡೆದುಬಿಟ್ಟ, ದೈವಕೆ ಕೈ ಮುಗಿದು
ಹೊಳೆಗೆ ಬಂದ, ಹೊರಟುನಿಂತ ದೋಣಿ ಹತ್ತಿ ಗೌಡ
ಕುಳಿತು, ಕಂಡ ನೀಲಬಾನೊಳಲೆವ ತುಂಡು ಮೋಡ ೪

ಹಕ್ಕಿಯ ಧ್ವನಿ ತುಂಬಿಕೊಂಡು, ಗೇರು ಹೂವ ಮೂಸಿ,
ಬೆಟ್ಟವಿಳಿದು ಓಡಿ ಬಂತು ಗಾಳಿ ಬೀಸಿ ಬೀಸಿ,
ಗದ್ದೆಯ ಹಾಳೆಯ ಮೇಲಿಂದೆದ್ದವು ಬೆಳ್ಳಕ್ಕಿ
ಬಿಸಿಲು ಕೂಡ ಬಾಡುತ್ತಿತ್ತು ಬೆಟ್ಟದ ಮೈತಿಕ್ಕಿ ೫

ಓಡುತ್ತಿತ್ತು ಹೊಳೆಯೊಂದಿಗೆ ದೋಣಿ, ಗದ್ದೆ ತೋಟ
ಹೊತ್ತೇರಲು, ಹೊಳೆಯ ತುಂಬ ನೆರಳು ಬೆಳಕಿನಾಟ
ನೀರಿನೊಳಗೆ ನೆರಳಾದವು ತೆಂಗು ಸಾಲು ಸಾಲು
ಹೊಳೆಯ ಮೀನು ಕುಡಿದವಲ್ಲಿ ಸೀಯಾಳದ ಹಾಲು ೬

ಕಾಡು ಬಂತು, ಕಣಿವೆ ಬಂತು, ಮಂಜ ದೋಣಿಯಿಳಿದ
ಸದ್ದಿಲ್ಲದ ಚಳಿಯ ಕೋಟೆ, ಕಾಡಿನಲ್ಲಿ ನಡೆದ
ನಡೆದಲ್ಲಿಯ ತಣ್ಣಗಿದ್ದ ತರಗೆಲೆಗಳ ಸದ್ದು
ಕಡಿದುಹೋದ ಬಾಂಧವ್ಯಕ್ಕೆ ಹಂಬಲಿಸುತ ಬಿದ್ದು ೭

ಅಲ್ಲಿಗಲ್ಲಿ ನಿಂತಿದ್ದವು ದೊಡ್ಡ ದೊಡ್ಡ ಮರಗಳು,
ಆಗಲೊಮ್ಮೆ ಈಗಲೊಮ್ಮೆ ಪಶುಪಕ್ಷಿಯ ಸ್ವರಗಳು
ಕವಿದುನಿಂತ ಚಳಿಯ ಮಂಜು ಕತ್ತಲನ್ನು ಕಂಡಿತು,
ಗಿಡಗಿಡವೂ ಅಂಜಿಕೊಂಡು, ಮೈಗೆ ಮುಳ್ಳು ಬಂದಿತು ೮

ಹೆಪ್ಪು ಹಾಕಿದಂಥ ಮೌನ, ಸುತ್ತ ಎಲ್ಲ ಸ್ತಬ್ಧವು,
ಹೊದರೂ ಕಂಟಿ ಪೊದೆಯ ಹಿಂದು ಎಲ್ಲ ನಿಶ್ಯಬ್ದವು
ಎಲೆಎಲೆಗಳ ಬಲೆಗಳಿಂದ ಬೆಳಕು ಸೋರಿ ಬಂದಿತು,
ಹಸಿಯ ಹಸಿರು ಕಾಡಿನಲ್ಲಿ, ಭಯವೊಂದೆ ಬೆಂದಿತು ೯

ಉರುಳಿ ಬಿದ್ದ ಮರಗಳಿಂದ ಟೊಂಗೆ ಹೊತ್ತು ಸೇರಿಸಿ
ಮಂಜುಗೌಡ ಸಾಗಿಸಿದ್ದ ಸೌದೆಗಾಗಿ ಪೇರಿಸಿ,
ಕಿರಿ ಬೆಟ್ಟದ ಮೇಲೆ ನಿಂತ ಎರಡು ಮರವ ಕಂಡನು
ಅವಳಿ ಮರದ ಚೆಲುವು ನೋಡಿ, ಮೈಯ ಮರೆತುಕೊಂಡನು ೧೦

ನಿಲುವು ಒಂದೆ ಚೆಲುವು ಒಂದೆ, ಬೆಳೆದವವೊಂದೆ ಎತ್ತರ
ಕೈಗೆ ಕೈಯ ಹಿಡಿದು ಕೊಂಡ ಹಾಗೆ ತೀರ ಹತ್ತಿರ,
ದಪ್ಪವಾಗಿ ಬೆಳೆದ ಟೊಂಗೆ, ಮುಚ್ಚಿ ಬೆಳೆದ ಎಲೆಗಳು,
ಒಂದರಲ್ಲಿ ಹಳದಿ, ಒಂದರಲ್ಲಿ ಕೆಂಪು ಹೂಗಳು ೧೧

ಭಯದ ಮೂಲ ಮಣ್ಣಿನಲ್ಲೇ; ಇಲ್ಲೇ ಮೊಳೆಯಲಿಲ್ಲವೆ?
ಎಲೆಗಳಾಗಿ ಮರಗಳಾಗಿ, ಇಲ್ಲೆ ಬೆಳೆಯಲಿಲ್ಲವೆ?
ಮರಗಳೆಲ್ಲ ಒಂದಕೊಂದು ಅಪ್ಪಿ ಉಳಿಯಲಿಲ್ಲವೆ?
ಪ್ರೀತಿಯೆಂದೆ ಕರುಣೆಯೆಂದೆ ರಕ್ಷೆಯೆಂದೆ ತಿಳಿಯಲಿಲ್ಲವೆ? ೧೨

ಹಳದಿಹೂಗಳಿಂದ ಸುರಿಯುತ್ತಿತ್ತು ಕೆಂಪು ಕುಂಕುಮ,
ಕೆಂಪು ಕೆಂಪು ಹೂಗಳಿಂದ ಸುರಿಯುತ್ತಿತ್ತು ಅರಿಷಿಣ,
ಎಂಟು ತೋಳಿನಂಥ ಟೊಂಗೆ, ಬಳೆಯ ಸದ್ದು ಕೇಳಲು,
ಮಂಜುಗೌಡ ಅರಳಿಮರದ ಬಳಿಗೆ ನಿಂತು ನೋಡಲು, ೧೩

ಕೊಡಲಿಯಿಟ್ಟು ಕೈಯ ಮುಗಿದ, ''ಇವರು ಚೌಡಿ ಚಂಡಿಯೋ''
ಮರಗಳಾಗಿ ನಿಂತುಕೊಂಡ, ಅಮ್ಮನವರ ಬಂಡಿಯೋ
ಕಾಡಿನಮ್ಮ ಊರಿನಮ್ಮ ಕಾಯಬೇಕು ನಮ್ಮನು
ವರುಷಕೊಮ್ಮೆ ಇಲ್ಲಿ ಬಂದು, ಶರಣೆಂಬೆವು ನಿಮ್ಮನು ೧೪

ಅವಳಿ ಮರಕೆ ಮೂರು ಸುತ್ತು ಬಂದು, ಅಡ್ಡ ಬಿದ್ದನು
ಕಾಯಬೇಕು ತಾಯಿಯೆಂದು, ಮಂಜುಗೌಡ ಎದ್ದನು,
ಕಟ್ಟಿಕೊಂಡ ಹೊರೆಯ ಹೊತ್ತು, ಸೌದೆಯವರ ಸಂಗಡ
ಮಂಜುಗೌಡ ಸೇರಿಕೊಂಡ ಮರಳಿ ಬರುವ ಪಂಗಡ ೧೫

ಮನೆಗೆ ಬಂದ ಮಂಜುಗೌಡ, ಅವಳಿಮರದ ಹಂಬಲು,
ಕಾಡಿನಲ್ಲಿ ಕೈಯ ಹಿಡಿದು ನಿಂತ ನೆನಪು ತುಂಬಲು
ಮನಸಿನಲ್ಲಿ ನಿಂತ ಮರವು ಕನಸಿನಲ್ಲಿ ಬಂದವು
ಅಮ್ಮನಂತೆ ಕೈಯನೆತ್ತಿ ಮಂಜುಗೌಡಗಂದವು ೧೬

''ನಾವು ಅಕ್ಕ ತಂಗಿ; ಅವಳಿ ಮರಗಳಾಗಿ ನಿಂದೆವು
ಕಾಡಿನಲ್ಲು ಪ್ರೀತಿಗೇನು ಕೊರತೆಯಿಲ್ಲವೆಂದವು''
ಮುಗ್ಧಜೀವ ನೆನೆಸಿದಲ್ಲಿ ನೆರವು ಕೈಯ ನೀಡಿದೆ
ಭಯದ ಕಾಡಿನಲ್ಲಿ ಕೂಡ ಕರುಣೆಗೆ ಕೈ ಮುಗಿದೆ ೧೭

## ೪೫. ಯೋಧ ಮತ್ತು ಹೆಂಗಸು

ಉರಿಬಿಸಿಲು ಕೆಂಪುಹುಡಿ. ಮೈತುಂಬ ಧೂಳಿಡಿಗಿ
ಕುದುರೆಯಿಳಿದನು ಯೋಧ ಜನರ ಕಂಡು
''ನೀರು ಹಣಿಸುವಿರ ತುಸು'' ಅಂದಿರಲು ಹೆಂಗಸು
ಬೇಗ ಬಂದಳು ಮಡಕೆ ತುಂಬಿಕೊಂಡು ೧

''ಬಳಲಿದಿರಿ, ಪಾಪ. ಬನ್ನಿರಿ ಒಳಕೆ ವಿಶ್ರಮಿಸಿ.''
ಚಾಪೆಯನು ಹಾಸಿದಳು ಕೂತುಕೊಳಲು
''ಇರಲಿ ಬಿಡಿ. ಈ ಮರದ ನೆರಳಲ್ಲೆ ಕೂಡುವೆನು
ತಂಪಾಗಿ ತಬ್ಬಿರುವವಿದರ ಹೆಳಲು'' ೨

''ಬಟ್ಟಲಿನ ತುಂಬ ಇದೆ ಜೇನು. ಈ ಚೊಂಬಿನಲಿ
ತಣ್ಣಗಿನ ನೀರು ಇದೆ, ತೆಗೆದುಕೊಳ್ಳಿ
ಇಲ್ಲಿಹುದು ಬೀಸಣಿಕೆ, ಬಹಳ ಸೆಕೆ ಅಲ್ಲವೆ?
ಇದರಿಂದ ಗಾಳಿಯನು ಬೀಸಿಕೊಳ್ಳಿ'' ೩

ಆಗ ಒಮ್ಮೆಲೆ ಬೀಸಿ ಬಂತು ತೆಂಕಣ ಗಾಳಿ
ದೂರವೆಲ್ಲೋ ಕೇಳಿಬಂತು ಹಾಡು
ಮಾವಿನೆಳಚಿಗುರಿನಲಿ ಚಿಮ್ಮಿ, ಪಯಣಿಗನೆಂದ
''ಇದಕೆ ಜೋಳದ ಪಾಳಿಯಿಲ್ಲ ನೋಡು'' ೪

ಜೇನು ಸವಿದನು ನೀರು ಕುಡಿದು ಮೈಯೊಡ್ಡಿದನು.
ತುಸು ಹೊತ್ತು ತಂಬೆಲರ ನೆರಳಿಗೆಂದು
ಎದ್ದು ಕುದುರೆಗೆ ಥಡಿಯ ಹಾಕಿ ಅಣಿಗೊಳಿಸಿದನು
ಮತ್ತೆ ದೂರದ ತನ್ನ ಪಯಣಕೆಂದು ೫

''ಹೋಗಿ ಬರುವೆನು ತಾಯಿ'' ಎಂದು ಕವಚವ ತೊಟ್ಟು
ಖಡ್ಗವನು ಬಿಗಿದಿಟ್ಟ ಟೊಂಕದಲ್ಲಿ
ಹೆಂಗಸಂದಳು, ''ಆಯ್ತು ಹೋಗಿ ಬನ್ನಿರಿ ಮತ್ತೆ
ಬಂದಾಗ ಬರಬೇಕು ನೀವು ಇಲ್ಲಿ'' ೬

''ಮರೆತುಬಿಟ್ಟೆನು ನಿಮ್ಮ ಹೆಸರು ಕೇಳಲು. ನೀವು
ನಡೆದ ದಾರಿಗೆ ಇರಲಿ ಶುಭದ ನೆರಳು
ಬಿರಿದ ಮಲ್ಲಿಗೆ ಕಂಡು, ಕೋಗಿಲೆಯ ದನಿ ಕೇಳಿ
ತುಂಬಿಬಂದಿತ್ತೇಕೆ ಕಣ್ಣು, ಕೊರಳು?'' ೭

ಯೋಧ ನುಡಿದನು ''ತಾಯಿ ಮತ್ತೆ ನೆನಪಿಗೆ ಬಂತು
ನನ್ನೂರು ಬನವಾಸಿ ನನಗೆ ಇಂದು
ಯೋಧ ನಡೆಯುವ ದಾರಿ ಕವಿಯ ದಾರಿಯು ಕೂಡ.
ನನ್ನನ್ನು ಕರೆಯುವರು ಪಂಪನೆಂದು'' ೮

## ೪೬. ಪವಾಡ

೧

ದಾರಿಯಲ್ಲೆ ಕೆಟ್ಟು ಲಾರಿ ನಿಂತಿತು, ಧುಮುಕಿ
ಚಾಲಕನು ತೆರಳಿದನು ಬುಡದಿ ಒಳಗೆ,
ಕೂಲಿಯವ ನಿಲ್ಲಿಸಿದ ಜ್ಯಾಕನ್ನು ಎತ್ತರಿಸಿ
ಸರಿಪಡಿಸತೊಡಗಿದರು, ಒರಗಿ ಕೆಳಗೆ

೨

ಗಾಲಿ ಸರಿಯಿದ್ದವು ಬೋಲ್ಟು ಬಿಗಿಯಿದ್ದವು,
ಗಟ್ಟಿಯಾಗೆ ಇದ್ದವೆಲ್ಲ ನಟ್ಟು
ಬ್ರೇಕಿಗೂ ಇರಲಿಲ್ಲ ತೊಂದರೆಯು, ಹಿಡಿಚಕ್ರ
ಎಲ್ಲವೂ ಸರಿಯಾಗೆ ಇತ್ತು ಒಟ್ಟು

೩

ಆದರೂ ಎಂಜಿನ್ನು ಬುಸುಗುಟ್ಟಿ ಕೆಲಹೊತ್ತು
ನಿಂತು ಹೋಗುತ್ತಿತ್ತು ಉಸಿರುಕಟ್ಟಿ
ಬಿಸಿಯಾಯಿತೆಂದು ಒಂದೆರು ಬಾಲ್ದಿ ನೀರು
ಹೊಯ್ದು ಕಾದರು ಮತ್ತೆ ಮೈಯ ತಟ್ಟಿ

೪

ಎಷ್ಟು ಧಡಪಡಿಸಿದರು ಲಾರಿ ಮಿಸುಕಲೆ ಇಲ್ಲ
ಅಷ್ಟರಲ್ಲೇ ಬಂತು ಇನ್ನೊಂದು ಲಾರಿ
ಬದಿಗೆ ನಿಲ್ಲಿಸಿ ಗಾಡಿ, ಚಾಲಕನು ಕೇಳಿದನು
''ನಿಂತು ಹೋಗಿದೆಯಲ್ಲ ಬೆಂಝುಸವಾರಿ?''

೫

ಕುದುರೆ ಕುದುರೆಯ ಗೋಣು ತಿಕ್ಕಿ ನೆಕ್ಕಿದ ಹಾಗೆ
ಅಕ್ಕಪಕ್ಕದಿ ನಿಂತವೆರಡು ಲಾರಿ.
ಆಗಲೆ ನಡೆಯಿತು ಪವಾಡ; ಮುಂಚಿನ ಗಾಡಿ
ಓಡತೊಡಗಿತು ಸದ್ದುಮಾಡಿ ಭಾರಿ

೬

ಲಾರಿ ಲಾರಿಯ ಕಂಡು ಸ್ನೇಹ ಮಾಡುವದುಂಟು
ಮೊಂಡು ಹಿಡಿಯುವದುಂಟು ಜಗಳವಾಡಿ
ಬಾಡಿಗೆಯ ಭಾರವನು ಹೊತ್ತು ಮುಗಿಯದ ಪಯಣ
ಅದಕು ಬೇಸರವೆಂಬುದುಂಟು – ನೋಡಿ

## ೪೭. ಕಳ್ಳರು ಮತ್ತು ಸಂತ

ಒಲಿವ ಬೆಟ್ಟದಲಿ ಯೇಸು ಪ್ರಾರ್ಥಿಸಿದ
ಪ್ರಭು, ನಿನ್ನ ಸಂಕಲ್ಪ ಸತ್ಯವಿರಲಿ.
ಚಂದ್ರ ಮೂಡಿದ್ದನು. ಯಾವುದೊ ಕಾತರ
ಮಲಗಿದ್ದರು ಶಿಷ್ಯರೆಲ್ಲ ಬಳಲಿ. ೧

ಮಲಗದಿರಿ. ಏಳಿರಿ. ದೇವರನು ಪ್ರಾರ್ಥಿಸಿರಿ
ನಿಮಗೆಲ್ಲ ಎಚ್ಚರವು ಇರಲಿ, ಅಂದ.
ಸದ್ದಿರದ ಇರುಳಲ್ಲಿ ಹದ್ದು ಹಿಂಡಿನ ಜತೆ
ಜುದಾಸ ಯೇಸುವಿದ್ದಲ್ಲಿ ಬಂದ ೨

ಕತ್ತಲಿನ ಕೈಗಿಟ್ಟ ಮೂವತ್ತು ನಾಣ್ಯಗಳು
ಮುತ್ತಿಡುವ ಕೊರಳನೆ ಹಿಡಿಯಿರೆಂದು
ನಂಬಿಕೆಯ ನಿಲುವಂಗಿ ತೊಟ್ಟಿರುವ ಒಳಸಂಚು
ತಲೆಬಾಗಿ ನಿಂತಿರಲು ಮುಂದೆ ಬಂದು ೩

ಯೇಸುವಿನ ಹಣೆಗೆ ಮುತ್ತಿಡಲು. ಕೇಳಿದನು
''ಮುತ್ತಿಟ್ಟು ದ್ರೋಹವನು ಬಗೆಯಲುಂಟೆ?''
ಅರ್ಚಕರ ಅಬ್ಬರದಿ ಯೋಧರೆಳೆದೊಯ್ದರು
ಯೇಸುವಿನ ಕಣ್ಗಳಿಗೆ ಬಿಗಿದು ಪಟ್ಟೆ ೪

ನಿಲುವಂಗಿ ತೊಡಿಸಿ, ಮುಳ್ಳಿನ ಕಿರೀಟವಿಟ್ಟು
ಕೈಯಲ್ಲಿ ಕೊಟ್ಟರು ಬಿದಿರು ತುಂಡು
ಹುಳಿಹೆಂಡ ಸುರಿದು ನಕ್ಕರು. ''ಇದೆಲ್ಲವೂ
ದೇವಪುತ್ರನಿಗೆ ಈ ದೊರೆಗೆ'' ಎಂದು ೫

ಪಿಲಾತನ ಮುಂದೆ ಬಿಗಿದೊಯ್ದು ನಿಲಿಸಿದರು
''ಇವನನ್ನು ದಂಡಿಸಿರಿ ಕೊಂದು ಹಾಕಿ''
ಎಂದೆಲ್ಲ ಕೂಗಿದರು. ಅರ್ಚಕರು ಹಿಂಡುಜನ
''ಧರ್ಮಕ್ಕೆ ದೇಶಕ್ಕೆ ಈತ ದ್ರೋಹಿ'' ೬

ತೆರಿಗೆಗಳ ಕೊಡದಿರಿ. ತಾನೆ ದೊರೆ ಎಂದವನು
ತಾನೆ ಪ್ರವಾದಿಯು ಎಂದುಕೊಂಡು
ಪಾತಕಿಯ ದಂಡಿಸಿರಿ. ಎನ್ನಲು ಪಿಲಾತನು
ಯೇಸುವನು ಕೇಳಿದನು. ''ಹೌದೆ?'' ಎಂದು ೭

ಹೌದೆಂದ ಯೇಸುವು ಗಂಭೀರ ಧ್ವನಿಯಲ್ಲಿ
ಶಾಂತಮುಖ. ಹೆಗಲಲ್ಲಿ ಇಳಿದ ಕುರುಳು.
ದೊಡ್ಡ ಹಣೆ ನಿಡುಮೂಗು ಕರುಣೆ ಹಚ್ಚಿಟ್ಟ
ದೀಪಗಳ ಹಾಗೆ ಹೊಳೆದವು ಕಣ್ಗಳು ೮

ಪಿಲಾತ ಯೋಚಿಸುತ ಅಂದನು, ''ಬಿಟ್ಟುಬಿಡಿ
ಅಪರಾಧವೆಸಗಿದಂತಿಲ್ಲ ಈತ''
ಮತ್ಸರದ ಮಚ್ಚು ಹಿರಿದಾಗ ಜನ, ಅವರಿಗೇ
ಒಪ್ಪಿಸಿದ ಯೇಸುವನ್ನು ಪಿಲಾತ ೯

ಎಳೆದೊಯ್ದರೇಸುವನು. ಕಂಬನಿಯ ಕೊಳವಾಗಿ
ಹೆಂಗಸರು ಬಂದರು ಹಿಂದಿನಿಂದ
ಯೇಸುವೆಂದನು ಆಗ ''ಮರುಗದಿರಿ ನನಗಾಗಿ
ನಿಮಗಾಗಿ ದುಃಖಿಸಿರಿ ಇಂದಿನಿಂದ'' ೧೦

ಪಾತಕದ ಬೆಟ್ಟಗಳು ಎರಗಿವೆ ಮೈಮೇಲೆ
ಜೀವಂತ ವೃಕ್ಷವನು ಕಡಿವೆವೆಂದು
ಜೀವ ಜಲವೀವ ತೊರೆ ಬತ್ತಿಸಲು ಕೈಯೆತ್ತಿ
ಮರುಗುವೆನು ನಿಮ್ಮ ಗತಿಗಾಗಿ ಇಂದು'' ೧೧

ಅವಿವೇಕಿಗಳ ಕೈಗೆ ಸಿಕ್ಕ ನಿಧಿ ಉಳಿದೀತೆ?
ಕೊಲ್ಗಂಬದಲಿ ಕರುಣೆ ಮೂಡಲುಂಟೆ?
ಒಲುಮೆ ಬತ್ತಿರುವ ಬೆಂಗಾಡಿನಲ್ಲಿ ಹಕ್ಕಿಗಳು
ಎಂದಾದರೂ ಬಂದು ಹಾಡಲುಂಟೆ? ೧೨

ಬಲಕೊಬ್ಬ ಎಡಕೊಬ್ಬ ಕಳ್ಳ ನಡುವೆ ಯೇಸು
ಮೂವರಿಗು ಮೊಳೆ ಜಡಿದು ತೂಗುಹಾಕಿ

ನಿಷ್ಪಾಪ ನಿರ್ಲಿಪ್ತ ಯೇಸುವನು ಕೇಳಿದರು
''ಸರಿಯಾಯಿತೆ?'' ಎಂದು ಕೂಗು ಹಾಕಿ ೧೩

ಬಲಕಿದ್ದ ಕಳ್ಳ ಯೇಸುವಿಗಂದ. ''ಏನಯ್ಯ
ನೀನಲ್ಲವೇನಯ್ಯ ದೇವದೂತ?
ಎಷ್ಟೋ ಪವಾಡಗಳ ಮಾಡಿದವ. ನಿನ್ನನ್ನು
ಉಳಿಸಿಕೊ. ಜತೆಗೆ ನಮ್ಮನ್ನು ಕೂಡ'' ೧೪

ಇನ್ನೊಬ್ಬ ಕೇಡಿ ಝುಂಕಿಸಿದ ಆ ಕೇಡಿಯನು
''ಸಾಕಯ್ಯ ಸುಮ್ಮನಿರು ಸದ್ಯ ಈಗ
ನಾವೆಲ್ಲ ಪಾಪಿಗಳು ಈತ ನಿಷ್ಪಾಪಿಯು
ಮರೆಯದಿರು ನೀ ಸ್ವರ್ಗವೇರುವಾಗ''. ೧೫

ಅವಿವೇಕಿಗಳ ಕೈಗೆ ಸಿಕ್ಕ ತಕ್ಕಡಿಯಲ್ಲಿ
ಕಳ್ಳರೂ ಸಂತರೂ ಒಂದೆ ಸರಕು
ಕೊಲ್ಗಂಬದಲ್ಲಿ ಸಿಕ್ಕು ಸತ್ಯ ತೂಗಾಡುವದು
ಮರುಕಗಳ ಮಡಕೆ ಬಿಟ್ಟಲ್ಲಿ ಬಿರುಕು ೧೬

ಯೇಸು ಪ್ರಾರ್ಥಿಸಿದ ''ಓ ತಂದೆಯೆ ಕ್ಷಮಿಸು
ತಿಳಿಗೇಡಿ ಇವರನ್ನು'' ಎಂದು ಬೇಡಿ
ಕ್ರೌರ್ಯಗಳ ಆಚೆಗೂ ಉಂಟಲ್ಲ. ಸ್ವರ್ಗಕ್ಕೆ
ಕರೆದೊಯ್ಯಬಲ್ಲದು ಕ್ಷಮೆಯ ಏಣಿ ೧೭

# ೪೮. ದಾಸಿಮಯ್ಯ ಮತ್ತು ಬೆಕ್ಕು

ಒಂದು ದಿನ ಮುಂಜಾವು ಕೋಳಿ ಕೂಗಿತು. ಬಿಲ್ವ
ಮಠದಲ್ಲಿ ಶರಣರೆ ಏಳಿರೆಂದು.
ಸೂರ್ಯ ಮೂಡಿದನು ಬೆಟ್ಟವು ಹಸಿರು ಹಣೆಯಲ್ಲಿ
ಬಂಗಾರ ಭಸ್ಮವನು ಬಳಿಯಿತೆಂದು.

ಶರಣರೆದ್ದರು ಹಕ್ಕಿಗಳ ಹಾಗೆ ಚಿಲಿಪಿಲಿಸಿ
ಮಠದ ಬಾವಿಯ ಬಳಿಗೆ ಮೀಯಲೆಂದು
ಆಗಾಗ ಬಾರಿಸುವ ಗಂಟೆ ಗದ್ದುಗೆಯ ಬಳಿ
ಧೂಪವನು ಹಾಕಿದರು ಜನರು ತಂದು.

ಎಣ್ಣೆ ಹಾಕಿದರು ಕೆಲವರು ತೂಗುದೀಪಕ್ಕೆ
ಬಿಲ್ವದೆಲೆ ಹೂವುಗಳ ಸುರಿದುನಿಂದು
ಮತ್ತೆ ಕೆಲವರು ಕುಳಿತು ಗುಂಪಾಗಿ ಹಾಡಿದರು
ಹಾಡುಗಳೇ ಶಿವಗೆ ಹೂವಾಗಲೆಂದು.

ಕಾಯಕವೆ ಶಿವಪೂಜೆ ಎಂದು ನಂಬಿದ ಭಕ್ತ
ದಾಸಿಮಯ್ಯನ ಪೂಜೆಗಿಲ್ಲ ಗಡುವು
ಹಗಲಿರುಳು ಹೊಯ್ದಿರುವ ಮಗ್ಗದಲಿ ಮುಳುಗಿ
ಗದ್ದುಗೆಯ ಕಾಣಲೂ ಇಲ್ಲ ಬಿಡುವು.

''ಮಠವಿಲ್ಲ, ಗುರುವಿಲ್ಲ ಇವನೆಂಥ ಭಕ್ತನೊ
ತೆರೆದೀತೆ ಕೈಲಾಸ ಇವಗೆ ಕದವ?''
ಪರರೇನು ಬಲ್ಲರು ಎಳೆಎಳೆಗು ಹೆಣೆದಿದ್ದ
ದಾಸಿಮಯ್ಯನ ಧ್ಯಾನದೆಳೆಯ ಹದವ?

''ಕರ್ಪೂರವ ಸುಡಲಿಲ್ಲ ಮಠಕೆ ಕಾಲಿಡಲಿಲ್ಲ
ತೆರೆದಾನೆ ಶಿವನಂದಿ ಇವಗೆ ಕದವ?''
ಪರರೇನು ಬಲ್ಲರು 'ರಾಮನಾಥಾ' ಎಂಬ
ಧ್ಯಾನ ಲಡಿನೂಲು ನೀಡಿರುವ ಮುದವ?

ಆರೆಂಟು ವರ್ಷಗಳ ಅಪರೂಪ ನೂಲೆಳೆದು
ದುಗ್ಗಲೆಯು ನೀಡಿರುವ ಲಡಿಯ ಹೊಯ್ದು
ಮನವೆಂಬ ಮಗ್ಗದಲಿ, ನೆನಹೆಂಬ ಎಳೆಬಿಟ್ಟು
'ರಾಮನಾಥಾ' ಎಂಬ ಬಟ್ಟೆ ನೆಯ್ದು.

ಲಾಳದಲಿ ಪುಟಿದಂತರಾಳದಲಿ ಹುದುಗಿತ್ತು
'ರಾಮನಾಥಾ' ಎಂಬ ಗಂಟೆಗೆಜ್ಜೆ
ದುಗ್ಗಲೆಯ ಶ್ರಮದ ಸುಂದರ ನೂಲಿನಲಿ ನೆಯ್ದು
ಬಟ್ಟೆಯಲಿ ಮೂಡಿದವು ಶಿವನ ಹೆಜ್ಜೆ.

ಒಂದು ದಿನ ದಾಸಿಮಯ್ಯನು ಮಠಕೆ ಬಂದಿದ್ದ
ಕೈಮುಗಿದು ಕೂತಿರಲು ಅವನ ಕಂಡು
''ಕಾಣೆಭೋ ವಿಸ್ಮಯ ಕಾಣೆಭೋ'' ಗಲಿಬಿಲಿಸಿ
ಕಿವಿಕಿವಿಯೊಳಾಡಿದರು ಬೆರಗುಗೊಂಡು.

''ಏನು ಬಂದಿರಿ ದಾಸಿಮಯ್ಯಗಳೆ? ಹದುಳವೆ?
ನೆನಪಾಯಿತೆ ಬಿಲ್ವಮಠವು ನಿಮಗೆ?''
ಕುಹಕದಲಿ ಕೇಳಿರಲು ಸುಮ್ಮನೆ ಕುಳಿತಿದ್ದ
ದಾಸಿಮಯ್ಯನು ಜನರ ನಗೆಯ ನಡುವೆ.

ಗದ್ದುಗೆಯ ಬಳಿಗೊಂದು ಬೆಕ್ಕು ಕೂತಿತ್ತು
ಧ್ಯಾನದಲಿ ಎಂಬಂತೆ ಕಣ್ಣು ಮುಚ್ಚಿ
ಬಿಲದಿಂದ ಇಲಿಯೊಂದು ಓಡಿರಲು ಛಂಗನೆ
ಹಾರಿತ್ತು ಹಿಡಿದು ಆ ಇಲಿಯ ಕಚ್ಚಿ

ದಾಸಿಮಯ್ಯನು ನುಡಿದ ''ಅಯ್ಯಗಳೆ ಕಂಡಿರೇ
ಬರಿ ಸಟುಗನ ಭಕ್ತಿಯಾಟ ಇಂದು
ಕಣ್‌ಮುಚ್ಚಿದವರೆಲ್ಲ ಧ್ಯಾನ ಮಾಡುವದಿಲ್ಲ
ಯಾವುದೋ 'ಇಲಿ'ಗೆ ಕಾದಿರುವರೆಂದು''

ಬಿಲ್ವಮಠ ಈಗೀಗ ಬಿಲದ ಮಠವಾಗಿಹುದು
ಯಾರಲ್ಲಿಯೂ ಇಲ್ಲ ಶಿವನ ಹುಚ್ಚು
ಸಿಕ್ಕಿದ್ದು ಸಿಕ್ಕಷ್ಟು ಮುಕ್ಕಿ ಕಣ್ಮರೆಯಾಗಿ
ಬದುಕಿರುವ ಇಲಿಗಳೆ ಇಲ್ಲಿ ಹೆಚ್ಚು

## ೪೯. ಕದವ ತಟ್ಟಿದರು

'ಬಂಡವಳ', ಬರೆಯುವದರಲ್ಲಿ ಮುಳುಗಿದ್ದ ಪತಿ
ಎದೆನೋವಿನಿಂದ ಮಲಗಿದ್ದ ಜೆನಿಯು
ಆಗೀಗ ಓಡಿರುವ ಬಂಡಿಗಳು; ಗಿಡದಲ್ಲಿ
ಜಿಗಿದಾಡುತಿದ್ದ ಮಕ್ಕಳದೆ ಧ್ವನಿಯು,
ಚಳಿಮಂಜು ಇಳಿದಂತೆ; ಹಾಡುಗಳು ಕರಗಿವೆ
ಕೊರಳಲ್ಲಿ ಅಲ್ಲಲ್ಲಿ ಸೃಷ್ಟಿಯೊಳಗೆ;
ಅಡುಗೆ ಕೆಲಸಗಳಲ್ಲಿ ತೊಡಗಿದ ಹೆಲೆನಳಿಗೆ
ಬಾಗಿಲವ ತಟ್ಟಿರುವ ಸದ್ದು ಕೆಳಗೆ
''ಯಾರವರು?'' ''ನಾನು''. ಬಂದವನು ಹಾಲಿನವ.
''ಇಂದಾದರೂ ಸಿಗುವುದೇನು ಹಣವು?''
ದಯವಿಟ್ಟು ಇನ್ನೆರಡು ದಿನ ಬಿಟ್ಟು ಬರುವಿರಾ?
ಮಲಗಿದಲ್ಲಿಂದಲೆ ನೊಂದ ಧ್ವನಿಯು.
ಹಿಂದಿರುಗಿದವು ಹೆಜ್ಜೆ ಗಾಯಗೊಂಡಿಹ ಮೌನ
ಮತ್ತೊಂದು ಬೆರಳು ತಟ್ಟಿತ್ತು ಕದವ.
ಮಾಂಸದವ ಬಂದಿದ್ದ ''ಮೈಹುಷಾರಿಲ್ಲವೆ?''
''ಇಂದಾದರೂ ಕೊಡುವಿರೇನು ಹಣವ?''
''ಈಗಿಲ್ಲ, ದಯವಿಟ್ಟು ಇನ್ನೆರಡು ದಿನ ಬಿಟ್ಟು''
ಗಂಟಲಲಿ ಗಂಟಾಗಿ ನಿಂತ ಮಾತು
ಬಿರುನಡೆಯ ಬೂಟಿನಡಿ ಮೌನ ಹುಡಿ. ಆಗಲೂ
ಹಿಡಿಹೆಮ್ಮೆ ಏಕೊ ತುಸು ಉಡುಗಿಹೋತು.
ಮತ್ತೆ ಕದವತಟ್ಟಿದರು. ಬಂದವನು ಬ್ರೆಡ್ಡಿನವ
''ಇಂದು ಬೇಕಾಗಿತ್ತು ಸ್ವಲ್ಪ ಹಣವು
ಕೊಡುವಿರ?'' ''ದಯವಿಟ್ಟು ಈಗಿಲ್ಲ'' ಅಂದಾಗ
ಸೊರಗಿತ್ತು ಸಣ್ಣದಾಗಿತ್ತು ಧ್ವನಿಯು
ನೋವುಗಳು ನಿಲ್ಲಿಸಿದ ಮೌನಗಳ ಗೋಡೆಗಳು

ಅದರಾಚೆ ಕೇಳಿಸಿದ ನಗೆಯು, ಹಾಡು.
ಕಿಡಿಕಿಯಲ್ಲಿ ಬಿಚ್ಚಿಕೊಳ್ಳುವ ಹೊಗೆಯ ನೋಡುತ್ತ
ಅಂದುಕೊಂಡಳು ಹೆಲೆನ; ''ಎಂಥ ಪಾಡು!''
ಆಗಲೆ ಬಾಗಿಲವ ಮತ್ತೊಮ್ಮೆ ತಟ್ಟಿದನು
ಎಂಗೆಲ್ಸ, ಎಳೆಬಿಸಿಲಿನಂತೆ ಬಂದು
ಕೇಳಿದನು. ''ಜೆನಿ, ಈಗ ಹೇಗಿದ್ದೀರ?''
ಮಕ್ಕಳೆಲ್ಲರು ಎಲ್ಲಿ ಹೋದರೆಂದು.
ಬೇಸಗೆಯ ಧ್ವನಿ ಕೇಳಿ, ಹಿಂಡು ಸ್ವಾಲೊ ಹಾರಿ
ಬರುವಂತೆ. ಬಂದಿರಲು ಮಕ್ಕಳೆಲ್ಲ
ತಿಂಡಿತಿನಸು ಅವರ ಕೈಗಿಟ್ಟು ಸಾಗಿದನು
ಕ್ರಾಂತಿ, ಸಿಂಹದ ಬಳಿಗೆ; ಅಷ್ಟರಲ್ಲಿ
ಕಾಲವೆ ಕಾದಿರಲು ಕ್ರಾಂತಿಕದವನು ತಟ್ಟಿ
ಕೆಳಗಿಳಿದು ಬಂದು, ಬಾಗಿಲವ ತೆರೆದು
ಶ್ರಮಜೀವಿಗಳ ಬಂಧು, ಹೊಸಯುಗದ ಹರಿಕಾರ
ಕೈಕುಲುಕಿ ತಬ್ಬಿದನು ಒಳಗೆ ಕರೆದು.

## ೫೦. ಆಂಡರ್ಸನ್ ಬೀದಿ, ಲಂಡನ್ನಿನಲ್ಲಿ

ಜಿಟಿ ಜಿರೊ ಎಂದು ಮಳೆ ಸುರಿದಿತ್ತು ಹೊರಗೆ,
ಕೊರೆದಿತ್ತು ಚಳಿಯು ನಡುಗಿತ್ತು ಇಳೆಯು.
ಮುಗಿಲನ್ನು ತಬ್ಬಿತ್ತು ಮಬ್ಬು ಹೆಪ್ಪು ಗಟ್ಟಿತ್ತು
ಒರಗಿಕೊಂಡಲ್ಲಿಯೆ–ಥೇಮ್ಸ ಹೊಳೆಯು ೧

''ಇಲ್ಲೆ ಇರು ಜೆನಿ. ಬೆಚ್ಚಗೆ ಹೊದ್ದುಕೊ
ಮಕ್ಕಳನು ಬಿಡಬೇಡ ಎಲ್ಲು ಹೊರಗೆ
ಒರಗಿದಲ್ಲೆ ತುಸು ಎದೆಯನ್ನು ಕಾಸಿಕೊ
ಹಿತವಾಗಬಹುದೀ ಆಸಾಧ್ಯ ಚಳಿಗೆ'' ೨

''ಲಕ್ಷ್ಯವಿರಲಿ ಹೆಲೆನೆ. ಬೇಗನೆ ಬರುವೆನು''
''ಕಾರ್ಲ. ಇಂಥ ಮಳೆಯಲ್ಲೆ ಹೋಗಬೇಕೆ?''
''ಹೌದಮ್ಮ ಹೌದು ಮನೆಯೊಂದು ಬೇಕಲ್ಲ
ಬಿಸಿನೀರು ಕಾಸು. ಮಕ್ಕಳನು – ಜೋಕೆ'' ೩

ಹೊಳೆವ ಕಣ್ಣುಗಳು ಪೊದೆಹುಬ್ಬು ಕುರು
ಚಲುಗಡ್ಡ ಧೀರನಡೆ ಕಂಚುಧ್ವನಿಯು
ಮರುಕವೆ ಮರೆತಂಥ ಮಳೆಯಲ್ಲಿ ಕೇಳಿ
ದರು. ''ಬಾಡಿಗೆಗೆ ಉಂಟೆ ಮನೆಯು?'' ೪

ಮುಚ್ಚಿರುವ ಕದ ಕಿಡಕಿ ಕಂಡಲ್ಲಿ ನಿಂತರು.
''ಬಾಡಿಗೆಗೆ ಉಂಟೆ ಮನೆಯು?''
''ನಾಲ್ಕು ಮಕ್ಕಳ ನಮ್ಮ ಸಂಸಾರ''ಕೆಂದಾಗ
ಉದುರಿದವು ನಾಲ್ಕು ದನಿಯು ೫

4, ಆಂಡರ್ಸನ ಬೀದಿ, ಲಂಡನದಲ್ಲಿ
ಕೂಗಿದರಮೀನರು. ಗುಂಪಿನೆದುರು
''ಹಾಸಿಗೆಗಳು ಬೇಕೆ? ದುಪ್ಪಟಿಗಳು ಬೇಕೆ?
1ನೇ ಸವಾಲ್ ಬೇಗ ಬೇಡಬಹುದು'' ೬

ಐದುವರ್ಷದ ಜೆನಿ, ತಾಯಿಗೆ ಅಂದಳು.
''ಹಾಸಿಗೆಗಳನ್ನೇಕೆ ಕೊಟ್ಟೆ ಅಮ್ಮ?''
''ನಾವೆಲ್ಲ ಮಲಗುವದೆಲ್ಲೀಗ? ಅಯ್ಯೊ''
ದುಪ್ಪಟ್ಟಿಗಳನ್ನೂ ಹೊತ್ತು ತಂದರಲ್ಲ ೭

ಬೇಲೀಫನನ್ನೆ ಕೈ ಹಿಡಿದು ಕೇಳಿದಳು.
ಲಾವುರೆ ''ಅಮ್ಮನಿಗೆ ಎದೆಯ ನೋವು.
ಎಡ್ಗರಗೆ ಕಾಯಿಲೆ, ನಮಗೆಲ್ಲ ಚಳಿಯಲ್ಲಿ
ದುಪ್ಪಟಿಯು ಬೇಡವೆ? ಹೇಳಿ ನೀವು.'' ೮

ಕೂಗಿದರಮೀನರು. ''ತೊಟ್ಟಿಲವು ಬೇಕೇನು?''
ಗಟ್ಟಿ ಅಳಹತ್ತಿದರು ಮಕ್ಕಳೆಲ್ಲ
''ಹೆನ್‌ರಿಚ್ ಮಲಗುವದು ಎಲ್ಲಮ್ಮ ಇನ್ನು
ಲಾಲಿಯ ಹಾಡುಗಳು ಅವನಿಗಿಲ್ಲ.'' ೯

ಗೊಂಬೆಗಳು ಬೇಕೆ? ಉಡುಪುಗಳು ಬೇಕೆ?
1ನೇ ಸವಾಲ್ ಬೇಗ ಬೇಡಬಹುದು
ಜೆನಿ ಅತ್ತಳು. ಲಾವುರ ಅತ್ತಳು.
ಬಾಡಿಗೆಯ ಹಣಕಿವೂ ಸಾಲದಿಹುದು ೧೦

ನೆರೆದ ಜನರೆಲ್ಲ ತಮ್ಮೊಳಗೆ ನುಡಿದರು.
''ಯಾರೊ ಪಾಪ. ಕಾರ್ಲಮಾರ್ಕ್ಸನಂತೆ !
ಬಾಡಿಗೆ ಹಣಕ್ಕೆ ಈ ಬವಣೆ ಕಾನೂನಿಗೆ
ಗೊಂಬೆಗಳು. ಕಾಯಿಲೆ ಎಂಬುದುಂಟೆ?'' ೧೧

ಹೆಲೆನ ಜೆನಿಯ ಎದೆಯನ್ನು ಕಾಸಿದಳು.
ಸಂತೈಸಿದಳು ಅಳುವ ಮಕ್ಕಳನ್ನು
ಇದ್ದುಬಿದ್ದುದ ಮಾರಿ. ಲೆಸ್ಟರ ಸ್ಕ್ವೇರಿನಲಿ
ಆಶ್ರಯಿಸಿದರು ಚಿಕ್ಕ ಹೋಟೆಲನ್ನು ೧೨

ಕಾರ್ಲ್‌ಮಾರ್ಕ್ಸ್ ಅಂದರು. ''ಋಣವಂತು ತೀರಿತು.
ಗಾಯಗಳು ಮಾತ್ರವೆ ಉಳಿದವಲ್ಲ,
ನೆಲೆಯಿಲ್ಲದವರೆಲ್ಲ ಒಂದಾಗಿ. ನೆಲವೆಲ್ಲ
ನೆಲೆಯಾಗಿ ಬಾಳ್ವದಿನ ದೂರವಿಲ್ಲ'' ೧೩

## ೫೧. ಹುಳ ಮತ್ತು ಕಿರೀಟ

೧

ಕತ್ತಲೆಯ ಕಾಡಿನಲಿ ಕಂಗೆಟ್ಟು ನಿಂದವರು
ನೊಂದವರು; ಕಾದಿರಲು ಭವದಿ ಬಂದು
ಒಳ್ನುಡಿಯ ಬೆಳಕಿತ್ತು ಸಲುಹಿ ದ್ವೈಪಾಯನರು
ಲೋಕಗಳ ಸಂಚರಿಸುತಿರಲು; ಒಂದು

೨

ಹುಳವನ್ನು ಕಂಡು ನಸುನಕ್ಕು ನುಡಿದರು, ''ನೀನು
ದೊರೆಯಾಗು, ಬಿಟ್ಟು ಬಿಡು ಕ್ಷುದ್ರದೇಹ.''
ಒಲ್ಲೆನೆಂದಿತು ಅದು. ಆಗ ಆ ಹುಳವನ್ನೆ
ದೊರೆಯಾಗಿ ಮಾಡಿದರು, ಎಂಥ ಮೋಹ!

೩

ಹಿಂದೊಮ್ಮೆ ಕೀಟವೆ ವೃಷಲ ಜನ್ಮವ ತಳೆದು
ದ್ವೈಪಾಯನರ ಭಕ್ತನಾಗಿ ಬಾಳಿ
ಕಡು ಲೋಭಿಯಾಗಿತ್ತು; ಹಾಗೆಂದೆ ಈಗ ಅದು
ಹುಟ್ಟಿತ್ತು ಹುಳದ ಈ ಜನ್ಮ ತಾಳಿ

೪

ದ್ವೈಪಾಯನರ ದಯದಿ ಹುಳವು ದೊರೆಯಾಯಿತು
ರಾಜರಾಜರು ಎಲ್ಲ ಮಣಿದರದಕೆ.
ತಪ್ಪದೆ ತೆರಿಗೆಗಳ ಕೊಡುವ ವರ್ತಕರಂತೆ
ಕಪ್ಪಕಾಣಿಕೆ ಸಲ್ಲಿಸಿದರು ಹುಳಕೆ

೫

ಭಗವಂತ ದ್ವೈಪಾಯನರು ಆದಕೆ ಹೇಳಿದರು,
''ಈ ಕ್ಷಣವೆ ಕೊಡಬಲ್ಲೆ ಮುಕ್ತಿ ನಿನಗೆ
ಆದರೂ ಇನ್ನೊಮ್ಮೆ ವಿಪ್ರ ಜನ್ಮವ ತಳೆದು
ನನ್ನ ದಯದಿಂದ ಪಡೆ ಮುಕ್ತಿ ಕೊನೆಗೆ''

೬

ದ್ವೈಪಾಯನರು ವಿಮಲ ಜ್ಞಾನ ನೀಡಿದರದಕೆ
ಭೂಮಿಯೆಲ್ಲವನಾಳಿ, ಕೀಟ ದೊರೆಯು
ಕೊನೆಗೆ ದೇಹವ ತೊರೆದು ವಿಪ್ರ ಜನ್ಮವ ತಳೆದು
ಹರಿಪದವ ಹೊಂದಿತು ಸುತತ್ವವರಿತು

೭

ಹೀಗೆ ಎಷ್ಟೆಷ್ಟೊ ಭವಬಂಧನವ ಬಿಡಿಸಿದರು.
ಬಾದರಾಯಣ ಸ್ವಾಮಿ, ಮುಕ್ತಿದಾತ
ಗೈದಿರುವ ಎಣೆಯಿರದ ಚಿಂತ್ಯ ಕರ್ಮಗಳನ್ನು
ಸುರರೆಲ್ಲ ಹಾಡಿ ಹೊಗಳುವರು ಸತತ.

# ೫೨ . ಕವಷ ಐಲೂಷ

| | | |
|---|---|---|
| ೧. | ಐತರೇಯ ಬ್ರಾಹ್ಮಣ | ೮-೧೯ |
| ೨. | ಕೌಷೀತಕೀ ಬ್ರಾಹ್ಮಣ | ೧೨-೩ |
| ೩. | ಋಗ್ವೇದ | ೧೦-೩೦-೩೪ |
| | | ೩ ಅನುವಾಕ್ |

ಒಮ್ಮೆ ಸರಸ್ವತಿಯ ತೀರದಲ್ಲಿ ಭೃಗು ಅಂಗೀರಸ ಮೊದಲಾದ ಮಾಧ್ಯಮರು ಸೋಮಾಯಾಗ ಮಾಡುತ್ತಿದ್ದರು. ಸೋಮಯಾಗ ಹನ್ನೆರಡು ದಿನಕ್ಕೆ ಕಡಿಮೆಯಿಲ್ಲದೆ ನಡೆಯುವ ಯಾಗ. ಈ ಬಗೆಯ ಯಾಗದಲ್ಲಿ ಅನೇಕ ಯಜಮಾನರಿರುವರು. ಆ ಯಾಗಕ್ಕೆ ಬಂದಿದ್ದ ಕವಷ ಐಲೂಷ ಋಷಿಯ ಮಗ. ಇವನು ಶೂದ್ರ. ದಾಸಿಯ ಪುತ್ರನು. ಸಾಲದ್ದಕ್ಕೆ ಜೂಜುಗಾರ. ಇವನನು ಗುರುತಿಸಿದವರೊಬ್ಬರು ಕೋಲಾಹಲವನ್ನು ಎಬ್ಬಿಸಿ, ಅವನನ್ನು ಯಾಗದಿಂದ ಹೊರಗಟ್ಟಿದರು. ನೀರಡಿಸಿ ಸರಸ್ವತಿಯ ಬಳಿ ಹೋದ ಕವಷನನ್ನು ಕಂಡು, ಸರಸ್ವತಿಯ ಜಲಪಾನ ಮಾಡಲು ಈ ಪಾಪಿಯು ಅರ್ಹನಲ್ಲವೆಂದು ಅಲ್ಲಿಂದಲೂ ಬೆಂಗಾಡಿಗೆ ಓಡಿಸಿದರು. ನೀರೂ ನೆರಳೂ ಇಲ್ಲದೆ ವ್ಯಥೆ ಪಡುತ್ತ ಕವಷ ಪ್ರಾರ್ಥನೆಯಲ್ಲಿ ತೊಡಗಿದಾಗ ಅವನಿಗ 'ಪ್ರದೇವತ್ರಾ ಬ್ರಹ್ಮಣೇ' ಎಂಬ ಸೂಕ್ತ ಗೋಚರಿಸಿತು. ಆಗ ಸರಸ್ವತಿ ಇವನ ಬಳಿಗೆ ಹರಿದು ಬಂದು, ಇವನನ್ನು ಸುತ್ತುವರಿಯಿತು. ಇವನು ನಿಂತಲ್ಲಿ ನಿಂತು, ನಡೆದಲ್ಲಿ ನಡೆದು ಓಲೈಸಿತು. ಆ ಬೆಂಗಾಡೂ ಇವನ ಪುಣ್ಯದಿಂದ ಜಲಮಯವಾಯಿತು. ಇದನ್ನು ಗಮನಿಸಿದ ಋತ್ವಿಜರು, ಇವನೊಬ್ಬ ಮಹಾತ್ಮನೆಂದರಿತು, ಇವನನ್ನು ಕರೆದೊಯ್ದು ಯಜ್ಞವನ್ನು ಇವನ ನೇತೃತ್ವದಲ್ಲಿ ಪೂರ್ಣಗೊಳಿಸಿದರು. ಇವನಿಗೆ ಗೋಚರಿಸಿದ ಸೂಕ್ತ 'ಆಪೋನಪ್ತ್ರೀಯ ಸೂಕ್ತ'. ಆ ಜಲಪ್ರದೇಶ ಈಗಲೂ ಪರಿಸಾರಕವೆಂದು ಹೆಸರಾದ ತೀರ್ಥಕ್ಷೇತ್ರ.

# ಕವಷ ಐಲೂಷ

೧

ಅಲೆಗಳೆದ್ದವು ಜೂಜು ಕಟ್ಟೆಯಲಿ ಮತ್ತೆ
ಗೆದ್ದವರ ಹಿಗ್ಗಿನಲೆ ಸೋತವರ ಸುತ್ತ
ಕಿಡಿಗೆದರಿದುರಿಯಂತೆ ಎದ್ದೆದ್ದು ಕುಣಿದು
ನೆರೆಬಂದ ಹೊಳೆಯಂತೆ ಅಲೆ ಅಲೆಗೆ ನೆಗೆದು.
ಸೋತವರ ಪ್ರಾಣಗಳ ಹನಿಹನಿಯನೆಳೆದು.
ಪ್ರಿಯಳ ಮುತ್ತಿಡುವಂತೆ ಮುತ್ತಿಟ್ಟ ದಾಳ
ಮಗುವನಪ್ಪಿಡುವಂತೆ ಅಪ್ಪಿಟ್ಟು ದಾಳ
ತುಂಬಿದರು ಪಣಕಿಟ್ಟ ನಿಷ್ಕಗಳನೆಳೆದು
ಅಲ್ಲಲ್ಲಿ ಸೋತವರ ಸೂತಕದ ಮೌನ
ತೂಕಡಿಸಿ ಕುಳಿತಿರುವ ಇರುಳಿನಲಿ ಲೀನ
ಕೈ ಹಿಡಿದು ಕರೆದೊಯ್ದ ಎತ್ತರಗಳಿಂದ
ಆಸೆಗಳು ಉರುಳಿದವು, ಒಳನೋವಿನಿಂದ.
ಹಣೆಯಲ್ಲಿ ಹನಿಯಾಗಿ ಕರಗಿದವು ಜೀವ
ಬಾಡಿಸುತ ಕಂಡೆಲ್ಲ ಕನಸುಗಳ ಹೂವ
ಹೂ ಬಿಸಿಲ ಪಾರಿವಾಳಗಳಂತೆ ನಡೆದು
ಐಶ್ವರ್ಯಗಳ ತರುವ ದಾಳಗಳ ಹಿಡಿದು.
ಎಣೆಯುಂಟೆ ಅವಕಿನ್ನು? ದಾಳಗಳೆ ಶರಣು
ಮಧುಮಂತ ದಾಳಗಳು. ಸುಖದ ತೇರೆಳೆದು
ಸಂತಾನ ಸಂಪದವ ನೀಡುವವು ಕರೆದು
ವಕ್ರಿಸಲು ಕೆಡಹುವವು ಪ್ರಾಣಗಳ ಸುಲಿದು.

೨

ಬೆಟ್ಟದಿಳುಕಲಿನಲ್ಲಿ ಬಿತ್ತರಿಸಿ ಹರಿದು
ಹೊರಳಾಡಿ ಕಂಪಿಸುವ ತೊರೆಯಂತೆ ಸರಿದು

ಪಗಡೆಗಳ ಹಾಸಿನಲಿ ದಾಳಗಳ ಸದ್ದು
ಕವಷ ಐಲೂಷನಿಗೆ ನೀಡಿದವು ಹಿಗ್ಗು.
ಮೂಜನತ್ ಪರ್ವತದ ಸೋಮರಸದಿಂದ
ದೇವತೆಗಳೆಲ್ಲ ಪಡೆವಂತೆ ಆನಂದ.
ಜೂಜುಕಾರರನೆಲ್ಲ ಎಚ್ಚರಿಸಿ ತಿವಿದು
ಪಗಡೆಗಳ ಹಾಸಿನಲಿ ದಾಳಗಳು ಕುಣಿದು.
ಕವಷ ಐಲೂಷನನು ತಣಿಸಿದವು ಕರೆದು
''ಓ ದಾಳಗಳೆ ನಿಮ್ಮ ಪಡೆಯೊಡೆಯನಿಗೆ ನಮನ
ದಾಳಗಳೆ ನಿಮ್ಮ ಗಣಗಳ ದೊರೆಗೆ ನಮನ
ಗೆಲುವಿನ ಹಕ್ಕಿಗಳೆ, ಸ್ವರ್ಣಗರಿ ಬಿಡಿಸಿ.
ಮಿತ್ರತ್ವವನು ಬೆಳೆಸಿ, ನಮಗೆ ಸುಖ ಬಡಿಸಿ
ಕ್ರೋಧಗಳ ಹಾವುಗೆಯ ಹೊರಗಿರಿಸಿ ಬಂದು
ಸೋಲುಗಳ ಮೀಸಲಿಡಿ ಎದುರಾಳಿಗೆಂದು
ಹೊಂಬಣ್ಣದೆಳನಗೆಯ ಹಗ್ಗದಲ್ಲಿ ಹಿಡಿದು
ಸೋಲುಗಳ ಕಂಬಕ್ಕೆ ನಿಲ್ಲಿಸಿರಿ ಬಿಗಿದು
ದಾಳಗಳೆ ಭಾಗ್ಯದೆಳೆ ಕಡಿವೋಗದಿರಲಿ
ಹರ್ಷಗಳು ಪಗಡೆಗಳ ಕೈಹಿಡಿದು ಬರಲಿ
ಸಂಪದದ ಗೋವುಗಳು ನಮ್ಮ ಬಳಿಗಿರಲಿ

೩

ದಾಳಗಳ ಸವಿನಗೆಗೆ ಮನ ಸೋತು ಕವಷ
ಇದ್ದು ಬಿದ್ದುದ ದೋಚಿಕೊಂಡೊಂದು ದಿವಸ
ಜೂಜು ಕಟ್ಟೆಗೆ ಹೊರಡಲಣಿಯಾಗುತಿರಲು
ಗುಡಿಸಲಿನೊಳಲ್ಲಲ್ಲಿ ಮಳೆ ಜಿನುಗುತಿರಲು
ಕ್ಷೀಣ ಸ್ವರವೆತ್ತಿ ನುಡಿದಳು ತಾಯಿ, ''ಇನ್ನು
ಸಾಲದೆ ಕಳೆದುದನು ಸರ್ವಸ್ವವನ್ನು?
ಲೋಭಕ್ಕೆ ಕಣ್ಣಿಳಿವೆ ಆದರೂ ಕುರುಡು
ಮೋಹಕ್ಕೆ ಕಿವಿಗಳಿವೆ ಆದರೂ ಕಿವುಡು

ಐವತ್ತು ಮೂರು ಬಾಗಿಲುಗಳಿಹ ಸೆರೆಯು
ಪಗಡೆಗಳ ಈ ಹಾಸು, ಹಾಕಿರುವ ಬರೆಯು
ಸಾಲದೆ ಓ ಮಗನೆ? ಸಾಲದೆ ಕವಷ?
ನಿತ್ಯವೂ ತಿನಿಸಿರುವ ದುಃಖದೀ ದವಸ.
ಕಣ್ವನಿಗೆ ಕಣ್ಣಿನಲಿ ಕಾಡಿಗೆಯ ತುಂಬಿ
ಕೂಡ್ರಿಸಿದ ಬಂಗಾರ ಪೀಠವಿದು, ನಂಬಿ
ಕೂತವನ ಸಂಕಟಕೆ ಕೊನೆಯಿಲ್ಲ ಮಗನೆ!''
ಕೊರಳ ಸರ ತೊಯ್ದಿರಲು, ಹೆಂಡತಿಯು ತಡೆದು
ಬೇಡಿದಳು, ''ಹೋಗದಿರಿ'' ಎಂದು ಕೈ ಮುಗಿದು.
ಕೆಡುಕಿನ ಕಿರಿದಾರಿ ಹಿಡಿದಿರುವ ಕವಷ
ಹಿತವಚನ ನೀಡುವದೆ ಕಿವುಡನಿಗೆ ಹರುಷ?
ಕವಷ ಹೊರಟೇಬಿಟ್ಟ ನಿಲ್ಲದೆಯೆ ನಿಮಿಷ.

೪

ಋತದ ಕುಂಭದ ಹಾಗೆ ಬೆಳಗಿದನು ಚಂದ್ರ
ಎಲ್ಲಿರುವರಶ್ವಿನಿಗಳೆಲ್ಲಿಹನು ಇಂದ್ರ?
ಹಾಲು ಚೆಲ್ಲುವ ದಿಕ್ಕು ಎಲ್ಲೆಲ್ಲು ಹರುಷ
ನೆರಳಾಗಿ ನೋವಾಗಿ ಮರಳಿದನು ಕವಷ.
ಕಂದು ಬಣ್ಣದ ಕುದುರೆ ಏರಿದವ ಉರುಳಿ
ಸಾಲದಲಿ ಮುಳುಗಿದವ ಸೋಲಿನಲಿ ನರಳಿ
ಬಾಡಿಹೋಗಿರುವ ಮುಖ, ತೊಳಗಿರುವ ಕಣ್ಣು
ಎಣ್ಣೆ ಕಾಣದ ಕೂದಲಿಳಿದಿರುವ ಬೆನ್ನು
ತೊಗಲ ಬಾವಲಿಯಂತೆ ಚಿಂತೆಗಳು ಹಾರಿ
ಕರಿನೆರಳು ತುಂಡುಗಳ ಕಂಡು ಹೌಹಾರಿ.
ಸೋಲುಗಳ ಹಸಿಸೌದೆಯಂತೆ ಹೊಗೆಯಿಡುತ
ಗುಡಿಸಲಿಗೆ ಬಂದಿದ್ದ, ನಿಟ್ಟುಸಿರು ಬಿಡುತ
ಸದ್ದಿರದೆ ಸುಳಿವಿರದೆ, ನೋವುಗಳ ಮೌನ
ಬಿದ್ದಿರುವ ಹಾಲ್ಬೆಳಕು ಹನಿಗಳಲಿ ಲೀನ

ಒಳಗೆ ಯಾರೂ ಇಲ್ಲ, ಮನೆಯೆಲ್ಲ ಶೂನ್ಯ.
ತಾಯಿ ಹೆಂಡತಿ ತಾಳಲಾರದೆಯೆ ದೈನ್ಯ
ಎಲ್ಲಿಗೊ ತೆರಳಿದರು, ಹಿಡಿ ಅನ್ನ ಹುಡುಕಿ
ಸಂಸಾರವನು ಮುರಿದ ಕವಷನಿಗೆ ಮಿಡುಕಿ
ಮೂಲೆಯಲಿ ಮಡಗಿರುವ ಚಾಪೆಯನು ಬಿಡಿಸಿ
ಕವಷ ಮೈಯಿಕ್ಕಿದನು, ನಿದ್ರೆಯೊತ್ತರಿಸಿ.

೫

ಋತದ ರಥ ಚಕ್ರಗಳ ನುರುಳಿಸುತ ಬಂದ
ಸೂರ್ಯದೇವನು ನೀಡಿ ಸೃಷ್ಟಿಗಾನಂದ.
ಮುಗಿಲಿನಲಿ ಹಾರಿರುವ ಹಂಸಗಳ ಕಂಡು
ಹಾಲು ಧ್ವನಿಯೆತ್ತಿದವು ಗೋವುಗಳ ಹಿಂಡು
ಕೊರಳ ಹಗ್ಗವ ಬಿಚ್ಚಿದಂಥ ಕರುವಾಗಿ
ಗಾಳಿ ನೆಗೆದಾಡಿತ್ತು ಎಲ್ಲ ಕಡೆ ಓಡಿ
ಬಾಡಿದವು ನಕ್ಷತ್ರ, ಹೂ ಬಿಸಿಲು ಸುರಿದು
ಹಕ್ಕಿಗಳು ಮೇಳವಿಸಿ ಬಾನಿನೊಳಗಲೆದು
ಪ್ರಿಯವಾದ ಸವಿಯಾದ ಉಲುಹುಗಳು ಸುಳಿದು
ಬೆಳ್ಳಕ್ಕಿಗಳ ಹಾಗೆ ಕೊಳದಂಚಿಗಿಳಿದು,
ಕಣ್ಣು ತೆರೆದನು ಕವಷ, ಕುಕ್ಕಿರಲು ಬೆಳಗು.
ಗುಡಿಸಲವ ಸುತ್ತಿದವು ದಾಳ ಹೊರ ಒಳಗು.
ಅಂಕುಶಗಳಂತಿರುವ ದಾಳಗಳು ತಿವಿದು
ಇಕ್ಕಳಗಳಂತೆ ಕತ್ತರಿಸಿದವು ಹಿಡಿದು
ಕೆಂಡಗಳನೆಸೆದಂತೆ ಎಸೆಯಲು ದ್ಯುಲೋಕ
ದಾಳಗಳ ತೆಳಸಿಕ್ಕು ಬೆಂದವರ ಶೋಕ
ಕೈಗಳೆ ಇಲ್ಲದೆಯೆ ಹಾಕಿರುವ ಪೆಟ್ಟು
ಕಟ್ಟಿಗೆಗಳಿಲ್ಲದೆಯೆ ಹೃದಯಗಳ ಸುಟ್ಟು
ಉಧ್ವಸ್ತಗೊಳಿಸಿರಲು, ಕವಷ ಕೈ ಮುಗಿದು
ಗುಡಿಸಲಿಗೆ, ಹೊರಬಿದ್ದ ದಾರಿಯನು ಹಿಡಿದು.

೬

ಜೂಜು ಕಟ್ಟೆ ಸರ್ವಸ್ವ ತನ್ನದೆಂದು
ದಾಳದಾಟದಲಿ ಎಲ್ಲ ಕಳೆದುಕೊಂಡು
ಬಾಡಿ ಹೋದ ತಾವರೆಯ ಹಾಗೆ ಕವಷ
ಕೊಳದ ಅಲೆಗಳಂತಡಗಿ ಹೋದ ಹರುಷ
ಶುಭಸ್ವತಿಯ ರಸಕುಂಭವೊಡೆದು ಸೋರಿ
ಕೊಸರಿ ಹೋದ ಕೈ ಬೆರಳ ತುದಿಗೆ ಜಾರಿ
ತಪ್ಪಿಹೋದ ವಾತ್ಸಲ್ಯವಿತ್ತ ನೆಲೆಯು
ಬತ್ತದಿರುವ ವಿಶ್ವಾಸವಿತ್ತ ಸೆಲೆಯು
ಸಂತೆಗಿಳಿದ ಮುದಿ ಕುದುರೆಯಂತೆ ಅಲೆದು
ಸುಡುವ ಪಾಪಗಳ ಯಜ್ಞಕುಂಡಕಿಳಿದು
ಸುತ್ತ ನೋಡಿದನು ಶೂನ್ಯ ದೃಷ್ಟಿ ತಳೆದು
ದೈನ್ಯ ಕಡೆದ ಪುತ್ಥಳಿಯ ಹಾಗೆ ಕುಳಿತು
ಜನರ ಸದ್ದು ಸುಳಿವಿರದ ಜಗುಲಿಗೊರಗಿ
ಕಳೆದುಕೊಂಡ ವ್ಯಾತ್ಸಲ್ಯದೆಳೆಗೆ ಮರುಗಿ
ಕವಷನಲೆದ ನಿರ್ಗತಿಕನಂತೆ ನೊಂದು
ಒಮ್ಮೆ ಕುಳಿತು ಮತ್ತೊಮ್ಮೆ ಎದ್ದು ನಿಂತು
ಸ್ನೇಹವೃಕ್ಷಗಳ ಮುರಿದ ಗೂಡು ನೆನೆಸಿ
ತೆರೆದ ಗರಿಯ ನೆಮ್ಮದಿಯ ನೆಲೆಯ ಬಯಸಿ
ಕಳೆದುಕೊಂಡು ಸಂಪತ್ತು ಪ್ರೀತಿ ಹರುಷ
ಉದುರಿ ಬಿದ್ದ ಎಲೆಯಂತೆ ಆದ ಕವಷ

೭

ಬೆಳಕಿಗಂಜಿ ಕತ್ತಲೆಯ ನಾಡನಲೆದು
ಮನದ ಮೌನ ಭಯ ನೆರಳು ನಂಜು ಕವಿದು
ಕಂಡ ಕಂಡ ಮನೆಯಲ್ಲಿ ಜಗುಲಿಗೊರಗಿ
ಬೆನ್ನು ಬಿಡದ ಋಣಭಾರದಡಿಗೆ ಸೊರಗಿ
ಅಟ್ಟುತಿರಲು ದುರ್ದೈವ ಬಾಯಿ ತೆರೆದು

ದಾರಿ ತಪ್ಪಿ ಚಡಪಡಿಸಿ ದೂರ ಸಿರಿದು
ಅಲ್ಲಿ ನಿಂತು, ತುಸು ಇಲ್ಲಿ ಕೂತು ಕವಷ
ಕಾಡಿನಲಿ ಕಾಲಿಟ್ಟನೊಂದು ನಿಮಿಷ
ಪಾಪ ವೃಕ್ಷಗಳು ಬೆಳೆದು ನಿಂತ ಕಾಡು
ಆಗ ಈಗ ಮರೆಯಾಗುತಿರುವ ಹಾಡು
'ಅರಣ್ಯಾನಿಯೆ ಹಾದಿ ತಪ್ಪಿತೆಮಗೆ
ದಾರಿ ತಪ್ಪಿತೆ ನನ್ನ ಹಾಗೆ ನಿನಗೆ?
ಊರದಾರಿ ಇನ್ನಾವುದೆಂದು ನೀನು
ಹೇಳಬಾರದೆ? ನಿನಗೂ ಭಯವೊ ಏನು?
ಹಸುಗಳಿಲ್ಲಿ ಮೇಯುತಿಹ ಸದ್ದು, ಅಲ್ಲಿ
ಮನೆಯ ಹಾಗೆ ಕಂಡಿಹುದು ಮಬ್ಬಿನಲ್ಲಿ
ಬಂಡಿಯಂತೆ ಕಿರುಗುಡುತ ಕಾಡಿನಲ್ಲಿ
ಕೇಳಿಹುದು ಸದ್ದು, ಒಬ್ಬೊಬ್ಬಗೊಂದು ಇಲ್ಲಿ
ಓ, ಅರಣ್ಯಾನಿ, ಮೃಗಗಳಿಗೆ ತಾಯಿ ಶರಣು
ಗೂಡು ಹಕ್ಕಿಯನು ಸಲಹುವಂತೆ ಸಲುಹು.'

೮

ಕಾಡಿನಲಿ ಚಳಿ ಮೌನದಲಿ ಕವಷ ನಡುಗಿ
ದಾಳಗಳು ತಂದಿರುವ ದುರ್ದೆಸೆಗೆ ಮರುಗಿ
ಮರದಡಿಗೆ ಹೊತ್ತಿಸಿದ ಉರಿಗೆ ಮೈ ಕಾಸಿ
ನೆನಪುಗಳ ಒಲುಮೆಗಳ ದುಪ್ಪಟಿಯ ಹಾಸಿ
'ಅಗ್ನಿಯೆ ನನ್ನೊಡನೆ ಸಪ್ತಪದಿ ನಡೆದು
ಸಹನೆಯಲಿ ಬಾಳಿದಳು ನನ್ನ ಕೈವಿಡಿದು
ದ್ಯೂತದಲಿ ಸಾಲದಲಿ ಮುಳುಗಿಸಿದೆ, ಮುಳುಗಿ
ಆದರೂ ಮುನಿಯದಲೆ ಪ್ರೀತಿಯಲಿ ಕೊರಗಿ
ಮಿತ್ರರಲಿ ನನ್ನಲ್ಲಿ ತೋರಿದಳು ಸಹನೆ,
ನಿತ್ಯವೂ ಸೋಲುಗಳ ಹಸಿವುಗಳ ಛಲನೆ
ಅಳುವವಳ ಹೊರದೂಡಿ ಎಲ್ಲೆಲ್ಲೊ ಅಲೆದ

ಬೇರಿರದ ಬದುಕಿನಲಿ ಕಷ್ಟಗಳ ಗಾಳಿ
ಬೀಸಿದರೂ ಅಸಹಾಯ ದೈನ್ಯದಲಿ ಬಾಳಿ
ಮೊಲೆ ಹಾಲನುಂಡವನ ಆಗಾಗ ನೆನೆದು
ಹರಿಯುವವು ತಾಯೊಡಲ ಕಂಬನಿಗಳಿಳಿದು
ದಾಳಗಳು ನುಂಗಿದವು ನನ್ನ ಧನ ಧಾನ್ಯ
ಪಗಡೆಗಳ ಪಟ್ಟದಲಿ ನನ್ನ ಮನೆ ಶೂನ್ಯ.
ದಾಳಗಳೆ ಇನ್ನೆಂದು ಹಾಕದಿರಿ ನೆರಳು
ನಮ್ಮನ್ನು ಬಿಟ್ಟುಬಿಡಿ ನಿಮಗಿದೊ ಶರಣು'
ಕಾಡಿನಲಿ ಕೂಗಿದನು ಕವಷ ಕೈಮುಗಿದು.

೬

ವೃಕ್ಷಗಳ ಜಡಮೌನ ಹೊದಿಕೆಯನು ತೆರೆದು
ಪಕ್ಷಿಗಳ ಕೊರಳಿನಲಿ ಕಾರಂಜಿ ಸುರಿದು
ಸತ್ಯದಲಿ ಧರ್ಮದಲಿ ಋತದ ರಥ ನಡೆಸಿ
ಪರಿಮಳದ ಕಣ್ಣುಗಳನಲ್ಲಲ್ಲಿ ತೆರೆಸಿ
ಬಂದನು ಸವಿತೃ. ಬೆಳಕಾಗಿ ಜಗದೀಶ
ಆಲಿಸುವ ಕಿವಿಗಳಿಗೆ ನೀಡಿ ಉಪದೇಶ
'ಓ, ಜೂಜುಗಾರನೆ ಆಡದಿರು ದ್ಯೂತ
ದಾಳಗಳು ಕುಣಿಯುವಲ್ಲಿಹದಧಃಪಾತ,
ನೇಗಿಲವ ಹಿಡಿದು ಓಲೈಸು, ಕೃಷಿ ಮಾಡು
ಮಣ್ಣಿನಲಿ ಹಾಲುತೆನೆ ಬಂಗಾರ ನೀಡು
ಸುಖವನೆ ಹಿಂಡುವವು ಗೋವುಗಳು ನಿನಗೆ
ಶುಭಗಳೆ ಸಿಂಗರಿಸಿ ನುಗ್ಗುವವು ಮನೆಗೆ
ಎಂದಿಗೂ ಜೂಜಾಡದವನ ಮನೆಯನರಸಿ
ಹರ್ಷಗಳು, ಸೊಬಗುಗಳು ಬರುವವು ನೆಲೆಸಿ
ಅಲ್ಲಿಹುದು ಸಂಸಾರ ಸುಖವು, ಸಂಪದವು.
ಅಲ್ಲಿಹುದು ಇಹಪರವು, ಅಲ್ಲಿ ಮಂಗಳವು.
ದಾಳಗಳು ದೂರಪಿರ, ಹತ್ತಿರಕೆ ಬಂದು
ಒಡನಾಡಿ ನಲಿಯುವರು ದೇವತೆಗಳೆಂದು

ಸವಿತೃವೆ ಹೇಳಿದನು ಕಿವಿಮಾತನೊಂದು
ಸೋಮ ಸತ್ರಕೆ ತೆರಳು ಓ, ಕವಷ' ಎಂದು.

೧೦

ಬಂದವಳ ಬೆಂದವರ ಕಷ್ಟಗಳ ಕಳೆದು
ನೊಂದವರ ಮಿಂದವರ ಮೈ ಮನವ ತೊಳೆದು
ಅಲೆಗಳಲಿ ಅಮೃತರ ಸ್ನೇಹವನು ನೀಡಿ
ರಸತಮೆ ಸರಸ್ವತಿಯ ತೀರದಲಿ ಕೂಡಿ
ಭೃಗ್ವಾಂಗಿರಸ ಗೃತ್ಸಮದ ಭರದ್ವಾಜ
ವಶಿಷ್ಠ ವಿಶ್ವಾಮಿತ್ರ ಅತ್ರಿ ಋಷಿಯೋಜ
ವಾಮದೇವಾದಿ ಮಾಧ್ಯಮ ವೃಂದ ಕುಳಿತು
ಸೋಮ ಸತ್ರದ ದಿವ್ಯ ದೀಕ್ಷೆಯನು ತಳೆದು
ಇಂದ್ರನನು ಮಿತ್ರನನು ವರುಣನನು ಕರೆದು
ಬ್ರಹ್ಮಣಸ್ಪತಿ ಅಗ್ನಿಪೂಷನ್‌ರ ಕರೆದು
ಸವಿತೃವನು ವಿಷ್ಣುವನು ಸೂರ್ಯನನು ಕರೆದು
ಅಶ್ವಿನಿಗಳನು ಮರುದ್ಗಣಗಳನು ಕರೆದು
ದಧಿ ಮಿಶ್ರ ಸೋಮಗಳ ಅಗ್ನಿಯಲಿ ಸುರಿದು
ಋತ್ವಿಜರು ಹಾಡಿದರು ಅನಿಮಿಷರ ಕರೆದು
ಸ್ವರ್ಣರಥದಲಿ ಕುಳಿತು ಸೋಮಗಳ ಕುಡಿದು
ಫಣಿಗಳನು ಸಂಹರಿಸಿ ಗೋವುಗಳ ಪಡೆದು
ಗಿರಿಯ ಗರಿ ಕತ್ತರಿಸಿ ಅಹಿಯ ಸಂಹರಿಸಿ
ಹರಿವ ಜಲ ಬಿಗಿದಿರುವ ಬಂಧನವ ಬಿಡಿಸಿ
ಸುರಿವ ಜಲ ಬಿಗಿದಿರುವ ಬಂಧನವ ಬಿಡಿಸಿ
ನೆಲಮುಗಿಲು ನಡುಗಿಸಿದ ಇಂದ್ರನಿಗೆ ಸ್ವಾಹಾ

೧೧

ಹಾಡುಗಳ ಹವಿಯಿಡಲು ಸುರರೊಡನೆ ಬಂದು
ಮುದವೀವ ಶುಭವೀವ ಧನವೀವನೆಂದು

ಕೈ ಹಿಡಿದು ದಾಟಿಸಿ ಅಪಾರ ಭವ ಸಿಂಧು
ತಾಯಿಯೊಲು ತಂದೆಯೊಲು ಸಲಹುವವನೆಂದು
ಬಲವೀವ ಓ, ಬ್ರಾಹ್ಮಣ ಸ್ಪತಿಯೆ ಸ್ವಾಹಾ.
ಮಿಂಚಿನಲಿ ಹುಟ್ಟಿದವ, ನೀರಿನಲಿ ಹುದುಗಿ
ಮಾತರಿಶ್ವನಿಗೊಲಿದು ಮನೆ ಮನವ ಬೆಳಗಿ
ಹವ್ಯ ವಾಹನ ಅಗ್ನಿದೇವನಿಗೆ ಸ್ವಾಹಾ.
ಋತದ ಕುಂಭವ ಹಿಡಿದು ಹೊಳೆಗಳನು ಹರಿಸಿ
ಅಂತರಿಕ್ಷವ ಹಾಸಿ ನಕ್ಷತ್ರ ಸುರಿಸಿ
ಶುಭ ಕರ್ಮ ಪ್ರೇರಿಸುವ ವರುಣನಿಗೆ ಸ್ವಾಹಾ.
ಎಲ್ಲೆಲ್ಲಿಯೂ ನಿಂತು ಎವೆ ತೆರೆದು ನೋಡಿ
ಹೃದಯ ಪುಷ್ಪಗಳಲ್ಲಿ ಸ್ನೇಹ ರಸ ನೀಡಿ
ಅಗ್ನಿರಥದಲ್ಲಿ ಕುಳಿತು, ವರುಣನೊಡಗೂಡಿ
ನೆರವೀವ ಸುಖವೀವ ಮಿತ್ರನಿಗೆ ಸ್ವಾಹಾ.
ಇರುಳಿನಲಿ ಕಣ್ಣೆವೆಯ ಕದಗಳನು ಮುಚ್ಚಿ
ಬೆಳಗಿನಲಿ ಪರಿಮಳದ ಗಂಟುಗಳ ಬಿಚ್ಚಿ
ದಿಕ್ಕುಗಳ ಬೆಳೆಗಿಸುತ, ತಾರೆಗಳ ತವರಿ
ಋತ್ವಿಜರು ಬೀಸಿರಲು ಹಾಡುಗಳ ಚವರಿ
ಬಂಗಾರ ಕೂದಲಿನ ಸೂರ್ಯನಿಗೆ ಸ್ವಾಹಾ.

೧೨

ಉಷೆಯ ಗರ್ಭದಿ ಬಂದು ಜನರನೆಚ್ಚರಿಸಿ
ಪಯಣಿಗರ ಪೊರೆದು, ಜಿಪುಣರನು ಕಂಗೆಡಿಸಿ
ಧನವೀವ ಸುಖವೀವ ಪೂಷನ್‌ಗೆ ಸ್ವಾಹಾ.
ಅಮೃತದ ನೆಲೆ ಸುಖದ ಸೆಲೆಯಾಗಿ ಸುಳಿದು
ಬ್ರಹ್ಮಾಂಡವನೆ ಮೂರು ಹೆಜ್ಜೆಯೊಳಗಳೆದು
ಅದ್ಭುತವೆ ಮೈತಳೆದ ವಿಷ್ಣುವಿಗೆ ಸ್ವಾಹಾ.
ಹಕ್ಕಿಗಳ ಚಿಕ್ಕೆಗಳ ಸುಳಿದಾಟಿ ನಿಂದು
ಯಾರಿಗೂ ಕಾಣದೆಯೆ ಎಲ್ಲರನು ಕಂಡು

ಬೆಳೆದಿರುವ ಇಂದ್ರಸಖ ವಿಷ್ಣುವಿಗೆ ಸ್ವಾಹಾ.
ಹೊಂದೇರಿನಲಿ ಕುಳಿತು ನಭದಿ ಸಂಚರಿಸಿ
ಎಲ್ಲನರು ಎಬ್ಬಿಸುತ ಹೊಂಬಿಸಿಲು ತೊಡಿಸಿ
ಹೊಂಬೆಳಗಿನಮೃತವ ಜೀವರಿಗೆ ಉಣಿಸಿ
ಋತದ ಕಣ್ಣಾಗಿಹ ಸವಿತೃವಿಗೆ ಸ್ವಾಹಾ.
ಕಂದು ಬಣ್ಣದ ಶಹಲು ಸಂಜೆಯಲಿ ಹೊದೆದು
ಧೂಳಿಯಿಲ್ಲದ ಹೊಳೆಯ ದಾರಿಯಲಿ ಇಳಿದು
ತಾರೆಗಳ ತಿರುಗಿಸುವ ಸವಿತೃವಿಗೆ ಸ್ವಾಹಾ.
ಹಂಸಗಳ ತೇರಿನಲಿ ಹಗಲಿರುಳು ಚರಿಸಿ
ಬಿದ್ದವರನುದ್ಧರಿಸಿ ಕಂಬನಿಗಳೊರಸಿ
ಕರೆದವರ ಕಷ್ಟಗಳ ಮುಪ್ಪುಗಳ ಬಿಡಿಸಿ
ಮಧುಮಂತ ಅಶ್ವಿನೀ ಕುವರರಿಗೆ ಸ್ವಾಹಾ.

೧೩

ಬೆಟ್ಟಗಳ ತಿರುಗಿಸುತ ಕಡಲುಗಳ ಕಡೆದು
ಬಣ್ಣಗಳ ಧೂಳಿಗಳನೆರಚಿ ಮುನ್ನಡೆದು
ಮಿಂಚುಗಳ ಕುಣಿಸುವ ಮರುತರಿಗೆ ಸ್ವಾಹಾ.
ತಡೆ ಹಿಡದ ವೃಕ್ಷಗಳ ಬುಡಮೇಲುಗೊಳಿಸಿ
ಮೋಡಗಳ ಗಂಭೀರ ಮದ್ದಳೆಯ ನುಡಿಸಿ
ವೃಷ್ಟಿಗಳ ಕರುಣಿಸುವ ಮರುತರಿಗೆ ಸ್ವಾಹಾ.
ಸತ್ಕರ್ಮ ಪಥದಲ್ಲಿ ಸತ್ಯರಥ ನಡೆಸಿ
ಜ್ಞಾನಬಲ ತಪದ ಬಲ ಮಂತ್ರಬಲ ಗಳಿಸಿ
ಋಜುಭಕ್ತ ರಥಕಾರ ಋಜುಗಳಿಗೆ ಸ್ವಾಹಾ.
ಎಲ್ಲ ಕಡೆಗಲೆಯುವನು ಎಲ್ಲಿವನ ಇರವು?
ಕೇಳುತಿದೆ ಕಾಣಿಸದು ದೇವತೆಗಳುಸಿರು.
ಬಲಪೂರ್ಣ ಪವಮಾನ ದೇವನಿಗೆ ಸ್ವಾಹಾ.
ಸುಂದರ ಸುಗಂಧಿ ಶಿವ, ರುಜಿನಗಳ ಕಳೆದು
ಪುಷ್ಟಿಗಳ ನೀಡುವ ತ್ರಿಶೂಲವನು ಪಿಡಿದು

ಕರುಣಾಳು ಶಂಭು ತ್ರಿಯಂಬಕಗೆ ಸ್ವಾಹಾ.
ಋತ್ವಿಜರು ಹೋಮಾಗ್ನಿಯಲಿ ಸೋಮ ಸುರಿದು
ಹವಿಯೆತ್ತಿ, ಕೊರಳೆತ್ತಿ ಹಾಡಿದರು ಕರೆದು
ನರುಗಂಪು ವ್ಯಾಪಿಸಲು ಎಲ್ಲ ಕಡೆ ಸುಳಿದು
ಯಜ್ಞಶಾಲೆಗೆ ಬಂದ ಮೆ...ಲ್ಲ...ನೆ... ನುಸುಳಿ
ಕವಷ ಐಲೂಷ... ಹ...ಸಿ...ವೆ...ಯ...ಲಿ, ಬ.ಳ.ಲಿ.

೧೪

ಒಳನಟ್ಟ ಕಣ್ಣುಗಳು ತಗ್ಗಿಸಿದ ತಲೆಯು
ಹಸಿವೆಗಳು ಬಳಲಿಕೆಯು, ಒಳಗೊಂದು ಒಲೆಯು
ಇಲ್ಲಿರುವದೆಲ್ಲವೂ ನಡೆದಿಹುದು ಮೇಲೆ.
ಋಚೆಗಳು, ಬೆಂಕಿಗಳು, ಈ ಧೂಮಮಾಲೆ
ತನ್ನೊಬ್ಬನನು ಬಿಟ್ಟು; ತಾನೊಬ್ಬ ಕೆಳಗೆ
ಗಿಳಿವಿಂಡು ಹಾರಿರಲು ಹಣ್ಣುಗಳ ಹುಡುಕಿ
ಗಿಡುಗ ಸುತ್ತಾಡಿತ್ತು ಆಗಾಗ ಧುಮುಕಿ
ಬಿರಿಯುತಿಹ ಬಂಡೆಗಳ, ಬೆಟ್ಟಗಳ ಸದ್ದು
ದಾಳಗಳು ನೆರಳಿನಲಿ ಕುಣಿದಿರುವವೆದ್ದು
ಬಂಗಾರದುರಿಯಡಗಿ, ಕೆಂಪು ಹಸಿರಡಗಿ
ಕುಣಿಯುತಿವೆ ಹೋಮಾಗ್ನಿ ನೀಲಿಮೆಗೆ ತಿರುಗಿ
ಅಂಜಿಕೆಯ ಕಡಲಂಚು ಅಲೆದಾಡಿ ಬಂದು
ಹೊಂಬಿಸಿಲು ಕಾಸುತಿದೆ ಬೆಳ್ಳಕ್ಕಿಯೊಂದು
ಪುಣ್ಯಗಳ ಗಾಳಿಯಲಿ ನಡೆದ ತರಗೆಲೆಯು
ಪಾಪಗಳ ಪದರದಲಿ ಪುಟಿದೆದ್ದ ಸೆಲೆಯು
ಕಣ್ಮರೆಸಿ ನೋಡಿದನು ದಿವ್ಯಾಗ್ನಿಯುರಿಯ
ಕೇಳದಲೆ ಕೇಳಿದನು ಮಂತ್ರಗಳ ಕರೆಯ
ಸೋಮಗಳು ಕೂಗಿದವು, 'ಏಳಯ್ಯ ಕವಷ'
ಹೋಮಾಗ್ನಿ ಕೂಗಿದವು, 'ಏಳಯ್ಯ ಕವಷ'
ಋತ್ವಿಜರು ಕೂಗಿದರು, 'ಏಳಯ್ಯ ಕವಷ'

೧೫

ಸೋಮಪತ್ರ ನಡೆದಲ್ಲಿ ನುಸುಳಿಸಿಕೊಂಡು
ಕುಳಿತ ಕವಷ ಐಲೂಷನನ್ನು ಕಂಡು
ನುಗ್ಗಿ ಬಂದು ಋತ್ವಿಜರು, ಕೋಪಗೊಂಡು
ಹುಲಿಯ ಚರ್ಮಗಳ ತೊಟ್ಟು ಸುತ್ತವರಿದು
ನುಡಿಯ ಕೊಳ್ಳಿಗಳ ಬೀಸಿ ಕೆಂಡ ಸುರಿದು
ಕೂಗಿ ಹೇಳಿದರು, ''ಕವಷ ತೊಲಗು ಬೇಗ
ಜೂಜು ಕಟ್ಟೆಯೇನಯ್ಯಾ ಸೋಮಯಾಗ?
ಓ ಶೂದ್ರ ಕವಷ, ಇಲ್ಲಿಂದ ಬೇಗ ತೊಲಗು
ಓ ದಾಸಿ ಪುತ್ರ ಇಲ್ಲಿಂದ ಬೇಗ ತೊಲಗು
ಓ ಜೂಜುಗಾರ ಇಲ್ಲಿಂದ ಬೇಗ ತೆರಳು
ಬೀಳದಿರಲಿ ಇಲ್ಲೆಲ್ಲೂ ನಿನ್ನ ನೆರಳು.''
ಕ್ರುದ್ಧರಾದ ಋತ್ವಿಜರು ನುಗ್ಗಿ ಬಂದು
''ಎದ್ದು ಹೋಗು. ಏಳಯ್ಯ ಕವಷ'' ಎಂದು
ಕೂಗುತಿರಲು ಕಂಗೆಟ್ಟು ನಿಂತುಕೊಂಡು
ಹಸವಿನೊಂದು ಉರಿ, ಹಾಡಿನೊಂದು ಉರಿಗೆ
ದೈನ್ಯದೊಂದು ಉರಿ, ಸಹನೆಯೊಂದು ಉರಿಗೆ
ಅನ್ನ ನೀರು ಕಂಡಿರದ ಒಡಲಿನೊಳಗೆ
ಗಂಟಲಾರಿ ಹೌಹಾರಿ ಕವಷ ನೊಂದು
ಬೇಡಿಕೊಂಡ ಕೈ ಮುಗಿದು ಮುಂದೆ ಬಂದು,
''ನೀರು ಕೊಡಿರಿ ಒಂದಿಷ್ಟು ನೀರು'' ಎಂದು.

೧೬

ಎಣ್ಣೆ ನೀರು ಕಂಡಿರದ ಕೂದಲಿಳಿದು
ಹೆಗಲ ಬಳಿಗೆ ಜೋತಾಡುತಿರಲು ಸುಳಿದು
ಮಾಸಿದಂಥ ಮೈ ಮಾಸಿದಂಥ ಉಡುಗೆ
ಬಾಡಿಹೋದ ಮುಖ, ದಾಹತಪ್ತನ ಒಳಗೆ
ಕಡಿದು ಹೋದ ಬಾಂದವ್ಯದೆಳೆಗೆ ತೂಗಿ

ಶುಭದ ಹೊಳೆಯ ಹುಡುಕಿರುವ ಮೀನವಾಗಿ
''ನೀರು ಕೊಡಿರಿ ಒಂದಿಷ್ಟು ನೀರು'' ಎಂದು
ಬತ್ತಿಹೋದ ಕನಿಕರದ ತೊರೆಗೆ ಬಂದು
ಕೇಳುತಿರಲು, ಋತ್ವಿಜರು ನುಡಿದರವಗೆ,
''ಇಲ್ಲಿ ಸಿಗದು ಹನಿ ನೀರು ಕೂಡ ನಿನಗೆ.''
ನುಡಿಯ ಕೇಳಿ ಕೈ ಮುಗಿದು ನಿಂತುಕೊಂಡು
ಕರಗದಂಥ ಬಿರುಬಂಡೆಗಲ್ಲು ಕಂಡು
ಯಜ್ಞವಾಟಿಯನು ದಾಟಿ ಹೊರಗೆ ಬಂದು
ಹೊಳೆಗೆ ಬಂದ, ರಸತಮೆಗೆ ಬಂದ ಕವಷ
ದಿವ್ಯ ಆಪಗಳ ಹೊಳೆಗೆ ಬಂದ ಕವಷ
ಮಧುಮಂತ ಆಪಗಳ ಹೊಳೆಗೆ ಬಂದ ಕವಷ,
ಘೃತದ ಆಪಗಳ ಹೊಳೆಗೆ ಬಂದ ಕವಷ
ಋತದ ಆಪಗಳ ಹೊಳೆಗೆ ಬಂದ ಕವಷ
ಅಮೃತ ಆಪಗಳ ಹೊಳೆಗೆ ಬಂದ ಕವಷ
ಋಷಿಗಳೆಲ್ಲ ಗುಡುಗಿದರು, ನಿಲ್ಲು ಕವಷ

## ೧೭

ರಸತಮೆ ಸರಸ್ವತಿಯ ಬಳಿಗೆ ನಡೆದುಕೊಂಡು
ಹೊರಟ ಕವಷ ಐಲೂಷನನ್ನು ಕಂಡು
ನುಗ್ಗಿ ಬಂದು ಋತ್ವಿಜರು ಕೋಪಗೊಂಡು
ಹುಲಿಯ ಚರ್ಮಗಳ ತೊಟ್ಟು ಸುತ್ತುವರಿದು
ನುಡಿಯ ಕೊಳ್ಳಿಗಳ ಬೀಸಿ ಕೆಂಡ ಸುರಿದು
ಕೂಗಿ ಹೇಳಿದರು, ''ಕವಷ ಮುಟ್ಟಬೇಡ.
ಸರಸ್ವತಿಯ ಹನಿ ನೀರು ಮುಟ್ಟಬೇಡ.
ದಿವ್ಯ ಆಪಗಳ ಹನಿಯ ಮುಟ್ಟಬೇಡ.
ಮಧುಮಂತ ಆಪಗಳ ಹನಿಯ ಮುಟ್ಟಬೇಡ.
ಘೃತದ ಆಪಗಳ ಹನಿಯ ಮುಟ್ಟಬೇಡ.
ಋತದ ಆಪಗಳ ಹನಿಯ ಮುಟ್ಟಬೇಡ.

ಅಮೃತದ ಆಪಗಳ ಹನಿಯ ಮುಟ್ಟಬೇಡ.
ಇಲ್ಲಿ ನಿನಗೆ ಹನಿ ನೀರು ಕೂಡ ಸಿಗದು
ಲೋಕ ಪಾವನೆಗೆ ಸೋಕದಿರಲಿ ನೆರಳು.
ಪುಣ್ಯ ನದಿಯ ನೀ ತೊರೆದು ದೂರ ತೆರಳು.''
ನುಡಿಯ ಕೇಳಿ ಕೈ ಮುಗಿದು ನಿಂತುಕೊಂಡು
ಗಂಟಲೊಣಗಿ ಕಣ್ತುಂಬ ನೀರು ತಂದು
ನೆಟ್ಟ ನೋಟದಲಿ ನದಿಯ ನೀರು ಕಂಡು
ದಿವ್ಯವಾಹಿನಿಗೆ 'ನಮೋ' ಎಂದುಕೊಂಡು
ದಾಹತಪ್ತ ಕೊರಳೆತ್ತಿ ಕರೆದನಂದು.

## ೧೮

ಯಾವ ಸೂರ್ಯ ಸುಡುವನೊಳಗೆ
ಯಾವ ಬೆಂಕಿ ಉರಿದಿದೆ?
ತಾರೆಗಳನು ಸೂರೆ ಮಾಡಿ
ಸತ್ರಯಾಗ ಮೆರೆದಿದೆ?
ವಿಶ್ವಗಳನು ಸೃಷ್ಟಿಸುತ್ತ
ಕಲ್ಪ ಕಲ್ಪ ತಿರುಗಿಸಿ
ಬ್ರಹ್ಮಾಂಡಗಳನ್ನು ಲಯದ
ಕುಳಿಗಳಲ್ಲಿ ಕರಗಿಸಿ,
ಸಪ್ತ ಋಷಿಗಳಲ್ಲಿ ಸೇರಿ
ಯಾವ ಹವಿಯನೀವರು?
ಯಾವ ಋಚೆಗಳನ್ನು ಹಾಡಿ
ನಮ್ಮನ್ನೆಲ್ಲ ಕಾವರು?
ಯಾವ ಬೆಂಕಿಯಿಂದ ಸಿಡಿದವಿಲ್ಲಿ
ಬೆಳಕು ಸಾಸಿವೆ.
ಜ್ಯೋತಿರ್ಮಯ ದ್ಯೂತಕಾಗಿ
ನೀಲಪಟವ ಹಾಸಿವೆ?
ತಣಿಸುವಂಥ ತವಕದಲ್ಲಿ

ಹಗಲಿರುಳನು ಬಾಚಿವೆ?
ತಣಿಸುವಂಥ ದಾಹದಲ್ಲಿ
ದಿಙ್ಮಾಲಿಗೆ ಚಾಚಿವೆ.

## ೧೯

ಓ ಸೂರ್ಯದೇವನೆ ಋತದರಸವೆರೆದು
ಸಲುಹಿರುವೆ ಜೀವ ಕುಲ ನೆಲಮುಗಿಲನಳೆದು
ಸೂರ್ಯಚಂದ್ರಮರ ತಾರೆಗಳ ನೆಲೆ ಮುಗಿಲು
ಹೊಳೆ ಬೆಟ್ಟ ಕೊಳ್ಳ ಕಡಲುಗಳ ನೆಲೆ ನೆಲವು
ನಕ್ಷತ್ರಗಳ ಮುಗಿಲ ನೆಲೆಯಹುದು ಋತವು
ಋತದುಸಿರ ನೆಲೆಯಹುದು ಮಧುಮಂತ ಋಚೆಯು
ಓ ನೆಲವೆ, ಓ ಮುಗಿಲೆ ಆಲಿಸಿರಿ ಮೊರೆಯ
ನೀರಡಿಸಿ ಕರೆಯುತಿಹ ಕವಷನೀ ಕರೆಯ
ಮೋಡಗಳೆ ಆಪಗಳೆ ಆಲಿಸಿರಿ ಮೊರೆಯ
ನೀರಡಿಸಿ ಕರೆಯುತಿಹ ಕವಷನೀ ಕರೆಯ
ಓ ಋತವೆ ಹರಿಸಿ ಬಿಡು ಕರುಣೆಯ ಹೊಳೆಯ
ಓ ಋಚೆಯೆ ಸುರಿಸಿ ಬಿಡು ಅಮೃತದ ನುಡಿಯ
ಮೈಗೊಂದು ನೆರಳಿಹುದು ಮನಕೊಂದು ಪಾಪ
ನೀರಡಿಸಿ ಬಂದವರಿಗೆಲ್ಲ ಕೊಡು ಆಪ
ಇರುಳು ಇದ್ದಲ್ಲೆಲ್ಲ ಇಡು ಒಂದು ದೀಪ
ಓ ಹೊಳೆಯ ತಣಿಸಿ ಬಿಡು ಕವಷನೊಳತಾಪ
ಗದ್ಗದಿತ ಕಂಠದಲಿ ಹಾಡಿದನು, ''ಹೊಳೆಯೆ
ನೀರು ಕೊಡು, ನೀರು ಕೊಡು, ಓ ಸರಸ್ವತಿಯೆ !''

## ೨೦

ನೀರಡಿಸಿ ಬಂದಿರುವೆ ಓ ಸರಸ್ವತಿಯೆ
ನೀರು ಕೊಡು ಕವಷನಿಗೆ, ನೀರು ಕೊಡು ಹೊಳೆಯೆ
ಬೆಂಕಿಯುಳ್ಳವರ ಬಳಿ ನೀರಿಹುದು ತಾಯಿ

ನಮಗು ತುಸು ಬೆಂಕಿಯಿದೆ, ನಮಗು ಇದೆ ಬಾಯಿ
ಇವರಂತೆ ನಮಗು ಇದೆ ಆಸೆಗಳ ದೇಹ
ಇವರಂತೆ ನಮಗು ಇದೆ ದಿವ್ಯಗಳ ದಾಹ.
ಕರುಣಾಳು ಓ ಹೊಳೆಯೆ ದಾಹಗಳ ತಣಿಸು
ಓ ಸರಸ್ವತಿಯೆ ಬಾ, ಕವಷನನು ನಲಿಸು,
ಮೀನುಗಳು ಪಡೆದಿಹವು ರಸತಮೆಯ ಆಪ.
ಹಕ್ಕಿಗಳು ಕುಡಿದಿಹವು ರಸತಮೆಯ ಆಪ. .
ಗೋವುಗಳು ಕುಡಿದಿಹವು ರಸತಮೆಯ ಆಪ.
ಸಸ್ಯಗಳು ಕುಡಿದಿಹವು ರಸತಮೆಯ ಆಪ.
ನನಗಿಲ್ಲವೇ ತಾಯಿ ಅಮೃತದ ಆಪ?
ತೊಳೆದು ಬಿಡು ಓ ತಾಯಿ ಈ ಮೈಯ ಪಾಪ
ಕಡಲನೆ ಕುಡಿದವರು ಹೊಳೆಗಿಳಿಯಲಿಲ್ಲ,
ಹೊಳೆಗಳನು ಹಿಡಿದವರು, ಅಲೆ ತಿಳಿಯಲಿಲ್ಲ.
ಋಚೆಗಳನು ಕಂಡವರು ಋತವರಿಯಲಿಲ್ಲ.
ಕರುಣಾಳು ಓ ಹೊಳೆಯೆ, ದಾಹಗಳ ತಣಿಸು.
ಓ ಸರಸ್ವತಿಯೆ ಬಾ, ಕವಷನನು ನಲಿಸು
ಹೊಳೆಗೊಂದು ಹೃದಯವಿದೆ ಎಂಬುದನು ತಿಳಿಸು.

## ೨೧

ಗಂಟಲೊಣಗಿ ಕಣ್ತುಂಬ ನೀರು ತಂದು
ನೆಟ್ಟ ನೋಟದಲಿ ನದಿಯ ನೀರು ಕಂಡು
ದಿವ್ಯ ವಾಹಿನಿಗೆ 'ನಮೋ' ಎಂದುಕೊಂಡು
''ಓ ತಾಯೆ ನಿನ್ನ ಅಲೆವಾಲು ಕವಷಗುಣಿಸು
ಬೆಂದ ಕವಷನಿಗೆ ಬಿಂದು ಆಪ ಕುಡಿಸು
ತಂಪು ತೊಟ್ಟಿಲಿನ ಹೊಳೆಯೆ, ಹರಿದು ಬಂದು
ಬೆಂದ ಕವಷನಿಗೆ ನೀರು ನೀಡು'' ಎಂದು
''ದೇವ ನದಿಯೆ ದಯೆದೋರು'' ಎಂದು ಬೇಡಿ
ಅಂಗಲಾಚುತಿರೆ ಕವಷ ಹೊಳೆಯ ನೋಡಿ

ಹಾಲು ರೆಕ್ಕೆಗಳ ಬಿಡಿಸಿ ಮೆಲ್ಲನೇರಿ
ಸಾಲು ಸಾಲು ಬೆಳ್ಳಕ್ಕಿ ಮುಗಿಲ ಸೇರಿ
ಹಾಡಿದಂತೆ, ನಲಿದಾಡಿದಂತೆ, ಹರುಷ
ಬಂದು ತಟ್ಟುತ್ತಿರೆ ಎದೆಯ ಕದವ, ಕವಷ
ಮಂತ್ರ ಪಕ್ಷಿಗಳು ನುಡಿಯ ರೆಕ್ಕೆ ಬಿಡಿಸಿ
ಹಾರಿಬರಲು, ಸಾಲಿಡಿದು ಗೂಡನರಸಿ
ದಾಹಗೀಹಗಳನೆಲ್ಲ ದೂರವಿರಿಸಿ
ಹರ್ಷ ಪುಲಕದಲಿ ಹೊಳೆಯನೊಮ್ಮೆ ನೋಡಿ
ಕೊರಳೆತ್ತಿ ಕೈಯೆತ್ತಿ ಮುಗಿಲ ನೋಡಿ
ಅರಿವಿನಲ್ಲಿ ಮೈ ಮರೆತು ನಿಂತ ಹಾಡಿ

೨೨

ಸುತ್ತಿಗೊಂಡು ಮನದಂತೆ ವೇಗದಲಿ ಬಂದು
ಸೋಮಗಳು ಹರಿದಿರಲಿ ಜಲಗಳೊಳಗಿಂದು
ಇಂದ್ರನಿಗೆ ಮಿತ್ರನಿಗೆ ವರುಣನಿಗೆ ನೀಡು
ದೋಷಿಗಳ ನೆರಳಿರದ ಹೊಗಳಿಕೆಯ ಹಾಡು.
ಅಧ್ವರ್ಯುಗಳೆ ಹವಿಸ್ಸುಗಳಿಹವು ಬಳಿಗೆ
ಸೋಮಗಳ ಹಿಂಡುವ ಬಯಕೆ ಮನದೊಳಗೆ
ಓ ಸುಹಸ್ತಗಳೆ, ಅಧ್ವರ್ಯುಗಳೆ ಬೇಗ
ಸೋಮರಸ ಮೇಘಜಲದಲಿ ಬೆರೆಸಿರೀಗ
ಅಧ್ವರ್ಯುಗಳೆ, ನೀವು ಉದಕಗಳ ತರಲು
ತೆರಳಿರೈ ಕಾದಿಹುದು ನಿಮಗಲ್ಲಿ ಕಡಲು
ಅರ್ಚಿಸಿರಿ ದೇವಗೆ ಹವಿಸ್ಸುಗಳ ಸುರಿದು
ಅರ್ಚಿಸಿರಿ ಮಧುಮಂತ ಸೋಮಗಳ ಸುರಿದು
ಅಪಾಮ್‌ನಪಾತ್ ದೇವನೆ, ಉದಕಗಳ ನಡುವೆ
ಪ್ರಜ್ವಲಿಸಿ ಬೆಳಗುತಿಹೆ ಕಟ್ಟಿಗೆಗಳಿರದೆ
ಮೇಧಾವಿ ಋತ್ವಿಜರು, ಹಾಡು ಹವಿಯಿಡಲು
ಇಂದ್ರನಿಗೆ ಪುಷ್ಟಿಯನು ತುಷ್ಟಿಯನು ಕೊಡಲು

ಹಿಂಡುತಿಹ ಸೋಮದಲಿ, ಸೇರಿಸಲು ಒಡವೆ
ಮಧುಮಂತ ಉದಕಗಳ ನೀಡಯ್ಯ ನಮಗೆ.
ಅಪಾಮ್‌ನಪಾತ್ ದೇವನನು ಒಲಿಸಿರಲು ಅವನು,
ಮೋಡಗಳ ಸೆರೆಯೊಡೆದು ಜಲವ ಸುರಿಸುವನು.

೨೩

ರೂಪವತಿ ಯುವತಿಯರ ಜೊತೆ ಬಾಳಿ, ಜನರು
ನಲಿವಂತೆ, ಹರ್ಷಿಸುವ ಉದಕಗಳ ತರಲು
ಕಡಲಬಳಿ ತೆರಳಿರೈ, ಸೋಮರಸ ಬೆರೆಸಿ
ಉದಕಗಳ ಸೋಮಗಳನೊಂದಾಗಿ ಇರಿಸಿ
ಮೇಘಗಳ ಬಿಡಿಸಿದನು, ಸೆರೆಯಿಂದ ಇಂದ್ರ
ಧಾರೆಗಳ ಸುರಿದಾರಿ, ತೆರೆಸಿದನು ಇಂದ್ರ
ಮಧುಮಂತ ಧಾರೆಗಳ ಇಂದ್ರನಿಗೆ ಸುರಿಸಿ
ಅನಿಮಿಷರು ಹರ್ಷಿಸುವ ಸವಿಧಾರೆ ಬೆರೆಸಿ
ವಾಹಿನಿಗಳಾಗಿರುವ ಉದಕಗಳೆ ನಿಮಗೆ,
ಗರ್ಭದೊಲು, ಬುಗ್ಗೆಯೊಲು ಇಹನಿಂದ್ರನವಗೆ
ನೀಡಿರೈ ಆಜ್ಯಗಳ ಲೇಪಿಸಿದ ಜಲವ
ಧನವಂತ ಉದಕಗಳೆ ಆಲಿಸಿರಿ ಮೊರೆಯ
ವಾಹಿನಿಗಳಾಗಿರುವ ಉದಕಗಳ ಸುರಿಸಿ
ಮುದವೀವ ಮದವೀವ ನಿಮ್ಮ ಜಲರಾಶಿ
ಸೋಮನಲಿ ಸಂಗಮದ ಬಯಸಿರುವ ಜಲವ
ಇಂದ್ರನನು ತಣಿಸಲುದ್ಭವಿಸಿರುವ ಜಲವ
ವಾಹಿನಿಗಳಾಗಿರುವ ಉದಕಗಳ ಸುರಿಸಿ
ಮುದವೀವ ಮದವೀವ ನಿಮ್ಮ ಜಲರಾಶಿ.
ತ್ರಿಭುವನವನೆಲ್ಲಕಡೆ ಹಿಗ್ಗಿಸುವ ಜಲವ
ಸೆಲೆಯಾಗಿ ಯಜ್ಞದಲಿ ನೆಲೆಗೊಂಡ ಜಲವ.

## ೨೪

ಓ ಋಷಿಯೆ, ವಾಹಿನಿಗಳುಳ್ಳವರ ನಮಿಸು
ಆಗಾಗ ಹಿಂತಿರುಗಿ ಬರುವವರ ನಮಿಸು.
ಲೋಕಗಳ ಸೃಷ್ಟಿಸುವ ಉದಕಗಳ ನಮಿಸು
ಫಣಿಗಳಲಿ ಹೋರಾಡಿ ಗೋವುಗಳ ಪಡೆದು
ಮರಳಿರುವ ಇಂದ್ರನೊಲು, ಕ್ಷಿಪ್ರದಲಿ ನಮಿಸು.
ಅನಿಮಿಷರ ಮುದಕಾಗಿ, ಯಜ್ಞಗಳ ಮಾಡು
ಧನಲಾಭಕ್ಕಾಗಿ ನುಡಿಪುಷ್ಪಗಳ ನೀಡು
ಕ್ಷೀರಗಳ ಸುರಿಸಿರೈ, ಕೆಚ್ಚಲನು ಬಿಡಿಸಿ
ಉದಕಗಳೆ ನಮಗೆಲ್ಲ ಮುದಧಾರೆ ಸುರಿಸಿ.
ಧನವಂತರಾಗಿರುವ ಅಬ್ದೇವತೆಗಳೆ,
ಧನಕೆಲ್ಲ ಪ್ರಭುಗಳಾಗಿರುವವರು ನೀವೆ
ಮಂಗಳದ ಕರ್ಮಗಳ, ಅಮೃತತ್ವ ಧರಿಸಿ
ಮಧುಮಂತ ರಸತಮೆ, ಸರಸ್ವತಿಯ ಸ್ತುತಿಸಿ
ನಲಿಯುತಿಹ ನನಗವಳು ಅನ್ನವನು ಕೊಡಲಿ.
ಮಧುಮಂತ ರಸಗಳನು, ಘೃತಗಳನು ಧರಿಸಿ
ಇಂದ್ರನಿಗೆ ಸೋಮಗಳ ಉದಕಗಳ ವಹಿಸಿ
ಅಬ್ದೇವತೆಗಳು ಬಂದಿಹರಿಲ್ಲಿ, ನಮಿಸಿ,
ಸಖರೆ, ಅಧ್ವರ್ಯುಗಳೆ, ಆಸನವ ನೀಡಿ
ಕುಳ್ಳಿರಿಸಿವರನ್ನು ಮಾತುಕತೆಯಾಡಿ.

## ೨೫

ಜೀವಿಗಳ ಪಾಲಿಸುವ ಧನವಂತರಿವರು
ಅಬ್ದೇವತೆಗಳಿಲ್ಲಿ ಒಲಿದು ಬಂದಿಹರು
ದರ್ಭಾಸನವನಿತ್ತು ಕುಳ್ಳಿರಿಸಿರವರ
ಅಪಾಮ್‌ಅಪಾತ್ ದೇವನೊಂದಿಗೆ ಯಜ್ಞಸಖರೆ,
ಸೋಮಗಳ ಹಿಂಡಿರೈ ನೀವವರಿಗಾಗಿ
ಒದಗಿಹುದು ದೇವ ಪೂಜೆಯು ಸುಲಭವಾಗಿ

## ೨೬

ಅಬ್ದೇವತೆಗಳ ಕಂಡುಕ್ಕಿರಲು ಹರುಷ
ಪುಲಕದಲಿ ಮೈ ಮರೆತು ಹಾಡಿದನು ಕವಷ
ನೀರು ಕೊಡು ಕವಷನಿಗೆ ನೀರು ಕೊಡು ಹೊಳೆಯೆ
ನೀರಡಿಸಿ ಬಂದಿರುವೆ ಓ ಸರಸ್ವತಿಯೆ.
ಸುಡುತಿಹವು ದೇಹಗಳ ದಾಹಗಳ ಚಿಂತೆ
ಬರು ಭಯದಿ ನಡುಗಿಸಿವೆ ತಕ್ಷನ್‌ನಂತೆ
ದಾಹಗಳ ತಣಿಸಿಬಾ, ಇಹಪರದ ದಾಹ
ತೊಳೆದು ಬಿಡು ಓ ತಾಯಿ, ಪಾಪಗಳ ಮೋಹ
ಜಲಗಳಿವು ಜಗಕೆಲ್ಲ ತಾಯದಿರಹಾಗೆ
ಜಲಗಳಿವು ಜಗಕೆಲ್ಲ ಭಗಿನಿಯರಹಾಗೆ
ಸೋಮಗಳು ಕ್ಷೀರಗಳು ಜಲಗಳಲಿ ಸೇರಿ
ತೆರೆದಿರಲು ಮರ್ತ್ಯರಿಗೆ ಅಮೃತದ ಧಾರಿ.
ಜಲಗಳಲಿ ಸೂರ್ಯನಿಹ, ಸೂರ್ಯನಲಿ ಜಲವು
ಯಜ್ಞದಿ ಹವಿಸ್ಸುಗಳ ಹೊಂದಿಹವು ಜಲವು
ಗೋವುಗಳು ಹರ್ಷಿಸಿವೆ, ಜಲಗಳನು ಕುಡಿದು
ಮರ್ತ್ಯರಿಗೆ ಅಮೃತದ ದಾರಿಯನು ತೆರೆದು
ಅಮೃತವ ಗರ್ಭದಲಿ ಪಡೆದಿಹವು ಜಲವು
ಒಡಲಿನಲಿ ಓಷದಿಯ ಪಿಡಿದಿಹವು ಜಲವು.
ಬೆಂಕಿಗಳ ಮಿಂಚುಗಳ ಧರಿಸಿಹವು ಜಲವು
ಅಮೃತದ ಕಣ್ಣೆವೆಯ ತೆರೆದಿಹವು ಜಲವು.

## ೨೭

ತೀರಗಳ ತೋಳಸೆರೆ ದಾಟಿರಲಿ ಜಲವು
ಅಭವ ಜಲಧಾರೆಗಳ ನೀಡಿರಲಿ ಜಲವು
ಇಹ ಪರದ ದಾಹಗಳ ತಣಿಸಲಿ ಜಲವು
ನೀರಲ್ಲವೆ ಚರಾಚರವ ಓಲೈಸಿದೆ ಇಲ್ಲಿ,
ನೀರಲ್ಲವೆ ಜೀವನವ ಹಾರೈಸಿದೆ ಇಲ್ಲಿ,

ಭೂಮಿ ಬಂಡೆ ಬೆಟ್ಟಗಳನು ತನ್ನೆದೆಯಲ್ಲವಚಿ
ಸಲುಹಿವೆ ಜಲಗಳು ಅಮೃತ ಧಾರೆಯ ಕುಡಿಸಿ
ನೀರಲ್ಲವೆ ಮಣ್ಣಲ್ಲಿಹ ಮುಗಿಲಿನ ಬೆರಳೆತ್ತಿ
ಬೀಜದ ಬುದ್ಬುದದಾಸೆಗೆ ಹಸಿರೆಳೆಯನು ಸುತ್ತಿ
ಎಲ್ಲೆಲ್ಲೂ ನಿಲ್ಲಿಸಿದೆ ಈ ವಿಶ್ವದ ವ್ಯೂಹ
ಹೊಳೆಯಾಗಿದೆ, ಮಳೆಯಾಗಿದೆ, ಬೆಳೆಯಾಗಿದೆ ದಾಹ

೨೮

ಜೀವ ಜಡವ ಹೆಣೆಯುವವೀ ಜಲಧಾರೆಯ ದಾರ
ಬ್ರಹ್ಮಾಂಡಗಳನು ಕರಗಿಸಿ ಕುಡಿದಿರುವ ಅಪಾರ
ನೀರಲ್ಲವೆ ನೀಡುವದು ಮಣ್ಣಿನ ಮೈಗುಸಿರು
ನೀರಲ್ಲವೆ ತಣಿಸುವದು ಜ್ವಾಲಾಮುಖಿಯಸರು.
ಮಳೆಬಿಲ್ಲನು ನಿಲ್ಲಿಸುವದು ಸೆಳೆಮಿಂಚನು ಎಳೆದು
ಸೌಗಂಧಿಕ. ಸಿಂಗಾರದ ದಲದಲದೊಳಗಿಳಿದು
ನೀರಾಗಿದೆ ಸಾಗರದಲಿ ಭಗವಂತನ ಕರುಣೆ.
ತೇರಾಗಿದೆ ಆಕಾಶದಿ ಸಾಗರಗಳ ಸ್ಮರಣೆ.
ಸೆಲೆಯೊಡೆದಿಹ ವಾತ್ಸಲ್ಯವೆ ತಾಯೆ, ನೀರುಣಿಸು
ಓ ಕರುಣೆಯ ಕಾರಂಜಿಯೆ ಈ ಕವಪನ ತಣಿಸು
ಅಭಯವನು ಶಾಂತಿಯನು ಪರಿಸಲೀಜಲವು
ನೀರಡಿಸಿ ಬಂದಿರುವೆ ಓ ಸರಸ್ವತಿಯೆ
ನೀರು ಕೊಡು ಕವಪನಿಗೆ ಹರ್ಷಗಳ ಹೊಳೆಯೆ

೨೯

ಅಲೆಗಳಲಿ ಸೆಲೆಗಳಲಿ ಆಲಿಸಿತು ಹೊಳೆಯು
ಸುಳಿಗಳಲಿ ಮೆಳೆಗಳಲಿ ಆಲಿಸಿತು ಹೊಳೆಯು
ಕರೆಗಳನು ಮೊರೆಗಳನು ಆಲಿಸಿತು ಹೊಳೆಯು
ಪುಲಕಗಳ ಮೇಳದಲಿ ಲಾಲಿಸಿತು ಹೊಳೆಯು
ರಸದ ನುಡಿ ನಾವೆಗಳ ತೇಲಿಸಿತು ಹೊಳೆಯು.

ಹೊಳೆಯೆಲ್ಲ ಒಮ್ಮೆಲೆ, ಒಮ್ಮೆಲೆ ಸ್ತಬ್ಧ
ಅಲೆಗಳಲಿ ಸೆಲೆಗಳಲಿ ಎಲ್ಲ ನಿಶ್ಶಬ್ದ
ಮೆಳೆಗಳಲಿ ಸುಳಿಗಳಲಿ ಮತ್ತೆ ನಿಶ್ಶಬ್ದ
ಹಂಸಗಳು ನಿಬ್ಬೆರಗಿನಲಿ ನಿಂತು ದೂರ
ವರ್ತುಲಿಸುತಿರುವ ಬೆಳ್ಳಕ್ಕಿಗಳು ದೂರ
ನಿಶ್ಚಲದಿ ನಿಟ್ಟಿಸಲು ಕವಷನನು ನೋಡಿ
ಅಲೆಯೆದ್ದು ಸೆಲೆಯೆದ್ದು ಸುಳಿಯೆದ್ದು ಮೂಡಿ
ಹೊಳೆ ಬಂತು; ಒಮ್ಮೆಲೆ ಬಂತು ಹರಿದೋಡಿ
ಹಸುವ ಹಿಂಬಾಲಿಸುತ್ತ ಬಂದಂತೆ ಕರುವು
ಕವಷ ಐಲೂಷನೆಡೆ ಬಂದಿತ್ತು ಹೊಳೆಯು.
ವಾತ್ಸಲ್ಯ ಆಲ್ಪರಿದು ಬಂದಂತೆ ಹೊಳೆಯು
ಕರುಣೆಯೆ ಕೈ ನೀಡಿ ಬಂದಂತೆ ಹೊಳೆಯು
ಕರುಣೆಯೆ ಕೈ ನೀಡಿ ಬಂದಂತೆ ಹೊಳೆಯು
ಪಾಪಗಳ ಕೊಳೆ ತೊಳೆದು ಹರಿದಿತ್ತು ಹೊಳೆಯು
ತಾಪಗಳ ಹಿಂಗಿಸುತ ಹರಿದಿತ್ತು ಹೊಳೆಯು
ನೋವುಗಳ ನೊಂದವರ ಮೈತೊಳೆವೆನೆಂದು
ಭವಗಳಲಿ ಬೆಂದವರ ಉರಿ ಕಳೆವೆನೆಂದು
ಕವಷನೆಡೆ ಹರಿದೋಡಿ ಕಾಲ್ಬಳಿಗೆ ಸರಿದು
ಮಕ್ಕಳೊಲು ಮುನ್ನುಗ್ಗಿ ಹೊಳೆ ಬಂತು ಹರಿದು.

## ೩೦

ನಿರಡಿಸಿ ಬಂದಿರುವ ಕವಷನನು ಜರಿದು
ಋತ್ವಿಜರು ತಳ್ಳಿರಲು ಬರದಂತೆ ತಡೆದು
ನೀರಿರದ ನೆರಳಿರದ ಬೆಂಗಾಡ ಬಳಿಗೆ
ಕವಷನನು ಓಡಿಸಲು, ಬರದಂತೆ ಹೊಳೆಗೆ
ಹೊಳೆಗೊಂದು ಹೃದಯವಿದೆ ಓ ಕವಷ ಎಂದು
ಕವಷನನು ಓಲೈಸಿ ಹರಿದೋಡಿ ಬಂದು
''ನೀರಡಿಸಿ ಬಂದಿರುವ ನೀರು ಕುಡಿ, ಕವಷ

ಋತದ ಈ ಆಪಗಳ ಬೊಗಸೆ ಹಿಡಿ ಕವಷ
ಘೃತದ ಈ ಆಪಗಳ ಬೊಗಸೆ ಹಿಡಿ ಕವಷ
ಅಮೃತದ ಈ ಆಪಗಳ ಬೊಗಸೆ ಹಿಡಿ ಕವಷ
ಮಧುಮಂತ ಆಪಗಳ ಬೊಗಸೆ ಹಿಡಿ ಕವಷ
ಈ ದಿವ್ಯ ಜಲಧಾರೆಗಳ ಬೊಗಸೆ ಕುಡಿ ಕವಷ
ದೇಹಿಗಳ ದಾಹಗಳ ತಣಿಸು ಓ ಕವಷ'
ಎಂದುಲಿಯ ಹರಿದಾಡಿ ಕವಷನೆಡೆ ನಿಂತು
ನಡೆದಲ್ಲಿ ನಡೆದು ಹೊಳೆ ಬೆಂಬತ್ತಿ ಬಂತು.
ಆಪಗಳ ಋಚೆ ಕೇಳಿ ರಸತಮೆಯು ಬಂದು
ನಿಂತಲ್ಲಿ ನಿಂತು ಹೊಳೆ, ನಡೆದಲ್ಲಿ ನಡೆದು
ಓಲೈಸಿ ಬಂದಿರಲು ಕವಷನೆಡೆ ಹರಿದು
ಬೆಳ್ಳಕ್ಕಿ ಸುಳಿ ತಿರುಗಿ ಸುತ್ತಿಹವು ಕೂಗಿ
ಹಂಸಗಳು ಹಾರಿದವು ಸಾಲು ಸಾಲಾಗಿ.

೩೧

ತಾಯ ಮೊಳಕಾಲ್ಬಳಿ ಬಿಗಿಯವಚಿಕೊಂಡು
ಮಗುವು ನಿಂತಂತೆ ನಿಂತಿರುವ ಹೊಳೆ ಕಂಡು
ಗದ್ಗದಿತ ಕಂಠದಲಿ 'ಅಂಬ' ಎಂದುಲಿದು
ಹರ್ಷಗಳ ಪುಲಕದಲಿ ಕವಷ ಕೈಮುಗಿದು
ನಿಂತಿರಲು ಕೌತುಕುವ ಕಂಡು, ಬೆರಗಾಗಿ
ಋತ್ವಿಜರು ಹೇಳಿದರು ಕವಷನಿಗೆ ಕೂಗಿ
''ಓ ಮಹಾತ್ಮ ಕ್ಷಮಿಸು, ನಮಿಸುವೆವು ನಿನಗೆ
ಓ ಮಹಾ ಮಹಿಮ ನಮಿಸುವೆವು ನಿನಗೆ
ಬ್ರಹ್ಮರ್ಷಿ ಕವಷ ಐಲೂಷನಿಗೆ ಶರಣು
ರಸತಮೆಯನೊಲಿಸಿರುವ ರಸಋಷಿಗೆ ಶರಣು
ಓ ಮಹಾತ್ಮನೆ ಮಾಡಿದಪರಾಧ ಕ್ಷಮಿಸು.
ಓ ಮಹಿಮನೆ ಮಾಡಿದಪಚಾರ ಕ್ಷಮಿಸು.
ಜ್ಞಾನಿ ನೀನಹುದು ಅಜ್ಞಾನಿಗಳು ನಾವು.

ಟೇಹಿಗಳು ನಾವಯ್ಯಾ, ದಾಹಿಗಳು ನಾವು.
ಕರುಣೆಯ ಆಪಗಳ ನಮಗಿಷ್ಟು ಕುಡಿಸು
ಕ್ಷಮೆಯ ಹೊಳೆಯನು ನಮ್ಮ ಬಳಿಗಿಷ್ಟು ಹರಿಸು
ಮರಳಿ ಬಾ ಓ ಕವಷ, ಋತ್ವಿಜರ ತಣಿಸು
ಋಚೆಗಳ ಹೊಳೆ ಹರಿಸು ಅಮೃತರ ತಣಿಸು''
ಋತ್ವಿಜರ ನುಡಿ ಕೇಳಿ ಕರಗಿದನು ಕವಷ
ಯಜ್ಞದೀಕ್ಷಿತನಾಗಿ ಮರಳಿದನು ಕವಷ

೩.೨

ಅಬ್ದೇವತೆಗಳ ಕಂಡುಕ್ಕಿರಲು ಹರುಷ
ಯಜ್ಞದೀಕ್ಷಿತನಾಗಿ ಹಾಡಿದನು ಕವಷ
ಆಪಗಳು ಹರಿಯುವವು ಪಾಪಗಳ ತೊಳೆದು
ಆಪಗಳ ಸ್ತುತಿಸಿರೈ ಋತ್ವಿಜರೆ ನಲಿದು
ಆಪಗಳು ಹರಿಯುವವು ಅಮೃತವ ಸುರಿದು
ಆಪಗಳ ಸುತ್ತಿಸಿರೈ ಋತ್ವಿಜರೆ ನಲಿದು.
ಆಪಗಳು ಹೊಳೆಯಾಗಿ ಹರಿದಿಹವು ನಡೆದು
ಆಪಗಳು ಕರುಣಿಸಿವೆ ತಾಯಿಯೊಲು ಪೊರೆದು
ಆಪಗಳು ಬೆಳಗಿರಲು ರಸಧಾರೆಯೆರೆದು
ನಾಮಗಳು ರೂಪಗಳು ಹೊಳೆಯಾಗಿ ಹರಿದು
ಕರ್ಮಗಳು ಜ್ಞಾನಗಳು ಹೊಳೆಯಾಗಿ ನಡೆದು
ಪಾರದಲಿ ಹರಿದಿವೆ, ಅಪಾರವನೆ ನೆನೆದು
ಕವಷ ಐಲೂಷ ನುಡಿದಿರಲು ಕೈ ಮುಗಿದು
ಋತ್ವಿಜರು ಹೇಳಿದರು ಮುದದಿ ಮೈಮರೆದು
''ಹೊಳೆಯ ಬಂಧುವೆ ನಮ್ಮ ಬಂಧುವಾಗಿರಲು
ಕೈಗೆಟಕದಿರುವದೆ - ಅಮೃತದ ಕಡಲು.''

## ೫೩. ಅರಣ್ಯಾನಿ

೧

ಮೌನವನು ಮೈತುಂಬ ಹೊದ್ದಿರುವ ಕಾಡು,
ಈ ಮರಗಳು ನಿಂತಲ್ಲಿ, ಏನೊ ಸದ್ದು.
ಅರಣ್ಯಾನಿ, ನಿನಗೂ ದಾರಿ ತಪ್ಪಿತೆ?
ಎಲ್ಲಿಯೊ ಎಲೆಟೊಂಗೆ ಉದುರಿಬಿದ್ದು.

೨

ಎಲ್ಲೆಲ್ಲಿಯೂ ಬೆಳೆದ ಹುಲ್ಲಿನಲಿ ಮರೆಗೊಂಡು
ದಾರಿಕಾಣಿಸದೆ, ಕಂಗೆಟ್ಟು ನಿಂದು,
ಅರಣ್ಯಾನಿ, ಯಾಕೆ ಕೇಳುವದಿಲ್ಲ?
ಗ್ರಾಮಕ್ಕೆ ದಾರಿಯು ಯಾವುದೆಂದು?

೩

ಪೊಗದೆಯಾಚೆ ಮಿಡತೆ, ಇಲ್ಲೆಲ್ಲಿಯೊ ಸಡಗರ
ಕತ್ತಲಿನ ಕಾಮೋದ ಕಂಠ ಬಿಚ್ಚಿ
ಗುಮ್ಮೆನಲು ಗೂಬೆ, ಓ ಅರಣ್ಯಾನಿಯೆ,
ಅಲುಗದೆ ನಿಂತೆಯ ನೀನು ಬೆಚ್ಚಿ.

೪

ಬಳಿಯಲ್ಲೆ ಮೇದಿವೆ ಹಸುಗಳು. ಆಗಾ
ಗ, ಕಿಣಿಕಿಣಿಸುತಿವೆ ಕೊರಳಲ್ಲಿ ಗಂಟೆ,
ಅರಣ್ಯಾನಿ, ಸವಿದನಿಯು ಕೇಳಿಸಿತೆ?
ಈಗಲೂ ನಿನ್ನಲ್ಲಿ ಭಯವು ಉಂಟೆ?

೫

ಮರಗಳಾಚೆಗೆ, ಹುಲ್ಲುಗಾವಲಿನ ಆಚೆಗೆ
ಬೆಟ್ಟದಡಿಯಲ್ಲಿರುವ ಕೆರೆಯ ಬಳಿಗೆ,
ಮಬ್ಬಿನಲ್ಲೊಂದು ಮನೆ, ಇದ್ದಂತೆ ಕಾಣುವದು.
ಅರಣ್ಯಾನಿ, ಯಾರಿಹರು ಅಲ್ಲಿ ಒಳಗೆ?

೬

ಈಗ ಸಂಧ್ಯಾಕಾಲವಿರಬೇಕು. ಇಲ್ಲೊಂದು
ಹಕ್ಕಿ ಮರಳಿದೆ ಗೂಡಿಗೀಗ ತಾನೆ,
ಗಾಲಿಗಳು ಕಿರುಗುಟ್ಟಿ ಬಂಡಿ ಹೊರಟಿದೆ,
ಅರಣ್ಯಾನಿ, ಆ ಸಪ್ಪಳವು ನಿನ್ನದೇನೆ?

೭

ಇದ್ದಕ್ಕಿದ್ದಂತೆ ದನಿ, 'ನಂದಿನಿ, ನಂದಿನಿ,'
ಇಲ್ಲೊಬ್ಬ ಕರೆದಿಹನು ಹಸುವ ಕೂಗಿ,
ಕಣಿವೆಯಲಿ ಸಂಜೆ ಕರಗುವ ಮುನ್ನ, ಅರಣ್ಯಾನಿ,
ಸೇರಬೇಕಲ್ಲವೆ ಮನೆಗೆ ಹೋಗಿ.

೮

ಕಾಡಿನಲ್ಲಿದ್ದ ಒಬ್ಬೊಬ್ಬನೂ ಅನ್ನುವನು.
ಈಗ ಏನೊ ಸದ್ದು ಕೇಳಿತಿಲ್ಲಿ
ಅಂದುಕೊಳ್ಳುತ್ತಲೆ, ಇಲ್ಲೆಲ್ಲೊ ಅರಣ್ಯಾನಿ,
ಹಾದು ಹೋಗುತ್ತಾಳೆ ಸನಿಹದಲ್ಲಿ.

೯

ಅವಳ ಬಳಿ, ತೀರ ಹತ್ತಿರ ಹೋಗದಿದ್ದರೆ,
ಯಾರಿಗೂ ಏನೂ ಮಾಡುವವಳಲ್ಲ,
ಸಿಂಹಗಳ ತಾಯಿ, ಮೃಗಗಳ ತಾಯಿ,
ಇವಳೇ; ಜಿಂಕೆಗಳಿಗೂ ತಾಯಿ ಇವಳೆ ಅಲ್ಲ!

೧೦

ಇವಳನ್ನು ಸ್ತುತಿಸುವೆನು, ಇವಳ ನಿಶ್ಶಬ್ದಕ್ಕೆ,
ಇವಳವಚಿಕೊಂಡಿದ್ದ ಸದ್ದುಗಳಿಗೆ,
ತನ್ನ ಒಲವಿನ ಸೆರಗಿನಲ್ಲಿಟ್ಟು ಸಲುಹಿದ್ದ
ಬೆಡಗುಗಳಿಗೂ, ಈಗ, – ಒಂದು ಗಳಿಗೆ.

(ಋಗ್ವೇದದಿಂದ)